ಹುಬ್ಬಳ್ಳಿ
ಗುರುವಾರ, 23 ಏಪ್ರಿಲ್ 2026
ಸಂಪುಟ 16, ಸಂಚಿಕೆ 29, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೇಪಾಳ ಪ್ರತಿಭಟನೆ: ಗೃಹ ಸಚಿವ ರಾಜೀನಾಮೆ | 02
ಸೇನಾ ಶಕ್ತಿ ಪ್ರದರ್ಶನ | 02
ಭಕ್ತರ ದರ್ಶನಕ್ಕೆ ಕೇದಾರನಾಥ ಮುಕ್ತ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುನರ್ವಸು

ದಿನದ ಮಾತು

ನಿದ್ರೆಯು ಆರೋಗ್ಯದ ಆರಂಭ.
▲ ಸುಭಾಷಿತ

ಹಳಿಗಳ ಆಧುನೀಕರಣ; ಪ್ರಯಾಣ ಮತ್ತಷ್ಟು ಸುಗಮ

ಲೇಖನ
• ಅಶ್ವಿನಿ ವೈಷ್ಣವ್

• ಪುಟ 6

ಕಿರುಸುದ್ದಿ

ಎಸ್ಸೆಸ್ಸೆಲ್ಸಿ ಫಲಿತಾಂಶ ಇಂದು

• **ಬೆಂಗಳೂರು:** ತೃತೀಯ ಭಾಷೆಗೆ ಗ್ರೇಡ್ ಹಾಗೂ ಅಂಕಗಳ ಗೊಂದಲದ ನಡುವೆಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ಪರೀಕ್ಷೆ -1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದ್ದು, ವಿದ್ಯಾರ್ಥಿಗಳು https://karresults.nic.in/ ಲಿಂಕ್ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕವೂ ಪಡೆಯಬಹುದಾಗಿದೆ. ಅಲ್ಲದೇ ವಿದ್ಯಾರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸ್‌ಪ್/ಎಸ್‌ಎಂಎಸ್ ಮೂಲಕವೂ ಫಲಿತಾಂಶದ ಮಾಹಿತಿಯನ್ನು ರವಾನಿಸಲಾಗುವುದು ಎಂದು ತಿಳಿಸಿದೆ.

ಕೊಡಗು: ಅಮೆರಿಕ ಮಹಿಳೆ ಮೇಲೆ ಅತ್ಯಾಚಾರ

• **ಮಡಿಕೇರಿ:** ಕೊಡಗು ಜಿಲ್ಲೆಯ ಗ್ರಾಮವೊಂದರ ಹೋಂಸ್ಟೇಯಲ್ಲಿ ವಿದೇಶಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿರುವ ಹೀನಾಯ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದ ದೇವಿ ವಿಲ್ಲಾ ಎಂಬ ಹೋಂಸ್ಟೇಯಲ್ಲಿ ಅಮೆರಿಕದ ವಾಷಿಂಗ್ಟನ್ ಮೂಲದ ಮಹಿಳೆಯ ಮೇಲೆ ಹೋಂಸ್ಟೇಯ ಕೇರ್ ಟೇಕರ್, ಜಾರ್ಖಂಡ್ ಮೂಲದ ವೃಜೇಶ್ ಎಂಬಾತ ಅತ್ಯಾಚಾರ ನಡೆಸಿರುವುದಾಗಿ ಹೇಳಲಾಗಿದೆ. ➡ಪುಟ 9

ಮಾಲೆಗಾಂವ್ ಪ್ರಕರಣದ 4 ಆರೋಪಿಗಳ ಬಿಡುಗಡೆ

• **ಮುಂಬೈ:** 2006ರ ಮಾಲೆಗಾಂವ್ ಸರಣಿ ಬಾಂಬ್ ಸ್ಫೋಟ ಪ್ರಕರಣದ ನಾಲ್ವರು ಆರೋಪಿಗಳನ್ನು ಬಾಂಬೆ ಹೈಕೋರ್ಟ್ ಬುಧವಾರ ಬಿಡುಗಡೆ ಮಾಡಿದೆ. 31 ಜನರ ಸಾವಿಗೆ ಕಾರಣವಾದ ಈ ಘಟನೆಯ 19 ವರ್ಷಗಳ ನಂತರ ಎಲ್ಲಾ ಭಯೋತ್ಪಾದನೆಯ ಆರೋಪಗಳನ್ನು ರದ್ದುಗೊಳಿಸಲಾಗಿದೆ.

• ಪುಟ 2

ಯಾವುದೇ ಬೆಟ್ಟಿಂಗ್ ಪ್ರಮೋಟ್ ಮಾಡಿಲ್ಲ: ಪರಂ

• ಪುಟ 3

ನಟಿ ರನ್ಯಾಗೆ ಜಾಮೀನು

• ಪುಟ 3

ಐಟಿ ಕಂಪನಿಗಳಿಗೂ ನುಗ್ಗಿದ ಲವ್ ಜಿಹಾದ್: ಪರಾಂಡೆ

• ಪುಟ 3

ಮೋದಿ ನೀಡಿದ 10 ರೂ. ನೋಟಿಗೆ ಭಾರೀ ಬೇಡಿಕೆ

• ಪುಟ 2

ಮಹಾರತ್ನ ಸಾಲಿಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ | ಧ್ರುವ ಎಂಜಿನ್ ಇನ್ನೆರಡು ತಿಂಗಳಲ್ಲಿ ಪೂರ್ಣ

ನಿವೃತ್ತಿ ಹೊಸ್ತಿಲಲ್ಲಿ ಸಾಧನೆ ರೂವಾರಿ ಡಾ.ಡಿ.ಕೆ.ಸುನೀಲ್

▶ ನೆಲ್ಲಿಜೆ ನವ್ಯಜ್ಯೋತಿ

• **ಬೆಂಗಳೂರು:** ಕರ್ನಾಟಕದ ಹೆಮ್ಮೆಯಾಗಿರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನವರತ್ನದಿಂದ ಮಹಾರತ್ನವಾಗಿ ಮೇಲ್ದರ್ಜೆಗೇರಿದೆ. ಈ ಸಾಧನೆಯ ರೂವಾರಿ ಹಾಗೂ ಎಚ್‌ಎಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿರುವ ಡಾ. ಡಿ.ಕೆ. ಸುನೀಲ್ ಈ ತಿಂಗಳಾಂತ್ಯಕ್ಕೆ ನಿವೃತ್ತಿಯಾಗಲಿದ್ದಾರೆ. ಅವರು ತಮ್ಮ ಅಧಿಕಾರಾವಧಿಯ ಸಾಧನೆ-ಸವಾಲುಗಳ ಕುರಿತು ಹೊಸ ದಿಗಂತಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ್ದಾರೆ.

ದಿಗಂತ ಸಂದರ್ಶನ



▶ **2024ರ ಸೆಪ್ಟೆಂಬರ್‌ನಿಂದ ಈವರೆಗಿನ ಅಧಿಕಾರಾವಧಿಯಲ್ಲಿ ಎಚ್‌ಎಎಲ್ ಸಾಧನೆಯ ಹಾದಿ ಹೇಗಿದೆ?**

ಎಚ್‌ಎಎಲ್ ನವರತ್ನ ಕಂಪನಿಯಿಂದ ಮಹಾರತ್ನ ಕಂಪನಿಯಾಗಿ ಮೇಲ್ದರ್ಜೆಗೇರಿದೆ. ಮಹಾರತ್ನ ಕಂಪನಿ ಎಂದರೆ, ನಮಗದು ಹೆಮ್ಮೆ. ಇಡೀ ದೇಶದಲ್ಲಿರುವುದು 14 ಮಹಾರತ್ನ ಕಂಪನಿಗಳು. ಎಚ್‌ಎಎಲ್ 14ನೇ ಮಹಾರತ್ನ ಕಂಪನಿಯಾಗಿದೆ. ಮಹಾರತ್ನ ಕಂಪನಿಗಳಲ್ಲಿ ಬಹುತೇಕ ತೈಲ ಕಂಪನಿಗಳು, ಪೆಟ್ರೋಲಿಯಂ, ಒಎನ್‌ಜಿಸಿ ಮುಂತಾದ ಬೃಹತ್ ಕಂಪನಿಗಳ ಜತೆ ಎಚ್‌ಎಎಲ್ ಕೂಡ ಸೇರಿದೆ. ರಕ್ಷಣಾ ಸಚಿವಾಲಯ ದೊಂದಿಗೆ ಎರಡು ದೊಡ್ಡ ಒಪ್ಪಂದಗಳನ್ನು ಮಾಡಿದ್ದೇವೆ. ಮೊದಲನೆಯದು 156 ಪ್ರಚಂಡ್ ಹೆಲಿಕಾಪ್ಟರ್‌ಗಳ ಪೂರೈಕೆ ಮತ್ತು 97 ತೇಜಸ್ ಎಲ್‌ಸಿಎ (ಲಘು ಯುದ್ಧ ವಿಮಾನ) ಎಂಕೆ-1ಎ ಪೂರೈಕೆ. ಮೊದಲು 83 ಎಲ್‌ಸಿಎ ತೇಜಸ್ ಪೂರೈಕೆ ಮಾಡಲು ಒಪ್ಪಂದವಾಗಿತ್ತು. ಈಗ 97 ತೇಜಸ್ ವಿಮಾನಗಳ ಪೂರೈಕೆ ಒಪ್ಪಂದದಿಂದ ಅದು 180ಕ್ಕೆ ಏರಿಕೆಯಾಗಿದೆ. ಈ ಎರಡು ಆರ್ಡರ್‌ಗಳು ಸುಮಾರು ಒಂದು ಲಕ್ಷ ಕೋಟಿ ರೂ. ಮೊತ್ತದ್ದಾಗಿದೆ. ಸುಮಾರು 30 ಸಾವಿರ ಕೋಟಿ ರೂ. ಮೊತ್ತದ ಸುಖೋಯ್-30 ಯುದ್ಧ ವಿಮಾನದ ಹೆಚ್ಚುವರಿ ಆರ್ಡರ್ ಬಂದಿದೆ. ಕಳೆದ 20 ತಿಂಗಳಲ್ಲಿ ಸುಮಾರು 1.80 ಲಕ್ಷ ಕೋಟಿ ರೂ. ಮೊತ್ತದ ಹೊಸ ಆರ್ಡರ್‌ಗಳು ಎಚ್‌ಎಎಲ್‌ಗೆ ಲಭಿಸಿವೆ. ಎಚ್‌ಟಿಟಿ-40 ತರಬೇತಿ ವಿಮಾನದ ಪ್ರಮಾಣಪತ್ರ ಕೂಡ ಇದೇ ಅವಧಿಯಲ್ಲಿ ಆಗಿದೆ. ಎಲ್‌ಸಿಎ ಎಂಕೆ1ಎ ತಾಂತ್ರಿಕ ಸಮಗ್ರತೆ (ರಡಾರ್, ಕ್ಷಿಪಣಿ ಇತ್ಯಾದಿ) ಸಾಧಿಸಿದ್ದೇವೆ. ಕೇಂದ್ರ ಸಾರ್ವಜನಿಕ ವಲಯದದಲ್ಲಿ ಬೆಸ್ಟ್ ಔಟ್ ಸ್ಟ್ಯಾಂಡಿಂಗ್ ಪರ್ಫಾರ್ಮೆನ್ಸ್ ಸ್ಕೋಪ್ ಅವಾರ್ಡ್ ಅನ್ನು ಎಚ್‌ಎಎಲ್‌ಗೆ ರಾಷ್ಟ್ರಪತಿ ಅವರು ಪ್ರದಾನಿಸಿದ್ದರು. ಧ್ರುವ್ ಎಂಜಿನ್ ಪ್ರಮಾಣಪತ್ರ ಪ್ರಕ್ರಿಯೆ ಪ್ರಗತಿಯಲ್ಲಿದೆ, ಮುಂದಿನ 2-3 ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ರಷ್ಯನ್ ನಾಗರಿಕ ವಿಮಾನ (100 ಆಸನಗಳು)ವನ್ನು ಇಲ್ಲಿ ಉತ್ಪಾದನೆ ಮಾಡುವುದಕ್ಕೆ ಒಪ್ಪಂದ ಮಾಡಿಕೊಂಡಿದ್ದೇವೆ. ಮಹಾರಾಷ್ಟ್ರದ ನಾಸಿಕ್‌ನಲ್ಲಿ ತೇಜಸ್ ಉತ್ಪಾದನೆಯ ಮೂರನೇ ಘಟಕ ಸ್ಥಾಪಿಸಿದ್ದೇವೆ. ➡ಪುಟ 9

ತನಿಖೆಯ ನಿರ್ಣಾಯಕ ಹಂತದಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ: ಸುಪ್ರೀಂಕೋರ್ಟ್ ಅಸಮಾಧಾನ

ಮಮತಾಗೆ ಛೀಮಾರಿ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಮೊದಲ ಹಂತದ ಮತದಾನಕ್ಕೆ ಕೇವಲ ಒಂದು ದಿನ ಬಾಕಿ ಇರುವಾಗ ರಾಜಕೀಯ ವಾತಾವರಣ ತೀವ್ರಗೊಂಡಿದೆ. ಇದೇ ವೇಳೆ ಸಿಎಂ ಮಮತಾ ಬ್ಯಾನರ್ಜಿ ವಿರುದ್ಧ ಸುಪ್ರೀಂಕೋರ್ಟ್ ತೀಕ್ಷ್ಣ ಟೀಕೆ ಹಾಗೂ ಜಾರಿ ನಿರ್ದೇಶನಾಲಯ(ಇಡಿ) ಟಿಎಂಸಿ ಅಭ್ಯರ್ಥಿಗಳಿಗೆ ಜಾರಿ ಮಾಡಿದ ಸಮನ್ಸ್ ಆಡಳಿತಾರೂಢ ಪಕ್ಷಕ್ಕೆ ಹೊಸ ತಲೆನೋವಾಗಿ ಪರಿಣಮಿಸಿದೆ.

ಐ-ಪ್ಯಾಕ್ ಪ್ರಕರಣ ಸಂಬಂಧ ಬುಧವಾರ ನಡೆದ ವಿಚಾರಣೆಯಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ತನಿಖೆಯ ಮಹತ್ವದ ಹಂತದಲ್ಲಿ ಸಿಎಂ ಹಸ್ತಕ್ಷೇಪ ಮಾಡುವುದು ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ಧಕ್ಕೆಯಾಗಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಮುಖ್ಯಮಂತ್ರಿಯೊಬ್ಬರು ತನಿಖೆ ಮಧ್ಯೆ ಪ್ರವೇಶಿಸಿ ಸಂಪೂರ್ಣ ವ್ಯವಸ್ಥೆಯನ್ನೇ ಅಪಾಯಕ್ಕೆ ತಳ್ಳುವುದು ಕೇವಲ ಕೇಂದ್ರ-ರಾಜ್ಯ ವಿವಾದವಲ್ಲ; ಇದು ಪ್ರಜಾಪ್ರಭುತ್ವದ ಮೂಲ ಚೌಕಟ್ಟಿನ ಮೇಲಿನ ನೇರ ಪರಿಣಾಮ ಎಂದು ನ್ಯಾಯಮೂರ್ತಿಗಳು ಹೇಳಿದರು. ಇಂತಹ ಪರಿಸ್ಥಿತಿ ದೇಶದಲ್ಲಿ ಉಂಟಾಗಬಹುದು ಎಂದು ನಾವು ಊಹಿಸಿರಲಿಲ್ಲ ಎಂಬುದನ್ನು ನ್ಯಾಯಪೀಠ ಸ್ಪಷ್ಟಪಡಿಸಿದೆ. ➡ಪುಟ 9



> ಮುಖ್ಯಮಂತ್ರಿಯೊಬ್ಬರು ತನಿಖೆ ಮಧ್ಯೆ ಪ್ರವೇಶಿಸಿ ಸಂಪೂರ್ಣ ವ್ಯವಸ್ಥೆಯನ್ನೇ ಅಪಾಯಕ್ಕೆ ತಳ್ಳುವುದು ಕೇವಲ ಕೇಂದ್ರ-ರಾಜ್ಯ ವಿವಾದವಲ್ಲ; ಇದು ಪ್ರಜಾಪ್ರಭುತ್ವದ ಮೂಲ ಚೌಕಟ್ಟಿನ ಮೇಲಿನ ನೇರ ಪರಿಣಾಮ.
> ■ ಸುಪ್ರೀಂಕೋರ್ಟ್

ಇಂದು ಪ.ಬಂಗಾಳ, ತ.ನಾಡಿನಲ್ಲಿ ಮತದಾನ

ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ವಿಧಾನಸಭೆಗಳಿಗೆ ಗುರುವಾರ ಮತದಾನ ನಡೆಯಲಿದೆ. ಪ.ಬಂಗಾಳದಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆಯಲಿದ್ದು, ಏ.23ರಂದು ನಡೆಯಲಿರುವ ಮೊದಲ ಹಂತದಲ್ಲಿ 152 ಕ್ಷೇತ್ರಗಳಲ್ಲಿ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ವಿಶೇಷವಾಗಿ ಉತ್ತರ ಬಂಗಾಳದಲ್ಲಿ ಬಿಜೆಪಿ ಮತ್ತು ಟಿಎಂಸಿ ನಡುವೆ ತೀವ್ರ ಸ್ಪರ್ಧೆ ಕಂಡುಬರುತ್ತಿದೆ. ಸುಮಾರು 3.6 ಕೋಟಿ ಮತದಾರರು ಭಾಗವಹಿಸಲಿದ್ದಾರೆ. ತಮಿಳುನಾಡಿನಲ್ಲಿ ಏ.23ರಂದು 234 ಸ್ಥಾನಗಳಿಗೆ ಮತದಾನ ನಡೆಯಲಿದ್ದು, 5.73 ಕೋಟಿ ಮತದಾರರು 4,023 ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಲಿದ್ದಾರೆ. ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಮತ್ತು ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದ ಎಐಎಡಿಎಂಕೆ ನಡುವೆ ತೀವ್ರ ಪೈಪೋಟಿ ಇದೆ. ಮೇ 4ರಂದು ಎರಡೂ ರಾಜ್ಯಗಳ ಫಲಿತಾಂಶ ಪ್ರಕಟವಾಗಲಿದೆ.



700 ಗ್ರಾಮೀಣ ಉದ್ಯೋಗ ಸೃಷ್ಟಿಗೆ ಕ್ರಮ

ದಿಲ್ಲಿಗೆ ಎಂಟು ಸಾವಿರ ಡಚ್ ಮ್ಯಾಟ್: ಸಿಎಂ

• **ಬೆಂಗಳೂರು:** ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮದಿಂದ ತಯಾರಿಸಲಾಗುವ ಮ್ಯಾಟ್‌ಗಳಿಗೆ ಈಗ ರಾಷ್ಟ್ರರಾಜಧಾನಿ ಹೊಸದಿಲ್ಲಿಯಲ್ಲಿಯೂ ಬೇಡಿಕೆ ಬಂದಿದೆ. ಆ ಬೇಡಿಕೆಯನುಸಾರ 8 ಸಾವಿರ ಮ್ಯಾಟ್‌ಗಳನ್ನು ಹೊಸದಿಲ್ಲಿಗೆ ಕಳುಹಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾವೇರಿ ನಿವಾಸದಲ್ಲಿ ಬುಧವಾರ 8 ಸಾವಿರ ತೆಂಗಿನ ನಾರಿನ ಮ್ಯಾಟ್‌ಗಳು ಹಾಗೂ ತೆಂಗಿನ ನಾರಿನ ಇತರೆ ಉತ್ಪನ್ನಗಳನ್ನು ಹೊತ್ತ ಲಾರಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಬೀಳ್ಕೊಟ್ಟರು.

ಈ ವೇಳೆ ಮಾತನಾಡಿದ ಅವರು, ತೆಂಗಿನ ನಾರು ಅಭಿವೃದ್ಧಿ ನಿಗಮದ ವತಿಯಿಂದ ಗ್ರಾಮೀಣ ಮಹಿಳೆಯರಿಂದ ತಯಾರಿಸಲ್ಪಟ್ಟ ಒಟ್ಟು 8 ಸಾವಿರ ಮ್ಯಾಟ್‌ಗಳನ್ನು ದೆಹಲಿಗೆ ಸರಬರಾಜು ಮಾಡಲಾಗಿದೆ. ಹಸ್ತಚಾಲಿತ ಮ್ಯಾಟ್ ಫ್ರೇಮ್ ಬಳಸಿ ಸುಮಾರು 700 ಗ್ರಾಮೀಣ ಉದ್ಯೋಗ ಸೃಷ್ಟಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.



ಮಾರಾಟಕ್ಕೆ ಉತ್ತೇಜನ

ಈ ವೇಳೆ ಮಾತನಾಡಿದ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ನಟರಾಜ್ ಜಾನಕಿರಾಮ್, ನಿಗಮದ ಉತ್ಪನ್ನಗಳಲ್ಲಿ ಅತ್ಯಂತ ಜನಪ್ರಿಯವಾದ ಮ್ಯಾಟ್ ಅಂದರೆ ಅದು ಡಚ್ ಮ್ಯಾಟ್. ಡಚ್ ಮ್ಯಾಟ್ ಎಂದರೆ ತೆಂಗಿನಕಾಯಿ ತೊಗಟೆಯಿಂದ ದೊರೆಯುವ ನಾರುಗಳಿಂದ ತಯಾರಿಸಲ್ಪಡುವ ವಿಶೇಷ ಮ್ಯಾಟ್. 18ನೇ ಶತಮಾನದಲ್ಲಿ ಭಾರತ ಮತ್ತು ಶ್ರೀಲಂಕಾದಲ್ಲಿ ತಯಾರಿಸಲ್ಪಟ್ಟ ಮ್ಯಾಟ್‌ಗಳನ್ನು ಡಚ್ ವ್ಯಾಪಾರಿಗಳು ಯುರೋಪಿಗೆ ಸಾಗಿಸುತ್ತಿದ್ದರು, ಆದ್ದರಿಂದ ಈ ಮ್ಯಾಟ್‌ಗಳು ಡಚ್ ಮ್ಯಾಟ್ ಎಂದೇ ಜನಪ್ರಿಯವಾಗಿವೆ ಎಂದು ತಿಳಿಸಿದರು. ➡ಪುಟ 9

3 ಹಡಗಿನ ಮೇಲೆ ಇರಾನ್ ಗುಂಡಿನ ದಾಳಿ

ಹಾರ್ಮುಜ್ ಉದ್ವಿಗ್ನ

• **ದುಬೈ:** ಇರಾನ್‌ನ ರೆವಲ್ಯೂಷನರಿ ಗಾರ್ಡ್ ಬುಧವಾರ ಹಾರ್ಮುಜ್ ಜಲಸಂಧಿಯಲ್ಲಿ ಮೂರು ಹಡಗುಗಳ ಮೇಲೆ ಗುಂಡಿನ ದಾಳಿ ನಡೆಸಿದ್ದು, ಜಾಗತಿಕ ಇಂಧನ ಪೂರೈಕೆಗೆ ಬೆದರಿಕೆ ಒಡ್ಡಿದೆ. ಅಮೆರಿಕ-ಇರಾನ್ ಮಾತುಕತೆಯ ಪುನರಾರಂಭದ ಪ್ರಯತ್ನಗಳಿಗೆ ಇದು ಮತ್ತೊಂದು ಅಡ್ಡಿಯೆನಿಸಿದೆ.

ಬ್ರಿಟಿಷ್ ಮಿಲಿಟರಿಯ ಯುನೈಟೆಡ್ ಕಿಂಗ್‌ಡಮ್ ಮ್ಯಾರಿಟೈಮ್ ಟ್ರೇಡ್ ಆಪರೇಷನ್ಸ್ (ಯುಕೆಎಂಟಿಒ) ವರದಿಯ ಪ್ರಕಾರ, ಇರಾನ್‌ನ ಗನ್‌ಬೋಟ್‌ಗಳು ಬುಧವಾರ ಬೆಳಗ್ಗೆ ಕಂಟೈನರ್ ಹಡಗಿನ ಮೇಲೆ ಯಾವುದೇ ಮುನ್ಸೂಚನೆ ನೀಡದೆ ಗುಂಡಿನ ದಾಳಿ ನಡೆಸಿವೆ. ಇರಾನ್ ಸರ್ಕಾರಿ ದೂರದರ್ಶನ, ಎಂಎಸ್‌ಸಿ ಫ್ರಾನ್ಸೆಸ್ಕಾ ಮತ್ತು ಎಪಾಮಿನೋಡ್ಸ್ ಎಂಬ ಎರಡು ಹಡಗುಗಳನ್ನು ವಶಕ್ಕೆ ಪಡೆದಿರುವುದನ್ನು ದೃಢಪಡಿಸಿದೆ. ಇದಲ್ಲದೆ, ಯುಫೋರಿಯಾ ಎಂಬ ಮೂರನೇ ಹಡಗು ಇರಾನ್ ಕರಾವಳಿಯಲ್ಲಿ ಸಿಲುಕಿಕೊಂಡಿದೆ ಎಂದು ವರದಿಯಾಗಿದೆ. ➡ಪುಟ 9



ಏಕೀಕೃತ ಶಾಂತಿ ಪ್ರಸ್ತಾವನೆಗೆ ಅವಕಾಶ
• ಪುಟ 2

ಇರಾನ್‌ಗೆ ಭಾರತ ಪಾವತಿಸಿಲ್ಲ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ತನ್ನ ಹಡಗುಗಳಿಗೆ ಸುರಕ್ಷಿತ ದಾರಿ ಪಡೆಯಲು ಇರಾನ್‌ಗೆ ನಗದು ಅಥವಾ ಕ್ರಿಪ್ಟೋಕರೆನ್ಸಿ ಮೂಲಕ ಯಾವುದೇ ಪಾವತಿ ಮಾಡಿಲ್ಲ ಎಂದು ಭಾರತವು ಸ್ಪಷ್ಟಪಡಿಸಿದೆ. ಏ.18ರಂದು ಇರಾನ್ ಪಡೆಗಳು ಗುಂಡಿನ ದಾಳಿ ನಡೆಸಿದ ಹಿನ್ನೆಲೆಯಲ್ಲಿ 2 ಭಾರತೀಯ ಹಡಗುಗಳು ಹಿಂತಿರುಗಬೇಕಾಯಿತು. ➡ಪುಟ 9

ಖರ್ಗೆಯವರಿಗೆ ಉಗ್ರ ವ್ಯತ್ಯಾಸ ಗೊತ್ತಾಗಿಲ್ಲ

• **ಬೀದರ್:** ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆಯವರಿಗೆ ಭಯೋತ್ಪಾದಕರು ಹಾಗೂ ಭಯೋತ್ಪಾದಕರಿಗೇ ಭಯ ಹುಟ್ಟಿಸುವವರ ಮಧ್ಯೆ ವ್ಯತ್ಯಾಸ ಗೊತ್ತಾಗುವುದಿಲ್ಲ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು. ಗಡಿ ಜಿಲ್ಲೆಯ ಬೀದರ ತಾಲೂಕಿನ ಭಾಲ್ಕಿಯಲ್ಲಿ ನಡೆದ ಡಾ.ಚನ್ನಬಸವ ಪಟ್ಟದೇವರು ಅವರ 75ನೇ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ಮೋದಿಯವರ ಕುರಿತ ಮಲ್ಲಿಕಾರ್ಜುನ ಖರ್ಗೆಯವರ ಹೇಳಿಕೆ ಪ್ರಸ್ತಾಪಿಸಿ, ಮಲ್ಲಿಕಾರ್ಜುನ ಖರ್ಗೆ ಹಾಗೂ ನಮ್ಮ ವಿಚಾರಧಾರೆಗಳ ನಡುವೆ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆ. ಆದರೆ, ನಾವಿಬ್ಬರೂ ಒಳ್ಳೆಯ ಸ್ನೇಹಿತರಾಗಿದ್ದೇವೆ ಎಂದರು.

ಖರ್ಗೆ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದು ಟೀಕಿಸಿರುವುದನ್ನು ಪರೋಕ್ಷವಾಗಿ ಉಪರಾಷ್ಟ್ರಪತಿ ಪ್ರಸ್ತಾಪಿಸಿದರು. ಇದು ಬಸವಣ್ಣನವರ ಪವಿತ್ರ ನೆಲ, ಅವರ ಆಶಯಗಳಂತೆ ಭಾಲ್ಕಿ ಮಠ ಕೆಲಸ ಮಾಡುತ್ತಿದೆ ಎಂದರು.



ಪ್ರಧಾನಿ ಮೋದಿ ವಿರುದ್ಧದ ಹೇಳಿಕೆಗೆ ಉಪರಾಷ್ಟ್ರಪತಿ ರಾಧಾಕೃಷ್ಣನ್ ಮಾತು

ಭಿಕ್ಷಾಟನೆಗಿಂತ ಸ್ವಾವಲಂಬಿ ಜೀವನವೇ ಲೇಸು | ಆಂಬುಲೆನ್ಸ್ ಓಡಿಸುವ ಕನಸು

ತೃತೀಯಲಿಂಗಿ ವಿಸ್ಮಯ

▶ ಅನುಷಾ ನಾಯಕ್

ದಿಗಂತ ವಿಶೇಷ

• **ಬೆಂಗಳೂರು:** ಹುಟ್ಟಿದ್ದು ಗಂಡಾಗಿ, ಬದಲಾದದ್ದು ಹೆಣ್ಣಾಗಿ. ಓದಿದ್ದು ಪಿಯುಸಿ. ಹೊಟ್ಟೆಪಾಡಿಗೆ ಆಯ್ಕೆ ಮಾಡಿಕೊಂಡಿದ್ದು ಆಟೋ ಚಾಲನೆ. ಸಿಕ್ಕಿದ್ದು ಸುಖಮಯ ಸಾಂಸಾರಿಕ ಜೀವನ, ದಕ್ಕಿದ್ದು ಸ್ವಾಭಿಮಾನದ ಬದುಕು. ಇದು ತೃತೀಯ ಲಿಂಗಿಯೊಬ್ಬರ ಜೀವನಗಾಥೆ. ಚಪ್ಪಾಳೆ ತಟ್ಟಿ ಹಣ ಕೇಳುವ, ಕರೆಯದಿದ್ದರೂ ಶುಭ ಸಮಾರಂಭಗಳಿಗೆ ನುಗ್ಗುವ, ಅಪರಾಧ ಕೃತ್ಯಗಳ ಆರೋಪ ಹೊತ್ತ ಎಷ್ಟೋ ತೃತೀಯಲಿಂಗಿಯರ ನಡುವೆ ವಿಸ್ಮಯ ಎನ್ನುವ ತೃತೀಯಲಿಂಗಿಯೊಬ್ಬರು ವಿಭಿನ್ನವಾಗಿ ನಿಲ್ಲುತ್ತಾರೆ. ಇವರ ಬದುಕಿನ ತಿರುವು ವಿಶಿಷ್ಟ, ಸಾಧನೆಯೂ ಅಷ್ಟೇ ವಿಶಿಷ್ಟ.

ಸ್ವಾಭಿಮಾನಿ ನಡೆ...: ಮನೆಯವರ ವಿರೋಧದ ನಡುವೆಯೂ ತಮ್ಮಿಚ್ಛೆಯಂತೆಯೇ ತೃತೀಯಲಿಂಗಿಯಾದರು. ➡ಪುಟ 9



> **ಗಂಡೂ ಅಲ್ಲ, ಹೆಣ್ಣೂ ಅಲ್ಲ, ಮನೆಗೆ ಮಗನೂ ಅಲ್ಲ, ಸ್ಮಶಾನಕ್ಕೆ ಹೆಣವೂ ಅಲ್ಲ. ಇದು ನಮ್ಮ ಆಯ್ಕೆಯಲ್ಲ, ಬ್ರಹ್ಮಲಿಖಿತ. ನಮಗೂ ಮನಸ್ಸಿದೆ, ಕಷ್ಟ-ಸುಖಗಳಿವೆ, ಅರ್ಥ ಮಾಡಿಕೊಳ್ಳಿ.**
> ■ ವಿಸ್ಮಯ, ಆಟೋ ಚಾಲಕಿ

ಮೋದಿ ಟೆರರಿಸ್ಟ್ ಎಂದ ಖರ್ಗೆಗೆ ಇಸಿ ನೋಟಿಸ್

• **ಹೊಸದಿಲ್ಲಿ:** ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಭಯೋತ್ಪಾದಕ ಎಂದು ಉಲ್ಲೇಖಿಸಿರುವುದನ್ನು ಚುನಾವಣಾ ಆಯೋಗ (ಇಸಿ) ಬುಧವಾರ ಗಂಭೀರವಾಗಿ ಪರಿಗಣಿಸಿ, ಅವರಿಗೆ ನೋಟಿಸ್ ನೀಡಿದೆ. 24 ಗಂಟೆಗಳ ಒಳಗೆ ಪ್ರತಿಕ್ರಿಯೆ ನೀಡುವಂತೆ ಚುನಾವಣಾ ಆಯೋಗವು ಖರ್ಗೆ ಅವರಿಗೆ ಸೂಚಿಸಿದೆ.



ನಿಗದಿತ ಸಮಯದೊಳಗೆ ನಿಮ್ಮ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದಲ್ಲಿ, ಈ ವಿಚಾರದಲ್ಲಿ ನಿಮಗೆ ಹೇಳಲು ಏನೂ ಇಲ್ಲ ಎಂದು ಭಾವಿಸಲಾಗುತ್ತದೆ. ಅದೇ ರೀತಿ ಈ ವಿಷಯದಲ್ಲಿ ಸೂಕ್ತ ಕ್ರಮ ಅಥವಾ ನಿರ್ಧಾರ ತೆಗೆದುಕೊಳ್ಳಲು ಆಯೋಗ ಸ್ವತಂತ್ರವಾಗಿರುತ್ತದೆ ಎಂದು ಇಸಿ ಹೇಳಿದೆ.

ತಮಿಳುನಾಡು ವಿಧಾನಸಭಾ ಚುನಾವಣೆ ಪ್ರಚಾರದ ಅಂತಿಮ ದಿನದಂದು ಚೆನ್ನೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಖರ್ಗೆ ಅವರು ಪ್ರಧಾನಿಯನ್ನು ಭಯೋತ್ಪಾದಕ ಎಂದು ಉಲ್ಲೇಖಿಸಿದ್ದರು.

ಎಐಡಿಎಂಕೆಯು ಪ್ರಧಾನಿ ಮೋದಿಯವರ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವುದನ್ನು ಟೀಕಿಸುವ ವೇಳೆ ಖರ್ಗೆ ಈ ರೀತಿ ದೂಷಿಸಿದ್ದರು. ಎಐಎಡಿಎಂಕೆ ಮೋದಿ ಜತೆ ಹೇಗೆ ತಾನೆ ಕೈಜೋಡಿಸುತ್ತದೆ. ಮೋದಿ ಒಬ್ಬ ಭಯೋತ್ಪಾದಕ. ಅವರು ಸಮಾನತೆಯಲ್ಲಿ ನಂಬಿಕೆ ಹೊಂದಿಲ್ಲ. ➡ಪುಟ 9

ಕಿರುಸುದ್ದಿ

ಮಾಂತೇಶಗೆ ಪಿಎಚ್‌ಡಿ



◆**ಧಾರವಾಡ:** ಸಂಶೋಧನಾ ವಿದ್ಯಾರ್ಥಿ ಮಾಂತೇಶ ಕೆ ಮಂಡಿಸಿದ ಶಿಳ್ಳೇಕ್ಯಾತ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಕವಿವಿ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಸುಭಾಚಂದ್ರ ನಾಟೀಕಾರ ಮಾರ್ಗದರ್ಶಕರಾಗಿದ್ದರು.

ವೈಶಾಖ ದೇವರಿಗೆ ಪ್ರಿಯವಾದ ಮಾಸ



◆**ಧಾರವಾಡ:** ದೇವರಿಗೆ ಪ್ರಿಯವಾದ ಮಾಸಗಳಲ್ಲಿ ವೈಶಾಖ ಮಾಸವೇ ಶ್ರೇಷ್ಠ. ಗಂಗೆಯು ಜಾಹ್ನವಿಯಾಗಿ ಜನಿಸಿದ್ದು ಇದೇ ಮಾಸದಲ್ಲಿದೆ ಎಂದು ಡಾ. ಪ್ರಮೋದ ಆಚಾರ್ಯ ಹೇಳಿದರು.

ಸತ್ತೂರಿನ ನಾರಾಯಣ ಪಾರಾಯಣ ಬಳಗವು ರಾಜಾಜಿ ನಗರದ ರಘೋತ್ತಮ ಅವಧಾನಿ ಅವರ ನಿವಾಸದಲ್ಲಿ ಹಮ್ಮಿಕೊಂಡ ವೈಶಾಖ ಮಾಸದ ಮಹತ್ವದ ಬಗ್ಗೆ ಅವರು ವಿಶೇಷವಾದ ಉಪನ್ಯಾಸ ನೀಡಿದರು. ಭಗವಂತನ ಮೂರು ಅವತಾರಗಳಾದ ಪರುಶುರಾಮ, ನರಸಿಂಹದೇವರು ಮತ್ತು ವೇದವ್ಯಾಸ ದೇವರ ಜಯಂತಿಗಳು ಆಚರಣೆಗಳು ಈ ವೈಶಾಖ ಮಾಸದ ವಿಶೇಷ ಎಂದರು. ನಾವೆಲ್ಲರೂ ಸ್ನಾನ, ದಾನ, ಯಾಗ, ಕ್ರಿಯಾ, ಭೋಗ, ಮುಂತಾದವುಗಳಿಗೂ ನಾನಾ ಧರ್ಮಗಳ ಸಾಧನೆಗೂ ಅತ್ಯಂತ ಅನುಕೂಲಕರವಾದ ಮಾಸವೇ ವೈಶಾಖ ಮಾಸ. ಸೂರ್ಯೋದಯಕ್ಕಿಂತಲೂ ಮೊದಲೇ ಸ್ನಾನ, ದೇವರಿಗೆ ಗಂಧಲೇಪನ, ಜಲ, ಛತ್ರ, ಪಾದುಕಾ ಇತ್ಯಾದಿಗಳ ದಾನ, ಅತ್ಯಂತ ಶ್ರೇಷ್ಠವೆಂದು ಸ್ಕಂದ ಪುರಾಣವು ನಮಗೆ ತಿಳಿಸುತ್ತದೆ ಎಂದರು. ಕೃಷ್ಣ ಹುನಗುಂದ, ಡಾ. ಶ್ರೀನಾಥ, ಡಾ. ರವಿ ಧುಮ್ಮವಾಡ, ಕೇಶವ ಕುಲಕರ್ಣಿ, ಶ್ರೀನಿವಾಸ ಪಟ್ಟಣಕೊಡಿ, ರಂಗನಾಥ ಕಟ್ಟಿ, ನಾಗೇಶ ನರಸಾಪುರ, ಆನಂದ ದೇಶಪಾಂಡೆ, ಅನಿಲ ಪುರೋಹಿತ, ಎಲ್.ವಿ.ಜೋಶಿ, ಪಾಂಡುರಂಗ ಕುಲಕರ್ಣಿ, ಭೀಮಸೇನ್ ದಿಗ್ಗಾವಿ, ರಾಘವೇಂದ್ರ ಮುಂಡಗೋಡ ವಿಲಾಸ ಸಬ್ನೀಸ ಇದ್ದರು.

ಬಸವ ಜಯಂತಿ



◆**ಧಾರವಾಡ:** ಚನ್ನಬಸವೇಶ್ವರ ನಗರದ ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾದಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಮೂಲಕ ಬಸವೇಶ್ವರರ ಜಯಂತಿ ಜರುಗಿತು. ಡಾ.ಸುವರ್ಣಾ ಬಿರಾದಾರ, ಪದಾಧಿಕಾರಿಗಳಾದ ಪ್ರೊ. ವಿ.ಎಸ್.ಸವಡಿ, ಚಂದ್ರಶೇಖರ ಮನಗುಂಡಿ, ಶ್ರೀಶೈಲಪ್ಪ ನಿಡವಣಿ, ಮಡಿವಾಳಪ್ಪ ಶಿರಿಯಣ್ಣವರ, ಬಸವಂತಪ್ಪ ತೋಟದ, ಬಸವರಾಜ ಗೋಲಪ್ಪನವರ, ಮಹೇಶ ಬಿಳೆಹಾಳ, ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ, ಜಯಶ್ರೀ ಪಾಟೀಲ, ಕವಿತಾ ಎಲೇದಹಳ್ಳಿ, ಮುಕ್ತಾ ಸವಡಿ, ಸುಧಾ ಕಬ್ಬೂರ, ಶಿವಶರಣ ಕಲಬಶೆಟ್ಟರ ಇದ್ದರು. ನಾಗರತ್ನಾ ಹಡಗಲಿ ವಚನ ಪ್ರಾರ್ಥಿಸಿದರು. ಪ್ರಕಾಶ ಭಾವಿಕಟ್ಟಿ ನಿರೂಪಿಸಿದರು. ಸವಿತಾ ಅಮರಶೆಟ್ಟಿ ವಚನ ಮಂಗಲ ಮಾಡಿದರು.

ನಾಗರಿಕ ಬಂದೂಕು ತರಬೇತಿ

◆**ಹುಬ್ಬಳ್ಳಿ:** ಜನಸ್ನೇಹಿ ಪೊಲೀಸ್ ನಿಟ್ಟಿನಲ್ಲಿ ನಾಗರಿಕರ ಪೂರಕ ದಾಖಲಾತಿಯೊಂದಿಗೆ ನಾಗರಿಕ ಬಂದೂಕು ತರಬೇತಿ ಏ.24 ರಂದು ಆರಂಭವಾಗುತ್ತಿದ್ದು, ಆಸಕ್ತರು ಭಾಗವಹಿಸಬೇಕು ಎಂದು ಪೊಲೀಸ್ ಇಲಾಖೆ ತಿಳಿಸಿದೆ. ಆಸಕ್ತ ನಾಗರಿಕರು ಪೂರಕ ದಾಖಲಾತಿಗಳೊಂದಿಗೆ, ಗೋಕುಲ್ ರಸ್ತೆ ಪೊಲೀಸ್ ಹೆಡ್ ಕ್ವಾಟರ್ಸ್ ನಗರ ಮೀಸಲು ಪಡೆ ಕಚೇರಿ ಅರ್ಜಿ ಸಲ್ಲಿಸಲು ಕೋರಲಾಗಿದೆ. (ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯ ವರೆಗೆ). ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 0836-2233503, 9738348421, 9901575707 ಸಂಪರ್ಕಿಸಲು ಕೋರಲಾಗಿದೆ.

ದೇಹದಾನ

◆**ಹುಬ್ಬಳ್ಳಿ:** ವಿದ್ಯಾನಗರ ನಿವಾಸಿ ಮಹಾನಂದಾ ಅಂಗಡಿ (69) ಅವರು ಮೃತಪಟ್ಟಿದ್ದು, ತಮ್ಮ ದೇಹವನ್ನು ಗೋಕುಲ ರಸ್ತೆ ಸಂಜೀವಿನಿ ಆಯುರ್ವೇದ ವೈದ್ಯಕೀಯ ಕಾಲೇಜ್‌ಗೆ ದಾನ ಮಾಡಿದ್ದಾರೆ. ಇದು ವಿದ್ಯಾರ್ಥಿಗಳು ಅಧ್ಯಯನಕ್ಕೆ ಅನುಕೂಲವಾಗಲಿದೆ. ಸಂಸ್ಥೆಯ ಪ್ರಾಚಾರ್ಯ ಡಾ.ಚರಂತಯ್ಯ ಸಿ.ಹಿರೇಮಠ, ಡಾ.ಮಹೇಶ ದೇಸಾಯಿ, ಪ್ರಾಧ್ಯಾಪಕ ಡಾ.ಗುರುಪಾದ ಸ್ವಾಮಿ ಕೋವಳ್ಳಿಮಠ, ಸಹ-ಪ್ರಾಧ್ಯಾಪಕ ಡಾ.ರಾಮಪ್ಪತೇಗೂರ ದೇಹವನ್ನು ಸ್ವೀಕರಿಸಿ, ದೇಹದಾನ ಮಾಡಿದ ಮೃತರ ಕುಟುಂಬಕ್ಕೆ ಸಂಸ್ಥೆಯ ವತಿಯಿಂದ ಕೃತಜ್ಞತೆ ಸಲ್ಲಿಸಿದರು.



ಕಲಘಟಗಿ: ಭೂ ದಿನಾಚರಣೆಯನ್ನು ಕಲಘಟಗಿ ನ್ಯಾಯಾಲಯದ ಆವರಣದಲ್ಲಿ ಹಿರಿಯ ನ್ಯಾಯಾಧೀಶ ರವೀಂದ್ರ ಹೊನೊಲೆ ಅವರ ನೇತೃತ್ವದಲ್ಲಿ ಸಸಿ ನೆಡುವ ಮೂಲಕ ಆಚರಿಸಲಾಯಿತು. ದಿವಾಣಿ ನ್ಯಾಯಾಧೀಶ ಸಂಜೀವಕುಮಾರ, ವಕೀಲರ ಸಂಘದ ಅಧ್ಯಕ್ಷ ವಿ.ಬಿ. ಶಿವನಗೌಡ್ರ, ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಎಲ್ಲ ನ್ಯಾಯವಾದಿಗಳು, ಅರಣ್ಯ ಇಲಾಖೆಯ ಸಿಬ್ಬಂದಿ ಇದ್ದರು.

ಕಲೆಗೆ, ಕಲಾವಿದರಿಗೆ ಪ್ರೋತ್ಸಾಹ ಅಗತ್ಯ

◆**ಧಾರವಾಡ:** ಪಂ.ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಕನ್ನಡ-ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಗಾನಸುಧೆ ಸಂಗೀತ ಕಾರ್ಯಕ್ರಮ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. ಗಾಯಕರಾದ ಶಿವಾನಂದ ಹೂಗಾರ ಅವರು ಸುಶ್ರಾವ್ಯವಾಗಿ ವಚನಸಂಗೀತ, ಭಾವಗೀತೆಗಳು, ಜಾನಪದ ಹಾಡುಗಳನ್ನು ಹಾಡಿ ಎಲ್ಲರನ್ನು ತಮ್ಮತ್ತ ಸೆಳೆದರು. ಹಾರ್ಮೋನಿಯಂ ಆರ್.ಬಿ.ಪಾಟೀಲ ಮತ್ತು ತಬಲಾ ಸುರೇಶ ನಿಡಗುಂದಿ ಸಾಥ್ ನೀಡಿದರು. ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಆಡವೇಶ ಇಟಗಿ ಉದ್ಘಾಟಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಫೆಡರೇಶನ್ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಗುರಿಕಾರ ಮಾತನಾಡಿ, ಕಲಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಕಲಾ ಕ್ಷೇತ್ರದಲ್ಲಿ ಬೆಂಗಳೂರಿನಲ್ಲಿ ಸಿಗುವ ಅವಕಾಶ ಬೇರೆ ಎಲ್ಲೂ ಸಿಗುವುದಿಲ್ಲ ಎಂದರು. ಅಖಿಲ ಕರ್ನಾಟಕ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಂಗಮನಾಥ ಲೋಕಾಪುರ ಹಾಗೂ ಆಕಾಶವಾಣಿ ನಿವೃತ್ತ ನಿಲಯ ನಿರ್ದೇಶಕ ಸಿ.ಯು.ಬೆಳ್ಳಕ್ಕಿ ಮಾತನಾಡಿದರು. ಅಮರಪ್ಪ ಬುರಡಿ, ಅಣ್ಣಪೂರ್ಣ ಹೊಸಮನಿ, ಗೀತಾ ಚಿಕ್ಕಮಠ, ದೀಪಾ ಪಾಟೀಲ ಮತ್ತು ಅಮೃತಾ ಜೋಶಿ ಅವರನ್ನು ಸನ್ಮಾನಿಸಲಾಯಿತು. ಮಹಿಳಾ ತಂಡಗಳಿಗೆ ಅಭಿನಂದನಾ ಪತ್ರ ವಿತರಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಎಂ.ಎಸ್. ಫರಾಸ್ ಅಧ್ಯಕ್ಷತೆ ವಹಿಸಿದ್ದರು. ಅಭಿಯಂತರ ಸಂಜಯ ಕಬ್ಬೂರ, ಮರ್ತಾಂಡಪ್ಪ ಕತ್ತಿ ಸ್ವಾಗತಿಸಿದರು. ಸುನಂದಾ ಯಡಾಲ, ಪ್ರಮೀಳಾ ಜಕ್ಕಣ್ಣವರ, ಸುರೇಶ ಬೆಟಗೇರಿ, ಕೃಷ್ಣಮೂರ್ತಿ ಗೊಲ್ಲರ, ಡಾ. ಮಾರುತಿ ಚೌಡಕ್ಕನವರ, ಚಿಂತನ ಹತ್ತಿಕಾಳ, ನೇಹಾ ಬುದ್ನಿ ಸೇರಿ ಅನೇಕರು ಇದ್ದರು.



ಧಾರವಾಡ: ಪಂ.ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಕನ್ನಡ-ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಗಾನಸುಧೆ ಸಂಗೀತ ಕಾರ್ಯಕ್ರಮ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

ಅಬಕಾರಿ ಇಲಾಖೆ ಸಮಿತಿ ಸಭೆ | ಅಧಿಕಾರಿಗಳಿಗೆ ಡಿಸಿ ಸೂಚನೆ

ಅಕ್ರಮ ಮದ್ಯಕ್ಕೆ ಕಡಿವಾಣ ಹಾಕಿ



◆**ಧಾರವಾಡ:** ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ಹಾಗೂ ಹೊರರಾಜ್ಯದ ಮದ್ಯ ಸಾಗಾಣಿಕೆಗೆ ಕಡಿವಾಣ ಹಾಕಬೇಕು. ಮದ್ಯದ ಅಂಗಡಿಗಳ ಮೇಲೆ ನಿಗಾ ವಹಿಸಲು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಅಬಕಾರಿ ಇಲಾಖೆಯ ಸ್ಥಾಯಿ ಸಮಿತಿ ಸಭೆ ನಡೆಸಿದ ಅವರು, ದೂರು ಬಂದಾಕ್ಷಣ ತಪಾಸಣೆ ನಡೆಸಿ, ಅಕ್ರಮ ಕಂಡು ಬಂದರೆ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಆದೇಶಿಸಿದರು.

ಸಭೆಯಲ್ಲಿ ಸಹಾಯಕ ಪೊಲೀಸ್ ಆಯುಕ್ತ ಪ್ರಶಾಂತ ಸಿದ್ದನಗೌಡರ, ಮಹಿಳಾ-ಮಕ್ಕಳ ಇಲಾಖೆ ಉಪನಿರ್ದೇಶಕಿ ಡಾ. ಎಚ್.ಎಚ್.ಕುಕನೂರ, ಜಿಪಂ ಸಹಾಯಕ ಕಾರ್ಯದರ್ಶಿ ಅಜಯ್ ಎನ್., ಡಿಎಚ್‌ಒ ಡಾ. ಎಸ್.ಎಂ.ಹೊನಕೇರಿ ಇತರರು ಇದ್ದರು.

- ಮಾದಕ ವಸ್ತುಗಳಿಗೆ ಒಳಗಾದ ಅಥವಾ ಅವುಗಳ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳನ್ನು ಗುರುತಿಸಿ ಅವರ ಚಲನವಲಗಳ ಮೇಲೂ ನಿಗಾ
- ಆರ್ಥಿಕ ಚಟುವಟಿಕೆ ಹಾಗೂ ಸಂಶಯಾಸ್ಪದ ವರ್ತನೆ ಗಮನಿಸಿ, ಅಗತ್ಯವಿದ್ದಲ್ಲಿ ತನಿಖೆ ನಡೆಸಿ ಮಾದಕ ವಸ್ತು ಜಾಲ ಪತ್ತೆಹಚ್ಚಿ ದೊಡ್ಡಮಟ್ಟದ ಜಾಲ ಬೇಧಿಸುವುದಾಗಿ ತಿಳಿಸಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ
- ಅಕ್ರಮ ಸರಾಯಿ ಮಾರಾಟದ ವಿರುದ್ಧ ಅಬಕಾರಿ ಇಲಾಖೆಯಿಂದ ಕೈಗೊಂಡ ನಿಯಂತ್ರಣ ಕ್ರಮಗಳನ್ನು ಮತ್ತು ಪರಿಹಾರದ ಕ್ರಮಗಳನ್ನು ಬಗ್ಗೆ ಸಭೆಗೆ ವರದಿ ನೀಡಿದ ಅಬಕಾರಿ ಇಲಾಖೆಯ ಉಪಆಯುಕ್ತ ರಮೇಶಕುಮಾರ್ ಎಚ್.

ಯುವಕರನ್ನು ಗುರುತಿಸಿ

ವ್ಯಸನಕ್ಕೆ ಒಳಗಾದ ಯುವಕರನ್ನು ಗುರುತಿಸಿ, ಅವರಿಗೆ ಸಮಾಲೋಚನೆ ಮತ್ತು ಪುನರ್ವಸತಿ ಸೇವೆ ಕಲ್ಪಿಸಬೇಕು. ದಂಡಾತ್ಮಕ ಕ್ರಮಗಳಷ್ಟೇ ಅಲ್ಲದೆ, ಸಾಮಾಜಿಕ ಜವಾಬ್ದಾರಿಯ ಹಿನ್ನೆಲೆ ಅವರನ್ನು ಸರಿಯಾದ ದಾರಿಗೆ ತರಬೇಕು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸಲಹೆ ನೀಡಿದರು.

ಗಡಿಗಳಲ್ಲಿ ತಪಾಸಣೆ ಕಠಿಣಗೊಳಿಸಿ

ನಕಲಿ ಸರಾಯಿ, ಕಳ್ಳಬಟ್ಟಿ ಸರಾಯಿ ತಯಾರಿಕೆ ಪ್ರಕರಣಗಳು ಸಾರ್ವಜನಿಕರ ಆರೋಗ್ಯಕ್ಕೆ ಗಂಭೀರ ಅಪಾಯ ಉಂಟು ಮಾಡುವ ಹಿನ್ನೆಲೆಯಲ್ಲಿ ಇವುಗಳ ನಿರ್ಮೂಲನೆಗೆ ವಿಶೇಷ ತಂಡ ರಚಿಸಿ, ಇಂತಹ ಚಟುವಟಿಕೆ ತಡೆಹಿಡಿಯಲು ಸೂಚಿಸಿದ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು, ಗೋವಾದಿಂದ ಅಕ್ರಮ ಮದ್ಯ ಸಾಗಾಟದ ಕುರಿತು ಹೆಚ್ಚಿನ ಗಮನ ಹರಿಸಬೇಕು. ಜಿಲ್ಲೆಯ ಗಡಿಗಳಲ್ಲಿ ತಪಾಸಣೆ ಕಠಿಣಗೊಳಿಸಿ, ವಿಶೇಷವಾಗಿ ರಾತ್ರಿ ವೇಳೆಯಲ್ಲಿ ವಾಹನಗಳು ಹಾಗೂ ಸಂಶಯಾಸ್ಪದ ವಾಹನ ಪರಿಶೀಲಿಸುವಂತೆಯೂ ಸೂಚನೆ ನೀಡಿದರು.

> ಕೇವಲ ಅಪರಾಧಿಗಳು ಬಂಧಿಸುವುದಲ್ಲ, ಯುವಕರನ್ನು ಸರಿ ದಾರಿಗೆ ತರಬೇಕು. ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವುದರ ಜೊತೆಗೆ ವ್ಯಸನಕ್ಕೆ ಒಳಗಾದವರಿಗೆ ಪುನರ್ವಸತಿ ಕೇಂದ್ರಗಳಿಗೆ ಕಳುಹಿಸುವ ವ್ಯವಸ್ಥೆಯನ್ನೂ ಮಾಡಬೇಕು.
>
> ■ ಸ್ನೇಹಲ್ ಆರ್., ಜಿಲ್ಲಾಧಿಕಾರಿ

ಹಿರೇಮಠದ ಆಸ್ತಿ ಮಾರಾಟಕ್ಕೆ ಯತ್ನ: ಆರೋಪ

◆**ಧಾರವಾಡ:** ಜಿಲ್ಲೆಯ ಕುಂದಗೋಳ ಪಂಚಗ್ರಹ ಹಿರೇಮಠದ ಆಸ್ತಿ ಅಕ್ರಮವಾಗಿ ಮಠದ ಸ್ವಾಮೀಜಿ ಮಾರಾಟಕ್ಕೆ ಮುಂದಾಗಿದ್ದು, ತಕ್ಷಣವೇ ಎನ್‌ಎ ಪರಿವರ್ತನೆ ರದ್ದುಪಡಿಸಿ ಮಠದ ಆಸ್ತಿ ಉಳಿಸುವಂತೆ ಆಗ್ರಹಿಸಿ ಭಕ್ತರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದ ನೂರಾರು ಜನ ಭಕ್ತರು, ಶ್ರೀಮಠದ 53 ಎಕರೆ ಭೂಮಿ ಕೃಷಿಯೇತರ ಭೂಮಿಯಾಗಿಸಿ ರಿಯಲ್ ಎಸ್ಟೇಟ್ ದಾರರೊಬ್ಬರಿಗೆ ಮಾರುತ್ತಿದ್ದು, ಎನ್.ಎ.ಪರಿವರ್ತನೆ ರದ್ದುಪಡಿಸುವಂತೆ ಆಗ್ರಹಿಸಿದರು.

ಪಂಚಗ್ರಹಕ ಹಿರೇಮಠವು ಕಾಶಿ ಶಾಖಾ ಮಠ. ವಿಜಯಪುರ ಆದಿಲ್ ಶಾಹಿಗಳ ಕಾಲದಲ್ಲಿ 96 ಎಕರೆ ಭೂಮಿ ದಾನವಾಗಿ ನೀಡಿದ್ದರು. ಈ ಭೂಮಿಗಳು ಇಂದಿಗೂ ಮಠದ ಹೆಸರಿನಲ್ಲಿದ್ದು, ಧಾರ್ಮಿಕ ಉದ್ದೇಶಕ್ಕೆ ಮಾತ್ರ ಬಳಕೆಸಬೇಕಿದೆ ಎಂದು ತಿಳಿಸಿದರು.

ಈ ಆಸ್ತಿಗಳು ಯಾವುದೇ ವ್ಯಕ್ತಿಯ ಖಾಸಗಿ ಸ್ವತ್ತಲ್ಲ. ಏಕಪಕ್ಷೀಯ ಮಾರಾಟ ಅಥವಾ ಹಸ್ತಾಂತರ ಮಾಡಲು ಸಾಧ್ಯವಿಲ್ಲ. ಭಕ್ತರು ಈ ಭೂಮಿ ಲಾವಣಿಯಾಗಿ ಪಡೆದು ಕೃಷಿ ಮಾಡುತ್ತ ಮಠಕ್ಕೆ ಆದಾಯ ಒದಗಿಸುತ್ತಿದ್ದಾರೆ ಎಂದರು.

ಶ್ರೀಮಠದ ಶಿತಿಕಂಠೇಶ್ವರ ಶಿವಾಚಾರ್ಯರು ಮಾರಾಟ ಮಾಡುತ್ತಿದ್ದಾರೆ. ಕಳೆದ 10 ವರ್ಷಗಳಲ್ಲಿ ಜಮೀನು, ಬೆಳ್ಳಿ ಮತ್ತು ಬಂಗಾರ ಸೇರಿದಂತೆ ಅನೇಕ ಆಸ್ತಿಗಳನ್ನು ಮಾರಾಟ ಮಾಡಿದ್ದು, ಈ ಬಗ್ಗೆ ತನಿಖೆಯೂ ನಡೆಸಬೇಕು ಎಂದು ಮನವಿ ಮಾಡಿದರು.

ಈಗಾಗಲೇ ಜಿಲ್ಲಾಧಿಕಾರಿಗಳು ಕಳೆದ ಏ.10ರಂದು ಹೊರಡಿಸಿದ ಆದೇಶವನ್ನು ತಕ್ಷಣ ಹಿಂಪಡೆಯಬೇಕು. ಮಠದ ಆಸ್ತಿ ಯಾವುದೇ ಕಾರಣಕ್ಕೂ ಮಾರಾಟ ಮಾಡಬಾರದು. ವಿಷಯದ ಗಂಭೀರತೆ ಅರಿತು ಆಸ್ತಿ ಉಳಿಸಲು ಒತ್ತಾಯಿಸಿದರು.

ಸೋಮರಾವ್ ದೇಸಾಯಿ, ರಮೇಶ ಕೊಪ್ಪದ, ಜಗನ್ನಾಥಗೌಡ ಸಿದ್ದನಗೌಡ್ರ, ಲಕ್ಷ್ಮಣ ಚುಳಕಿ, ಶಂಕರಗೌಡ ದೊಡಮನಿ, ಸಿದ್ದಪ್ಪ ಇಂಗಳಳ್ಳಿ, ಬಸಣ್ಣ ಬಳ್ಳಾರಿ, ಮಲ್ಲಣ್ಣ ಮಾರಡಗಿ, ರುದ್ರಪ್ಪ ಕಿರೇಸೂರ, ಫಕೀರೇಶ ನಾವಳ್ಳಿಮಠ ಅನೇಕರು ಇದ್ದರು.



ಜಿಲ್ಲಾಡಳಿತದಿಂದ ಶಂಕರಾಚಾರ್ಯ ಜಯಂತಿ

◆**ಧಾರವಾಡ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಆದ್ಯ ಜಗದ್ಗುರು ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ ಜರುಗಿತು.

ಹುಬ್ಬಳ್ಳಿಯ ಶಾರದಾ ಶಂಕರ ರಮಣ ಅದ್ವೈತ ಮಠದ ಶಿವಾನಂದ ಭಾರತಿ ಶ್ರೀಗಳ ಸಾನ್ನಿಧ್ಯದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಶಂಕರಾಚಾರ್ಯರ ಕುರಿತು ಸಂಸ್ಕೃತ ಮಹಾವಿದ್ಯಾಲಯದ ಉಪನ್ಯಾಸಕ ವಿದ್ವಾನ್ ಸೂರ್ಯನಾರಾಯಣ ಭಟ್ ಉಪನ್ಯಾಸ ನೀಡಿದರು. ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಇದ್ದರು.

ಕಾರ್ಯಕ್ರಮದಲ್ಲಿ ಬ್ರಾಹ್ಮಣ ಸಮಾಜದ ಅಧ್ಯಕ್ಷ ಆರ್.ಡಿ.ಕುಲಕರ್ಣಿ, ಶಂಕರ ಕುಲಕರ್ಣಿ ಹಾಗೂ ಸಮಾಜದ ಮುಖಂಡರು ಇದ್ದರು.





ಹುಬ್ಬಳ್ಳಿ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹುಬ್ಬಳ್ಳಿ ನಗರ ವತಿಯಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಸಲಾಗಿತ್ತು.

ಸನ್ಮಾರ್ಗದಲ್ಲಿ ನಡೆಸಿದವರು ಶಂಕರಾಚಾರ್ಯರು



◆**ನವಲಗುಂದ:** ಅದ್ವೈತ ಸಿದ್ಧಾಂತವನ್ನು ಜಯಪ್ರಿಯಗೊಳಿಸಿ, ಈ ಜಗತ್ತಿನಲ್ಲಿ ಎಲ್ಲವೂ ಪರಮಾತ್ಮನಿಂದಲೇ ಆವರಿಸಲ್ಪಟ್ಟಿದ್ದು ಎಂದು ಇಡೀ ಮನಕುಲವನ್ನೇ ಸನ್ಮಾರ್ಗದಲ್ಲಿ ನಡೆಸಿದವರು ಶಂಕರಾಚಾರ್ಯರು. ಹಾಗೇ ನಾವೆಲ್ಲರೂ ಎಲ್ಲ ಸಮಾಜದ ಧ'ರ್'ಮ'ಪ್ರ'ತಿ'ಪಾ'ದ'ಕ'ರ' ಜಯಂತಿಯನ್ನು ಶ್ರದ್ಧಾಪೂರ್ವಕವಾಗಿ ಆಚರಿಸೋಣ. ಜೊತೆಗೆ ನಾವೆಲ್ಲರೂ ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗೋಣ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.

ತಾಲೂಕು ಆಡಳಿತ ವತಿಯಿಂದ ಮಂಗಳವಾರ ಆಚರಿಸಲಾದ ಜಗದ್ಗುರು ಶಂಕರಾಚಾರ್ಯರ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, 32ನೇ ವಯಸ್ಸಿನಲ್ಲಿ ನಿಧನರಾಗುವ ಮೊದಲು ಆಳವಾದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಮೈಲಿಗಲ್ಲುಗಳನ್ನು ಸಾಧಿಸಿದರು. ಅವರ ಅಲ್ಪಾವಧಿಯ, ಜೀವಿತಾವಧಿಯ ಹೊರತಾಗಿಯೂ ಅವರ ಕೊಡುಗೆಗಳು ಭಾರತದ ಆಧ್ಯಾತ್ಮಿಕ ಮತ್ತು ತಾತ್ವಿಕ ಭೂದೃಶ್ಯದ ಮೇಲೆ ಶಾಶ್ವತವಾದ ಪ್ರಭಾವ ಬೀರಿದೆ ಎಂದರು.

ವಾಗ್ದೇವಿ ಮಹಿಳಾ ಮಂಡಳಿ ಸದಸ್ಯರಿಂದ ಸೌಂದರ್ಯ ಲಹರಿ ಶ್ಲೋಕವನ್ನು ಪಠನೆಯೊಂದಿಗೆ ಕಾರ್ಯಕ್ರಮಕ್ಕೆ ಮೆರುಗು ತಂದರು. ಸಾನ್ನಿಧ್ಯವನ್ನು ವೇದಮೂರ್ತಿ ನರಸಿಂಹಭಟ್ ಜೋಶಿ, ಶ್ರೀ ಶಂಕರಾಚಾರ್ಯರ ಉತ್ಸವ ಸಮಿತಿ ತಾಲೂಕು ಅಧ್ಯಕ್ಷ ಹಾಗೂ ತಾಲೂಕಿನ ಹಿರಿಯ ವೈದಿಕರು ವಹಿಸಿದ್ದರು. ತಹಶೀಲ್ದಾರ್ ಸುಧೀರ ಸಾವುಕಾರ, ತಾಪಂ ಇಒ ರವೀಂದ್ರಗೌಡ ಪಾಟೀಲ, ಸಿಪಿಐ ರವಿ ಕಪ್ಪತ್ತನವರ, ಪುರಸಭೆ ಮುಖ್ಯಾಧಿಕಾರಿ ಎಸ್.ಪಿ. ಪೂಜಾರ, ಪುರಸಭೆ ಮಾಜಿ ಸದಸ್ಯೆ ಪೂರ್ಣಿಮಾ ಜೋಶಿ, ವಕೀಲ ಕೇಶವ ಕರ್ಜಗಿ, ಗಣ್ಯ ವ್ಯಾಪಾರಸ್ಥ ಶ್ರೀಕಾಂತ ಪಾಟೀಲ, ಯುತ್ ಕಾಂಗ್ರೆಸ್ ಅಧ್ಯಕ್ಷ ನವಲಗುಂದ ಕ್ಷೇತ್ರ ವಿಕಾಸ ತದ್ದೇವಾಡಿ, ಹಿರಿಯರಾದ ನರಸಿಂಹಭಟ್ ಜೋಷಿ, ವಿ.ಎನ್.ಪದಕಿ, ಸುಭಾಶ ಕುಲಕರ್ಣಿ, ಮಹೇಶ ಕುಲಕರ್ಣಿ, ರಾಮಚಂದ್ರ ಕುಲಕರ್ಣಿ, ನರಸಿಂಹ ಇನಾಮತಿ ಸೇರಿದಂತೆ ಶ್ರೀಶಂಕರಾಚಾರ್ಯ ಉತ್ಸವ ಸಮೀತಿ ಪದಾಧಿಕಾರಿಗಳು, ಸರ್ವ ಸದಸ್ಯರು, ಸಮಾಜದ ಪ್ರಮುಖ ಮಹಿಳಾ ಸದಸ್ಯರು, ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಇತರರಿದ್ದರು.

ಜಗಜ್ಯೋತಿ ಬಸವೇಶ್ವರ ಜಯಂತಿ

◆**ಕುಂದಗೋಳ:** ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಆಚರಣೆಯೊಂದಿಗೆ ರೈತರಿಗೆ, ಸಾರ್ವಜನಿಕರಿಗೆ ವಿವಿಧ ಬ್ಯಾಂಕಿನ ಸಾಲ-ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಶಾಸಕ ಎಂ.ಆರ್. ಪಾಟೀಲ ವಿತರಿಸಿದರು.

ನಂತರ ಮಾತನಾಡಿದ ಅವರು, ಸಹಕಾರಿ ಸಂಘಗಳು ರೈತರ ನೆರವಿಗೆ ಇದ್ದು ಸರಳವಾದ ವ್ಯವಹಾರದೊಂದಿಗೆ ಬ್ಯಾಂಕಿನೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಆರ್ಥಿಕವಾಗಿ ರೈತರು ಸದೃಢರಾಗಬೇಕೆಂದು ಹೇಳಿದರು.

ಕೆಸಿಸಿ ಬ್ಯಾಂಕ ನಿರ್ದೇಶಕ ಉಮೇಶ ಆರ್. ಹೆಬಸೂರ ಮಾತನಾಡಿದರು. ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಮೇಶ ಇಂಗಳಹಳ್ಳಿ, ಮುಖಂಡರಾದ ಮಾಂತೇಶ ಶ್ಯಾಗೋಟಿ, ಪಪಂ ಮಾಜಿ ಅಧ್ಯಕ್ಷ ನಾಗೇಶ ಗಂಗಾಯಿ, ರಮೇಶ ಗದಗಿನ, ಗಂಗಾಧರ ಕೋಳಿವಾಡ, ಬ್ಯಾಂಕಿನ ಅಧಿಕಾರಿ ಹಾಗೂ ಸಿಬ್ಬಂದಿ ಇದ್ದರು.





ಹುಬ್ಬಳ್ಳಿ: ನಗರದ ಎನ್.ಎಲ್.ಇ. ಸಂಸ್ಥೆಯ ಡಾ. ಆರ್.ಬಿ. ಪಾಟೀಲ ಮಹೇಶ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ವಿಶ್ವ ಗುರು ಬಸವಣ್ಣನವರ ಜಯಂತಿ ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ರಾಮ್‌ಮೋಹನ್ ಎಚ್.ಕೆ., ಕಾಲೇಜಿನ ಸಿಬ್ಬಂದಿ ವಿನಯ ದೇಶಪಾಂಡೆ, ಸುರೇಶ ಬಮ್ಮಿಗಟ್ಟಿ ರಾಜಣ್ಣ ಗುಡಿಮನಿ ಇದ್ದರು.

ಬಸವೇಶ್ವರ ದೇವಸ್ಥಾನದ ರಥೋತ್ಸವ



◆**ಕುಂದಗೋಳ:** ಬಸವ ಜಯಂತಿ ಅಂಗವಾಗಿ ಗ್ರಾಮದ ಬಸವೇಶ್ವರ ಓಣಿಯ ಬಸವೇಶ್ವರ ದೇವಸ್ಥಾನದ ರಥೋತ್ಸವವು ಸಂಭ್ರಮದಿಂದ ಜರುಗಿತು.

ಮುಂಜಾನೆ ದೇವಸ್ಥಾನದಲ್ಲಿ ಬಸವೇಶ್ವರ ಮೂರ್ತಿಗೆ ವಿಶೇಷ ಪೂಜೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವೇಶ್ವರ ಮೂರ್ತಿ, ಪಲ್ಲಕ್ಕಿಯೊಂದಿಗೆ ಎತ್ತುಗಳ ಮೆರವಣಿಗೆ ಜರಗಿತು. ಸಂಜೆ ದೇವಸ್ಥಾನದಿಂದ ಪಶುಪತಿಹಾಳ ರಸ್ತೆಯಲ್ಲಿರುವ ಬಸವಣ್ಣನ ಪಾದಗಟ್ಟಿ ಅವರಿಗೆ ರಥೋತ್ಸವ ಸಂಚರಿಸಿ ದೇವಸ್ಥಾನಕ್ಕೆ ಆಗಮಿಸಿತು. ದಾರಿ ಉದ್ದಕ್ಕೂ ಭಕ್ತರು ತೆರಿಗೆ ಉತ್ತತ್ತಿ, ಬೆಲ್ಲ, ಹಣ್ಣುಗಳನ್ನು ಎದೆದು ತಮ್ಮ ಭಕ್ತಿಯನ್ನು ಅರ್ಪಿಸಿದರು. ಸುಮಂಗಲಿಯರು ಆರತಿಯೊಂದಿಗೆ ರಥೋತ್ಸವದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿ ಕಂಡುಬಂದಿತು. ಗ್ರಾಮದ ಮುಖಂಡರಾದ ಶಿಮಣ್ಣಾ ಬಡ್ಡಿ, ಸಿದ್ದನಗೌಡ ಹಿರೇಗೌಡ್ರ, ನಾಗಪ್ಪ ಕೊಪ್ಪದ, ಗೌಡಪ್ಪಗೌಡ ಮರಸಿದ್ದನವರ, ಈಶ್ವರಗೌಡ ರಂಗನಗೌಡ್ರ, ವಿ.ವಿ. ರಂಗನಗೌಡ್ರ, ಲವಣಗೌಡ ಹಿರೇಗೌಡ್ರ, ಮೋಹನಗೌಡ ಚಿಕ್ಕಗೌಡ್ರ, ಗುರುಗೌಡ ಪೊಲೀಸ ಪಾಟೀಲ್, ಚಮಣ್ಣಾ ದ್ಯಾಪಾಯಿ, ಗದಗಯ್ಯ ಸೊಪ್ಪಿನಕಟ್ಟಿ, ಈರಪ್ಪ ನಾಗರಹಳ್ಳಿ ಸೇರಿದಂತೆ ಅನೇಕರಿದ್ದರು.

ವಿಶೇಷ ಉಪನ್ಯಾಸ ಕಾರ್ಯಕ್ರಮ

◆**ಹುಬ್ಬಳ್ಳಿ:** ನಗರದ ಕೆ.ಎಲ್.ಇ ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮತ್ತು ಎಚ್.ಎಸ್. ಕೊತಂಬ್ರಿ ವಿಜ್ಞಾನ ಸಂಸ್ಥೆಯ ಸಸ್ಯಶಾಸ್ತ್ರ ವಿಭಾಗದ ವತಿಯಿಂದ ''ಶಕ್ತಿ, ಪರಿಸರ ಮತ್ತು ಇಎಸ್‌ಜಿ ಅನುಸರಣೆ ಕ್ಷೇತ್ರಗಳಲ್ಲಿ ವಿಜ್ಞಾನ ಪದವೀಧರರಿಗೆ ಉದ್ಯೋಗಾವಕಾಶಗಳು'' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು. ಮುಖ್ಯ ಅತಿಥಿಯಾಗಿ ಸನ್ ಶುಭ್ ಟೆಕ್ನೋವೇಷನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ್ ಕಂಬ್ಳ್ಯಾಳ್ ಆಗಮಿಸಿದ್ದರು. ಇಂಧನ, ಪರಿಸರ ಸಂರಕ್ಷಣೆ ಮತ್ತು ಇಎಸ್‌ಜಿ ಅನುಸರಣೆ ಕ್ಷೇತ್ರಗಳಲ್ಲಿ ವಿಜ್ಞಾನ ಪದವಿಧರರಿಗೆ ಇರುವ ಉದ್ಯೋಗದ ಅವಕಾಶಗಳು, ಅಗತ್ಯ ಕೌಶಲ್ಯಗಳ ಬಗ್ಗೆ ಮಾಹಿತಿ ನೀಡಿದರು. ವಿಜ್ಞಾನದಲ್ಲಿ ಪದವಿ ಪಡೆದ ಬಳಿಕ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬ ವಿಷಯದ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲೆ ಸುಮಂಗಲಾ ಪಾಟೀಲ್ ವಹಿಸಿದ್ದರು. ಆಯೋಜನಾ ಕಾರ್ಯದರ್ಶಿಯಾಗಿ ಚೈತ್ರಾ ನೆಗಲೂರು ಹಾಗೂ ವಿಭಾಗದ ಮುಖ್ಯಸ್ಥರು ಮತ್ತು ಸಂಯೋಜಕರಾಗಿ ಸುಭಾಶ್ ಎಮ್ಮಿ ಉಪಸ್ಥಿತರಿದ್ದರು.



ವಿವಿಧ ಕಾಮಗಾರಿಗೆ ಭೂಮಿಪೂಜೆ



◆**ನವಲಗುಂದ:** ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ ಹಾಗೂ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಮಂಜೂರಾದ 722 ಲಕ್ಷ ರೂ.ಗಳ ವೆಚ್ಚದ ಕಾಲವಾಡ-ಬೆಳಹಾರ ಕಾಲುವೆ ಮತ್ತು ತಡೆಗೋಡೆ ನಿರ್ಮಾಣ ಕಾಮಗಾರಿಗೆ ಕಾಲವಾಡ ಗ್ರಾಮದಲ್ಲಿನ ಹಿರಿಯರು ಹಾಗೂ ಇಲಾಖೆಯ ಅಧಿಕಾರಿಗಳೊಂದಿಗೆ ಶಾಸಕ ಎನ್. ಎಚ್. ಕೋನರಡ್ಡಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಈ ಯೋಜನೆ ಕೇವಲ ಒಂದು ಕಾಮಗಾರಿಯಲ್ಲ ರೈತರ ಬದುಕಿಗೆ ನೇರವಾಗಿ ಸ್ಪರ್ಶಿಸುವ ಅಭಿವೃದ್ಧಿಯ ಹೆಜ್ಜೆ. ಜಮೀನುಗಳಿಗೆ ಸಮರ್ಪಕ ನೀರಾವರಿ ಸಿಗುವುದರಿಂದ ಬೆಳೆ ಫಲವತ್ತಾಗುವುದು, ರೈತರ ಪರಿಶ್ರಮಕ್ಕೆ ಉತ್ತಮ ಬೆಲೆ ದೊರೆಯುವುದು ಹಾಗೂ ಅವರ ಕುಟುಂಬಗಳ ಭವಿಷ್ಯ ಇನ್ನಷ್ಟು ಭದ್ರವಾಗುವುದು ಎಂಬ ವಿಶ್ವಾಸವಿದೆ ಎಂದರು.

ಕೆ.ಎನ್.ಎನ್.ಎಲ್ ಅಧಿಕಾರಿ ಶಶಿಧರ್, ಗ್ರಾಮ ಪಂಚಾಯತಿ ಅಧ್ಯಕ್ಷ ರಾಜು ಮಾಡೊಳ್ಳಿ, ಗ್ರಾಮದ ಹಿರಿಯರಾದ ಹನಮಂತರಡ್ಡಿ ಲಿಂಗರಡ್ಡಿ, ಶಿವಪ್ಪ ಬಾಡಗಿ, ನಿಂಗಪ್ಪ ನಾಗರಹಳ್ಳಿ, ಸಿದ್ದನಗೌಡ ಪಾಟೀಲ, ಶಂಕ್ರಪ್ಪ ಹಡಪದ, ಬಾಪೂಗೌಡ್ರ ಹಿರೇಗೌಡ್ರ, ಮಾದೇವ ಮಾಡೊಳ್ಳಿ, ವೆಂಕಪ್ಪ ಲಿಂಗರಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಘಟಗಿ ಬಸವೇಶ್ವರ ರಥೋತ್ಸವ ಸಂಭ್ರಮ


◆**ಕಲಘಟಗಿ:** ಇಲ್ಲಿನ ಘಟಗಿ ಬಸವೇಶ್ವರ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಗಿದ ರಥೋತ್ಸವದ ವೇಳೆ ಭಕ್ತಾದಿಗಳು ಹಳದಿ ಮತ್ತು ಕೇಸರಿ ವಸ್ತ್ರಗಳನ್ನು ಧರಿಸಿ, ಕೈಯಲ್ಲಿ ಧ್ವಜ ಹಿಡಿದು ಭಕ್ತಿ ಪರಾಕಾಷ್ಠೆಯಲ್ಲಿ ಮುಳುಗಿದ್ದರು. ರಥವು ಸಾಗುವ ದಾರಿಯುದ್ದಕ್ಕೂ ಭಕ್ತರು ಉತ್ತತ್ತಿ, ಬಾಳೆಹಣ್ಣು ಎಸೆಯುವ ಮೂಲಕ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಈ ಬಾರಿಯ ವಿಶೇಷವೆಂದರೆ ರಥಕ್ಕೆ ಮಾಡಲಾಗಿದ್ದ ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಬಟ್ಟೆಗಳ ಅಲಂಕಾರ. ತ್ರಿವರ್ಣದ ಸೊಬಗಿನಿಂದ ಕಂಗೊಳಿಸುತ್ತಿದ್ದ ರಥವು ಎಲ್ಲರ ಗಮನ ಸೆಳೆಯಿತು.



ಕಿರುಸುದ್ದಿ

ಎ.24ರಂದು ಮೂವರಿಗೆ ಗೌಡಾ ಪ್ರದಾನ


ಜಮಖಂಡಿ: ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಎ.24 ಶುಕ್ರವಾರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗುತ್ತಿದೆ. ಇಳಕಲ್‌ನ ಗುರುಮಹಾಂತ ಸ್ವಾಮಿಗಳು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಬಾಹ್ಯಾಕಾಶ ವಿಜ್ಞಾನಿ ನಂಬಿ ನಾರಾಯಣನ್, ಹಾಗೂ ಟೆಕ್ ಉದ್ಯಮಿ ಮಹೇಶ್ ಬೆಲ್ಲದ ಈ ಬಾರಿಯ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಕುಲಪತಿ ಆನಂದ ದೇಶಪಾಂಡೆ ತಿಳಿಸಿದರು.

ಇಂದು ಕವಿವಿ 75ನೇ ಘಟಿಕೋತ್ಸವ: ಮೂವರಿಗೆ ಗೌಡಾ ಪ್ರದಾನ





ಧಾರವಾಡ: ರಾಜ್ಯದ ಪ್ರತಿಷ್ಠಿತ ಕರ್ನಾಟಕ ವಿಶ್ವವಿದ್ಯಾಲಯದ 75ನೇ ವಾರ್ಷಿಕ ಘಟಿಕೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ನಾಡಿನ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಘೋಷಿಸಿದೆ. ವಿಶ್ವವಿದ್ಯಾಲಯದ ಈ ಬಾರಿಯ ಅಮೃತ ಮಹೋತ್ಸವದ ಘಟಿಕೋತ್ಸವವು ವಿಶೇಷ ಕಳೆಗಟ್ಟಿದ್ದು, ಶಿಕ್ಷಣ, ಸಮಾಜ ಸೇವೆ, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಅನುಪಮ ಸೇವೆ ಪರಿಗಣಿಸಿ, ಈ ಗೌರವ ನೀಡಲಾಗುತ್ತಿದೆ. ಶಿಕ್ಷಣ ತಜ್ಞ ಪ್ರೊ.ಅಚ್ಯುತ್ ಸಾಮಂತ, ಕರ್ನಾಟಕದ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ, ಹುಬ್ಬಳ್ಳಿ ಮಜೇಥಿಯಾ ಫೌಂಡೇಶನ್ ಸಂಸ್ಥಾಪಕ ಜಿತೇಂದ್ರ ಡಿ ಮಜೇಥಿಯಾ ಅವರಿಗೆ ಗೌಡಾ ಪ್ರದಾನ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಘಟಿಕೋತ್ಸವ ಉದ್ಘಾಟಿಸಲಿದ್ದು, ಇಸ್ರೋ ನಿಕಟಪೂರ್ವ ಅಧ್ಯಕ್ಷ ಪ್ರೊ.ಎ.ಎಸ್.ಕಿರಣಕುಮಾರ ಘಟಿಕೋತ್ಸವದ ಭಾಷಣ ಮಾಡಲಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಪಾಲ್ಗೊಳ್ಳಿದ್ದಾರೆ.

ನೈಟಿ ಧರಿಸಿದ್ದಕ್ಕೆ ಪತ್ನಿಗೆ ಕಿರುಕುಳ

ಬೆಳಗಾವಿ: ದಿನವೂ ಸೀರೆಯನ್ನೇ ಧರಿಸಬೇಕು ಎಂಬ ಪತಿಯ ಕಿರುಕುಳಕ್ಕೆ ಪತ್ನಿಯೊಬ್ಬಳು ಈಗ ನರಕಯಾತನೆ ಅನುಭವಿಸಿರುವ ದುರ್ಘಟನೆ ನಡೆದಿದೆ. ಮನೆಯಲ್ಲಿ ಸೀರೆ ಬದಲಿಗೆ ನೈಟಿ ಧರಿಸಿದ್ದಕ್ಕೆ ಆಕ್ರೋಶಗೊಂಡ ಪತಿ ಪತ್ನಿಯ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದ್ದಾನೆ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ನಂದಗಡ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಕೃಷ್ಣಾಜಿ ಪಾಟೀಲ್ ಎಂಬಾತನೇ ಈ ಕೃತ್ಯ ಎಸಗಿದ ಆರೋಪಿ. ಈತನ ಪತ್ನಿ ಮಂಜುಳಾ ಪಾಟೀಲ್ (32) ಗಂಭೀರವಾಗಿ ಗಾಯಗೊಂಡವರು. ಕೃಷ್ಣಾಜಿ ತನ್ನ ಪತ್ನಿ ಮನೆಯಲ್ಲಿ ನೈಟಿ ಧರಿಸುವುದನ್ನು ವಿರೋಧಿಸುತ್ತಿದ್ದನು. ಈ ವಿಚಾರವಾಗಿ ದಂಪತಿಗಳ ನಡುವೆ ಆಗಾಗ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. ಘಟನೆಯಲ್ಲಿ ಮಂಜುಳಾ ಅವರಿಗೆ ಸುಮಾರು ಶೇ.80ರಷ್ಟು ಸುಟ್ಟ ಗಾಯಗಳಾಗಿದ್ದು, ಮೊದಲು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಪರಿಸ್ಥಿತಿ ಗಂಭೀರವಾದ ಹಿನ್ನೆಲೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಗೋವಾದ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಘಟನೆಯ ಕುರಿತು ನಂದಗಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಕೃಷ್ಣಾಜಿ ಪಾಟೀಲನನ್ನು ಪೊಲೀಸರು ಬಂಧಿಸಿ ವಿಚಾರಣೆ ಮುಂದುವರಿಸಿದ್ದಾರೆ.

ಅಪಘಾತ: ಬೈಕ್ ಸವಾರ ಸಾವು

ಬನವಾಸಿ: ಗೂಡ್ಸ್ ವಾಹನ-ಬೈಕ್ ನಡುವೆ ಭೀಕರ ಅಪಘಾತ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಬುಧವಾರ ಬನವಾಸಿ-ಸಿದ್ದಾಪುರ ಮುಖ್ಯ ರಸ್ತೆಯ ಸಮೀಪದ ಭಾಶಿ ಗ್ರಾಮದ ಭದ್ರಪುರ ಕ್ರಾಸ್ ಬಳಿ ನಡೆದಿದೆ. ಸಾಗರ ತಾಲೂಕಿನ ಕಾನ್ಲೆ, ಮಂದಗಳಲೆ ಗ್ರಾಮದ ಗುರುಮೂರ್ತಿ ಆನಂದಪ್ಪ ಛಲವಾದಿ (24)ಡಿಕ್ಕಿ ರಭಸಕ್ಕೆ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾನೆ. ಮೃತನು ಬನವಾಸಿ ಕಡೆಯಿಂದ ಚಂದ್ರಗುತ್ತಿ ಕಡೆಗೆ ಬೈಕ್‌ನಲ್ಲಿ ಸಾಗುತ್ತಿರುವ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಹಲಸಿ ಗ್ರಾಮದ ನಿಯಾಜ್ ಮುನಿರ ಕಿತ್ತೂರು ಎಂಬ ಚಾಲಕನು ನಿರ್ಲಕ್ಷ್ಯತನದಿಂದ ತನ್ನ ಗೂಡ್ಸ್ ವಾಹನವನ್ನು ಚಲಾಯಿಸಿಕೊಂಡು ಬಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಘಟನಾ ಸ್ಥಳಕ್ಕೆ ಸಿಪಿಐ ಶಶಿಕಾಂತ್ ವರ್ಮಾ, ಪಿಎಸ್ಐಗಳಾದ ಮಾಂತೇಶ ಕುಂಬಾರ, ರವೀಂದ್ರ ಬಿರಾದಾರ ಭೇಟಿ ನೀಡಿದ್ದಾರೆ. ಬನವಾಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅಭಿಪ್ರಾಯ

ಸಮಾನತೆ ಸಾರಿದ ಪವಿತ್ರ ನಾಡು ಬೀದರ



ಬೀದರ: ಜಿಲ್ಲೆಯ ಶಿವಯೋಗಿ ಶರಣರು, ಸಂತರು, ಬಸವೇಶ್ವರರು ಬಾಳಿ ಸಮಾನತೆ ಸಾರಿದ ಪವಿತ್ರ ನಾಡು ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಭಾಲ್ಕಿ ಪಟ್ಟಣದ ಚನ್ನಬಸವಾಶ್ರಮದಲ್ಲಿ ಬುಧವಾರ ಏರ್ಪಡಿಸಿದ್ದ ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮಿಜಿ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಐತಿಹಾಸಿಕವಾಗಿ, ಸಮಸಮಾನತೆ, ಸಾಮಾಜಿಕ ಕ್ರಾಂತಿ, ಧಾರ್ಮಿಕ ಕ್ರಾಂತಿ, ಸಮಾಜ ಸುಧಾರಣೆಗೆ ಶ್ರಮಿಸಿದ್ದ ವಿಶ್ವಗುರು ಬಸವಣ್ಣ ಅವರ ನಾಡಿನಲ್ಲಿ ಬಸವಾದಿ ಶರಣರ ಆಶಯಗಳಂತೆ ಭಾಲ್ಕಿ ಹಿರೇಮಠ ಸೇವೆ ಸಲ್ಲಿಸುತ್ತಿದೆ. ಹಿರಿಯ ಸ್ವಾಮಿಜಿಗಳು ಬಸವಣ್ಣನ ತತ್ವ ಆದರ್ಶಗಳಂತೆ ಸತ್ಯ, ಸೇವೆ, ಮಾನವೀಯ ನೆಲೆಗಟ್ಟಿನಲ್ಲಿ ಸೇವೆ ಮಾಡುತ್ತಿರುವುದು ಹಾಗೂ ಅವರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಹಿರಿಯ ಸ್ವಾಮಿಗಳಾದ ಡಾ.ಚನ್ನಬಸವ ದೇವರು ತಮ್ಮ ದಿನಾಚರಣೆ ಆಚರಿಸಿಕೊಳ್ಳುತ್ತಿರಲಿಲ್ಲ. ದಿನಾಚರಣೆ ದಿನ ನಿರಾಶ್ರಿತರಿಗೆ ಅನಾಥ, ದೀನ ದಲಿತರ ಸೇವೆಗೆ ಅರ್ಪಿಸಿದರು. ಈಗಿನ ಸ್ವಾಮಿಗಳು ಶೈಕ್ಷಣಿಕ ಕ್ರಾಂತಿ ಮಾಡಿದ್ದಾರೆ. 60 ಶಿಕ್ಷಣ ಸಂಸ್ಥೆಗಳಲ್ಲಿ 20 ಸಾವಿರ ವಿದ್ಯಾರ್ಥಿಗಳ ಜೀವನವನ್ನು ಈ ಹಿಂದುಳಿದ ಭಾಗದಲ್ಲಿ ಸುಧಾರಿಸಿದರು. ಶರಣ ತತ್ವ ಸಾಹಿತ್ಯ ಪ್ರವಚನ ಮೂಲಕ ಆಧ್ಯಾತ್ಮಿಕ ಕ್ರಾಂತಿ ಮಾಡಿದ್ದಾರೆ ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮಾತನಾಡಿ, ಬಸವಕಲ್ಯಾಣದ ಬಸವಾದಿ ಶರಣರ ಆದರ್ಶ, ತತ್ವ ಮಾರ್ಗದಲ್ಲಿ ಸೇವೆ ಸಲ್ಲಿಸುತ್ತಿರುವ ಡಾ.ಚನ್ನಬಸವ ಪಟ್ಟದ್ದೇವರು ಸಂಚರಿಸಿದ ಸಮಾಜ ಸುಧಾರಣೆಯ ನಾಡು ಇದು. ಸಮಾಜ ಸೇವೆ, ಶೈಕ್ಷಣಿಕ ಧಾರ್ಮಿಕ ಸೇವೆ ಕೈಗೊಳ್ಳುತ್ತಿರುವ ಸಮಾಜದ ಸುಧಾರಕ ಎಂದು ಸಂತೋಷ ವ್ಯಕ್ತಪಡಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಬಸವಾದಿ ಶರಣರ ವಿಚಾರ ಧಾರೆ ಇಡೀ ಪ್ರಪಂಚಕ್ಕೆ ಪ್ರಚಾರ ಆಗಬೇಕಿದೆ. ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಯ ಆದರ್ಶ, ತತ್ವಗಳು ಯುವ ಸಮಾಜದಲ್ಲಿ ಹೆಚ್ಚೆಚ್ಚು ಪ್ರಚಾರಗೊಳ್ಳಬೇಕಿದೆ. ವಿಚಾರ, ಆಚಾರ, ಪ್ರಚಾರ ಅತೀ ಮುಖ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಚಿವ ಈಶ್ವರ ಬಿ.ಖಂಡ್ರೆ ಅವರು ಮಾತನಾಡಿ, ತಮ್ಮ ದೀಕ್ಷಾ ಗುರು ಚನ್ನಬಸವ ಪಟ್ಟದ್ದೇವರ ಶತಮಾನೋತ್ಸವವನ್ನು ಭೀಮಣ್ಣ ಖಂಡ್ರೆ ಅವರು ಅದ್ದೂರಿಯಾಗಿ ನಡೆಸಿದ್ದರು. ಆಗ ಅಂದಿನ ರಾಷ್ಟ್ರಪತಿ ಡಾ.ಶಂಕರದಯ್ಯಾಳ್ ಶರ್ಮಾ ಆಗಮಿಸಿದ್ದರು. ಇಂದಿನ ಪೀಠಾಧಿಪತಿಗಳ ಅಮೃತ ಮಹೋತ್ಸವಕ್ಕೆ ಉಪ ರಾಷ್ಟ್ರಪತಿಗಳು ಆಗಮಿಸಿರುವುದು ಯೋಗಾಯೋಗ ಎಂದು ಈಶ್ವರ ಖಂಡ್ರೆ ಹೇಳಿದರು.

ಇದೇ ಸಂದರ್ಭದಲ್ಲಿ ಶರಣರ ಕ್ರಾಂತಿ ಪಥ, ವಚನ ವೈಭವ, ಸಂಪುಟಗಳು, ಮಠದ ಪರಂಪರೆ, ಅನುಭವ ಮಂಟಪದ ಬೆಳಕು ಗ್ರಂಥಗಳನ್ನು ಗಣ್ಯರು ಬಿಡುಗಡೆಗೊಳಿಸಿದರು.

ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್, ಬೀದರ ಲೋಕಸಭಾ ಸಂಸದರಾದ ಸಾಗರ ಈಶ್ವರ ಖಂಡ್ರೆ, ಭಾಲ್ಕಿ ಹಿರೇಮಠದ ಡಾ. ಬಸವಲಿಂಗ ಪಟ್ಟದ್ದೇವರು, ಶ್ರೀ ಗುರುಬಸವ ಪಟ್ಟದ್ದೇವರು, ಗದಗ ಡಂಬಳದ ಸಿದ್ದರಾಮ ಸ್ವಾಮೀಜಿ, ಮಾಜಿ ಕೇಂದ್ರ ಸಚಿವರಾದ ಭಗವಂತ ಖೂಬಾ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಮಾಜಿ ಶಾಸಕರಾದ ಪ್ರಕಾಶ ಖಂಡ್ರೆ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಾಬು ವಾಲಿ ಉಪಸ್ಥಿತರಿದ್ದರು.

ಗೇಟ್ ಅಳವಡಿಕೆ ಕಾಮಗಾರಿ ಪೂರ್ಣ



ಹಗರಿಬೊಮ್ಮನಹಳ್ಳಿ: ತಾಲೂಕಿನ ಜೀವನಾಡಿ ಮಾಲವಿ ಜಲಾಶಯಕ್ಕೆ ನೀರು ಬಂದಾಗಲೆಲ್ಲಾ ಪ್ರತಿ ವರ್ಷ ಜಲಾಶಯದ ಕ್ರಸ್ಟ್ ಗೇಟ್‌ಗಳಲ್ಲಿ ಅಪಾರ ಪ್ರಮಾಣದ ನೀರು ಸೋರಿಕೆಯಾಗುತಿತ್ತು.

ಜಲಾಶಯದ ಅಚ್ಚುಕಟ್ಟು ರೈತರು ನೀರು ಸೋರಿಕೆ ತಡೆಗಟ್ಟಲು ಕ್ರಮ ವಹಿಸುವಂತೆ ಶಾಸಕರಿಗೆ ಮನವಿ ಸಲ್ಲಿಸಿದ್ದರಿಂದ ಜಲಾಶಯಕ್ಕೆ ಹೊಸ ಗೇಟ್ ಅಳವಡಿಸುವ ಕೈಗೆತ್ತಿಕೊಳ್ಳಲಾಯಿತು.

ಜಲಾಶಯದ 10 ಗೇಟ್‌ಗಳಲ್ಲಿ ಎಂಟು ಗೇಟ್ ಪೂರ್ಣಗೊಳಿಸಲಾಗಿತ್ತು. ಇನ್ನುಳಿದ ಎರಡು ಗೇಟ್ ಅಳವಡಿಸುವ ಕಾಮಗಾರಿ ಸ್ವಲ್ಪ ವಿಳಂಬವಾಗಿತ್ತು. ಮಳೆಗಾಲ ಬಂದ್ರು ಕಾಮಗಾರಿ ಪೂರ್ಣಗೊಳಿಸಲಾಗಲಿಲ್ಲ, ಈ ವರ್ಷ ಮತ್ತೆ ಜಲಾಶಯದ ನೀರು ಸೋರಿಕೆ ಆಗುತ್ತೆ ಎಂಬ ಆತಂಕ ರೈತರಲ್ಲಿ ಮನೆ ಮಾಡಿತ್ತು.

ಶಾಸಕರ ರೈತ ಪರ ಕಾಳಜಿಯಿಂದ ಮಾಲವಿ ಜಲಾಶಯದ ಕ್ರಸ್ಟ್‌ಗೇಟ್ ಅಳವಡಿಸುವ ಕಾರ್ಯ ಬುಧವಾರ ಪೂರ್ಣಗೊಂಡಿದೆ. ಈ ಭಾಗದ ರೈತರು ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ.

ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮಾಲವಿ ಜಲಾಶಯ ನೀರು ಸೋರಿಕೆ ತಡೆಗಟ್ಟುವ ನಿಟ್ಟಿನಲ್ಲಿ 4,ಕೋಟಿ 2 ಲಕ್ಷ 72 ಸಾವಿರ ಅನುದಾನದಲ್ಲಿ ಹೊಸ ಗೇಟ್ ಅಳವಡಿಸುವ ಕಾರ್ಯ ಕೈಗೊಳ್ಳಲಾಗಿತ್ತು. ಜಲಾಶಯದ ಎಂಟು ಗೇಟ್ ಅಳವಡಿಸಲಾಗಿತ್ತು. ಕಾರಣಾಂತರದಿಂದ ಇನ್ನುಳಿದ ಎರಡು ಗೇಟ್ ಅಳವಡಿಸುವ ಕಾರ್ಯ ಸ್ವಲ್ಪ ವಿಳಂಭವಾಗಿದ್ದರಿಂದಾಗಿ ವಿನಾಕಾರಣ ಅಪಪ್ರಚಾರ ಮಾಡಲಾಗಿತ್ತು. ಮಳೆಗಾಲಕ್ಕೂ ಮುನ್ನ ಜಲಾಶಯಕ್ಕೆ ನೀರು ಬರುವ ಮೊದಲೇ ಜಲಾಶಯದ ಕ್ರಸ್ಟ್ ಗೇಟ್ ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ. ಜಲಾಶಯದ ಎಡ ದಂಡೆ ಮತ್ತು ಬಲ ದಂಡೆ ಕಾಲುವೆಗಳ ಗೇಟ್‌ಗಳ ದುರಸ್ತಿ ಕಾರ್ಯವು ಮುಗಿದಿದೆ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಹುಬ್ಬಳ್ಳಿ-ನ್ಯೂ ಟಿನ್ಸುಕಿಯಾ ನಡುವೆ ವಿಶೇಷ ರೈಲು

ಹುಬ್ಬಳ್ಳಿ: ಬೇಸಿಗೆ ರಜೆಯ ಪ್ರಯುಕ್ತ ಪ್ರಯಾಣಿಕರ ದಟ್ಟಣೆ ನಿರ್ವಹಿಸಲು, ನೈರುತ್ಯ ರೈಲ್ವೆಯು ಎಸ್‌ಎಸ್‌ಎಸ್ ಹುಬ್ಬಳ್ಳಿ ಮತ್ತು ನ್ಯೂ ಟಿನ್ಸುಕಿಯಾ ನಡುವೆ ಒಂದು ಟ್ರಿಪ್ ವಿಶೇಷ ರೈಲನ್ನು ಓಡಿಸಲಿದೆ.

ರೈಲು ಸಂಖ್ಯೆ 07325 ಏಪ್ರಿಲ್ 23, 2026 (ಗುರುವಾರ) ಬೆಳಗ್ಗೆ 11.45 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು, ಭಾನುವಾರ ಮಧ್ಯಾಹ್ನ 2.30ಗಂಟೆಗೆ ನ್ಯೂ ಟಿನ್ಸುಕಿಯಾ ತಲುಪಲಿದೆ. ಮರು ಪಯಣದಲ್ಲಿ, ರೈಲು ಸಂಖ್ಯೆ 07326 ಏಪ್ರಿಲ್ 27, 2026 (ಸೋಮವಾರ) ರಂದು ರಾತ್ರಿ 10 ಗಂಟೆಗೆ ನ್ಯೂ ಟಿನ್ಸುಕಿಯಾದಿಂದ ಹೊರಟು, ಗುರುವಾರ ರಾತ್ರಿ 11ಗಂಟೆಗೆ ಹುಬ್ಬಳ್ಳಿ ಆಗಮಿಸಲಿದೆ.

ಈ ವಿಶೇಷ ರೈಲು ಎರಡೂ ಮಾರ್ಗಗಳಲ್ಲಿ ಎಸ್‌ಎಂಎಂ ಹಾವೇರಿ, ಹರಿಹರ, ದಾವಣಗೆರೆ, ಅರಸೀಕೆರೆ, ತುಮಕೂರು, ಎಸ್‌ಎಂವಿಟಿ ಬೆಂಗಳೂರು, ಬಂಗಾರಪೇಟೆ, ಕುಪ್ಪಂ, ಜೋಲಾರಪೇಟೆ, ಕಟ್ಪಾಡಿ, ರೇಣಿಗುಂಟ, ಗುಡೂರು, ಒಂಗೋಲ್, ವಿಜಯವಾಡ, ರಾಜಮಂಡ್ರಿ, ಕೊತ್ತವಲಸ, ವಿಜಯನಗರಂ, ಶ್ರೀಕಾಕುಳಂ ರೋಡ್, ಪಾಲಸಾ, ಬ್ರಹ್ಮಪುರ, ಖುರ್ದಾ ರೋಡ್, ಭುವನೇಶ್ವರ್, ಕಟಕ್, ಭದ್ರಕ್, ಖರಗ್ಪುರ್, ಆಂಡುಲ್, ದನಕುಣಿ, ಬರ್ಧ್ಮಾನ್, ಬೋಲ್ಪುರ್ (ಶಾಂತಿನಿಕೇತನ), ರಾಂಪುರ್ ಹಟ್, ನ್ಯೂ ಫರಕ್ಕಾ, ಮಾಲ್ಡಾ ಟೌನ್, ಬರ್ಸೋಯಿ, ಕಿಶನ್ಗಂಜ್, ನ್ಯೂ ಜಲ್ಪೈಗುರಿ, ನ್ಯೂ ಕೂಚ್ ಬೆಹಾರ್, ನ್ಯೂ ಅಲಿಪುರ್ ದ್ವಾರ, ಕೊಕ್ರಜಾರ್, ನ್ಯೂ ಬೊಂಗೈಗಾಂವ್, ಬರ್ಪೆಟಾ ರೋಡ್, ರಂಗಿಯಾ, ನ್ಯೂ ಮಿಸ್ಸಾರಿ, ರಂಗಾಪರ ನಾರ್ತ್, ವಿಶ್ವನಾಥ್ ಚರಾಲಿ, ಹರ್ಮುಟಿ, ನಾರ್ತ್ ಲಖಿಂಪುರ, ಧೇಮಾಜಿ ಮತ್ತು ದರ್ಭಾಂಗಾ ನಿಲ್ದಾಣಗಳಲ್ಲಿ ನಿಲ್ಲಲಿದೆ.

ಈ ವಿಶೇಷ ರೈಲು 20 ಬೋಗಿಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ 1 ಎಸಿ 2-ಟೈರ್, 6 ಎಸಿ 3-ಟೈರ್, 7 ಸ್ಲೀಪರ್ ಕ್ಲಾಸ್, 4 ಜನರಲ್ ಸೆಕೆಂಡ್ ಕ್ಲಾಸ್, 1 ಲಗೇಜ್ ಮತ್ತು ಜನರೇಟರ್-ಕಮ್-ಬ್ರೇಕ್ ವ್ಯಾನ್ ಮತ್ತು 1 ಎಸ್‌ಎಲ್‌ಆರ್/ಡಿ ಬೋಗಿಗಳು ಸೇರಿವೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ತಿಳಿಸಿದ್ದಾರೆ.

ನೈರುತ್ಯ ರೈಲ್ವೆ ಇಲಾಖೆ ಸ್ಪಷ್ಟನೆ

ಭೂಮಿ ಹಸ್ತಾಂತರ ಸಮಸ್ಯೆಯಿಂದ ಯೋಜನೆ ವಿಳಂಬ

ಹುಬ್ಬಳ್ಳಿ: ಬಾಗಲಕೋಟೆ-ಕುಡಚಿ ಹೊಸ ರೈಲು ಮಾರ್ಗ(142 ಕಿಮೀ) ಯೋಜನೆ ರಾಜ್ಯ ಸರ್ಕಾರ ಭೂಮಿ ಹಸ್ತಾಂತರವಾಗದ ಕಾರಣ ಟೆಂಡರ್ ಪ್ರಕ್ರಿಯೆ ಆರಂಭಿಸಲು ಸಾಧ್ಯವಾಗಿಲ್ಲ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಕುಡಚಿ-ಬಾಗಲಕೋಟೆ ರೈಲು ಮಾರ್ಗದ ವಿಳಂಬ ಕುರಿತು ಸ್ಪಷ್ಟೀಕರಣ ನೀಡಿದ ನೈರುತ್ಯ ರೈಲ್ವೆ ಬಾಗಲಕೋಟೆ-ಕುಡಚಿ ಹೊಸ ಬ್ರಾಡ್ ಗೇಜ್ ರೈಲು ಮಾರ್ಗ (142 ಕಿ.ಮೀ) ಯೋಜನೆ 2010-11ರಲ್ಲಿ ಕರ್ನಾಟಕ ಸರ್ಕಾರದೊಂದಿಗೆ 50:50 ವೆಚ್ಚ ಹಂಚಿಕೆ ಆಧಾರದಲ್ಲಿ ಅನುಮೋದನೆಯಾಗಿದ್ದು, ಸಂಪೂರ್ಣ ಭೂಮಿ ವೆಚ್ಚವನ್ನು ಕರ್ನಾಟಕ ಸರ್ಕಾರವೇ ಭರಿಸಬೇಕಾಗಿದೆ.

ಬಾಗಲಕೋಟೆ-ಖಜ್ಜಿಡೋನಿ (30.5 ಕಿ.ಮೀ) ವಿಭಾಗಕ್ಕೆ ಭೂಮಿಯನ್ನು ಜುಲೈ 2013ರಲ್ಲಿ ಹಸ್ತಾಂತರಿಸಲಾಯಿತು. ಈ ಮಾರ್ಗ 2017ರಲ್ಲಿ ಯಶಸ್ವಿಯಾಗಿ ಕಾರ್ಯಾರಂಭ ಮಾಡಲಾಗಿದೆ ಎಂದು ತಿಳಿಸಿದೆ.

ಲೋಕಾಪುರವರೆಗೆ ಭೂಮಿ ಫೆಬ್ರವರಿ 2022ರಲ್ಲಿ ಹಸ್ತಾಂತರಗೊಂಡಿದ್ದು, ಈ ವಿಭಾಗವನ್ನು ಮಾರ್ಚ್ 2025ರಲ್ಲಿ ಕಾರ್ಯಾರಂಭ ಮಾಡಲಾಗಿದೆ. ಲೋಕಾಪುರದಿಂದ ಜಮಖಂಡಿ ರಸ್ತೆ (47ಕಿ.ಮೀ) ನಡುವೆ ಮಾರ್ಚ್ 2023ರೊಳಗೆ ಸುಮಾರು 92% ಭೂಮಿ ಹಸ್ತಾಂತರವಾಗಿದೆ. ಲೋಕಾಪುರ-ಯಾದವಾಡ್ (22 ಕಿ.ಮೀ) ಮತ್ತು ಯಾದವಾಡ್-ಜಮಖಂಡಿ ರಸ್ತೆ (25 ಕಿ.ಮೀ) ವಿಭಾಗಗಳಲ್ಲಿ ಕೆಲಸ ಪ್ರಗತಿಯಲ್ಲಿದೆ ಎಂದು ತಿಳಿಸಿದೆ.

ಆದರೆ, ಭೂಮಿ ಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾದ ಅಡಚಣೆಗಳು ಹಾಗೂ ಪರಿಹಾರ ಕುರಿತ ಸ್ಥಳೀಯ ರೈತರ ವಿರೋಧದಿಂದ ಕಾಮಗಾರಿಗಳು


ಮತ್ತೆ ಹಳಿ ತಪ್ಪುತ್ತಿರುವ ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗ

ಈ ಕುರಿತು ಎ.20ರಂದು ಹೊಸದಿಗಂತ ವರದಿ ಪ್ರಕಟಿಸಿತ್ತು.

ನಿರ್ದಿಷ್ಟ ಗುರಿಯಂತೆ ಸಾಗಲು ವಿಳಂಬವಾಗಿದೆ. ಈ ಸಮಸ್ಯೆಗಳನ್ನು ರಾಜ್ಯ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ ಶೀಘ್ರ ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಭೂಸ್ವಾಧೀನ ಪ್ರಕ್ರಿಯೆಗೆ ರೈತರು ಜಾಗ ನೀಡದ ಕಾರಣ ವಿಳಂಬವಾಗಿದೆ. ಹೆಚ್ಚಿನ ಪರಿಹಾರ, ಉಳಿದ ಆಸ್ತಿ ಮತ್ತು ತಾಂತ್ರಿಕ ಭೂಸ್ವಾಮ್ಯ ವಿಚಾರಗಳಿಗೆ ಸಂಬಂಧಿಸಿದಂತೆ ಧಾರವಾಡ ಪೀಠದ ಹೈಕೋರ್ಟ್ ನ್ಯಾಯಾಲಯದಲ್ಲಿ ಹಲವು ಪ್ರಕರಣಗಳು ಮತ್ತು ರಿಟ್ ಅರ್ಜಿಗಳು ದಾಖಲಾಗಿವೆ. ಈ ಪ್ರಕರಣಗಳ ವಿಚಾರಣೆ ಹಾಗೂ ತೀರ್ಮಾನ ಪ್ರಕ್ರಿಯೆಯೂ ಯೋಜನೆ ವಿಳಂಬಕ್ಕೆ ಕಾರಣವಾಗಿದೆ ಎಂದು ಸ್ಪಷ್ಟೀಕರಣ ನೀಡಿದೆ.

ಪದವಿ ಸಂಭ್ರಮಕ್ಕೆ ಕಹಿ ನೆರಳು

ರಸ್ತೆ ಅಪಘಾತದಲ್ಲಿ ವಿದ್ಯಾರ್ಥಿಯ ತಂದೆ ಮೃತ್ಯು

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಪದವಿ ಪ್ರದಾನ ಸಮಾರಂಭವ ದುರಂತದ ಘಟನೆ ಹಿನ್ನೆಲೆಯೊಂದಿಗೆ ಅಂತ್ಯಗೊಂಡಿದೆ. ಬಿ.ಟೆಕ್ ವಿಭಾಗದ ವಿದ್ಯಾರ್ಥಿ ದಿವ್ಯಾಂಶು ಸಕ್ಸೇನಾ ತನ್ನ ಅಕಾಡೆಮಿಕ್ ಸಾಧನೆಯೊಂದಿಗೆ ಎರಡು ಚಿನ್ನದ ಪದಕ ಗಳಿಸಿ ಸಂಭ್ರಮಿಸಿದ ಕ್ಷಣವೇ ಕುಟುಂಬಕ್ಕೆ ಆಘಾತದ ಸುದ್ದಿಯೊಂದಿಗೆ ಮುರಿದುಬಿದ್ದಿದೆ.



ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ಹೊರಹೊಮ್ಮಿದ್ದ ದಿವ್ಯಾಂಶು, ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಲ್ಲೂ ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗೆ ನೀಡಲಾಗುವ ಪ್ರೊ.ಎ.ಎಂ. ಪಠಾನ್ ಚಿನ್ನದ ಪದಕ ತನ್ನದಾಗಿಸಿಕೊಂಡಿದ್ದಾನೆ. ಇದರೊಂದಿಗೆ ಅವನು ಈ ಬಾರಿಯ ಸಮಾರಂಭದ ಏಕೈಕ ಡಬಲ್ ಗೋಲ್ಡ್ ಮೆಡಲಿಸ್ಟ್ ಎಂಬ ಗೌರವಕ್ಕೂ ಪಾತ್ರನಾಗಿದ್ದಾನೆ.

ಈ ಸಾಧನೆಯನ್ನು ಹಂಚಿಕೊಳ್ಳಲು ಅವನ ಪೋಷಕರು ಮಧ್ಯಪ್ರದೇಶದ ಉಜ್ಜಯಿನಿಯಿಂದ ಕಲಬುರಗಿಗೆ ಆಗಮಿಸಿದ್ದರು. ಮಂಗಳವಾರವೇ ನಗರಕ್ಕೆ ಬಂದ ಅವರು,ಬುಧವಾರ ಬೆಳಗ್ಗೆ ವಿಶ್ವವಿದ್ಯಾಲಯ ತಲುಪಲು ಆಟೋರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭ ಕಲಬುರಗಿ ಆಳಂದ ರಸ್ತೆಯಲ್ಲಿ ಅಪಘಾತ ಸಂಭವಿಸಿದೆ.

ಅಪಘಾತದಲ್ಲಿ ದಿವ್ಯಾಂಶುವಿನ ತಂದೆ ಶಿವಕುಮಾರ್ ಸಕ್ಸೇನಾ (59) ಸ್ಥಳದಲ್ಲೇ ಮೃತಪಟ್ಟಿದ್ದು, ತಾಯಿ ಗಾಯಗೊಂಡಿದ್ದಾರೆ ಎಂಬ ಮಾಹಿತಿ ಬಂದಿದೆ. ಘಟನೆಯ ಮಾಹಿತಿ ಲಭ್ಯವಾಗುತ್ತಿದ್ದಂತೆ ದಿವ್ಯಾಂಶು ಸಮಾರಂಭವನ್ನು ಮಧ್ಯದಲ್ಲೇ ಬಿಟ್ಟು ಆಸ್ಪತ್ರೆಗೆ ಧಾವಿಸಿದ್ದಾನೆ. ಸಾಧನೆಯ ಕ್ಷಣಗಳು ಮತ್ತು ಕುಟುಂಬದ ದುಃಖ ಒಂದೇ ದಿನ ಎದುರಾದ ಈ ಘಟನೆ, ವಿಶ್ವವಿದ್ಯಾಲಯ ವಾತಾವರಣದಲ್ಲೂ ಶೋಕದ ನೆರಳು ಮೂಡಿಸಿದೆ. ಜೀವನದ ಅತ್ಯಂತ ಮಹತ್ವದ ದಿನವೇ ದಿವ್ಯಾಂಶುವಿಗೆ ನೋವಿನ ನೆನಪಾಗಿ ಉಳಿದಿದೆ.

ವಿದ್ಯಾರ್ಥಿ, ಸಾರ್ವಜನಿಕರಲ್ಲಿ ರಾಷ್ಟ್ರೀಯತೆ ಜಾಗೃತಿ

ಕೃಷಿ ವಿವಿ, ರಿಮ್ಸ್‌ನಲ್ಲಿ ನಿತ್ಯ ರಾಷ್ಟ್ರಗೀತೆ

▶ ವಾಗೀಶ ವೀ.ಪಾಟೀಲ

ದಿಗಂತ ವಿಶೇಷ

ರಾಯಚೂರು: ಜಿಲ್ಲಾ ಕೇಂದ್ರ ರಾಯಚೂರು ಮಹಾ ನಗರದಲ್ಲಿನ ಕೃಷಿ ವಿಜ್ಞಾನಿಗಳ ವಿವಿ ಹಾಗೂ ರಾಯಚೂರು ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಪ್ರತಿ ನಿತ್ಯ ರಾಷ್ಟ್ರಗೀತೆಯನ್ನು ಮೊಳಗಿಸಿ ಇಂದಿಗೂ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ರಾಷ್ಟ್ರೀಯತೆಯನ್ನು ಜಾಗೃತಗೊಳಿಸುವ ಕೆಲಸ ಮಾಡಲಾಗುತ್ತಿದೆ.

ರಾಯಚೂರಲ್ಲಿ ಮೊದಲು ಕೃಷಿ ವಿಜ್ಞಾನಿಗಳ ವಿಶ್ವ ವಿದ್ಯಾಲಯದ ವಿ.ಸಿ ಆಗಿದ್ದ ಡಾ.ಕೆ.ಎನ್.ಕಟ್ಟಿಮನಿ 2021ರಲ್ಲಿ ಆರಂಭಿಸಿದ್ದರು. ಕೃಷಿ ವಿವಿಯ ಎಂಜನಿಯರಿಂಗ್ ವಿಭಾಗದಲ್ಲಿ ಪೂರ್ವ ಹಾಗೂ ಪಶ್ಚಿಮಾಭಿಮುಖವಾಗಿ ಎರಡು ದೊಡ್ಡ ಲೌಡ್ ಸ್ಪೀಕರ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ಇಡೀ ಕೃಷಿ ವಿವಿಯ ಆವರಣ ವ್ಯಾಪ್ತಿಗೂ ರಾಷ್ಟ್ರಗೀತೆ ಹಾಡುವುದು ಕೇಳುತ್ತದೆ. ಈ ಸಂದರ್ಭದಲ್ಲಿ ಕೃಷಿ ವಿವಿ ಆರವಣದಲ್ಲಿನ ಕೃಷಿ ಕಾರ್ಮಿಕರಿಂದ ಹಿಡಿದು ಪ್ರಯೋಗಾಲಯ, ತರಗತಿಯಲ್ಲಿದ್ದವರೆಲ್ಲರೂ ಎಲ್ಲ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಎದ್ದು ನಿಂತು ರಾಷ್ಟ್ರಗೀತೆಗೆ ಗೌರವ ಸಲ್ಲಿಸುತ್ತಾರೆ.

ವಿವಿಯಲ್ಲಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಕ್ಕೆ ಬೇರೆ ಬೇರೆ ಊರು, ರಾಜ್ಯಗಳಿಂದ ಆಗಮಿಸುವ ಗಣ್ಯರು ಆವರಣದಲ್ಲಿನ ರಸ್ತೆಗಳಲ್ಲಿ ಕಾರುಗಳ ಮೂಲಕ ಸಂಚರಿಸುತ್ತಿದ್ದರೆ ಕಾರುಗಳನ್ನು ನಿಲ್ಲಿಸಿ ಕಾರಿನಿಂದ ಹೊರ ಬಂದು ರಾಷ್ಟ್ರಗೀತೆ ಮುಕ್ತಾಯದ ವರೆಗೂ ನಿಂತು ರಾಷ್ಟ್ರಗೀತೆಗೆ ಗೌರವಸಲ್ಲಿಸಿದ ನಂತರ ಮುಂದೆ ಸಾಗುತ್ತಾರೆ. ಇದರಿಂದ ಅನೇಕ ಗಣ್ಯರು ಹೆಮ್ಮೆಯಿಂದ ಕಾರ್ಯಕ್ರಮಗಳಲ್ಲಿ ಪ್ರಸ್ತಾಪಿಸುವ ಮೂಲಕ ಪ್ರಶಂಸೆ ವ್ಯಕ್ತಪಡಿಸಿದ್ದೂ ಇದೆ. ನಗರದ ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯಲ್ಲಿಯೂ 2023-24ರಿಂದ ರಾಷ್ಟ್ರಗೀತೆಯನ್ನು ಪ್ರತಿ ನಿತ್ಯ ಲೌಡ್ ಸ್ಪೀಕರ್ ಮೂಲಕ ಕೇಳಿಸಲಾಗುತ್ತಿದೆ. ಈ ಸಂದರ್ಭದಲ್ಲಿ ತರಗತಿಗಳು ನಡೆಯುತ್ತಿದ್ದರು ಪಾಠ ಮಾಡುವುದನ್ನು ಸ್ಥಗಿತಗೊಳಿಸಿ ಎಲ್ಲರೂ ಎದ್ದು ನಿಂತು ರಾಷ್ಟ್ರಗೀತೆಗೆ ಗೌರವ ಸಲ್ಲಿಸಲಾಗುತ್ತಿದೆ.

ಪ್ರತಿ ನಿತ್ಯ ಬೆಳಗ್ಗೆ 8.59 ನಿಮಿಷಕ್ಕೆ ಸೈರನ್ ಮೊಳಗುತ್ತದೆ. ಇದನ್ನು ಆಲಿಸಿದ ಎಲ್ಲರೂ ಜಾಗೃತರಾಗಿ ಸರಿಯಾಗಿ 9 ಗಂಟೆಗೆ ಪ್ರಾರಂಭವಾಗುವ ರಾಷ್ಟ್ರಗೀತೆ ಹಾಡುವುದಕ್ಕೆ ಸಿದ್ಧರಾಗುತ್ತಾರೆ. ಪರೀಕ್ಷೆಗಳು ಸಾಮಾನ್ಯವಾಗಿ ಬೆಳಗಿನ 9 ಗಂಟೆಗೆ ಆರಂಭವಾಗುತ್ತಿದ್ದರೆ ಈ ಸಂದರ್ಭದಲ್ಲಿ ಎರಡು ನಿಮಿಷ ರಾಷ್ಟ್ರಗೀತೆ ಹಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಡಲಾಗುತ್ತಿದೆ. ಕೊನೆಯಲ್ಲಿ ಉತ್ತರ ಪತ್ರಿಕೆ ಪಡೆಯುವ ಸಂದರ್ಭದಲ್ಲಿ ಎರಡು ನಿಮಿಷ ತಡವಾಗಿ ಸ್ವೀಕರಿಸಲಾಗುತ್ತಿದೆ.



ನಾನು ಪ್ರಾಚಾರ್ಯನಾಗಿದ್ದ ಸಂದರ್ಭದಲ್ಲಿ 2023-24 ಇಲಾಖೆಯ ಸೆಕ್ರೆಟರಿಯವರೊಂದಿಗೆ ಚರ್ಚಿಸಿ ಅವರ ಅನುಮತಿ ಪಡೆದುಕೊಂಡು ಲೌಡ್ ಸ್ಪೀಕರ್ ಅಳವಡಿಕೆಗೆ ಹಣಕಾಸು ಇಲಾಖೆಯಿಂದ ಒಂದು ಲಕ್ಷ ವಿಶೇಷ ಅನುದಾನ ಪಡೆದುಕೊಂಡು ರಾಷ್ಟ್ರಗೀತೆ ಮೊಳಗಿಸಲು ಆರಂಭಿಸಲಾಯಿತು. ಅಂದಿನಿಂದ ಇಂದಿನವರೆಗೂ ಅದು ನಿರಂತರವಾಗಿ ಬೆಳಗ್ಗೆ ಸರಿಯಾಗಿ 9 ಗಂಟೆಗೆ ಮೊಳಗಿಸಲಾಗುತ್ತಿದೆ.

■ ಡಾ.ಬಸವರಾಜ ಪಾಟೀಲ, ಮಾಜಿ ಪ್ರಾಚಾರ್ಯ , ಮೆಡಿಸಿನ್ ವಿಭಾಗದ ಹಾಲಿ ಮುಖ್ಯಸ್ಥ ರಿಮ್ಸ್

ಪ್ರಸಕ್ತ ಕೆಲಸದ ಅವಧಿ ಬೆಳಗ್ಗೆ 8 ಗಂಟೆ ಇರುವುದರಿಂದ ಬೆಳಗ್ಗೆ ಎಂಟು ಗಂಟೆಗೆ ರಾಷ್ಟ್ರಗೀತೆ ಮೊಳಗಿಸಲಾಗುತ್ತಿದೆ. ಕೆಲಸದ ಅವಧಿ 9 ಗಂಟೆಗೆ ಇದ್ದ ಸಮಂರ್ಭದಲ್ಲಿ ವರ್ಷವಿಡೀ ಬೆಳಗ್ಗೆ 9 ಗಂಟೆಗೆ ರಾಷ್ಟ್ರಗೀತೆ ಮೊಳಗಿಸಲಾಗುತ್ತದೆ.

■ ಹನುಮಂತಪ್ಪ, ಕೃಷಿ ವಿವಿ ವಿಸಿ

ಖರ್ಗೆ ಹೇಳಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ



ಬಾಗಲಕೋಟೆ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹತಾಶರಾಗಿದ್ದು, ಕಾಂಗ್ರೆಸ್ ಅವನತಿಯತ್ತ ಸಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಖರ್ಗೆ ಅವರ ಕೀಳು ಮಟ್ಟದ ಹೇಳಿಕೆಗೆ ಮಾಜಿ ಶಾಸಕ ವೀರಣ್ಣ ಚರಂತಿಮಠ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಬಸವೇಶ್ವರ ವೃತ್ತದಲ್ಲಿ ಬುಧವಾದ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಯುವ ಮೋರ್ಚಾದಿಂದ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ವಿರುದ್ಧ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ದಲಿತರು, ಬಡವರು, ಮಹಿಳೆಯರು, ಯುವಕರು ಹೀಗೆ ಸಮಾಜದ ಎಲ್ಲ ವರ್ಗದ ಜನರ ಏಳಿಗೆಗಾಗಿ ದುಡಿಯುವ ಮಹಾನ್ ನಾಯಕ ಮೋದಿಯವರಾಗಿದ್ದಾರೆ. ಅವರ ಬಗ್ಗೆ ಖರ್ಗೆ ಅವರು ಇಷ್ಟು ಕೀಳುಮಟ್ಟದ ಹೇಳಿಕೆ ನೀಡಬಾರದು. ಈ ಹಿಂದೆಯೂ ಖರ್ಗೆ ಅವರು ಮೋದಿ ಅವರ ವಿರುದ್ಧ ನಾಲಿಗೆ ಹರಿಬಿಟ್ಟಿದ್ದಾರೆ. ಅವಹೇಳನಕಾರಿಯಾಗಿ ಮಾತನಾಡುವುದು ನಂತರ ವಿಷಾದ ವ್ಯಕ್ತಪಡಿಸುವುದು. ಅವರ ಅನುಭವಕ್ಕೆ ಸರಿಯಲ್ಲ, ಇಂತಹುದನ್ನು ಎಲ್ಲ ಭಾರತೀಯರು ಸಹಿಸಿಕೊಳ್ಳುವುದಿಲ್ಲ, ಕಾಂಗ್ರೆಸ್‌ಗೆ ದೇಶದ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ತೇರದಾಳ ಶಾಸಕ ಸಿದ್ದು ಸವದಿ ಮಾತನಾಡಿ, ಮೋದಿಜಿಯವರನ್ನು ವಿರೋಧಿಸುವ ಭರದಲ್ಲಿ ನೀವು ಭಾರತದ ಗೌರವವನ್ನು ಕುಗ್ಗಿಸುತ್ತಿದ್ದಿರಿ. ಜನ ನಿಮ್ಮನ್ನು ಮೂಲೆಗುಂಪು ಮಾಡುತ್ತಿದ್ದಾರೆ ಎನ್ನುವುದು ನಿಮಗೆ ನೆನಪಿರಲಿ ಎಂದರು.

ಶಾಸಕ ಜಗದೀಶ ಗುಡುಗುಂಟಿ ಮಾತನಾಡಿ, ಖರ್ಗೆ ಅವರು ತಮ್ಮ ನೇತೃತ್ವ ತೃಪ್ತಿಪಡಿಸಲು ಇಷ್ಟು ಕೀಳು ಮಟ್ಟಕ್ಕೆ ಇಳಿಯುತ್ತಾರೆ ಎಂದು ಜನರು ಕೂಡಾ ನಿರೀಕ್ಷಿಸಿರಲಿಲ್ಲ. ಈ ಅವಹೇಳನಕಾರಿ ರಾಜಕೀಯಕ್ಕೆ ಮುಂಬರುವ ದಿನಗಳಲ್ಲಿ ನಾಡಿನ ಜನರೆ ತಕ್ಕ ಉತ್ತರ ನೀಡಲಿದ್ದಾರೆ ಎಂದರು.

ವಿಧಾನ ಪರಿಷತ್ತ ಸದಸ್ಯ ಹನಮಂತ ನಿರಾಣಿ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿದರು.

ಮುತ್ತಣ್ಣ ಬೇಣ್ಣೂರ, ವಿದ್ಯಾಧರ ಸವದಿ, ಭುವನೇಶ ಪೂಜಾರ, ಬಸವರಾಜ ಹುನಗುಂದ, ಸುರೇಶ ಕೋಣ್ಣೂರ, ಚಂದ್ರು ರಾಮೋಡಗಿ, ಶಿವು ಸಿಕ್ಕೇರಿ,ಶ್ರೀಧರ ನಾಗರಬೆಟ್ಟ, ಸುರೇಶ ಮಜ್ಜಗಿ, ಸಿದ್ದೇಶ ಜಿರ್ಲಿ, ರವಿ ಧಾಮಜಿ ಸೇರಿದಂತೆ ಕಾರ್ಯಕರ್ತರು ಭಾಗವಹಿಸಿದ್ದರು.

ಅದ್ವೈತದ ಊಟ ಉಣಬಡಿಸಿದ ಶಂಕರಾಚಾರ್ಯರು: ಶ್ರೀಗಳು



ಸಿದ್ದಾಪುರ: ಧರ್ಮವು ಡೊಂಕು ಹಾದಿಯಲ್ಲಿ ಸಾಗುತ್ತಿರುವುದನ್ನು ತಪ್ಪಿಸಿ ಸರಿಯಾದ ದಾರಿಯಲ್ಲಿ ಸಾಗುವಂತೆ ಮಾಡಿ ಅದ್ವೈತದ ಊಟವನ್ನು ಉಣಬಡಿಸಿದವರು ಶಂಕರಾಚಾರ್ಯರು. ತನ್ನ ಶಿಷ್ಯರಲ್ಲಿಯ ಗುಣಾವಗುಣಗಳನ್ನು ನೋಡದೇ ಅವರು ಭವಸಾಗರವನ್ನು ದಾಟಿಸಿದರು. ಈ ಗುರುವಿಗೆ ಸರಿಯಾದ ಮತ್ತೊಬ್ಬರನ್ನು ಕಾಣೆನು ಎಂದು ಶಿಶುನಾಳ ಶರೀಫರು ಶಂಕರರ ಗುಣಗಾನವನ್ನು ಮಾಡಿದ್ದಾರೆ ಎಂದು ಶ್ರೀ ರಾಮಚಂದ್ರಾಪುರಮಠ ಮಹಾಸಂಸ್ಥಾನದ ರಾಘವೇಶ್ವರಭಾರತೀ ಶ್ರೀಗಳು ಹೇಳಿದರು.

ಅವರು ತಾಲೂಕಿನ ಭಾನ್ಕುಳಿ ಶ್ರೀರಾಮದೇವಮಠ ಗೋಸ್ವರ್ಗದಲ್ಲಿ ನಡೆಯುತ್ತಿರುವ ಶಂಕರಪಂಚಮೀ ಉತ್ಸವದಲ್ಲಿ ಸಂಘಟಿಸಲಾಗಿದ್ದ ಆವಹಂತೀ ಹವನ, ಯಜುರ್ವೇದಪಾರಾಯಣ ಹಾಗೂ ಭಾಷ್ಯಪಾರಾಯಣ ಮುಕ್ತಾಯ, ವಿರಾಟ್ ಗೋಪೂಜೆ, ಗೋಸೂಕ್ತ ಪಾರಾಯಣ, ಗೋದತ್ತು ಸ್ವೀಕಾರ, ಮಾತೃತ್ವಮ್ ಸಮಾವೇಶಗಳಲ್ಲಿ ಪಾಲ್ಗೊಂಡು ರಾಜ್ಯಮಟ್ಟದಲ್ಲಿ ಗೋವಿನ ಕುರಿತಾಗಿ ಕಾರ್ಯ ಮಾಡಿದವರಿಗೆ ಗೋಪಾಲ ಗೌರವ ಪ್ರಶಸ್ತಿ ಪ್ರದಾನ ನೆರವೇರಿಸಿ ಧರ್ಮಸಭೆಯಲ್ಲಿ ಆಶೀರ್ವಚನ ನೀಡಿದರು.

ಶಂಕರರ ಎಲ್ಲಾ ಕೃತಿಗಳು ನಮಗೆ ಲಭ್ಯವಾಗಿಲ್ಲ. ಭಾಷ್ಯ ಸಾಹಿತ್ಯ ಹಾಗೂ ಸ್ತೋತ್ರ ಸಾಹಿತ್ಯಗಳೆರಡೂ ಶಂಕರರ ಸಾಹಿತ್ಯ ಕೃತಿಗಳಲ್ಲಿವೆ. ಶಂಕರರ ಸ್ತೋತ್ರಕ್ಕೆ ಬ್ರಹ್ಮಾಂಡದತೂಕವಿದೆ. ಹೀಗಾಗಿ ಕಲುಷಿತವಾಗುತ್ತಿರುವ ದಾರಿತಪ್ಪಿ ನಡೆಯುತ್ತಿರುವ ಸಮಾಜವನ್ನು ಮತ್ತೆ ಧರ್ಮದ ಕಡೆಗೆ ಹೋಗುವಂತೆ ಮಾಡಲು ಶಂಕರರ ಸ್ತೋತ್ರಗಳ ಪಠಣ ಮಾಡಬೇಕು ಎಂದ ಅವರು, ಬರುವ ಶಂಕರ ಪಂಚಮಿಯ ಒಳಗೆ ಶಿಷ್ಯಭಕ್ತರು 1 ಕೋಟಿ 50 ಲಕ್ಷ ಸಂಖ್ಯೆಯಲ್ಲಿ ಶಂಕರಾಚಾರ್ಯ ವಿರಚಿತ ಅರ್ಧನಾರೀಶ್ವರ ಅಷ್ಟಕಮ್ ಪಠಿಸುವಂತೆ ಕರೆ ನೀಡಿದರು.

ಗೋವಿನ ಕುರಿತಾಗಿ ಕಾರ್ಯ ಮಾಡುತ್ತಿರುವ ಡಾ.ರವಿ ಪಾಂಡವಪುರ ಮಂಡ್ಯ, ದತ್ತಾತ್ರೇಯ ಭಟ್ಟ ಕಡತೋಕಾ ಹುಬ್ಬಳ್ಳಿ, ಈರಶೆಟ್ಟಿ ಖ್ಯಾಮಾ ಮಮದಾಪುರ ಬೀದರ, ಅಭಿಷೇಕ ಎಂ.ಕೆ. ಮಂಚಾಲೆ ಅವರುಗಳಿಗೆ ದಿನೇಶ ಶಹರಾ ಫೌಂಡೇಶನ್ ಸಹಯೋಗದಲ್ಲಿ ಗೋಪಾಲ ಗೌರವ ಪ್ರಶಸ್ತಿ ಪ್ರದಾನ ಮಾಡಿದರು. ಶಂಖನಾದ, ಗುರುವಂದನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಶಂಕರಪಂಚಮಿ ಉತ್ಸವ ಸಮಿತಿಯ ಜಿ.ಕೆ.ಹೆಗಡೆ ಗೋಳಗೋಡ ಪ್ರಾಸ್ತಾವಿಕ ಮಾತನಾಡಿದರು. ಗಣಪತಿ ಹೆಗಡೆ ಗುಂಜಗೋಡ ನಿರ್ವಹಿಸಿದರು. ಉತ್ತರ ಕನ್ನಡವಲ್ಲದೆ ಬೆಂಗಳೂರು, ಮಂಗಳೂರು, ಸಾಗರ, ಹುಬ್ಬಳ್ಳಿ ಸೇರಿದಂತೆ ನಾನಾಭಾಗಗಳಿಂದ ಆಗಮಿಸಿದ್ದ ಶಿಷ್ಯಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಜಿಎಸ್‌ಟಿ ವಂಚನೆ

ಬೆಂಗಳೂರು: ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ ಸುಮಾರು 410 ಕೋಟಿ ರೂ. ಮೊತ್ತದ ನಕಲಿ ವಹಿವಾಟಿನ ಮೂಲಕ 102.50 ಕೋಟಿ ರೂ. ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚಿಸುತ್ತಿದ್ದ ಬೃಹತ್ ಜಾಲವೊಂದನ್ನು ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಸಕ್ರಿಯವಾಗಿದ್ದ ಈ ಜಾಲದ ಪ್ರಮುಖ ಆರೋಪಿ ಮೊಹಮ್ಮದ್ ತೌಕೀರ್ (42) ಎಂಬಾತನನ್ನು ಅಧಿಕಾರಿಗಳು ಬಂಧಿಸಿದ್ದಾರೆ. 2025ರ ನವೆಂಬರ್‌ನಲ್ಲಿ ಬೆಂಗಳೂರಿನ ಎಸ್‌ಜೆಪಿ ರಸ್ತೆ, ಜೆ.ಸಿ ರಸ್ತೆ, ಕಲಾಸಿಪಾಳ್ಯ ಹಾಗೂ ಬಿವಿಕೆ ಅಯ್ಯಂಗಾರ್ ರಸ್ತೆಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗವು ನಡೆಸಿದ ಕಾರ್ಯಾಚರಣೆಯ ವೇಳೆ ಈ ಬೃಹತ್ ತೆರಿಗೆ ವಂಚನೆ ಪ್ರಕರಣ ಬೆಳಕಿಗೆ ಬಂದಿತ್ತು.

ವಂಚನೆ ಜಾಲದಲ್ಲಿ ಬೆಂಗಳೂರು ನಿವಾಸಿಗಳೂ ಭಾಗೀ: ಅಂದು ಒಟ್ಟು 1,464 ಕೋಟಿ ರೂ. ಮೊತ್ತದ ನಕಲಿ ವಹಿವಾಟು ನಡೆಸಿ 350 ಕೋಟಿ ರೂ. ಐಟಿಸಿ ಪಡೆದಿರುವುದು ದೃಢಪಟ್ಟಿತ್ತು. ಈ ಜಾಲವನ್ನು ರೇವತಿ, ಇ.ಪ್ರತಾಪ್, ಇಬ್ರಾಜ್ ಅಹ್ಮದ್ ಮತ್ತು ನಫೀಜ್ ಅಹ್ಮದ್ ಎಂಬವರು ನಡೆಸುತ್ತಿದ್ದರು. ಪ್ರಕರಣದ ಆಳವಾದ ತನಿಖೆ ನಡೆಸಿದಾಗ, ಈ ಇಡೀ ಜಾಲದ ಹಿಂದೆ ಆಂಧ್ರಪ್ರದೇಶದ ಚಿತ್ತೂರು ಮೂಲದ ಹಾಗೂ ಬೆಂಗಳೂರು ನಿವಾಸಿಗಳಾದ ಮೊಹಮ್ಮದ್ ತೌಕೀರ್ ಮತ್ತು ಶೇಖ್ ಜಾಕಿರ್ ಹುಸೇನ್ ಎಂಬವರು ಮಾಸ್ಟರ್ ಮೈಂಡ್ ಆಗಿ ಕೆಲಸ ಮಾಡುತ್ತಿರುವುದು ಪತ್ತೆಯಾಗಿದೆ.

ಈ ಆರೋಪಿಗಳು ವಂಚನೆಗಾಗಿ ಅತ್ಯಂತ ವ್ಯವಸ್ಥಿತ ಜಾಲವನ್ನು ರೂಪಿಸಿಕೊಂಡಿದ್ದರು. ಅವರು ವಿವಿಧ ಸ್ಥಳಗಳಲ್ಲಿ ನಕಲಿ ವಿಳಾಸಗಳನ್ನು ನೀಡಿ, ಬಾಡಿಗೆ ಮತ್ತು ಭೋಗ್ಯದ ಕರಾರು ಪತ್ರಗಳನ್ನು ನೋಂದಾಯಿಸಿಕೊಳ್ಳುತ್ತಿದ್ದರು. ಈ ದಾಖಲೆಗಳ ಜತೆಗೆ ಬೇರೆಯವರ ಪಾನ್ ಮತ್ತು ಆಧಾರ್ ವಿವರಗಳನ್ನು ಬಳಸಿಕೊಂಡು ಏಕವ್ಯಕ್ತಿ ಮಾಲೀಕತ್ವದ ಅಥವಾ ಸೀಮಿತ ಹೊಣೆಗಾರಿಕೆಯ ಪಾಲುದಾರಿಕೆ ಕಂಪನಿಗಳನ್ನು ಆರಂಭಿಸುತ್ತಿದ್ದರು.

ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಹಣ ಲೂಟಿ ಮಾಡಿದ್ದ ಆರೋಪಿಗಳು: ಈ ನಕಲಿ ಕಂಪನಿಗಳ ಹೆಸರಿನಲ್ಲಿ ಜಿಎಸ್‌ಟಿ ನೋಂದಣಿ ಪಡೆದು, ಸಿಮೆಂಟ್, ಕಬ್ಬಿಣದ ಸಲಾಕೆ, ಜಿಂಕ್ ಶೀಟ್ ಮತ್ತು ಪೈಪ್‌ಗಳ ಖರೀದಿಯ ಹೆಸರಿನಲ್ಲಿ ಕೇವಲ ಕಾಗದದ ಮೇಲೆ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸುತ್ತಿದ್ದರು. ಆದರೆ, ವಾಸ್ತವದಲ್ಲಿ ಯಾವುದೇ ಸರಕುಗಳ ಸಾಗಣೆ ನಡೆಯುತ್ತಿರಲಿಲ್ಲ. ಕೇವಲ ಬಿಲ್‌ಗಳನ್ನು ಒಂದು ಕಂಪನಿಯಿಂದ ಮತ್ತೊಂದಕ್ಕೆ ವರ್ಗಾಯಿಸುವ ಮೂಲಕ ಸರ್ಕಾರದಿಂದ ಬರಬೇಕಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಹಣವನ್ನು ಲೂಟಿ ಮಾಡುತ್ತಿದ್ದರು.

ಹತ್ತಾರು ಬ್ಯಾಂಕ್ ಖಾತೆಗಳನ್ನು ತೆರೆದಿದ್ದ ವಂಚಕರು: ಈ ಅಕ್ರಮ ಹಣದ ಚಲಾವಣೆಗಾಗಿ ಆರೋಪಿಗಳು ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಹತ್ತಾರು ಬ್ಯಾಂಕ್ ಖಾತೆಗಳನ್ನು ತೆರೆದಿದ್ದರು. ಇಲಾಖೆಯ ಅಧಿಕಾರಿಗಳಿಗೆ ಈ ಬಗ್ಗೆ ಅನುಮಾನ ಬಂದು ನೋಟಿಸ್ ನೀಡಿದ ತಕ್ಷಣವೇ ಆರೋಪಿಗಳು ಆ ಕಂಪನಿಯ ನೋಂದಣಿಯನ್ನು ರದ್ದುಪಡಿಸಿ ಹೊಸ ಹೆಸರಿನಲ್ಲಿ ಮತ್ತೊಂದು ಕಂಪನಿ ತೆರೆಯುತ್ತಿದ್ದರು. ಈ ಹಿಂದೆ ಪತ್ತೆಯಾಗಿದ್ದ 1,464 ಕೋಟಿ ರೂ.ವಂಚನೆಯ ಹೊರತಾಗಿ, ಈ ಇಬ್ಬರು ಆರೋಪಿಗಳು ಹೆಚ್ಚುವರಿಯಾಗಿ 410 ಕೋಟಿ ರೂ. ಮೊತ್ತದ ವಂಚನೆ ನಡೆಸಿ 102.50 ಕೋಟಿ ರೂ. ಐಟಿಸಿ ಪಡೆದುಕೊಂಡಿದ್ದಾರೆ.

ಈ ಪ್ರಕರಣದ ಇತರ ಆರೋಪಿಗಳನ್ನು ಈಗಾಗಲೇ ಜನವರಿ ತಿಂಗಳಿನಲ್ಲಿ ಬಂಧಿಸಲಾಗಿತ್ತು. ಬಂಧನದ ಭೀತಿಯಲ್ಲಿದ್ದ ತೌಕೀರ್ ಮತ್ತು ಜಾಕಿರ್ ನಗರದ 69ನೇ ಸಿವಿಲ್ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ, ನ್ಯಾಯಾಲಯವು ಅರ್ಜಿಯನ್ನು ವಜಾ ಮಾಡಿದ ಬೆನ್ನಲ್ಲೇ ಜಾಕಿರ್ ವಿದೇಶಕ್ಕೆ ಪರಾರಿಯಾಗಿದ್ದಾನೆ. ತಲೆಮರೆಸಿಕೊಂಡಿದ್ದ ತೌಕೀರ್‌ನನ್ನು ವಿಶೇಷ ಕಾರ್ಯಾಚರಣೆಯ ಮೂಲಕ ಬಂಧಿಸಿ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ನ್ಯಾಯಾಲಯವು ಆರೋಪಿಯನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಮೂಲಗಳು ತಿಳಿಸಿವೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಇಂದು

ಬೆಂಗಳೂರು: ತೃತೀಯ ಭಾಷೆಗೆ ಗ್ರೇಡ್ ಹಾಗೂ ಅಂಕಗಳ ಗೊಂದಲದ ನಡುವೆಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಪರೀಕ್ಷೆ-1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದ್ದು, ವಿದ್ಯಾರ್ಥಿಗಳು https://karresults.nic.in/ ಲಿಂಕ್ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕವೂ ಪಡೆಯಬಹುದಾಗಿದೆ. ಅಲ್ಲದೇ ವಿದ್ಯಾರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸ್ಆಪ್/ಎಸ್‌ಎಂಎಸ್ ಮೂಲಕವೂ ಫಲಿತಾಂಶದ ಮಾಹಿತಿಯನ್ನು ರವಾನಿಸಲಾಗುವುದು ಎಂದು ತಿಳಿಸಿದೆ.

ಇದೇ ಮೊದಲ ಬಾರಿಗೆ ವಿದ್ಯಾರ್ಥಿಗಳ ಫಲಿತಾಂಶದ ಅಂಕಪಟ್ಟಿಯನ್ನು ಡಿಜಿಲಾಕರ್ ಮೂಲಕ ಮಧ್ಯಾಹ್ನ 12 ಗಂಟೆಗೆ ಲಭ್ಯವಾಗಲಿದೆ. ಆದರಿಂದ ವಿದ್ಯಾರ್ಥಿಗಳು https://www.digilocker.gov.in/ ಅನ್ನು ಬಳಸಿ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದೆ.

ಮಾ.18ರಿಂದ ಏ.2ರವರೆಗೂ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ 7,75,979 ಹೊಸಬರು, ಪುನರಾವರ್ತಿತ ವಿದ್ಯಾರ್ಥಿಗಳು 62,938, ಹೊಸ ಖಾಸಗಿ ಅಭ್ಯರ್ಥಿಗಳು 23,510 ಮತ್ತು ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು 3,561 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿಗೆ ಗ್ರೇಡ್ ಬದಲಿಗೆ ಅಂಕವನ್ನು ನೀಡುವಂತೆ ಹೈಕೋರ್ಟ್ ಆದೇಶ ಹೊರಡಿಸಿದ್ದು, ಕೋರ್ಟ್ ಆದೇಶದಂತೆ ಅಂಕ ನೀಡಲಾಗುವುದು. ಈ ವಿಷಯವನ್ನು ಸಿಎಂ ಅವರ ಗಮನಕ್ಕೂ ತರಲಾಗಿದೆ.
■ **ಮಧು ಬಂಗಾರಪ್ಪ**, ಶಾಲಾ ಶಿಕ್ಷಣ ಸಚಿವ

ಅಲ್ಲದೇ 5,106 ವಿಶೇಷ ಚೇತನ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಅದರಲ್ಲಿ ಬೆಂಗಳೂರು ದಕ್ಷಿಣ ವಲಯ-1ರಲ್ಲಿ ಎರಡನೇ ಬಾರಿಗೆ 16 ವಿಶೇಷ ಚೇತನ ಮಕ್ಕಳು ಬರಹಗಾರರ ಸೌಲಭ್ಯವನ್ನು ಬಳಸದೆ ಲ್ಯಾಪ್ ಟಾಪ್‌ಗಳನ್ನು ಬಳಸಿ ಸ್ವತಃ ಪರೀಕ್ಷೆ ಬರೆದಿದ್ದಾರೆ. ಸರ್ಕಾರಿ ಶಾಲೆಯ 3,59,594, ವಿದ್ಯಾರ್ಥಿಗಳು, ಅನುದಾನಿತ ಶಾಲೆಯ 2,11,486 ವಿದ್ಯಾಥಿಗಳು ಮತ್ತು ಅನುದಾನ ರಹಿತ ಶಾಲೆಗಳ 2,94,908 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಾನು ದೇವರು ಇದ್ದಾನೆ ಎಂದು ನಂಬಿದ್ದೇನೆ. ಆದರೆ ದೇವಸ್ಥಾನದಲ್ಲಿ ಮಾತ್ರವಲ್ಲ, ದೇವರು ಎಲ್ಲಾ ಕಡೆಯೂ ಇದ್ದಾನೆ - ಸಿದ್ದರಾಮಯ್ಯ

- ಗಾಳಿ ಎಲ್ಲಾ ಕಡೆ ಇದೆ ಅಂತ ಗೊತ್ತಿದ್ದರೂ ಸೆಕೆ ಜೋರಾದಾಗ ನಾವು ಮರದ ಕೆಳಗೋ ಫ್ಯಾನಿನ ಅಡಿಗೋ ಹೋಗುತ್ತೇವೆ, ಅಲ್ವಾ?

ದಿನ ಭವಿಷ್ಯ

ಮೇಷ
ಮಾಡುವ ಕೆಲಸದಲ್ಲಿ ಸಫಲತೆ. ಆದರೆ ಸುಲಭದಲ್ಲಿ ಆಗದು. ಅಡ್ಡಿ, ವಿಳಂಬ ಸಾಧ್ಯತೆ. ಕೌಟುಂಬಿಕ ಮನಸ್ತಾಪ ನೆಮ್ಮದಿ ಕೆಡಿಸುವುದು.

ವೃಷಭ
ಭಿನ್ನಾಭಿಪ್ರಾಯ ನಿವಾರಣೆ. ಅನಿರೀಕ್ಷಿತ ವಿದ್ಯಮಾನ ಸಂಭವಿಸಿದರೆ ಅಂಜಬೇಡಿ. ವಿಶ್ವಾಸದಿಂದ ಎದುರಿಸಿ. ನೆರೆಮನೆಯವರ ಕಿರಿಕಿರಿ.

ಮಿಥುನ
ಹದಗೆಟ್ಟ ಸಂಬಂಧ ಸುಧಾರಿಸಲು ಆದ್ಯತೆ ಕೊಡಿ. ಬಿಗುಮಾನ ಬಿಟ್ಟು ವ್ಯವಹರಿಸಿ. ಸಣ್ಣ ವಿಷಯವೂ ಅತಿಯಾದ ಬೇಸರ ತರಬಹುದು.

ಕಟಕ
ವೃತ್ತಿ ಒತ್ತಡ ಕಡಿಮೆ ಮಾಡಲು ಯತ್ನಿಸಿ. ಇಲ್ಲವಾದರೆ ದೇಹದ ಮೇಲೂ ಪರಿಣಾಮ. ಮೆಚ್ಚಿನ ಹವ್ಯಾಸದಲ್ಲಿ ಚಿಂತೆ ಮರೆಯಿರಿ.

ಸಿಂಹ
ನಿಮ್ಮ ಗುರಿ ಈಡೇರಬೇಕೆ? ವಸ್ತುಸ್ಥಿತಿ ಅರಿತು ವ್ಯವಹರಿಸಿ. ಆಕಾಶದಲ್ಲಿ ತೇಲಬೇಡಿ. ಮನೆಯವರ ಬೆಂಬಲ ಪಡೆಯಿರಿ.

ಕನ್ಯಾ
ಇತರರ ಜತೆ ವಿನಯದಿಂದ ವರ್ತಿಸಿ. ಇಲ್ಲವಾದರೆ ನಿಷ್ಠುರ ಕಟ್ಟಿಕೊಳ್ಳುವಿರಿ. ಆರ್ಥಿಕ ವ್ಯವಹಾರ ತುಸು ಚಿಂತೆಗೆ ಕಾರಣವಾದೀತು.

ತುಲಾ
ವೃತ್ತಿಯಲ್ಲಿ ಯಾವುದೇ ಕೆಲಸ ಬಾಕಿ ಉಳಿಸಬೇಡಿ. ವಿಳಂಬ ದೊಡ್ಡ ಹಾನಿ ತಂದೀತು. ಅನಾರೋಗ್ಯಕರ ಆಹಾರ ಸೇವಿಸಬೇಡಿ.

ವೃಶ್ಚಿಕ
ಮಾನಸಿಕ ಅಶಾಂತಿ. ಕೆಲಸದಲ್ಲಿ ನಿರಾಸಕ್ತಿ. ವ್ಯವಹಾರದಲ್ಲಿ ತೊಡಕು. ಎಲ್ಲರ ಜತೆ ಹೊಂದಾಣಿಕೆ ಬೆಳೆಸಿ. ಭಿನ್ನವಾಗಿ ವರ್ತಿಸಲು ಹೋಗದಿರಿ.

ಧನು
ವೃತ್ತಿಯಲ್ಲಿ ಯಶಸ್ಸು. ಮನೆಯಲ್ಲಿ ಸೌಹಾರ್ದ. ಬಂಧುಗಳ ಭೇಟಿ. ಧನವ್ಯಯ ಹೆಚ್ಚಾದರೂ ಬೇಸರ ಮೂಡದು.

ಮಕರ
ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ ಉಂಟಾದೀತು. ಬಂಧು ಭೇಟಿಯಿಂದ ಸಂತೋಷ. ವೃತ್ತಿ ಸಮಸ್ಯೆಯೊಂದು ಪರಿಹಾರ ಕಾಣಲಿದೆ.

ಕುಂಭ
ಆದಾಯ ಹೆಚ್ಚಳದ ಸಂಕೇತ ತೋರಲಿದೆ. ಎಲ್ಲರಿಂದ ಉತ್ತಮ ಸಹಕಾರ ಪಡೆಯುವಿರಿ. ಆರೋಗ್ಯದ ಸಮಸ್ಯೆ ಕಡೆಗಣಿಸಬೇಡಿ.

ಮೀನ
ಮನೆಯಲ್ಲಿ ಶಾಂತಿ, ಸೌಹಾರ್ದ. ಹಣದ ವ್ಯವಹಾರ ಸಫಲ. ಆರೋಗ್ಯದ ಚಿಂತೆ ಪರಿಹಾರ. ಮಕ್ಕಳ ಸಾಧನೆಯ ಖುಷಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 8,3,9,4

ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರ ಅಭಿಮತ

ತರಬೇತಿ ಶಿಬಿರ ಅಗತ್ಯ

ಬೆಂಗಳೂರು: ಮಕ್ಕಳ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿಗೆ ಗುರುಕುಲ ಶಿಕ್ಷಣದ ಜತೆಗೆ ವಸಂತ ಶಿಬಿರಗಳಂತಹ ಸಂಸ್ಕಾರಾತ್ಮಕ ತರಬೇತಿ ಶಿಬಿರಗಳು ಅತ್ಯಂತ ಅಗತ್ಯವೆಂದು ಉಡುಪಿಯ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಬುಧವಾರ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ನಡೆದ ವಸಂತ ಧಾರ್ಮಿಕ ಶಿಬಿರದ ಸಮಾರೋಪದಲ್ಲಿ ಆಶೀರ್ವಚನ ನೀಡಿದ ಅವರು, ವರ್ಷಪೂರ್ತಿ ಮಕ್ಕಳಿಗೆ ಉತ್ತಮ ಗುರುಕುಲ ಶಿಕ್ಷಣ ನೀಡಲು ಸಾಧ್ಯವಾಗದಿದ್ದರೂ, ಕನಿಷ್ಠ ವರ್ಷಕ್ಕೆ ಕೆಲವು ದಿನಗಳಾದರೂ ಇಂತಹ ಶಿಬಿರಗಳಲ್ಲಿ ಭಾಗವಹಿಸುವುದು ಮಕ್ಕಳ ಜೀವನಕ್ಕೆ ದಿಕ್ಕು ತೋರಿಸುತ್ತದೆ ಎಂದರು.

ಯುವಾ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಮಾತನಾಡಿ, ಮಕ್ಕಳ ಸಹಜ ಬೆಳವಣಿಗೆಗೆ ಪರಿಸರದೊಂದಿಗೆ ಹೆಚ್ಚು ಸಮಯ ಕಳೆಯುವುದು ಅತ್ಯಂತ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ವಸಂತ ವೈಭವದಂತಹ ಬೇಸಿಗೆ ಶಿಬಿರಗಳು ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಮಹತ್ವದ ಪಾತ್ರವಹಿಸುತ್ತವೆ. ಮಕ್ಕಳ ಬೆಳವಣಿಗೆ, ಪೋಷಕರ ನಡೆ ನುಡಿಗಳ ಮೇಲೆ ಹೆಚ್ಚು ಅವಲಂಬಿತವಾಗಿರುತ್ತದೆ. ಆದ್ದರಿಂದ ಪೋಷಕರು ಮಕ್ಕಳ ಮೇಲೆ ಯಾವುದಕ್ಕೂ ಒತ್ತಾಯ ಹೇರದೇ, ಸಹಜ ಹಾಗೂ ಪ್ರಾಯೋಗಿಕ ರೀತಿಯಲ್ಲಿ ಕಲಿಕೆಯ ವಾತಾವರಣವನ್ನು ನಿರ್ಮಿಸಬೇಕು ಎಂದರು.

ಇಂದಿನ ಭಾರತಕ್ಕೆ ಪ್ರಾಣತ್ಯಾಗ ಮಾಡುವವರಿಗಿಂತ ದೇಶಕ್ಕಾಗಿ ಬದುಕುವ ನಾಗರಿಕರು ಅಗತ್ಯವಿದ್ದಾರೆ. ಸರಿಯಾದ ಸಂಸ್ಕಾರ ಮತ್ತು ಸಮಗ್ರ ಶಿಕ್ಷಣ ಮುಂದಿನ ಪೀಳಿಗೆಗೆ ಸಿಗದಿದ್ದರೆ ಸಮಾಜದ ಭವಿಷ್ಯಕ್ಕೆ ಅಪಾಯ ಎದುರಾಗುವ ಸಾಧ್ಯತೆ ಇದೆ. ಆದ್ದರಿಂದ ಪೋಷಕರು ಮಕ್ಕಳನ್ನು ಇಂತಹ ಶಿಬಿರಗಳಿಗೆ ಸೇರಿಸಿ ಅವರ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಉಪಸ್ಥಿತರಿದ್ದರು.



ವಸಂತ ವೈಭವದಂತಹ ಶಿಬಿರಗಳು ಅವಶ್ಯಕ

ಇಂದಿನ ಕಾಲದಲ್ಲಿ ಮೊಬೈಲ್ ಬಳಕೆ, ಮಕ್ಕಳ ಮೇಲೆ ಹೆಚ್ಚಾಗಿ ಪರಿಣಾಮ ಬೀರುತ್ತಿದೆ. ರಾಮಾಯಣ ಮತ್ತು ಮಹಾಭಾರತದಂತಹ ಇತಿಹಾಸ-ಪೌರಾಣಿಕ ಕಥೆಗಳನ್ನೂ ಮಕ್ಕಳು ಕುಟುಂಬ ಸದಸ್ಯರಿಗಿಂತ ಕಾರ್ಟೂನ್ ಮಾಧ್ಯಮಗಳ ಮೂಲಕವೇ ಹೆಚ್ಚು ನಂಬುವ ಸ್ಥಿತಿ ಉಂಟಾಗಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಕಾರ್ಯ, ಗರ್ಭಧಾರಣೆಯ ಮುಂಚೆಯೇ ಪೋಷಕರಿಂದ ಆರಂಭವಾಗಬೇಕು. ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯುವ ಮೂಲಕ ಅವರಲ್ಲಿ ಉತ್ತಮ ಅಭ್ಯಾಸಗಳನ್ನು ಬೆಳೆಸಬಹುದು. ಮನೆಯಲ್ಲಿ ಸಂಸ್ಕಾರ ದೊರೆಯದ ಸಂದರ್ಭದಲ್ಲಿ ಇಂತಹ ಸಂಸ್ಕಾರ ಶಿಬಿರಗಳು ಮಕ್ಕಳಿಗೆ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವಲ್ಲಿ ಸಹಾಯಕವಾಗುತ್ತವೆ ಎಂದು ಚಕ್ರವರ್ತಿ ಸೂಲಿಬೆಲೆ ತಿಳಿಸಿದರು.

ನಮ್ಮ ದೇಶದಲ್ಲಿ ವೇದಗಳು ಮತ್ತು ಉಪನಿಷತ್ತುಗಳಂತಹ ಅಮೂಲ್ಯ ಜ್ಞಾನಸಂಪತ್ತು ಅಪಾರವಾಗಿದೆ. ಹಿರಿಯರು ನಿರ್ಮಿಸಿದ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆ ಬೆಟ್ಟದಷ್ಟಿದ್ದು, ಅದರ ಒಂದು ಭಾಗವಾದರೂ ಮಕ್ಕಳಿಗೆ ಪರಿಚಯಿಸುವುದು ಇಂದಿನ ಪೋಷಕರ ಜವಾಬ್ದಾರಿಯಾಗಿದೆ.
■ **ವಿಶ್ವಪ್ರಸನ್ನತೀರ್ಥ ಶ್ರೀಪಾದರು**, ಉಡುಪಿಯ ಪೇಜಾವರ ಅಧೋಕ್ಷಜ ಮಠ

ಪೋಷಕರ ಸಹಕಾರ ಅಗತ್ಯ

ಶಿಬಿರಗಳ ಮೂಲಕ ಮಕ್ಕಳಿಗೆ ಜೀವನದಲ್ಲಿ ಅಗತ್ಯವಿರುವ ಮೌಲ್ಯಗಳು, ಶಿಸ್ತು, ಸಂಸ್ಕಾರ ಮತ್ತು ಸಾಮಾಜಿಕ ಜವಾಬ್ದಾರಿತನವನ್ನು ಅಳವಡಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಶಿಬಿರಗಳಲ್ಲಿ ಕಲಿತ ವಿಚಾರಗಳನ್ನು ಮಕ್ಕಳ ದಿನನಿತ್ಯದ ಜೀವನದಲ್ಲಿ ಅನುಸರಿಸಲು ಪೋಷಕರ ಸಹಕಾರ ಅತ್ಯಂತ ಅಗತ್ಯವಾಗಿದೆ ಎಂದು ವಿಶ್ವಪ್ರಸನ್ನತೀರ್ಥ ಶ್ರೀಪಾದರು ತಿಳಿಸಿದರು.

ತೃತೀಯಲಿಂಗಿ ವಿಸ್ಮಯ

ಪುಟ ೧ → ಮನೆಯವರು ಮತ್ತು ಸಮಾಜ ಒಪ್ಪದ ಕಾರಣ ಕೈತಟ್ಟಿ ಭಿಕ್ಷೆ ಬೇಡುವುದನ್ನೇ ರೂಢಿಸಿಕೊಂಡಿದ್ದರು. ಆದರೆ, ಆದೊಂದು ಘಟನೆ ಅವರ ಸ್ವಾಭಿಮಾನವನ್ನೇ ಬಡಿದೆಬ್ಬಿಸಿತು. ಭಿಕ್ಷೆ ಕೇಳಿಕೊಂಡು ಹೋಗುತ್ತಿದ್ದಾಗ ದೇವರು ಕೈಕಾಲು ಚೆನ್ನಾಗಿ ಕೊಟ್ಟಿದ್ದಾನೆ. ದುಡಿದು ತಿನ್ನಲು ಯೋಗ್ಯತೆ ಇಲ್ಲವೇ ಎಂದು ಕೆಲವರು ಪ್ರಶ್ನಿಸಿದರು. ಈ ಘಟನೆಯಿಂದ ಕೋಪಗೊಳ್ಳದೆ ಆತ್ಮವಿಮರ್ಶೆ ಮಾಡಿಕೊಂಡು ಉತ್ತಮ ದಾರಿಯ ಹುಡುಕಾಟ ಆರಂಭಿಸಿದರು. ಆಗ ಅವರ ನೆರವಿಗೆ ಬಂದಿದ್ದು ಪೀಸ್ ಆಟೋ.

ವಾಹನ ಚಾಲನೆಗೆ ಪರವಾನಗಿ ನೀಡುವಾಗ ಅಧಿಕಾರಿಗಳು ಹಿಂದೇಟು ಹಾಕಿದರೂ ಛಲ ಬಿಡದೇ ಓಡಿಸಿ ಅಧಿಕಾರಿಗಳಿಗೆ ಉತ್ತರ ನೀಡಿದರು. ಮೊದಲಿಗೆ ಬಾಡಿಗೆ ಆಟೋ ಓಡಿಸುತ್ತಿದ್ದರು. ಆಗ ಪೀಸ್ ಆಟೋ ಸಂಸ್ಥಾಪಕ ರಘು ಅವರು ಆಟೋ ಖರೀದಿಸಲು 60 ಸಾವಿರ ರೂ. ನೀಡಿ ಸ್ವಾವಲಂಬಿ ಬದುಕಿಗೆ ಪುಷ್ಟಿ ನೀಡಿದರು. ಮೊದಲು ಬೆಳಗ್ಗೆ ಐದು ಗಂಟೆಯಿಂದ ರಾತ್ರಿ 12 ಗಂಟೆವರೆಗೆ ದುಡಿಮೆ ಮಾಡುತ್ತಿದ್ದರು. ದಿನಕ್ಕೆ ಸರಾಸರಿ ನಾಲ್ಕು ಸಾವಿರ ರೂ. ಸಂಪಾದಿಸಿ, ಮೂರು ಸಾವಿರ ರೂ. ಉಳಿತಾಯ ಮಾಡಿ, ತಂಗಿಯ ವಿದ್ಯಾಭ್ಯಾಸ, ಮದುವೆ ಖರ್ಚಿಗಾಗಿ ಬ್ಯಾಂಕ್‌ನಲ್ಲಿ ಕೂಡಿಟ್ಟಿದ್ದರು. ಆದರೆ, ಈಗ ಬಿಸಿಲ ಝಳ ಮತ್ತು ಗ್ಯಾಸ್ ಸಮಸ್ಯೆಯಿಂದ ಸಾವಿರ ರೂ. ಸಿಗುವುದೂ ಕಷ್ಟವಾಗಿದೆ ಎನ್ನುತ್ತಾರೆ, ವಿಸ್ಮಯ.

ಕನಸಿನ ಚೆನ್ನೇರಿ...: ಕೆಲ ಪ್ರಯಾಣಿಕರು ಮುಖ ನೋಡಿ ಪ್ರಯಾಣ ರದ್ದು ಮಾಡಿದರೆ, ಆಟೋ ಚಾಲಕರು ನಮ್ಮ ಅನ್ನ ಕಸಿಯಲು ಬಂದಿದ್ದೀರಾ ಎಂದು ಟೀಕಿಸುತ್ತಿದ್ದಾಗ ಬೇಸರಗೊಳ್ಳದೆ ನಸುನಗುತ್ತಿದ್ದರು. ಮುಂದಿನ ದಿನಗಳಲ್ಲಿ ವಿಸ್ಮಯ ಅವರಿಗೆ ಆಂಬುಲೆನ್ಸ್ ಚಾಲಕಿ ಆಗಬೇಕೆನ್ನುವ ಆಸೆಯಿದೆಯಂತೆ.

ಆಟೋದಲ್ಲಿ ಪ್ರೀತಿಯ ಪಯಣ

ಸಂಜಯ್-ವಿಸ್ಮಯ ಪ್ರೀತಿ ಅರಳಿದ್ದು ಆಟೋದಲ್ಲೇ. ಆಟೋ ಪ್ರಯಾಣದಲ್ಲಿ ವಿಸ್ಮಯ ಅವರಲ್ಲಿನ ಬೆರೆಯುವ ಗುಣ, ಹಿತವಾದ ಮಾತು ಸಂಜಯ್‌ಗೆ ಹಿಡಿಸಿತು. ತಿರಸ್ಕಾರವನ್ನೇ ಕಂಡಿದ್ದ ವಿಸ್ಮಯ ಅವರಿಗೆ ಸಂಜಯ್ ತೋರಿದ ಕಾಳಜಿ, ಗೌರವ ನೆಮ್ಮದಿ ನೀಡಿತು. ಆ ನೆಮ್ಮದಿಯೇ ಪ್ರೀತಿಯಾಯಿತು. ಕೊನೆಗೆ ಇಬ್ಬರೂ ಒಪ್ಪಿ ಕಬ್ಬಾಳಮ್ಮನ ದೇವಸ್ಥಾನದಲ್ಲಿ ಮದುವೆಯಾಗಿ ನೆಮ್ಮದಿಯಾಗಿದ್ದೇವೆ ಎನ್ನುತ್ತಾರೆ, ವಿಸ್ಮಯ.

ಮಾರಾಟಕ್ಕೆ ಉತ್ತೇಜನ

ಪುಟ ೧ → ಈ ಡಚ್ ಮ್ಯಾಟ್‌ಗಳು ಬಲಿಷ್ಠ, ದೀರ್ಘಕಾಲಿಕ, ಪರಿಸರ ಸ್ನೇಹಿ ಹಾಗೂ ಅಲಂಕಾರಿಕ ಗುಣಗಳನ್ನು ಹೊಂದಿರುವುದರಿಂದ ಇವುಗಳು ದೇಶಾದ್ಯಂತ ಜನಪ್ರಿಯವಾಗಿವೆ. ಉಪ ಹಿಮಾಲಯ ರಾಜ್ಯಗಳಲ್ಲಿ ಡಚ್ ಮ್ಯಾಟ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ನಿಗಮದ 35 ಉತ್ಪಾದನಾ ಘಟಕಗಳಲ್ಲಿ ಮುಖ್ಯಮಂತ್ರಿಗಳ ಆಶಯದಂತೆ, ನಿಗಮದ ಉತ್ಪನ್ನಗಳ ಮಾರಾಟ ಹೆಚ್ಚಿಸಲು ವೆಬ್‌ಸೈಟ್ ಸಿದ್ಧಪಡಿಸಿ ಇದರೊಂದಿಗೆ ಖಾಸಗಿ ಸಹಭಾಗಿತ್ವದಲ್ಲಿ ಡಿಜಿಟಲ್ ಮಾರಾಟಕ್ಕೂ ಒಪ್ಪಂದ ಮಾಡಿಕೊಂಡಿದ್ದು, ಮಾರಾಟವನ್ನು ಉತ್ತೇಜಿಸಲು ಕ್ರಮ ವಹಿಸಲಾಗುತ್ತಿದೆ ಎಂದು ನಟರಾಜ್ ತಿಳಿಸಿದರು.

ಮಮತಾಗೆ ಛೀಮಾರಿ

ಪುಟ ೧ → **ಅಭ್ಯರ್ಥಿಗಳಿಗೆ ಇಡಿ ಆತಂಕ:** ಒಂದೆಡೆ ನ್ಯಾಯಾಂಗದ ಛೀಮಾರಿ, ಇನ್ನೊಂದೆಡೆ ಕೇಂದ್ರ ತನಿಖಾ ಸಂಸ್ಥೆಗಳ ಕಾನೂನು ಕ್ರಮಗಳು ಟಿಎಂಸಿ ನಾಯಕರಿಗೆ ಸಂಕಷ್ಟ ತಂದಿವೆ.



ಬಿಧಾನ್ ನಗರ ಕ್ಷೇತ್ರದ ಅಭ್ಯರ್ಥಿ ಸುಜಿತ್ ಬೋಸ್ ಹಾಗೂ ಮಧ್ಯಮಗ್ರಾಮದ ರತಿನ್ ಘೋಷ್ ಅವರಿಗೆ ಇಡಿ ನಾಲ್ಕನೇ ಬಾರಿ ಸಮನ್ಸ್ ನೀಡಿದೆ. ಏಪ್ರಿಲ್ 24ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿರುವುದರಿಂದ ಪಕ್ಷದೊಳಗೆ ಆತಂಕ ಹೆಚ್ಚಿಸಿದೆ. ಈ ಬೆಳವಣಿಗೆ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಏನಿದು ಐ-ಪ್ಯಾಕ್ ಪ್ರಕರಣ?: ಜನವರಿ 8ರಂದು ಕೋಲ್ಕತ್ತಾದಲ್ಲಿ ಇಂಡಿಯನ್ ಪೊಲಿಟಿಕಲ್ ಆ್ಯಕ್ಷನ್ ಕಮಿಟಿ (ಐ-ಪ್ಯಾಕ್) ಸಹ-ಸಂಸ್ಥಾಪಕ ಪ್ರತೀಕ್ ಜೈನ್ ನಿವಾಸದ ಮೇಲೆ ಇಡಿ ದಾಳಿ ನಡೆಸಿತ್ತು. ಉದ್ಯಮಿ ಅನುಪ್ ಮಜೀಗೆ ಸಂಬಂಧಿಸಿದ ಕಲ್ಲಿದ್ದಲು ಕಳ್ಳಸಾಗಣೆ ಹಾಗೂ ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಈ ಕಾರ್ಯಾಚರಣೆ ನಡೆದಿತ್ತು. ದಾಳಿಯ ಸಮಯದಲ್ಲಿ ಮಮತಾ ಬ್ಯಾನರ್ಜಿ ಸ್ಥಳಕ್ಕೆ ತೆರಳಿ, ಇಡಿ ವಶದಲ್ಲಿದ್ದ ಕೆಲವು ದಾಖಲೆಗಳು ಹಾಗೂ ಎಲೆಕ್ಟ್ರಾನಿಕ್ ಸಾಧನಗಳನ್ನು ತೆಗೆದುಕೊಂಡು ಹೋಗಿ ತನಿಖೆಗೆ ಅಡ್ಡಿಪಡಿಸಿದ್ದಾರೆ ಎಂಬ ಆರೋಪವನ್ನು ಇಡಿ ಮಾಡಿದೆ. ಆದರೆ, ಈ ಆರೋಪಗಳನ್ನು ತಳ್ಳಿಹಾಕಿರುವ ಮಮತಾ, ಇಡಿ ರಾಜಕೀಯಪ್ರೇರಿತ ಕ್ರಮ ಕೈಗೊಳ್ಳುತ್ತಿದೆ ಎಂದು ವಾದಿಸಿದ್ದಾರೆ. ವಶಪಡಿಸಿಕೊಂಡ ದಾಖಲೆಗಳು 2019ರ ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದ್ದೇ ಹೊರತು ಯಾವುದೇ ಹಗರಣಕ್ಕೆ ಸಂಬಂಧಿಸಿದವು ಅಲ್ಲ ಎಂದು ಅವರು ಹೇಳಿದ್ದಾರೆ.

ಹಾರ್ಮುಜ್ ಉದ್ವಿಗ್ನ

ಪುಟ ೧ → **ರಾಜತಾಂತ್ರಿಕ ಬಿಕ್ಕಟ್ಟು:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಅಂತ್ಯಗೊಳ್ಳಬೇಕಿದ್ದ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸುವುದಾಗಿ ಘೋಷಿಸಿದ ಬೆನ್ನಲ್ಲೇ ಈ ಘಟನೆ ನಡೆದಿದೆ. ಆದರೆ, ಅಮೆರಿಕ ಇರಾನ್ ಬಂದರುಗಳ ಮೇಲಿನ ದಿಗ್ಬಂಧನವನ್ನು ಮುಂದುವರಿಸಿದೆ. ಈ ದಿಗ್ಬಂಧನವನ್ನು ತೆರವುಗೊಳಿಸುವವರೆಗೆ ಮಾತುಕತೆಗೆ ಯಾವುದೇ ನಿಯೋಗವನ್ನು ಕಳುಹಿಸುವುದಿಲ್ಲ ಎಂದು ಇರಾನ್ ರಾಜತಾಂತ್ರಿಕ ಮೊಜ್ತಬಾ ಫೆರ್ದೌಸಿ ಪೋರ್ ತಿಳಿಸಿದ್ದಾರೆ.

ಆರ್ಥಿಕ ಪರಿಣಾಮಗಳು: ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲದ ಶೇ.20ರಷ್ಟು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುತ್ತದೆ. ಈ ದಾಳಿಯ ನಂತರ, ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 98 ಡಾಲರ್‌ಗಿಂತ ಹೆಚ್ಚಾಗಿದ್ದು, ಯುದ್ಧ ಪ್ರಾರಂಭವಾದಾಗಿನಿಂದ ಶೇ.35 ರಷ್ಟು ಏರಿಕೆ ಕಂಡಿದೆ. ಇಂಧನ ಬೆಲೆ ಏರಿಕೆ, ಜಾಗತಿಕ ಆಹಾರ ಮತ್ತು ಇತರ ಉತ್ಪನ್ನಗಳ ಬೆಲೆಗಳ ಮೇಲೆ ಪರಿಣಾಮ ಬೀರಿದೆ.

ಫೆಬ್ರವರಿ 28ರಂದು ಯುದ್ಧ ಪ್ರಾರಂಭವಾದಾಗಿನಿಂದ ಸಮುದ್ರದಲ್ಲಿ 30ಕ್ಕೂ ಹೆಚ್ಚು ದಾಳಿಗಳು ನಡೆದಿವೆ. ಈ ಸಂಘರ್ಷದಲ್ಲಿ ಇರಾನ್‌ನಲ್ಲಿ 3,375 ಮತ್ತು ಲೆಬನಾನ್‌ನಲ್ಲಿ 2,290 ಜನರು ಸಾವನ್ನಪ್ಪಿದ್ದಾರೆ. ಕದನ ವಿರಾಮದ ಅಂಗವಾಗಿ ವೈಮಾನಿಕ ದಾಳಿಗಳನ್ನು ನಿಲ್ಲಿಸಿದ್ದರೂ, ಪ್ರಾದೇಶಿಕ ಆಸ್ತಿಗಳ ಮೇಲೆ ಮತ್ತಷ್ಟು ದಾಳಿ ನಡೆಸುವುದಾಗಿ ರೆವಲ್ಯೂಷನರಿ ಗಾರ್ಡ್ ಎಚ್ಚರಿಸಿದೆ. ಲೆಬನಾನ್‌ನಲ್ಲಿ ಇಸ್ರೇಲಿ ಡ್ರೋನ್ ದಾಳಿಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದ್ದರೂ ಇಸ್ರೇಲ್ ಇದನ್ನು ನಿರಾಕರಿಸಿದೆ.

ಇರಾನ್‌ಗೆ ಭಾರತ ಪಾವತಿಸಿಲ್ಲ

ಪುಟ ೧ → ಸನ್ಮಾರ್ ಹೆರಾಲ್ಡ್ ಹಡಗಿನ ಕ್ಯಾಪ್ಟನ್ ದಾಳಿ ನಿಲ್ಲಿಸಲು ವಿನಂತಿಸಿದ್ದ ಆಡಿಯೋ ವೈರಲ್ ಆಗಿದೆ. ಈ ಘಟನೆ ನಂತರದ ವರದಿಗಳನ್ನು ಸರ್ಕಾರ ತಳ್ಳಿಹಾಕಿದ್ದು, ಯಾವುದೇ ಹಣ ಪಾವತಿ ನಡೆದಿಲ್ಲ ಎಂದು ಹೇಳಿದೆ. ಬಂದರು, ನೌಕಾಯಾನ ಸಚಿವಾಲಯದ ಅಧಿಕಾರಿ ಮುಕೇಶ್ ಮಂಗಲ್ ಇದನ್ನು ಸುಳ್ಳು ಸುದ್ದಿ ಎಂದು ಹೇಳಿದ್ದಾರೆ. ಕೆಲವು ವರದಿಗಳ ಪ್ರಕಾರ, ಮೋಸಗಾರರು ಹಡಗು ಮಾಲೀಕರಿಗೆ ಸುರಕ್ಷಿತ ಮಾರ್ಗದ ಭರವಸೆ ನೀಡಿ ಕ್ರಿಪ್ಟೋ ಹಣ ಕೇಳುತ್ತಿದ್ದಾರೆ. ಆದರೆ ಚೆನ್ನೈ ಮೂಲದ ಸನ್ಮಾರ್ ಶಿಪ್ಪಿಂಗ್ ಕೂಡ ಯಾವುದೇ ಪಾವತಿ ನಡೆದಿಲ್ಲ ಎಂದು ತಿಳಿಸಿದೆ. ಪರ್ಶಿಯನ್ ಕೊಲ್ಲಿಯಲ್ಲಿ ಉದ್ಭವಿಸಿದ ಸಂಘರ್ಷದಿಂದ ಹಲವಾರು ಹಡಗುಗಳು ಸಿಲುಕಿಕೊಂಡಿದ್ದು, ಜಾಗತಿಕ ಇಂಧನ ಸರಬರಾಜಿನ ಮೇಲೆ ಪರಿಣಾಮ ಬೀರಿದೆ.

ಮೋದಿ ಟೆರರಿಸ್ಟ್ ಎಂದ ಖರ್ಗೆಗೆ ಇಸಿ ನೋಟಿಸ್

ಪುಟ ೧ → ಅವರು ಪ್ರಜಾತಂತ್ರವನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿದ ಬೆನ್ನಲ್ಲೇ, ಈ ಕ್ರಮ ಕೈಗೊಳ್ಳಲಾಗಿದೆ. ಹಿರಿಯ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಕಿರಣ್ ರಿಜಿಜು ಅವರನ್ನೊಳಗೊಂಡ ಬಿಜೆಪಿ ನಿಯೋಗ ಬುಧವಾರ ಚುನಾವಣಾ ಆಯೋಗವನ್ನು ಭೇಟಿ ಮಾಡಿ ದೂರು ನೀಡಿತ್ತು.

ಒಂದೂವರೆ ಗಂಟೆ ತಡವಾಗಿ ಫ್ಲೈ91 ವಿಮಾನ ಭೂ ಸ್ಪರ್ಶ

ಹುಬ್ಬಳ್ಳಿ: ಬೆಂಗಳೂರಿನಿಂದ ಹುಬ್ಬಳ್ಳಿಗೆ ಮಂಗಳವಾರ ಸಂಜೆ 6.45ಕ್ಕೆ ಹೊರಟಿದ್ದ ಹೊರಟಿದ್ದ ಫ್ಲೈ91 ವಿಮಾನವು ಹವಾಮಾನ ವೈಪರಿತ್ಯದಿಂದಾಗಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಒಂದೂವರೆ ಗಂಟೆ ತಡವಾಗಿ ಭೂ ಸ್ಪರ್ಶ ಮಾಡಿದೆ.

ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ರಾತ್ರಿ 8.15ಕ್ಕೆ ಭೂ ಸ್ಪರ್ಶ ಮಾಡಬೇಕಿತ್ತು. ಪ್ರಕ್ಷುಬ್ಧ ಹವಾಮಾನದಿಂದಾಗಿ ರಾತ್ರಿ 9.40ಕ್ಕೆ ಸುರಕ್ಷಿತವಾಗಿ ಭೂ ಸ್ಪರ್ಶ ಮಾಡಿದೆ. 21 ಮಂದಿ ಪ್ರಯಾಣಿಕರು ಇದ್ದರು ಎಂದು ಹುಬ್ಬಳ್ಳಿ ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಏ.19ರಂದು ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಹೊರಟಿದ್ದ ಫ್ಲೈ91 ವಿಮಾನವು ಸಹ, ಹವಾಮಾನ ವೈಪರೀತ್ಯದಿಂದಾಗಿ ಮೂರು ಗಂಟೆಗೂ ಹೆಚ್ಚು ಕಾಲ ಆಕಾಶದಲ್ಲಿಯೇ ಹಾರಾಡಿ, ನಂತರ ಬೆಂಗಳೂರಿನಲ್ಲಿ ಸುರಕ್ಷಿತವಾಗಿ ಭೂ ಸ್ಪರ್ಶಮಾಡಿತ್ತು.

ಕೊಡಗು: ಅಮೆರಿಕ ಮಹಿಳೆ ಮೇಲೆ ಅತ್ಯಾಚಾರ

ಪುಟ ೧ → ಸಿಹಿ ಪಾನಕದಲ್ಲಿ ಮತ್ತು ಬರುವ ಔಷಧ ಬೆರೆಸಿದ ಬಳಿಕ ಅತ್ಯಾಚಾರ ನಡೆದಿರುವುದಾಗಿ ಸಂತ್ರಸ್ತ ಮಹಿಳೆ ಉಲ್ಲೇಖಿಸಿದ್ದು, ಕೆಲವು ದಿನಗಳ ಹಿಂದೆ (ಏ.12) ನಡೆದಿರುವ ಈ ಘಟನೆಯನ್ನು ಮುಚ್ಚಿ ಹಾಕಲು ಹೋಂಸ್ಟೇ ಮಾಲೀಕ ವಿಶಾಲ್, ಜನಪ್ರತಿನಿಧಿಯೊಬ್ಬರ ಮೂಲಕ ಭಾರೀ ಯತ್ನ ನಡೆಸಿದ್ದಾಗಿ ತಿಳಿದುಬಂದಿದೆ. ಮೂರು ದಿನದ ಬಳಿಕ ತಾನು ಮೈಸೂರಿಗೆ ತೆರಳುವುದಾಗಿ ಹೇಳಿ ಹೊರಟ ಸಂತ್ರಸ್ತೆ, ಬಳಿಕ ಅಮೆರಿಕದಲ್ಲಿರುವ ರಾಯಭಾರ ಕಚೇರಿಗೆ ಈ ಕುರಿತು ಮಾಹಿತಿ ನೀಡಿದ್ದಾರೆ.

ಅಮೆರಿಕದ ರಾಯಭಾರ ಕಚೇರಿ ಅಧಿಕಾರಿಗಳು ಮೈಸೂರಿನಲ್ಲಿರುವ ಪೊಲೀಸ್ ಅಧಿಕಾರಿಗಳನ್ನು ಇ-ಮೇಲ್ ಮೂಲಕ ಸಂಪರ್ಕಿಸಿದ ಮೇರೆಗೆ ಅಲ್ಲಿನ ಹಿರಿಯ ಅಧಿಕಾರಿಗಳ ಸೂಚನೆಯನ್ವಯ ಇದೀಗ ಪ್ರಕರಣ ದಾಖಲಾಗಿ, ಹೋಂಸ್ಟೇ ಮಾಲೀಕ ವಿಶಾಲ್ ಹಾಗೂ ಅತ್ಯಾಚಾರದ ಆರೋಪಿ ವೃಜೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಸಮಗ್ರ ತನಿಖೆಗೆ ಸಚಿವರ ಸೂಚನೆ: ಕೊಡಗು ಜಿಲ್ಲೆಯ ಕುಟ್ಟದಲ್ಲಿರುವ ಖಾಸಗಿ ಹೋಂಸ್ಟೇಯಲ್ಲಿ ಅಮೆರಿಕ ಮೂಲದ ಮಹಿಳೆಯೊಬ್ಬರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್. ಎಸ್. ಭೋಸರಾಜು ಅವರು, ಈ ಕುರಿತು ಶೀಘ್ರವೇ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.

ನಿವೃತ್ತಿ ಹೊಸ್ತಿಲಲ್ಲಿ ಸಾಧನೆ ರೂವಾರಿ ಡಾ.ಡಿ.ಕೆ.ಸುನೀಲ್

ಪುಟ ೧ → ಅಂದರೆ, ನಾವು ಎಚ್‌ಎಎಲ್ ಸಾಮರ್ಥ್ಯವನ್ನು ವಿಸ್ತರಿಸಿದ್ದೇವೆ. ಆರ್ಥಿಕ ಸ್ಥಿರತೆ ಮತ್ತು ಕಾರ್ಯಾಚರಣೆಯನ್ನು ಬಲಗೊಳಿಸಿದ್ದೇವೆ.

▶ಈ ಅವಧಿಯಲ್ಲಿ ಎದುರಿಸಿದ ಸವಾಲುಗಳನ್ನು ಹೇಳುವುದಾದರೆ?

ಸವಾಲುಗಳೆಂದರೆ ಕೋಸ್ಟ್ ಗಾರ್ಡ್‌ನ ಒಂದು ಹೆಲಿ ಕಾಪ್ಟರ್ ಪತನವಾಗಿತ್ತು. ಇದರಿಂದ ನಮ್ಮ ಬಗ್ಗೆ ಬಹಳಷ್ಟು ನಕಾರಾತ್ಮಕ ಅಭಿಪ್ರಾಯ ವ್ಯಕ್ತವಾಯಿತು. ಅದರ ವಿನ್ಯಾಸ ಅಧ್ಯಯನ ಮಾಡಿ, ಚರ್ಚೆ ನಡೆಸಿ ಅದಕ್ಕೊಂದು ಪರಿಹಾರ ಕಂಡುಕೊಂಡಿದ್ದೇವೆ. ಅಲ್ಲದೆ, ಎಲ್‌ಸಿಎಗೆ ಅಗತ್ಯವಿರುವ ಎಂಜಿನ್ ನಮಗೆ ಸರಬರಾಜು ಆಗದೇ ಇರುವುದು ಕೂಡ ಸವಾಲಿನ ಸಂಗತಿಯಾಗಿತ್ತು. ಈಗಲೂ ಎಂಜಿನ್ ಬಂದಿಲ್ಲ, ಐದು ಎಂಜಿನ್‌ಗಳಷ್ಟೇ ಬಂದಿವೆ. ಜಿಇ ದೈತ್ಯ ಕಂಪನಿ, ನಮಗೆ ಅದರ ಮೇಲೆ ನಿಯಂತ್ರಣವಿಲ್ಲ. ಆದರೂ ಸಾರ್ವಜನಿಕವಾಗಿ ನಾವು ಟೀಕೆಗೊಳಗಾಗುತ್ತಲೇ ಇದ್ದೇವೆ. ಎಚ್‌ಎಎಲ್ ಹೆಮ್ಮೆ ಎನ್ನುವುದು ಎಲ್ಲರಿಗೂ ಗೊತ್ತಿದೆ, ಅದೇ ರೀತಿ ಎಚ್‌ಎಎಲ್ ಮೇಲೆ ಇಂತಹ ವಾಗ್ದಾಳಿ ಮಾಡುವವರೂ ತುಂಬಾ ಜನರಿದ್ದಾರೆ. ಇದನ್ನು ನಾವು ನಿರ್ವಹಣೆ ಮಾಡಲೇಬೇಕಿತ್ತು. ಸ್ವಲ್ಪ ಮಟ್ಟದಲ್ಲಿ ನಿರ್ವಹಣೆ ಮಾಡಿದ್ದೇವೆ. ನಮ್ಮಲ್ಲಿ 21 ವಿಮಾನಗಳು ಸಿದ್ಧವಾಗಿವೆ. ಆದರೆ, ಎಂಜಿನ್‌ಗಳಿಲ್ಲ. ಏನೂ ಮಾಡುವುದಕ್ಕಾಗುತ್ತಿಲ್ಲ.

▶ಎಚ್‌ಎಎಲ್ ಇಂಡಿಜಿನಸ್ ಕಂಟೆಂಟ್‌ನಲ್ಲಿ ಎಷ್ಟು ಪ್ರಗತಿ ಸಾಧಿಸಿದೆ?

ನಮ್ಮ ಪ್ರಾಡಕ್ಟ್ ರೇಂಜ್ ನೋಡಿದರೆ, ಕಾನ್ಪುರ ಘಟಕದಲ್ಲಿ ವೇಗವರ್ಧಕಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಧ್ರುವ್, ಪ್ರಚಂಡ್, ಎಲ್‌ಯುಎಚ್, ಎಚ್‌ಟಿಟಿ-40, ಎಲ್‌ಸಿಎ ಎಂಕೆ1, ಎಲ್‌ಸಿಎ ಎಂಕೆ1ಎ ಹೀಗೆ ನಾವು ಸ್ಥಳೀಯವಾಗಿ ಅಭಿವೃದ್ಧಿಪಡಿಸಿ ಉತ್ಪಾದನೆ ಮಾಡುತ್ತಿದ್ದೇವೆ. ನಮ್ಮ ಭವಿಷ್ಯದ ಬೆಳವಣಿಗೆ ನಾವು ವಿನ್ಯಾಸಗೊಳಿಸಿದ ನಮ್ಮ ಉತ್ಪನ್ನಗಳಿಂದಲೇ ಬರುತ್ತದೆ.

▶ಎಚ್‌ಎಎಲ್ ಉತ್ಪನ್ನಗಳನ್ನು ಸ್ಥಳೀಯವಾಗಿ ಎಷ್ಟೇ ವಿನ್ಯಾಸ ಅಭಿವೃದ್ಧಿಗೊಳಿಸಿದರೂ ಎಂಜಿನ್‌ಗಾಗಿ ಬೇರೆಯವರತ್ತ ನೋಡಬೇಕಾಗಿದೆ. ಇದಕ್ಕೆ ಪರಿಹಾರವೇನು?

ಎಚ್‌ಎಎಲ್‌ನಲ್ಲಿ ಏರೋ ಎಂಜಿನ್ ಆರ್ ಆ್ಯಂಡ್ ಡಿ (ಸಂಶೋಧನೆ ಮತ್ತು ಅಭಿವೃದ್ಧಿ) ಸೆಕ್ಟರ್ ಇದೆ. ಅಲ್ಲಿ ಸ್ಟಾರ್ಟರ್ ಎಂಜಿನ್‌ಗಳ ಅಭಿವೃದ್ಧಿ ಮಾಡುತ್ತೇವೆ. ಜಿಇ ಎಂಜಿನ್‌ಗೂ ನಾವೇ ಸ್ಟಾರ್ಟರ್ ಎಂಜಿನ್ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿದ್ದೇವೆ. ಅದು ಯಶಸ್ವಿಯಾಗಿದೆ. ಎಎನ್32 ಎನ್ನುವ ರಷ್ಯನ್ ವಿಮಾನಕ್ಕೆ ಸ್ಟಾರ್ಟರ್ ಎಂಜಿನ್ ಮಾಡಿದ್ದೇವೆ, ಅದೂ ಯಶಸ್ವಿಯಾಗಿದೆ. ಸುಮಾರು ಸಣ್ಣ ಸ್ಟಾರ್ಟರ್ ಎಂಜಿನ್‌ಗಳನ್ನು ನಾವು ವಿನ್ಯಾಸಗೊಳಿಸಿ, ಅಭಿವೃದ್ಧಿ ಮಾಡಿದ್ದೇವೆ. ಪ್ರಸಕ್ತ ಎರಡು ಎಂಜಿನ್‌ಗಳ ವಿನ್ಯಾಸ ನಡೆಯುತ್ತಿದೆ. ಅದರಲ್ಲಿ ಒಂದು ಹೆಲಿಕಾಪ್ಟರ್ ಎಂಜಿನ್, ಇನ್ನೊಂದು ಫೈಟರ್ (ತರಬೇತಿ ವಿಮಾನ) ಎಂಜಿನ್. ಮುಂದಿನ 3-4 ವರ್ಷಗಳಲ್ಲಿ ಇವುಗಳಿಗೆ ಪ್ರಮಾಣಪತ್ರ ಲಭಿಸಿ, ಉತ್ಪಾದನೆ ಸಾಧ್ಯವಾಗಲಿದೆ. ಅದು ಎಲ್‌ಸಿಎಗೆ ಬಳಸುವಷ್ಟು ಸಾಮರ್ಥ್ಯದಲ್ಲ; ಹಾಕ್, ಯಶಸ್ ರೇಂಜ್‌ನ ವಿಮಾನಗಳಿಗೆ ಬಳಸುವ 25 ಕಿಲೋ ನ್ಯೂಟನ್ ಸಾಮರ್ಥ್ಯದ ಎಂಜಿನ್ ಇದಾಗಲಿದೆ. ದೊಡ್ಡ ಎಂಜಿನ್‌ಗಳನ್ನು ಜಿಟಿಆರ್‌ಇ (ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್ಮೆಂಟ್) ಸಂಸ್ಥೆಯವರು ಮಾಡುತ್ತಿದ್ದಾರೆ.

▶ಉತ್ಪಾದನಾ ಸಮಯ ಕಡಿಮೆ ಮಾಡಬೇಕೆಂಬ ರಕ್ಷಣಾ ಸಚಿವರ ಕರೆಯನ್ನು ಎಚ್‌ಎಎಲ್ ಯಾವ ರೀತಿ ಸ್ವೀಕರಿಸಿದೆ? ಏನೆಲ್ಲ ಕ್ರಮ ತೆಗೆದುಕೊಂಡಿದೆ?

ರಕ್ಷಣಾ ಸಚಿವರು ಉತ್ಪಾದನೆಯನ್ನು ತ್ವರಿತವಾಗಿ ಮಾಡಬೇಕೆಂದು ಕರೆಕೊಟ್ಟಿದ್ದಾರೆ. ಅದಕ್ಕಾಗಿ ನಾವು ತೇಜಸ್ ವಿಮಾನ ಉತ್ಪಾದನೆಗಾಗಿ ನಾಸಿಕ್‌ನಲ್ಲಿ ಮೂರನೇ ಘಟಕವನ್ನು ತೆರೆದಿದ್ದೇವೆ. ಇದರಿಂದ ವರ್ಷಕ್ಕೆ 24 ವಿಮಾನಗಳನ್ನು ಎಚ್‌ಎಎಲ್ ಪೂರೈಕೆ ಮಾಡಬಹುದಾಗಿದೆ. ಮುಂದಿನ ಏಳೆಂಟು ವರ್ಷಗಳಲ್ಲಿ ಆರ್ಡರ್ ಪೂರೈಕೆ ಮಾಡಲು ಸಾಧ್ಯವಾಗಲಿದೆ. ತ್ವರಿತ ಉತ್ಪಾದನೆಗಾಗಿ ಕೆಲವು ಭಾಗಗಳು, ಜೋಡಣೆ ಇತ್ಯಾದಿಗಳಾಗಿ ಖಾಸಗಿ ವಲಯದ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಮುಂದುವರಿಯುತ್ತಿದ್ದೇವೆ. ಇದರಿಂದ ಉತ್ಪಾದನೆಯ ವೇಗವರ್ಧನೆಯಾಗುತ್ತದೆ. ಈ ವರ್ಷ ನಾವು 15 ಹೆಲಿಕಾಪ್ಟರ್‌ಗಳನ್ನು ಪೂರೈಸಿದ್ದೇವೆ. ಇನ್ನೂ 13 ಹೆಲಿಕಾಪ್ಟರ್‌ಗಳನ್ನು ಪೂರೈಸುತ್ತೇವೆ.

ಮಹಿಳೆ ಮೇಲೆ ದೌರ್ಜನ್ಯ: ವರದಿ ಸಲ್ಲಿಸಲು ಸೂಚನೆ

ಬೆಂಗಳೂರು: ಕೊಡಗು ಜಿಲ್ಲೆಯ ಕುಟ್ಟ ಪ್ರದೇಶದಲ್ಲಿರುವ ಖಾಸಗಿ ಹೋಂಸ್ಟೇಯಲ್ಲಿ ಅಮೆರಿಕಾ ಮೂಲದ ಮಹಿಳೆಯೊಬ್ಬರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣದ ಕುರಿತು ಶೀಘ್ರವೇ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್. ಭೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಸಚಿವರು, ಪ್ರಕರಣದ ವಿವರಗಳನ್ನು ಪಡೆದುಕೊಂಡರು. ಈ ಕೃತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಫ್‌ಐಆರ್ ದಾಖಲಾಗಿದ್ದು, ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಲಾಗಿದೆ. ಕೊಡಗು ಜಿಲ್ಲೆಯು ಪ್ರವಾಸೋದ್ಯಮಕ್ಕೆ ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಿದೆ. ಪ್ರವಾಸೋದ್ಯಮದ ಮೇಲೆ ಗಂಭೀರವಾದ ನಕಾರಾತ್ಮಕ ಪರಿಣಾಮ ಬೀರುತ್ತದೆ. ಈ ನಿಟ್ಟಿನಲ್ಲಿ ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕಾಂಗ್ರೆಸ್‌ನಿಂದಲೇ ಮಹಿಳಾ ಮೀಸಲಿಗೆ ವಿರೋಧ: ಈಶ್ವರಪ್ಪ



ಶಿವಮೊಗ್ಗ: ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್ ಎಲ್ಲಾ ಕಾಲದಲ್ಲೂ ವಿರೋಧಿಸುತ್ತಲೇ ಬಂದಿದ್ದು, ಈಗಲೂ ಅದೇ ಕೆಲಸ ಮಾಡಿದೆ ಎಂದು ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಇಂಡಿ ಕೂಟ ಸೋಲಿಸುವ ಮೂಲಕ ತಾವು ಮಹಿಳಾ ವಿರೋಧಿಗಳು ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಕಾಂಗ್ರೆಸ್ 60 ವರ್ಷ ಆಡಳಿತ ನಡೆಸಿದರೂ ಮಹಿಳಾ ಮೀಸಲಾತಿ ಕಲ್ಪಿಸಿಲ್ಲ ಎಂದರು.

ವಾಜಪೇಯಿ ಸರ್ಕಾರದಲ್ಲಿಯೂ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಲಾಗಿತ್ತು. ರಾಜ್ಯಸಭೆಯಲ್ಲಿ ಮಸೂದೆ ಅಂಗೀಕಾರವಾಗಿತ್ತು. ಆದರೆ ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸದೆ ಅನ್ಯಾಯ ಮಾಡಿರುವುದು ಇತಿಹಾಸ. ಈಗಲೂ ಅದನ್ನೇ ಮಾಡಿದೆ ದೂರಿದರು. ಕಾಯ್ದೆಯಲ್ಲಿ ಮುಸ್ಲಿಂ ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎನ್ನುವುದು ಸಂವಿಧಾನ ವಿರೋಧಿಯಾಗಿದೆ. ಧರ್ಮಾಧಾರಿತ ಮೀಸಲಾತಿಗೆ ಅವಕಾಶವಿಲ್ಲ ಎಂದು ಸಂವಿಧಾನದಲ್ಲಿಯೇ ಹೇಳಲಾಗಿದೆ. ಆದರೂ ಕೂಡಾ ಮುಸ್ಲಿಮರನ್ನು ಓಲೈಸುವ ಹಕ್ಕೆ ಕಾಂಗ್ರೆಸ್ ಬದ್ಧಿದೆ ಎಂದರು.

ಆರ್‌ಎಸ್‌ಎಸ್ ನಿಂದಿಸಿದವರು ಎಂದಿಗೂ ಉದ್ಧಾರವಾಗಿಲ್ಲ, ಆದರೂ ಮಲ್ಲಿಕಾರ್ಜುನ ಖರ್ಗೆಯವರು ಆರ್‌ಎಸ್‌ಎಸ್‌ನ್ನು ನಿಂದಿಸುತ್ತಿದ್ದಾರೆ. ಜಗತ್ತೇ ಮೆಚ್ಚಿರುವ ಪ್ರಧಾನಿ ಮೋದಿಯವರ ಬಗ್ಗೆಯೂ ಹದ್ದು ಮೀರಿ ಮಾತನಾಡುತ್ತಿರುವುದು ಸರಿಯಲ್ಲವೆಂದರು. ಖರ್ಗೆಯವರಾದರೂ ಕೂಡಾ ತಪ್ಪನ್ನು ತಿದ್ದಿಕೊಂಡಿದ್ದಾರೆ. ಆದರೆ ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಆರ್‌ಎಸ್‌ಎಸ್ ಬಗ್ಗೆ ಖರ್ಗೆ ಹೇಳಿದ ಮಾತನ್ನು ನಾನು ಸಮರ್ಥಿಸಿಕೊಳ್ಳುತ್ತೇನೆ ಎಂದಿದ್ದಾರೆ. ಆರ್‌ಎಸ್‌ಎಸ್ ಬಹುದೊಡ್ಡ ಸಂಘಟನೆ ಎಂಬುದು ಕಿಮ್ಮನೆಗೆ ಗೊತ್ತಿರಲಿ ಎಂದರು.

ವಿಶೇಷ ಪೂಜೆ



ಮಂಗಳೂರಿನ ಕಟೀಲು ದುರ್ಗಾಪರಮೇಶ್ವರಿ ದೇವಾಲಯದಲ್ಲಿ ಬುಧವಾರ ಭಕ್ತರಿಂದ ತೂಟೆದಾರ ಸೇವೆ ಸಲ್ಲಿಸಲಾಯಿತು.

ಯಾವುದೇ ಬೆಟ್ಟಿಂಗ್ ಪ್ರಮೋಟ್ ಮಾಡಿಲ್ಲ: ಸಚಿವ ಪರಮೇಶ್ವರ



ಬೆಂಗಳೂರು: ಬೆಟ್ಟಿಂಗ್ ಕುರಿತಾದ ತಮ್ಮ ಹೇಳಿಕೆಯ ಬಗ್ಗೆ ನ್ಯಾಯಾಲಯದ ಆದೇಶಕ್ಕೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ. ಜಿ.ಪರಮೇಶ್ವರ, ನಾನು ಬೆಟ್ಟಿಂಗ್ ಪ್ರಮೋಟ್ ಮಾಡುವ ವ್ಯಕ್ತಿಯಲ್ಲ, ನನ್ನ ಮಾತನ್ನು ಅರ್ಥೈಸಿಕೊಂಡ ರೀತಿಯಲ್ಲಿ ತಪ್ಪಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಹಳ್ಳಿಗಳಲ್ಲಿ ಕುಚ್ಚಿ ಆಟ ನಡೆಯುವ ವಾಗ ಸಹಜವಾಗಿ ಮಾತನಾಡುವಂತೆ ನಾನು ಹೇಳಿದ್ದೇನೆ. ಕಾನೂನು ದೃಷ್ಟಿಯಿಂದ ಅದು ತಪ್ಪಾಗ ಬಹುದು, ಆದರೆ ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವ ನಾನು ಬೆಟ್ಟಿಂಗ್ ಪ್ರೋತ್ಸಾಹ ಸಚ್ಚೇನೆ ಎನ್ನುವುದು ಶುದ್ಧ ಸುಳ್ಳು. ಈಗಿನ ಪರಿಸ್ಥಿತಿಯಲ್ಲಿ ತಮಾಷೆ ಕೂಡ ಮಾಡುವಂತಿಲ್ಲ ಎಂಬಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೋರ್ಟ್ ನಿಂದ ನನಗೆ ಯಾವುದೇ ನೋಟಿಸ್ ಬಂದಿರಲಿಲ್ಲ, ನೋಟಿಸ್ ಬಂದಿದ್ದರೆ ನನ್ನ ನಿಲುವನ್ನು ಮನವರಿಕೆ ಮಾಡಿಕೊಡುತ್ತಿದ್ದೆ. ಏಕಾಏಕಿ ಆದೇಶ ಮಾಡಲಾಗಿದೆ. ಆದರೂ ಕಾನೂನಿಗೆ ಗೌರವ ಕೊಡುವ ವ್ಯಕ್ತಿಯಾಗಿ ನಾನು ಮುಂದಿನ ಕ್ರಮಕ್ಕೆ ಬದ್ಧನಾಗಿದ್ದೇನೆ ಎಂದು ತಿಳಿಸಿದರು.

ಕೂರ್ಗ್ ಹೋಮ್ ಸ್ಟೇ ಘಟನೆಗೆ ಕಠಿಣ ಕ್ರಮ: ಕೊಡಗಿನ ಹೋಮ್‌ಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ನಡೆದ ಅತ್ಯಾಚಾರ ಪ್ರಕರಣದ ಬಗ್ಗೆ ಪರಮೇಶ್ವರ ಮಾಹಿತಿ ನೀಡಿ, ಘಟನೆ ತಿಳಿದ ತಕ್ಷಣ ಪೊಲೀಸರು ಕ್ರಮ ಕೈಗೊಂಡು ಜಾರ್ಖಂಡ್ ಮೂಲದ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹೋಮ್ ಸ್ಟೇಗಳು ಸರ್ಕಾರ ನೀಡಿರುವ ಎಸ್‌ಒಪಿ ಮತ್ತು ಲೈಸೆನ್ಸ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇಂತಹ ಘಟನೆ ಗಳು ಜಾಗತಿಕ ಮಟ್ಟದಲ್ಲಿ ರಾಜ್ಯದ ಬಗ್ಗೆ ತಪ್ಪು ಸಂದೇಶ ರವಾನಿಸುತ್ತವೆ. ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಅಥವಾ ನಿಯಮ ಉಲ್ಲಂಘಿಸಿದರೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

ಕಿರುಸುದ್ದಿ

ಪಿಎಸ್‌ಐ, ಓರ್ವ ಸಿಬ್ಬಂದಿ ಲೋಕಾಯುಕ್ತ ಬಲೆಗೆ

ಬಾಗಲಕೋಟೆ: ಸುಳ್ಳು ಆಪಾದನೆ ಮತ್ತು ಕೇಸ್ ಹಾಕುತ್ತೇನೆ ಎಂದು ಬೆದರಿಸಿ ಲಂಚಕ್ಕೆ ಬೇಡಿಕೆ ಇಟ್ಟು ಜಿಲ್ಲೆಯ ಕೆರೂರ ಪೊಲೀಸ್ ಠಾಣೆಯ ಪಿಎಸ್‌ಐ ಹಾಗೂ ಓರ್ವ ಸಿಬ್ಬಂದಿ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಬಾದಾಮಿ ತಾಲೂಕಿನ ಕೆರೂರ ಪಟ್ಟಣದ ಬೆಳಗಂಟಿ ಗ್ರಾಮದ ಮುತ್ತಪ್ಪ ಹುಲ್ಲಪ್ಪ ನಾಯ್ಕರ ಏ.21ರಂದು ಜಿಲ್ಲಾ ಲೋಕಾಯುಕ್ತ ಪೊಲೀಸ್ ಕಚೇರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಈ ದಾಳಿ ನಡೆದಿದೆ. ಫಿರ್ಯಾದಿ ಮುತ್ತಪ್ಪ ನಾಯ್ಕರ ಸ್ನೇಹಿತನಾದ ಕೆರೂರಿನ ಶಂಕ್ರಪ್ಪ ನೀಲಪ್ಪ ಬೂದಿಹಾಳನನ್ನು ಏ.17ರಂದು ಕೆರೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಠಾಣೆಯಲ್ಲಿ ಅಧಿಕಾರಿಗಳು ವಿಚಾರಣೆ ಮಾಡುತ್ತಾ ಇಸ್ಪೇಟ್ ಆಡಿಸುತ್ತಿದ್ದೀಯಾ, ಬಡ್ಡಿ ಆಡುತ್ತಿದ್ದೀಯಾ ಎಂದು ಸುಳ್ಳು ಆಪಾದನೆ ಮಾಡಿ ನಿನ್ನ ಮೇಲೆ ಕೇಸ್ ದಾಖಲಾಗುತ್ತದೆ ಎಂದು ಹೆದರಿಸಿ 1,70,000 ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಏ.18ರಂದು ಶಂಕ್ರಪ್ಪನನ್ನು ಠಾಣೆಯಿಂದ ಕಳುಹಿಸಿ ಲಂಚದ ಬೇಡಿಕೆ ಹಣವನ್ನು ಕೊಟ್ಟು ನಿನ್ನ ಬೈಕ್ ತೆಗೆದುಕೊಂಡು ಹೋಗಲು ತಿಳಿಸಿದ್ದರು ಎಂದು ಫಿರ್ಯಾದಿದಾರರು ಬಾಗಲಕೋಟೆ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ದೂರಿನ ಮೇರೆಗೆ ಲಂಚದ ಪ್ರಕರಣದಲ್ಲಿ ಭಾಗಿಯಾಗಿದ್ದ ಕೆರೂರ ಪೊಲೀಸ್ ಠಾಣೆಯ ಪಿಎಸ್‌ಐ ಭೀಮಪ್ಪ ರಬಕವಿ, ಕಾನ್ಸ್‌ಟೇಬಲ್ ಸಂತೋಷ ಬಿರಾದಾರ ಇವರು ಏ.22ರಂದು ಫಿರ್ಯಾದಿಯಿಂದ 1,70,000 ರೂ. ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಅಭಿಪ್ರಾಯ ವ್ಯಕ್ತಪಡಿಸಲು ಅರ್ಜಿ

ಬೆಂಗಳೂರು: ರಾಜ್ಯ ಸರ್ಕಾರ ರಚಿಸಿದ್ದ ಸಂಪನ್ಮೂಲ ಸಂಗ್ರಹ ಸಮಿತಿಯು ಮದ್ಯದ ಅಂಶದ ಆಧಾರದ ಮೇಲೆ ತೆರಿಗೆ ವಿಧಿಸುವ ವ್ಯವಸ್ಥೆಗೆ ಶಿಫಾರಸ್ಸು ಮಾಡಿದ್ದು, ಈ ಶಿಫಾರಸ್ಸಿನ ಸಮಾಲೋಚನೆಗೆ ಉದ್ಯಮ ಕ್ಷೇತ್ರದ ಪ್ರತಿನಿಧಿಗಳು, ಸಾರ್ವಜನಿಕ ಆರೋಗ್ಯ ತಜ್ಞರು, ಶೈಕ್ಷಣಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ನಾಗರಿಕರು ಸೇರಿದಂತೆ ಎಲ್ಲಾ ಆಸಕ್ತ ಪಾಲುದಾರರು ವರದಿಯನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯಗಳನ್ನು spobud&fdkamataka.gov.inಗೆ ಕಳುಹಿಸಲು ಆಹ್ವಾನಿಸಲಾಗಿದೆ. ಪಾಲುದಾರರು ತಮ್ಮ ಅಭಿಪ್ರಾಯಗಳನ್ನು 22 ಮೇ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕಿದ್ದು, ಸಮಿತಿಯ ಈ ವರದಿಯ ಸಂಪೂರ್ಣ ಮಾಹಿತಿಗೆ ಹಾಗೂ ಸಮಾಲೋಚನೆಗಾಗಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ವೆಬ್‌ಸೈಟ್ finance.karnataka.gov.inನಲ್ಲಿ ಲಭ್ಯವಾಗಲಿದೆ ಎಂದು ಅಬಕಾರಿ ಇಲಾಖೆ ಪ್ರಕಟಣೆ ಹೊರಡಿಸಿದೆ.

ನದಿಯಲ್ಲಿ ಮುಳುಗಿ ತಾಯಿ-ಮಗ ಸಾವು

ಸಂಕೇಶ್ವರ: ಹಿರಣ್ಯಕೇಶಿ ನದಿಯಲ್ಲಿ ಮಂಗಳವಾರ ಸಂಭವಿಸಿದ ತಾಯಿ–ಮಗನ ದಾರುಣ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ, ಬಾಲಕ ಸುಪ್ರಿತನ ಶವಕ್ಕಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಪೋಲಿಸರು ಕಳೆದ ಎರಡು ದಿನಗಳಿಂದ ಸತತ ಕಾರ್ಯಾಚರಣೆಯು ಮುಂದುವರಿಸಿದ್ದಾರೆ. ಮಂಗಳವಾರ ನದಿಯಲ್ಲಿ ಈಜಲು ತೆರಳಿದ ಮಗನ್ನು ರಕ್ಷಿಸಲು ಹೋದ ತಾಯಿ ಸಹ ನೀರಿನಲ್ಲಿ ಮುಳಗಿ ಮೃತಪಟ್ಟ ಘಟನೆ ಸಂಭವಿಸಿತ್ತು. ಪಟ್ಟಣದ ಹನುಮಾನ ನಗರದ ನಿವಾಸಿಗಳಾದ ಲಕ್ಷ್ಮೀ ಸುಧಾಕರ ಕುಟೋಳಿ (27) ಹಾಗೂ ಅವರ ಪುತ್ರ ಸುಪ್ರಿತ ಸುಧಾಕರ ಕುಟೋಳಿ (9) ಮೃತ ದುರ್ದೈವಿಗಳು. ಮಂಗಳವಾರ ರಾತ್ರಿ ಮಹಿಳೆ ಲಕ್ಷ್ಮೀ ಅವರ ಮೃತದೇಹ ಪತ್ತೆಯಾಗಿದೆ.

ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅಭಿಮತ

ನಾರೀಶಕ್ತಿ ಪ್ರಗತಿಯ ಪ್ರತೀಕ

ಕಲಬುರಗಿ: ದೇಶದ ನಾರಿ ಶಕ್ತಿಯ ಉದಯವು ಸಮಾನತೆ, ಸಬಲೀಕರಣ ಮತ್ತು ಭವಿಷ್ಯದ ನಾಯಕತ್ವದತ್ತ ಸಾಗುತ್ತಿರುವ ಬಹುದೊಡ್ಡ ಪರಿವರ್ತನೆಯ ಪ್ರತೀಕವಾಗಿದೆ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.



ಬುಧವಾರ ಕಲಬುರಗಿಯ ಕಡಗಂಚಿ ಬಳಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿ ಮಾತನಾಡಿದ ಅವರು, ಶಿಕ್ಷಣ, ಸಂಶೋಧನೆ, ಆಡಳಿತ, ಉದ್ಯಮಶೀಲತೆ, ನಾವೀನ್ಯತೆ, ಅಂತರಿಕ್ಷ ಸಂಶೋಧನೆ ಹಾಗೂ ಸಶಸ್ತ್ರ ಪಡೆಗಳಲ್ಲಿಯೂ ಮಹಿಳೆಯರು ರಾಷ್ಟ್ರದ ಭವಿಷ್ಯ ರೂಪಿಸುತ್ತಿದ್ದು, ಮುಂದಿನ ದಿನಗಳಲ್ಲಿ ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರ ಪ್ರತಿನಿಧಿತ್ವವೂ ಹೆಚ್ಚಲಿದೆ ಎಂಬ ನಿರೀಕ್ಷೆಯಿದೆ ಎಂದು ಹೇಳಿದರು.

ನಿಮ್ಮ ಶಿಕ್ಷಣ ನಿಮ್ಮ ಮಾರ್ಗದರ್ಶಿಯಾಗಲಿ. ನಿಮ್ಮ ಮೌಲ್ಯಗಳು ನಿಮ್ಮ ಗುರುತಾಗಲಿ. ಯಶಸ್ಸು ವೈಯಕ್ತಿಕಲಾಭದಿಂದಮಾತ್ರ ಅಳೆಯಲಾಗುವುದಿಲ್ಲ. ನೀವು ಸೃಷ್ಟಿಸುವ ಪರಿಣಾಮವೇ ಅದರ ಮೌಲ್ಯ. ನಿಮ್ಮ ಪ್ರಯತ್ನಗಳಲ್ಲಿ ನೀತಿಪರರಾಗಿರಿ. ಜೀವನದ ಮುಂದಿನ ಅಧ್ಯಾಯಕ್ಕೆ ಕಾಲಿಡುವಾಗ ನಿಮ್ಮನ್ನು ರೂಪಿಸಿದ ಮೌಲ್ಯಗಳನ್ನು ನೆನಪಿಡಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಆಧುನಿಕತೆ ಮತ್ತು ಜಾಗತಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡರೂ ನಮ್ಮ ದೇಶದ ಶ್ರೀಮಂತ ಸಾಂಸ್ಕೃತಿಕ ಮತ್ತು ಬೌದ್ಧಿಕ ಪರಂಪರೆಯನ್ನು ನಾವು ಯಾವತ್ತೂ ಮರೆಯಬಾರದು. ನಿಮ್ಮ ಪೋಷಕರು ನಿಮ್ಮ ಮೊದಲ ಗುರುಗಳು ಅವರು ನೀಡಿದ ಬೆಂಬಲ, ತ್ಯಾಗ ಮತ್ತು ಮಾರ್ಗದರ್ಶನ ಅಮೂಲ್ಯ. ನಿಮ್ಮ ಗುರುಗಳು ನಿಮ್ಮ ಬುದ್ಧಿಯನ್ನು ಬೆಳೆಸಿ, ಸಾಧನೆಗೆ ಪ್ರೇರೇಪಿಸಿದ್ದಾರೆ. ಇವರಿಬ್ಬರಿಗೂ ಗೌರವ ತೋರಿಸುವುದು ನಿಮ್ಮ ಜೀವನ ಪರ್ಯಂತದ ಕರ್ತವ್ಯವಾಗಿದೆ ಎಂದು ಹೇಳಿದರು.

> ಭಾರತದ ಭವಿಷ್ಯ ಅದರ ಪ್ರಗತಿ ಮತ್ತು ಜಾಗತಿಕ ಸ್ಥಾನಮಾನ ನೀವು ಮಾಡುವ ಆಯ್ಕೆ ಮತ್ತು ಹಿಡಿಯುವ ದಾರಿಯ ಮೇಲೆ ಅವಲಂಬಿತವಾಗಿದೆ. ಆತ್ಮವಿಶ್ವಾಸದಿಂದ ಮುಂದೆ ಸಾಗಿರಿ. ದೊಡ್ಡ ಕನಸು ಕಾಣಿರಿ. ಜವಾಬ್ದಾರಿಯಿಂದ ನಡೆದುಕೊಳ್ಳಿ ಮತ್ತು ವಿಕಸಿತ ಭಾರತ ಹಾಗೂ ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಸಂಪೂರ್ಣವಾಗಿ ಕೊಡುಗೆ ನೀಡಿರಿ. ನಿಮ್ಮ ಭವಿಷ್ಯ ದ ಪ್ರಯಾಣಕ್ಕೆ ನನ್ನ ಶುಭಾಶಯಗಳು.
>
> ■ ಸಿ.ಪಿ.ರಾಧಾಕೃಷ್ಣನ್, ಉಪ ರಾಷ್ಟ್ರಪತಿ

ರಾಜ್ಯಪಾಲ ಥಾವರ್‌ಚಂದ ಗೆಹಲೋತ್ ಮಾತನಾಡಿ, ಕನ್ನಡದಲ್ಲೇ ಎಲ್ಲರಿಗೂ ನಮಸ್ಕಾರ ತಿಳಿಸಿದರು. ಭಾರತದ ಉಜ್ವಲ ಭವಿಷ್ಯ ನನ್ನ ಕಣ್ಣೆದುರಿಗೆ ನೋಡುತ್ತಿರುವುದು ಸೌಭಾಗ್ಯದ ಕ್ಷಣವಾಗಿದೆ. ವರ್ಷದ ಸಂಘರ್ಷ ಹಾಗೂ ನಿಮ್ಮ ಬುದ್ಧಿಕ್ಷಮತೆ ಸಮಾಜಕ್ಕೆ ಹೊಸ ದಿಕ್ಕು ನೀಡಲಿದೆ. ನೀವು ಸಂಪಾದನೆ ಮಾಡಿರುವ ಜ್ಞಾನವನ್ನು ವ್ಯಕ್ತಿಗತದ ಜೊತೆ ಜೊತೆಗೆ ರಾಷ್ಟ್ರಕ್ಕಾಗಿಯೂ ಮೀಸಲಿಡಿ. ದೇಶದ ಅಭಿವೃದ್ಧಿಗೆ ವಿವಿ ತನ್ನ ಯೋಗದಾನ ನೀಡಿದೆ. ವಿಕಾಸದ ಜೊತೆಗೆ ಪರಿಸರ ಸಂರಕ್ಷಣೆ ಕೂಡ ನಮ್ಮ ಕರ್ತವ್ಯವಾಗಿದ್ದು, ವಿಕಸಿತ ಭಾರತ ಸಾಕಾರ ಮಾಡುವಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ವಾರ್ಷಿಕ ವರದಿ ಮಂಡಿಸಿ, ಸಿಯುಕೆ ದೇಶದ ವೇಗವಾಗಿ ಬೆಳೆಯುತ್ತಿರುವ ವಿವಿಯಾಗಿದೆ. ಕೃಷಿ ಆಧಾರಿತ ಮತ್ತು ಸಮಾಜಮುಖಿ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಈ ಬಾರಿ 197 ಪದವಿ, 547 ಸ್ನಾತಕೋತ್ತರ, 24 ಪಿಎಚ್.ಡಿ ಹಾಗೂ ಓರ್ವ ಎಂ.ಫಿಲ್ ಸೇರಿ ಒಟ್ಟು 769 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದರು.

ವೇದಿಕೆಯಲ್ಲಿ ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ. ಭರತ್ ಕುಮಾರ್ ಸೇರಿದಂತೆ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಮಾಜಿ ಸಂಸದ ಬಸವರಾಜ್ ಪಾಟೀಲ್ ಸೇಡಂ ಸೇರಿ ವಿವಿಧ ನಿಕಾಯಗಳ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳು ಸೇರಿ ಅನೇಕರು ಉಪಸ್ಥಿತರಿದ್ದರು.

ವಿಎಚ್‌ಪಿ ಪ್ರ. ಕಾರ್ಯದರ್ಶಿ ಪರಾಂಡೆ ಆತಂಕ

ಐಟಿ ಕಂಪನಿಗಳಿಗೂ ನುಗ್ಗಿದ ಲವ್ ಜಿಹಾದ್

ಹಾಸನ: ಲವ್ ಜಿಹಾದ್ ಕಾರ್ಪೋರೇಟ್ ವಲಯ ಮತ್ತು ಐಟಿ ಕಂಪನಿಗಳ ಹವಾನಿಯಂತ್ರಿತ ಕೊಠಡಿಗಳಿಗೂ ನುಗ್ಗಿದೆ ಎಂದು ವಿಶ್ವ ಹಿಂದು ಪರಿಷತ್ (ವಿಎಚ್‌ಪಿ) ಅಂತಾರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಆತಂಕ ವ್ಯಕ್ತಪಡಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಾಂತರದ ಈ ಜಾಲವು ಆಧುನಿಕ ವೇಷ ಧರಿಸಿ ಹೈಟೆಕ್ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಮುಖ ಐಟಿ ಸಂಸ್ಥೆಯಾದ ಟಿಸಿಎಸ್‌ನ ಎಚ್‌ಆರ್ ವಿಭಾಗದಲ್ಲಿ ಕೇಳಿಬಂದಿರುವ ಆರೋಪಗಳನ್ನು ಉಲ್ಲೇಖಿಸಿದ ಅವರು, ವಿದ್ಯಾವಂತ ಮಹಿಳೆಯರನ್ನೇ ಈ ಜಾಲದಲ್ಲಿ ದಾಳವಾಗಿ ಬಳಸಿಕೊಳ್ಳುತ್ತಿರುವುದು ಅತ್ಯಂತ ಗಂಭೀರ ವಿಚಾರ ಎಂದರು. ಯುವತಿಯರಿಗೆ ಉದ್ಯೋಗ ಅಥವಾ ಸ್ನೇಹದ ಆಮಿಷವೊಡ್ಡಿ ಅವರನ್ನು ಜಾಲಕ್ಕೆ ಬೀಳಿಸುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಈ ಪಿತೂರಿಯಲ್ಲಿ ಮಹಿಳೆಯರೇ ಪ್ರಮುಖ ಪಾತ್ರ ವಹಿಸುತ್ತಿರುವುದುನಾಗರಿಕಸಮಾಜತಲೆತಗ್ಗಿಸುವಂತಿದೆ ಎಂದು ವಿಷಾದಿಸಿದರು.

ಮತಾಂತರದ ಹಿಂದೆ ಕೇವಲ ಧಾರ್ಮಿಕ ಹಿತಾಸಕ್ತಿಯಿಲ್ಲ, ಬದಲಿಗೆ ಭಯೋತ್ಪಾದನೆ, ಮಾನವ ಕಳ್ಳಸಾಗಣೆಯ ದೊಡ್ಡ ಜಾಲವೇ ಇದೆ ಎಂದು ಪರಾಂಡೆ ಗಂಭೀರ ಆರೋಪ ಮಾಡಿದರು. ಕೇರಳದಿಂದ ಇಂಗ್ಲೆಂಡ್ ವರೆಗೆ ಈ ಕೃತ್ಯಗಳಲ್ಲಿ ಭಾಗಿಯಾದವರ ಹಿನ್ನೆಲೆ ಗಮನಿಸಿದರೆ, ಅವರಿಗೆ ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ವಿಧ್ವಂಸಕ ಶಕ್ತಿಗಳ ಜೊತೆ ನಂಟಿರುವುದು ಸ್ಪಷ್ಟವಾಗುತ್ತದೆ ಎಂದರು.

ಒಂದು ನಿರ್ದಿಷ್ಟ ಸಮುದಾಯದ ಯುವಕರಲ್ಲಿ ಕಂಡುಬರುತ್ತಿರುವ ಈ ವಿಕೃತ ಪ್ರವೃತ್ತಿಗೆ ಅವರ ಸಮುದಾಯದ ನಾಯಕತ್ವವೇ ಹೊಣೆ ಹೊರಬೇಕು. ತನ್ನ ಯುವಜನತೆಗೆ ನೀಡುತ್ತಿರುವ ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಸರಿಪಡಿಸಿಕೊಳ್ಳದಿದ್ದರೆ, ಇಡೀ ಸಮುದಾಯವು ಅನುಮಾನದ ದೃಷ್ಟಿಯಲ್ಲಿ ನಿಲ್ಲಬೇಕಾಗುತ್ತದೆ ಎಂದು ಎಚ್ಚರಿಸಿದರು.

ಎಚ್ಚರಿಸಿದ ವಿಎಚ್‌ಪಿ

ಹಿಂದೂ ಸಮಾಜವನ್ನು ಎಚ್ಚರಿಸಲು ವಿಎಚ್‌ಪಿ ಈಗ ಸಜ್ಜಾಗಿದೆ. ದಿ ಕೇರಳ ಸ್ಟೋರಿಯಂತಹ ಚಿತ್ರಗಳ ಮೂಲಕ ಯುವತಿಯರಲ್ಲಿ ಜಾಗೃತಿ ಮೂಡಿಸುವುದು ಮಾತ್ರವಲ್ಲದೆ, ಇಂತಹ ಕೃತ್ಯಗಳಲ್ಲಿ ಭಾಗಿಯಾಗುವವರಿಗೆ ಮರಣದಂಡನೆಯಂತಹ ಕಠಿಣ ಶಿಕ್ಷೆ ವಿಧಿಸುವಂತಹ ಕಾನೂನು ರೂಪಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಕ್ಷಮೆ ಕೇಳಲಿ: ಅಶೋಕ್

ಬೆಂಗಳೂರು: ದೇಶದ ಪ್ರಧಾನಿಯನ್ನು ಟೆರರಿಸ್ಟ್ ಎಂದು ಕರೆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡಲೇ ಕ್ಷಮೆ ಯಾಚಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೂಡಲೇ ಖರ್ಗೆಯವರು ದೇಶದ ಜನರ ಕ್ಷಮೆ ಯಾಚಿಸಬೇಕು. ಈ ಹೇಳಿಕೆ ವಿರುದ್ಧ ಗುರುವಾರ ವಿಧಾನಸೌಧದ ಮುಂಭಾಗದಲ್ಲಿ ಬೆಂಗಳೂರಿನ ಶಾಸಕರೊಂದಿಗೆ ಪ್ರತಿಭಟನೆ ಮಾಡಲಿದ್ದೇವೆ ಎಂದು ತಿಳಿಸಿದರು.

ಹಿಂದೆ ಅವರನ್ನು ಚಾಯ್ ವಾಲಾ ಎಂದು ಟೀಕೆ ಮಾಡಿದ್ದಾಗ ಅದನ್ನೇ ಅಭಿಯಾನ ಮಾಡಲಾಯಿತು. ಇವರ ಟೀಕೆಗಳೇ ಬಿಜೆಪಿಗೆ ವರವಾಗಿದೆ. ಇನ್ನೆಂದೂ ಅಧಿಕಾರ ಸಿಗಲ್ಲ ಎಂಬ ಆತಂಕದಿಂದ ಕಾಂಗ್ರೆಸ್ ನಾಯಕರು ಈ ರೀತಿ ಮಾತಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕುಕ್ಕರ್ ಬಾಂಬ್ ಸ್ಫೋಟವಾದಾಗ ಅವರನ್ನು ಬ್ರದರ್ಸ್ ಡಿ.ಕೆ. ಶಿವಕುಮಾರ್ ಎಂದು ಹೇಳಿದ್ದರು. ಖರ್ಗೆಯವರ ಬಲಗೈ ಮುಖಂಡನ ಬೆಂಬಲಿಗರು ವಿಧಾನಸೌಧದಲ್ಲಿ ಪಾಕಿಸ್ತಾನಕ್ಕೆ ಜೈಕಾರ ಕೂಗಿದ್ದರು. ಅವರ ಬಗ್ಗೆಯಾಗಲೀ, ಕುಕ್ಕರ್ ಬಾಂಬ್ ಬಗ್ಗೆಯಾಗಲೀ, ಪಾಕಿಸ್ತಾನದ ಬಗ್ಗೆಯಾಗಲೀ ಖರ್ಗೆ ಪ್ರತಿಕ್ರಿಯೆ ನೀಡಿಲ್ಲ ಹರಿಹಾಯ್ದರು.

ವಿಷಯಾಂತರಕ್ಕೆ ಮೋದಿ ನಿಂದನೆ: ಕೇರಳ ಹಾಗೂ ತಮಿಳುನಾಡಲ್ಲಿ ಬಿಜೆಪಿಗೆ ಉತ್ತಮ ಬೆಂಬಲ ಸಿಗುತ್ತಿದೆ. ಕಾಂಗ್ರೆಸ್‌ಗೆ ಸೋಲುವ ಲಕ್ಷಣ ಕಾಣಿಸಿದೆ. ಅಸ್ಸಾಂ ಹಾಗೂ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲ್ಲಲಿದೆ. ಚುನಾವಣಾ ಪೂರ್ವ ಸಮೀಕ್ಷಾ ವರದಿಗಳಿಂದಾಗಿ ಕಾಂಗ್ರೆಸ್ ನಾಯಕರು ಭ್ರಮನಿರಸನಗೊಂಡಿದ್ದಾರೆ. ಸೋಲಿನ ವಿಷಯಾಂತರ ಮಾಡಲು ಪ್ರಧಾನಿ ಮೋದಿಯನ್ನು ನಿಂದಿಸುತ್ತಿದ್ದಾರೆ ಎಂದರು.

ರಾಜಣ್ಣ ಹೇಳಿಕೆಯಲ್ಲಿ ಅರ್ಥವಿದೆ: ಇಡಿಯಿಂದ ಶಾಸಕ ಹ್ಯಾರಿಸ್ ಕುಟುಂಬದ ಆಸ್ತಿಗಳ ಮೇಲೆ ದಾಳಿ ನಡೆದಿದೆ. ಬಿಟ್ಕಾಯಿನ್ ಹಗರಣದ ತನಿಖೆ ಆರಂಭವಾಗಿ 3 ವರ್ಷವಾದರೂ ಚಾರ್ಜ್‌ಶೀಟ್ ಸಲ್ಲಿಸಿಲ್ಲ. ಗೃಹ ಸಚಿವರು ಈ ಬಗ್ಗೆ ಉತ್ತರ ನೀಡಬೇಕು.

ಮಾಜಿ ಸಚಿವ ರಾಜಣ್ಣ ಮಾಟ ಮಂತ್ರದ ಬಗ್ಗೆ ಹೇಳಿರುವುದರಲ್ಲಿ ಅರ್ಥವಿದೆ. ಈಗ ಸಿಎಂ ಸಿದ್ದರಾಮಯ್ಯ ಮಾಟ ಮಂತ್ರ ತೆಗೆದುಹಾಕಲು ತಯಾರಿ ಮಾಡಬೇಕಿದೆ ಎಂದರು.

ಖರ್ಗೆ ವ್ಯಕ್ತಿತ್ವಕ್ಕೆ ಧಕ್ಕೆ: ನಿಖಿಲ್ ಕುಮಾರಸ್ವಾಮಿ



ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರಿದ್ದಾರೆ. ಈ ಹೇಳಿಕೆ ಅವರಿಗೆ ಶೋಭೆ ತರುವುದಿಲ್ಲ. ಇಂಥಹ ಹೇಳಿಕೆ ಅವರ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆ ಎಂದು ನಿಖಿಲ್ ಹೇಳಿದರು. ಮೋದಿ ಟೆರರಿಸ್ಟ್ ಎಂದು ಖರ್ಗೆ ಹೇಳಿಕೆ ವಿಚಾರಕ್ಕೆ ನಗರದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ರಾಜಕೀಯದಲ್ಲಿ ಹಿರಿಯರು. ಸಂಸ್ಕಾರದಿಂದ, ಸಂಯಮದಿಂದ ವರ್ತನೆ ಮಾಡಬೇಕು. ಇವರು ಯುವಕರಿಗೆ ದಾರಿದೀಪ ಆಗಬೇಕು, ಆದರೆ ವೈಯಕ್ತಿಕ ಹೇಳಿಕೆ, ನಿಂದನೆ ಮಾಡಿದ್ದಾರೆ ಎಂದು ನಿಖಿಲ್ ಕಿಡಿಕಾರಿದರು.

ನಟಿ ರನ್ಯಾ ರಾವ್‌ಗೆ ಜಾಮೀನು

ಬೆಂಗಳೂರು: ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಅವರಿಗೆ ಸುಮಾರು ಒಂದು ವರ್ಷದ ಸುದೀರ್ಘ ಸೆರೆವಾಸದ ಬಳಿಕ ಅಂತಿಮವಾಗಿ ಬಿಡುಗಡೆ ಭಾಗ್ಯ ಸಿಕ್ಕಿದೆ. ಕೋಟಿಗಟ್ಟಲೆ ಮೌಲ್ಯದ ಚಿನ್ನದಕಳ್ಳಸಾಗಣೆಆರೋಪದಮೇಲೆ ಬಂಧನಕ್ಕೊಳಗಾಗಿದ್ದ ನಟಿಗೆ ಆರ್ಥಿಕ ಅಪರಾಧಗಳ ತಡೆನ್ಯಾಯಾಲಯವು ಬುಧವಾರ ಜಾಮೀನು ಮಂಜೂರು ಮಾಡಿದೆ.



ಕಾಫಿಪೋಸಾ ಅಡಿಯಲ್ಲಿ ಒಂದು ವರ್ಷದ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಹಾಗೂ ಆರ್ಥಿಕ ಅಪರಾಧಗಳ ನ್ಯಾಯಾಲಯವು ಜಾಮೀನು ನೀಡಿದ ಕಾರಣ, ರನ್ಯಾ ರಾವ್ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಅಮಾನತುಗೊಂಡಿರುವ ಹಿರಿಯ ಐಪಿಎಸ್ ಅಧಿಕಾರಿ ರಾಮಚಂದ್ರರಾವ್ ಅವರ ಮಲಮಗಳಾಗಿರುವ ರನ್ಯಾ ರಾವ್, ದುಬೈನಿಂದ ಆಫ್ರಿಕಾವರೆಗೆ ಹರಡಿದ್ದ ದೊಡ್ಡ ಮಟ್ಟದ ಚಿನ್ನದ ದಂಧೆ ಯಲ್ಲಿ ಭಾಗಿಯಾಗಿದ್ದರು ಎಂಬ ಆರೋಪ ಎದುರಿಸು ತ್ತಿದ್ದಾರೆ. ಸದ್ಯ ಒಂದು ವರ್ಷದ ಜೈಲು ವಾಸದ ನಂತರ ರನ್ಯಾ ಬುಧವಾರ ಮನೆಗೆ ಮರಳಲಿದ್ದಾರೆ.

ಆರಂಭದಲ್ಲಿ ರನ್ಯಾ ರಾವ್ ಅವರಿಗೆ ನ್ಯಾಯಾಲಯದಿಂದ ಜಾಮೀನು ದೊರೆತಿತ್ತಾದರೂ, ಕೇಂದ್ರ ಆರ್ಥಿಕ ಗುಪ್ತಚರ ಬ್ಯೂರೋ ಇವರ ವಿರುದ್ಧ ಕಾಫಿಪೋಸಾ (ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆ) ಅಡಿಯಲ್ಲಿ ಬಂಧನ ಆದೇಶ ಹೊರಡಿಸಿತ್ತು.

ಪ್ರಕರಣದ ಹಿನ್ನೆಲೆ

ಸಿನಿಮಾ ರಂಗದಿಂದ ಅಂತರ ಕಾಯ್ದುಕೊಂಡು ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ ರನ್ಯಾ ರಾವ್, ಆಗಾಗ ವ್ಯವಹಾರದ ನಿಮಿತ್ತ ದುಬೈಗೆ ಭೇಟಿ ನೀಡುತ್ತಿದ್ದರು. ಇವರ ಈ ಸಂಶಯಾಸ್ಪದ ಓಡಾಟದ ಮೇಲೆ ಕಣ್ಣಿಟ್ಟಿದ್ದ ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, 2025ರ ಮಾ.3ರಂದು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಾಳಿ ನಡೆಸಿದ್ದರು. ಈ ವೇಳೆ ಸುಮಾರು 14.213 ಕೆ.ಜಿ. ಚಿನ್ನ ಪತ್ತೆಯಾಗಿತ್ತು. ತನಿಖೆ ಮುಂದುವರಿದಂತೆ ಸುಮಾರು 102 ಕೋಟಿ ರೂ.ಗೂ ಅಧಿಕ ಮೌಲ್ಯದ ಚಿನ್ನವನ್ನು ಕಳ್ಳಸಾಗಣೆ ಮಾಡಿರುವ ಆಘಾತಕಾರಿ ಅಂಶಗಳು ಬೆಳಕಿಗೆ ಬಂದಿದ್ದವು. ಈ ಹಿನ್ನೆಲೆಯಲ್ಲಿ ಅಂದೇ ಅವರನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದರು.

40ರಿಂದ 42.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲು | ಆರೋಗ್ಯದ ಮೇಲೆ ಪರಿಣಾಮದ ಆತಂಕ

ಬಿಸಿಲಿನ ಹೊಡೆತಕ್ಕೆ ಬಳ್ಳಾರಿ ಜನ ಹೈರಾಣ

ವೆಂಕಟೇಶ ದೇಸಾಯಿ

ಬಳ್ಳಾರಿ: ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಸೂರ್ಯನ ಶಾಖ ಹೆಚ್ಚಾಗುತ್ತಿದ್ದು, ಜನರು ಪರದಾಡುವ ಸ್ಥಿತಿ ಎದುರಾಗಿದೆ. ಬೇಸಿಗೆ ಬಿಸಿಲಿನ ತಾಪಮಾನ ಪ್ರಸಕ್ತ ವರ್ಷ ದಾಖಲೆಯತ್ತ ಏರಿಕೆಯಾಗಿದ್ದು, ಕಳೆದೊಂದು ವಾರದಲ್ಲಿ 40ರಿಂದ 42.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಬಿಸಿಗಾಳಿಯಿಂದ ಮಕ್ಕಳು, ವಯೋವೃದ್ಧರು, ಹಲವು ರೋಗಗಳಿಂದ ಬಳಲುವ ಸ್ಥಿತಿ ಎದುರಾಗಿದ್ದು, ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುವ ಆತಂಕ ಸೃಷ್ಟಿಸಿದೆ. ಕಳೆದ ಮಾರ್ಚ್‌ನಿಂದ ಇಲ್ಲಿವರೆಗೆ ಏರಿಕೆಯಾಗುತ್ತಿರುವ ಬಿಸಿಲಿನ ತಾಪಮಾನ ದಾಖಲೆಯತ್ತ ಹೆಜ್ಜೆ ಹಾಕುತ್ತಿದ್ದು, ರಾಜ್ಯದಲ್ಲಿ ಗರಿಷ್ಠ ತಾಪಮಾನ ವಿರುವ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆ ಕೂಡ ಅಗ್ರಸ್ಥಾನದಲ್ಲಿದೆ.

ಕುಡಿಯುವ ನೀರಿಗೆ ಹಾಹಾಕಾರ: ನಗರದಲ್ಲಿ ತುಂಗಭದ್ರಾ ಕಾಲುವೆ ಹರಿದಿದ್ದರೂ ಜನರಿಗೆ ನೀರಿನ ಬವಣೆ ತಪ್ಪಿಲ್ಲ. ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ನೀರಿನ ಸಮಸ್ಯೆ ತಲೆದೋರಿದ್ದು, ಕಳೆದ ತಿಂಗಳಿಂದ 10 ರಿಂದ 15 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಜನರು ಬಿಸಿಲನ್ನೂ ಲೆಕ್ಕಿಸದೇ ಖಾಲಿ ಕೊಡ ಹಿಡಿದು, ಸರದಿಯಲ್ಲಿ ನಿಲ್ಲುವಂತಾಗಿದೆ. ಗ್ರಾಮೀಣ ಭಾಗಗಳಲ್ಲಿ ನೀರಿನ ಸಮಸ್ಯೆ ಬಿಗಡಾಯಿಸಿದ್ದು, ಸಮರ್ಪಕ ನೀರು ಸರಬರಾಜು ಮಾಡುವಲ್ಲಿ ಗ್ರಾಮೀಣ ಕುಡಿವ ನೀರು ಸರಬರಾಜು ಇಲಾಖೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ.



ಆರೋಗ್ಯ ಇಲಾಖೆಯಿಂದ ಸಿದ್ಧತೆ: ಗಣಿ ಜಿಲ್ಲೆಯಲ್ಲಿ ಬಿಸಿಲು ಹೆಚ್ಚಾಗಿದ್ದು, ಜಿಲ್ಲಾಡಳಿತ, ಆರೋಗ್ಯ ಇಲಾಖೆ ನಾನಾ ಅಗತ್ಯ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಬಿಸಿಲಿನಿಂದ ಜನರ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳಿಗೆ ಅಗತ್ಯ ಚಿಕಿತ್ಸಾ ಕ್ರಮ, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಜಿಲ್ಲೆ ಎಲ್ಲ ವೈದ್ಯರಿಗೆ ತರಬೇತಿ ನೀಡಲಾಗಿದೆ. ಸನ್ ಸ್ಟ್ರೋಕ್ ಉಂಟಾದಲ್ಲಿ ಕೂಡಲೇ ಚಿಕಿತ್ಸೆ ಕಲ್ಪಿಸಲು ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಬೆಡ್‌ಗಳನ್ನು ಮೀಸಲಿರಿಸಲಾಗಿದೆ.

> ಗಣಿ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ಜನರು ಮೇ 15ರ ವರೆಗೆ ಆದಷ್ಟು ಅನಗತ್ಯವಾಗಿ ಹೊರಗಡೆ ಬರುವುದನ್ನು ತಪ್ಪಿಸಬೇಕು. ತೀರ ಅಗತ್ಯವಿದ್ದಲ್ಲಿ ಬೆಳಗ್ಗೆ 6ರಿಂದ 11ರ ವರೆಗೆ ಮಾತ್ರ ಸಂಚರಿಸಬೇಕು.
>
> ■ ಡಾ.ರಮೇಶ್ ಬಾಬು, ಡಿಎಚ್‌ಒ

ವೈದ್ಯರ ಸಲಹೆಗಳು: ಬೇಸಿಗೆವೇಳೆ ಅಗತ್ಯ ಬಿದ್ದಾಗ ಮಾತ್ರ ಮನೆಯಿಂದ ಹೊರಬರಬೇಕು. ಅನಗತ್ಯ ತಿರುಗಾಟ ಕಡಿಮೆ ಮಾಡಬೇಕು. ಬಿಸಿಲಿನಲ್ಲಿ ಹೊರಗೆ ಹೋಗಬೇಕಾದ ಅನಿವಾರ್ಯತೆ ಇದ್ದಲ್ಲಿ ಛತ್ರಿ ಬಳಸಬೇಕು. ಮನೆಯಲ್ಲಿ ಅದಷ್ಟು ಫ್ಯಾನ್ ಬಳಸೇಕು.

ಬಿಸಿಲಿನ ಹೊಡೆತಕ್ಕೆ ವಾಂತಿ ಭೇದಿ, ಹೊಟ್ಟೆನೋವು | ರಸ್ತೆಗಿಳಿಯಲು ಹೆದರುತ್ತಿರುವ ಜನ

ಸನ್‌ಸ್ಟ್ರೋಕ್ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ಪ್ರತ್ಯೇಕ ಬೆಡ್

ಜಗದೀಶ ಎಂ.ಗಾಣಿಗೇರ

ಬಾಗಲಕೋಟೆ: ದಿನದಿಂದ ದಿನಕ್ಕೆ ಬಿಸಲಿನ ತಾಪಮಾನ ಹೆಚ್ಚಾಗುತ್ತಿದೆ. ಜಿಲ್ಲೆಯಲ್ಲಿ ಅತಿಯಾದ ರಣಬಿಸಿಲು ಕಾಣಿಸಿಕೊಳ್ಳುತ್ತಿರುವುದರಿಂದ ಕೆಲವರಲ್ಲಿ ವಾಂತಿ ಭೇದಿ, ಹೊಟ್ಟೆ ನೋವು ಶುರುವಾಗಿದೆ.

ಬಿಸಿಲಿಗೆ ಜನರ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದು, ಆರೈಕೆಗಾಗಿ ಜಿಲ್ಲಾಸ್ಪತ್ರೆಯಲ್ಲಿ ಪ್ರತ್ಯೇಕ ಬೆಡ್ ಕೂಡ ಮಾಡಿಕೊಳ್ಳಲಾಗಿದೆ.

ಬಾಗಲಕೋಟೆ ನಗರದಲ್ಲಿ ಬುಧವಾರ ಬೆಳಗ್ಗೆ 11 ಗಂಟೆ ವೇಳೆಗೆ 35ರಿಂದ 36 ತಾಪಮಾನಇದ್ದರೆಮ.12ರಿಂದ3 ಗಂಟೆಯೊಳಗೆ38ರಿಂದ 39ವರೆಗೆ ಬಿಸಿಲಿನ ಪ್ರಮಾಣ ಏರಿಕೆಯಾಗಿತ್ತು. ರಣಬಿಸಿಲಿಗೆ ಜನ ಕೂಡ ತತ್ತರಗೊಂಡಿದ್ದಾರೆ. ಬಿಸಿಲಿನಲ್ಲಿ ಜನ ರಸ್ತೆಗೆ ಇಳಿಯಲು ಕೂಡ ಹೆದರುವಂತಾಗಿದೆ ಅಷ್ಟೊಂದು ಬಿಸಿಲು ಇದೆ.

ಪ್ರತ್ಯೇಕ ಬೆಡ್ ವ್ಯವಸ್ಥೆ: ದಿನದಿಂದ ದಿನಕ್ಕೆ ಬಿಸಿಲಿನ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಮಕ್ಕಳು, ವಯೋವೃದ್ಧರಲ್ಲಿ ವಾಂತಿ ಭೇದಿ ಶುರುವಾಗಿದೆ. ಇನ್ನೂ ಯುವಕರಲ್ಲಿಯೂ ಕೂಡ ಬಿಸಿಲಿಗೆ ವಾಂತಿ ಭೇದಿ ಆಗುತ್ತಿದೆ.



ಸನ್‌ಸ್ಟ್ರೋಕ್ ಚಿಕಿತ್ಸೆ ಕೊಠಡಿ: ಹೆಚ್ಚು ಬಿಸಿಲಿನ ತಾಪಮಾನಕ್ಕೆ ಜನರ ಆರೋಗ್ಯದಲ್ಲಿ ಸಮಸ್ಯೆ ಉಂಟಾಗುತ್ತಿದ್ದು, ಇದನ್ನು ಮನಗಂಡು ಜಿಲ್ಲಾ ಆಡಳಿತ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಸನ್‌ಸ್ಟ್ರೋಕ್ ಚಿಕಿತ್ಸೆ ಕೊಠಡಿಯಲ್ಲಿ ಓರ್ವ ವೈದ್ಯ, ಇಬ್ಬರು ಸ್ಟಾಫ್ ನರ್ಸ್, 2ಡಿ ದರ್ಜೆಯ ನೌಕರನ್ನು ನಿಯೋಜಿಸಲಾಗಿದೆ. ಈ ಕೊಠಡಿಯಲ್ಲಿ ಬರುವ ರೋಗಿಗಳ ಕಾಳಜಿಯನ್ನು ವೈದ್ಯರು ತೆಗೆದುಕೊಳ್ಳುತ್ತಿದ್ದಾರೆ. ಆಸ್ಪತ್ರೆಗೆ ಬರುವ ರೋಗಿಗಳ ಸ್ಪೇಷಲ್ ವಾರ್ಡ್‌ನಲ್ಲಿ ಫ್ಯಾನ್, ವೆಂಟಿಲೇಟರ್, ನೀರಿನ ವ್ಯವಸ್ಥೆ ಕೂಡ ಮಾಡಿದ್ದಾರೆ. ಜಿಲ್ಲಾಡಳಿತ, ಜಿಲ್ಲಾ ಆಸ್ಪತ್ರೆ ಸಹಯೋಗದೊಂದಿಗೆ ಪ್ರತ್ಯೇಕ ಸನ್ ಸ್ಟ್ರೋಕ್ ವಾರ್ಡ್ ಮಾಡಿದ್ದರಿಂದ ಆಸ್ಪತ್ರೆಗೆ ಬರುವ ಜನರಿಗೆ ತಕ್ಷಣಕ್ಕೆ ಸೂಕ್ತ ಚಿಕಿತ್ಸೆ ದೊರೆಯುವಂತಾಗಿದೆ.

ತಾಪಮಾನ ಹೆಚ್ಚಾಗುತ್ತಿರುವ ಪರಿಣಾಮದಿಂದ ಮನುಷ್ಯನ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುತ್ತಿದೆ. ಲವಣಾಂಶ ಕೂಡ ಕಡಿಮೆಯಾಗುತ್ತಿದ್ದು, ವಾಂತಿ ಭೇದಿ, ಹೊಟ್ಟೆ ನೋವು ಜಾಸ್ತಿಯಾಗಿಲಿದೆ. ಜನ ಮುಂಜಾಗ್ರತೆ ಕ್ರಮವಾಗಿ ಆಗಾಗ ಮನೆಯಲ್ಲಿ ತಂಪು ಪಾನೀಯಗಳನ್ನು ಮಾಡಿಕೊಂಡು ಸೇವಿಸಬೇಕು. ಆಗಾಗ ನೀರು ಕುಡಿಯ ಬೇಕು. ಹಣ್ಣುಗಳನ್ನು ಸೇವಿಸಬೇಕು. ಹೊರಗಡೆ ಹೋಗುವಾಗ ಛತ್ರಿ, ಕನ್ನಡಕ, ತೆಳುವಾದ ಬಟ್ಟೆ ಗಳನ್ನು ಹಾಕಿಕೊಂಡು ಹೋಗಬೇಕೆಂದು ಸಲಹೆಗಳನ್ನು ಜನ ಪಾಲಿಸಬೇಕಾಗಿದೆ.

> ಬಿಸಿಲು ಹೆಚ್ಚಾಗಿದ್ದರಿಂದ ದೇಹದಲ್ಲಿ ನೀರಿನಾಂಶ ಕಡಿಮೆಯಾಗುತ್ತದೆ. ಆಗಾಗ ನೀರು ಕುಡಿಯಬೇಕು. ಲವಣಾಂಶ ಕಡಿಮೆಯಾಗಿ ಹೀಟ್ ಸ್ಟ್ರೋಕ್ ಜಾಸ್ತಿಯಾಗಲಿದೆ. ಬಿಸಿಲು ಹೆಚ್ಚಾಗಿದ್ದರಿಂದ ಆಸ್ಪತ್ರೆಗೆ ವಾಂತಿ ಭೇದಿ, ಹೊಟ್ಟೆ ನೋವು ಇರುವವರು ಜಾಸ್ತಿ ಬರುತ್ತಿದ್ದು, ಜಿಲ್ಲಾಸ್ಪತ್ರೆಯಲ್ಲಿ ಮಹಿಳೆಯರಿಗೆ, ಪುರುಷರಿಗೆ ಪ್ರತ್ಯೇಕ 10 ಬೆಡ್ ವ್ಯವಸ್ಥೆ ಕೂಡ ಮಾಡಲಾಗಿದೆ.
>
> ■ ಡಾ.ವಿಕಾಸ್ ಪರ್ವತೀಕರ, ಜಿಲ್ಲಾಸ್ಪತ್ರೆ ವೈದ್ಯ

ಸಂಪಾದಕೀಯ

ಪದಬಳಕೆ ಮತ್ತು ರಾಜಕಾರಣದ ಸಭ್ಯತೆ

ಹಿರಿಯ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಮೋದಿವರನ್ನು ಭಯೋತ್ಪಾದಕ ಎಂದು ಟೀಕಿಸಿದ ಪ್ರಕರಣಕ್ಕೆ ದೇಶಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದ್ದಂತೆ, ಖರ್ಗೆಯವರು ನಾನು ಹಾಗೆ ಹೇಳಿಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ. ಅವರು ಹಾಗೆ ಹೇಳದಿದ್ದರೆ ಅದು ವ್ಯಾಪಕವಾಗಿ ಹರಡಿದ್ದಾದರೂ ಹೇಗೆ ಎಂಬುದು ಮುಖ್ಯಪ್ರಶ್ನೆ. ಮನಸ್ಸಿನ ಸ್ಥಿಮಿತತೆ ಕಳೆದುಕೊಂಡು ಮಾತಾಡಿದ ನಂತರ ನಾನು ಆಡಿಯೇ ಇಲ್ಲ, ಆ ಅರ್ಥದಲ್ಲಿ ಹೇಳಿಲ್ಲ ಎಂದು ಸಮಜಾಯಿಷಿಗಳನ್ನು ನೀಡುವುದು ರಾಜಕಾರಣಿಗಳ ಚಾಯಮಾನ! ಖರ್ಗೆಯಂಥ ಮಹಾ ನಾಯಕರ ಬಾಯಿಂದ ಅಂತಹ ಮಾತು ಬಂತೆಂದು ಸುಖಾಸುಮ್ಮನೆ ಸುದ್ದಿಯಾಗುವುದಿಲ್ಲ. ಅಲ್ಲದೆ ತೆಲಂಗಾಣದ ಕಾಂಗ್ರೆಸ್ ಮುಖ್ಯಮಂತ್ರಿ ರೇವಂತ ರೆಡ್ಡಿಯಂಥ ಬುದ್ಧಿವಂತರು ಕೂಡ ಮೋದಿಯವರನ್ನು ಮಾರೀಚನಿಗೆ ಹೋಲಿಸಿದ್ದಾರೆ. ಉಳಿದ ಸಂದರ್ಭಗಳಲ್ಲಿ ರಾಜಕಾರಣಿಗಳ ಬಾಯಿಂದ ಇಂಥ ಪುರಾಣಪಾತ್ರಗಳೇಕೆ ಉದುರುವುದಿಲ್ಲ ಎಂಬುದನ್ನು ಗಮನಿಸಿದರೆ ಅವರ ಮನಸ್ಸು ಮತ್ತು ಬುದ್ಧಿ ಎಲ್ಲಿಗೆ ಸೀಮಿತವಾಗುತ್ತಿದೆ ಎಂಬುದರ ಅಂದಾಜು ಸಿಗುತ್ತದೆ. ಅದೂ ಎಂತೆಂಥಾ ನಾಯಕರ ಬಾಯಿಂದ ಇಂಥ ಮಾತುಗಳು ಹೊರಬರುತ್ತಿವೆ ಎಂಬುದು ಕೂಡ ಇಲ್ಲಿ ಮುಖ್ಯ.

ಮಲ್ಲಿಕಾರ್ಜುನ ಖರ್ಗೆಯವರ ಅನುಭವ-ಮುತ್ಸದ್ದಿತನಗಳಿಂದ ಅವರು ಕೇವಲ ಕಾಂಗ್ರೆಸಿನ ಸ್ವತ್ತು ಮಾತ್ರ ಅಲ್ಲ, ಅವರು ದಮನಿತ ವರ್ಗದಿಂದ ಮೇಲೆ ಬಂದವರು. ಭಾರತದ ಸಂವಿಧಾನ ಎಷ್ಟು ಪ್ರಬಲ ಎಂಬುದಕ್ಕೆ ನಿದರ್ಶನದಂತಿರುವವರು. ಇಂದು ದೇಶದ ರಾಜಕಾರಣಿಗಳ ಪೈಕಿ ಬೆಂಕಿಯಿಂದ ಅರಳಿದವರು ಯಾರೆಂದು ಹುಡುಕಿದರೆ ಮೊದಲ ಸಾಲಿನಲ್ಲಿ ಖರ್ಗೆಯವರದ್ದೇ ಹೆಸರು ಬರುತ್ತದೆ. ಅಂಥ ನಾಯಕರು ತಮ್ಮ ಪ್ರಬುದ್ಧತೆಯಿಂದಲೇ ಪಕ್ಷದಲ್ಲಿ ಮೇಲೇರಿದವರು ಮತ್ತು ಉನ್ನತ ಸ್ಥಾನಗಳನ್ನು ಪಡೆದವರು. ಕೆಲಸಮಯದ ಹಿಂದೆ ಖರ್ಗೆಯವರು ಇದೇ ರೀತಿ ವಿಷಸರ್ಪ ಎಂದು ಮೋದಿವರನ್ನು ಟೀಕಿಸಿದ್ದರು. ಹಿಂದೆಲ್ಲಾ ರಾಜಕಾರಣಿಗಳ ಟೀಕೆಗಳು ಆರೋಗ್ಯಪೂರ್ಣವಾಗಿರುತ್ತಿದ್ದವು ಎಂಬ ಸಂಗತಿಗಳನ್ನೂ ಕೇಳಿದ್ದೇವೆ. ಆಶ್ಚರ್ಯವೆಂದರೆ ಆ ಕಾಲದಲ್ಲೂ ಮಲ್ಲಿಕಾರ್ಜುನ ಖರ್ಗೆಯವರು ಸಕ್ರೀಯ ರಾಜಕಾರಣದಲ್ಲಿದ್ದರು. ಅಂದರೆ ಹಿಂದೆ ಹೀಗೆಲ್ಲಾ ಹೇಳಿಕೆಗಳನ್ನು ನೀಡದಿದ್ದವರು ಈಗ ಅಸಭ್ಯ ಭಾಷೆಗಳನ್ನು ಏಕೆ ಬಳಸುತ್ತಿದ್ದಾರೆ? ಈ ಬದಲಾವಣೆ ಅವರಲ್ಲಿ ಯಾಕಾಯಿತು? ಸತತವಾಗಿ ಸೋಲುತ್ತಾ ಬರುತ್ತಿರುವ ಕಾಂಗ್ರೆಸ್ ಒಂದೆಡೆಯಾದರೆ ಪಕ್ಷದಲ್ಲಿ ಕಾಣದ ಶಿಸ್ತು ಮತ್ತು ಅಧಿಕಾರ ಕಳೆದುಕೊಂಡ ಹತಾಶೆಯಿಂದ ಇಂಥ ಪದಪ್ರಯೋಗಗಳು ಬರುತ್ತಿವೆಯೇ? ಅದರಲ್ಲೂ ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಕಾಂಗ್ರೆಸ್ ನೆಲಕಚ್ಚಿರುವುದರ ಅಸಹಾಯಕತೆ ಇಂಥ ಮಾತುಗಳಿಗೆ ಕಾರಣವಾಗುತ್ತಿದೆಯಾ ತಿಳಿಯುತ್ತಿಲ್ಲ. ಆದರೆ ದೇಶದ ಪ್ರಜ್ಞಾವಂತ ತಮ್ಮ ಪ್ರಧಾನಮಂತ್ರಿಯವರನ್ನು ಹೀಗೆ ಕರೆಯುವುದನ್ನಂತೂ ಸಹಿಸುವುದಿಲ್ಲ. ಇದು ಕಾಂಗ್ರೆಸಿಗೂ ಹಿನ್ನಡೆ ಯಾಗುವುದರ ಜೊತೆಗೆ ಖರ್ಗೆಯವರ ವ್ಯಕ್ತಿತ್ವವನ್ನೂ ಕುಗ್ಗಿಸುತ್ತದೆ. ರಾಜಕಾರಣದ ಉನ್ನತ ಸ್ಥಾನದಲ್ಲಿರುವವರು ಹಿಡಿತ ತಪ್ಪದಂತೆ ಪದಗಳನ್ನು ಬಳಸಬೇಕಿದೆ. ಪದಬಳಕೆ ಅವರ ವ್ಯಕ್ತಿತ್ವದ ಪ್ರತಿಬಿಂಬ ಎನ್ನುವುದು ಹಿಂದೆಂದಿ ಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿರುವ ಮಾತು. ಈ ಪರಿಸ್ಥಿತಿಯಲ್ಲಿ ಖರ್ಗೆಯವರು ತಾನು ಆ ಪದ ಬಳಸಬಾರದಿತ್ತು ಎಂದಿದ್ದರೆ ಅವರ ವ್ಯಕ್ತಿತ್ವ ಇನ್ನಷ್ಟು ಹೆಚ್ಚುತ್ತಿತ್ತು.

ಹಳಿಗಳ ಆಧುನೀಕರಣ; ಪ್ರಯಾಣ ಮತ್ತಷ್ಟು ಸುಗಮ

ಅಶ್ವಿನಿ ವೈಷ್ಣವ್, ಕೇಂದ್ರ ರೈಲ್ವೆ, ವಾರ್ತಾ ಮತ್ತು ಪ್ರಸಾರ ಹಾಗೂ ಎಲೆಕ್ಟ್ರಾನಿಕ್ಸ್-ಮಾಹಿತಿ ತಂತ್ರಜ್ಞಾನ ಸಚಿವರು



ಭಾರತಾದ್ಯಂತ ಪ್ರತಿದಿನ 25,000ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತವೆ. ಇವು ಪ್ರತಿನಿತ್ಯ 2 ಕೋಟಿಗೂ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತವೆ ಮತ್ತು 1,37,000 ಕಿಲೋಮೀಟರ್‌ಗಳಿಗಿಂತಲೂ ಹೆಚ್ಚು ವ್ಯಾಪಿಸಿರುವ ಹಳಿ ಜಾಲದ ಮೂಲಕ ಕಲ್ಲಿದ್ದಲು, ಕಬ್ಬಿಣದ ಅದಿರು, ಧಾನ್ಯಗಳು, ಉಕ್ಕು, ಸಿಮೆಂಟ್ ಮತ್ತು ಇತರ ಸರಕುಗಳನ್ನು ಸಾಗಿಸುತ್ತವೆ.

ಈ ಸಂಪೂರ್ಣ ವ್ಯವಸ್ಥೆಯು ಕಾರ್ಯನಿರ್ವಹಿಸುವ ಅಡಿಪಾಯವೇ ರೈಲು ಹಳಿ. ಹಳಿಗಳು ಸುಸ್ಥಿತಿಯಲ್ಲಿದ್ದಾಗ ರೈಲುಗಳು ಹೆಚ್ಚಿನ ವೇಗದಲ್ಲಿ ಸುರಕ್ಷಿತವಾಗಿ ಚಲಿಸುತ್ತವೆ. ಹಳಿಗಳು ಸರಿಯಾಗಿಲ್ಲದಿದ್ದರೆ ವೇಗದ ಮಿತಿ ಮತ್ತು ವಿಳಂಬದಿಂದ ಹಿಡಿದು ಸುರಕ್ಷತೆಯ ಅಪಾಯಗಳವರೆಗೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಹಳಿಯಲ್ಲಿನ ಬಿರುಕು, ಸಡಿಲವಾದ ಫಿಟ್ಟಿಂಗ್ ಅಥವಾ ಜಲ್ಲಿ ಹಾಸುಗಳ ಅಡಚಣೆಗಳು ರೈಲಿನ ಚಲನೆಯ ಮೇಲೆ ಪರಿಣಾಮ ಬೀರಬಹುದು. ಹಳಿಗಳ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ರೈಲ್ವೆಯು ಒಂದು ದಶಕದ ಹಿಂದೆ ವ್ಯಾಪಕವಾದ ಆಧುನೀಕರಣ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಕೆಲಸವು ಆಧುನಿಕ ಯಂತ್ರಗಳನ್ನು ಬಳಸಿ ಹಳಿಗಳ ನವೀಕರಣ, ಸುಧಾರಿತ ವಿಧಾನಗಳ ಮೂಲಕ ಪರೀಕ್ಷೆ ಮತ್ತು ತಪಾಸಣೆ, ಯಾಂತ್ರೀಕೃತ ನಿರ್ವಹಣೆ ಹಾಗೂ ಸುರಕ್ಷತಾ ಬೇಲಿಗಳನ್ನು ಅಳವಡಿಸುವುದು ಸೇರಿದಂತೆ ಹಲವು ಕಾರ್ಯಗಳನ್ನು ಒಳಗೊಂಡಿದೆ. ಒಟ್ಟಾರೆಯಾಗಿ ಈ ಪ್ರಯತ್ನಗಳು ರೈಲ್ವೆಜಾಲದ ಸ್ಥಿತಿಯನ್ನು ಗಮನಾರ್ಹವಾಗಿ ಬದಲಾಯಿಸಿವೆ.

2014ರಿಂದ ಇದುವರೆಗೆ ಸುಮಾರು 55,000 ಕಿ.ಮೀ ಹಳಿಗಳನ್ನು ನವೀಕರಿಸಲಾಗಿದೆ. ಇದು ಸುರಕ್ಷತೆ ಮತ್ತು ಪ್ರಯಾಣದ ಗುಣಮಟ್ಟವನ್ನು ಸುಧಾರಿಸಿದೆ ಹಾಗೂ ಪದೇಪದೇ ದುರಸ್ತಿ ಮಾಡುವ ಅಗತ್ಯವನ್ನು ಕಡಿಮೆ ಮಾಡಿದೆ. ಸುಮಾರು 44,000 ಕಿ.ಮೀ ಉದ್ದದ ರೈಲ್ವೆಹಳಿಗಳಿಗೆ ತಲಾ 260 ಮೀಟರ್ ಉದ್ದದ 'ಲಾಂಗ್ ರೈಲ್ಪ್ಯಾನಲ್' ಗಳನ್ನು ಅಳವಡಿಸಲಾಗಿದೆ. ಉದ್ದನೆಯ ಪ್ಯಾನಲ್‌ಗಳೆಂದರೆ ಹಳಿಗಳ ನಡುವೆ ಕಡಿಮೆ ಜೋಡಣೆಗಳು ಇರುತ್ತವೆ ಎಂದರ್ಥ. ಇದು ರೈಲು ಸುಗಮವಾಗಿ ಮತ್ತು ಸುರಕ್ಷಿತವಾಗಿ ಚಲಿಸಲು ಸಹಾಯ ಮಾಡುತ್ತದೆ. ಪ್ರಸ್ತುತ 80,000 ಕಿ.ಮೀಗಿಂತಲೂ ಹೆಚ್ಚು ಹಳಿಗಳಲ್ಲಿ ಬಲವಾದ 60 ಕೆಜಿ ತೂಕದ ಹಳಿಗಳನ್ನು ಬಳಸಲಾಗುತ್ತಿದೆ. ಇದು ಹೆಚ್ಚಿನ ಭಾರ ಮತ್ತು ವೇಗವನ್ನು ತಡೆದುಕೊಳ್ಳಬಲ್ಲದು. ಬಲವಾದ ಹಳಿಗಳನ್ನು ಅಳವಡಿಸುವುದು ಎಷ್ಟು ಮುಖ್ಯವೋ, ಸಮಸ್ಯೆಗಳನ್ನು ಮೊದಲೇ ಪತ್ತೆ ಹಚ್ಚುವುದು ಅಷ್ಟೇ ಮುಖ್ಯ. ಸುಮಾರು 4,50,000 ಕಿ.ಮೀ ಹಳಿಗಳ ಮೇಲೆ ಅಲ್ಟ್ರಾಸಾನಿಕ್ ದೋಷ ಪತ್ತೆ (ಯುಎಸ್‌ಎಫ್‌ಡಿ) ಪರೀಕ್ಷೆಯನ್ನು ನಡೆಸಲಾಗಿದೆ. ಈ ತಂತ್ರಜ್ಞಾನವು ಹಳಿಗಳ ಒಳಗೆ ಕಣ್ಣಿಗೆ ಕಾಣಿಸದ ಬಿರುಕುಗಳನ್ನು ಪತ್ತೆಹಚ್ಚಲು ಸಹಾಯ ಮಾಡುತ್ತದೆ. ಇದರ ಪರಿಣಾಮವಾಗಿ ಹಳಿ ಮತ್ತು ವೆಲ್ಡಿಂಗ್ ವೈಫಲ್ಯಗಳು ಸುಮಾರು ಶೇ.90 ರಷ್ಟು ಕಡಿಮೆಯಾಗಿವೆ. ಇದು ಸಮಸ್ಯೆಗಳು ಸಂಭವಿಸಿದ ನಂತರ ಸರಿಪಡಿಸುವ ಹಳೆಯ ಪದ್ಧತಿಯಿಂದ, ಅವುಗಳನ್ನು ಮೊದಲೇ ತಡೆಗಟ್ಟುವ ಆಧುನಿಕ ಪದ್ಧತಿಯತ್ತ ಆದ ಬದಲಾವಣೆಯಾಗಿದೆ.

ಪ್ರಸ್ತುತ ಬಳಕೆಯಲ್ಲಿರುವ ಇತರ ತಾಂತ್ರಿಕ ವಿಧಾನಗಳಲ್ಲಿ, ಫ್ಲ್ಯಾಶ್-ಬಟ್ ವೆಲ್ಡ್‌ಗಳ ಪರೀಕ್ಷೆಗಾಗಿ 'ಫೇಸ್ಡ್-ಅರೇ' ತಂತ್ರಜ್ಞಾನ, ಹೊಸ ವೆಲ್ಡ್‌ಗಳಿಗಾಗಿ ಮ್ಯಾಗ್ನೆಟಿಕ್-ಪಾರ್ಟಿಕಲ್ ತಪಾಸಣೆ ಮತ್ತು ಜಿಪಿಎಸ್ ಆಧಾರಿತ ಆಸಿಲೇಶನ್ ಮಾನಿಟರಿಂಗ್ ಸಿಸ್ಟಮ್‌ಗಳು (ಒಎಂಎಸ್) ಸೇರಿವೆ. ಇವು ಪ್ರಯಾಣದ ಗುಣಮಟ್ಟವನ್ನು ಅಳೆಯುವುದಲ್ಲದೆ, ರೈಲ್ವೆಹಳಿಗಳಲ್ಲಿನ ದೋಷಪೂರಿತ ಅಥವಾ ಒರಟಾದ ಸ್ಥಳಗಳನ್ನು ನಿಖರವಾಗಿ ಪತ್ತೆಹಚ್ಚುತ್ತವೆ. ರೈಲ್ವೆ ಟ್ರ್ಯಾಕ್ ಯಂತ್ರಗಳ ಸಂಖ್ಯೆಯು 2014 ರಲ್ಲಿ 748 ಇದ್ದದ್ದು 2026ರ ವೇಳೆಗೆ ದುಪ್ಪಟ್ಟಾಗಿದೆ. ಈ ಯಂತ್ರಗಳು ಟ್ಯಾಂಪಿಂಗ್, ಜಲ್ಲಿಹಾಸು ಸ್ವಚ್ಛಗೊಳಿಸುವಿಕೆ ಮತ್ತು ಹಳಿಗಳ ಗ್ರೈಂಡಿಂಗ್ ಕೆಲಸಗಳನ್ನು ಹಸ್ತಚಾಲಿತ ಕೆಲಸಕ್ಕಿಂತ ಹೆಚ್ಚು ವೇಗವಾಗಿ, ಸಮರ್ಪಕವಾಗಿ ಮತ್ತು ಸಮಾನವಾಗಿ ನಿರ್ವಹಿಸುತ್ತವೆ. ಜಲ್ಲಿಹಾಸಿನ 'ಡೀಪ್ ಸ್ಕ್ರೀನಿಂಗ್' ಪ್ರಕ್ರಿಯೆಯಲ್ಲಿ ಈ ಯಂತ್ರಗಳು ಗಮನಾರ್ಹ ಬದಲಾವಣೆ ತಂದಿವೆ. ಜಲ್ಲಿಹಾಸು ನೀರು ಸರಾಗವಾಗಿ ಹರಿಯಲು ಮತ್ತು ಕಂಪನವನ್ನು ಕಡಿಮೆ ಮಾಡುತ್ತದೆ. ಸ್ಥಿರತೆಯನ್ನು ಕಾಪಾಡುತ್ತದೆ. ಕಾಲಕ್ರಮೇಣ, ರೈಲುಗಳ ಸತತ ಸಂಚಾರದ



ತೂಕ ಮತ್ತು ಕಂಪನದಿಂದಾಗಿ ಈ ಜಲ್ಲಿಕಲ್ಲುಗಳು ಪುಡಿಯಾಗಿ ಜಲ್ಲಿಹಾಸನ್ನು ಮುಚ್ಚಿಹಾಕುತ್ತವೆ. ಇದರಿಂದ ಅದರ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. ಸ್ಕ್ರೀನಿಂಗ್ ಪ್ರಕ್ರಿಯೆಯು ಈ ಜಲ್ಲಿಹಾಸನ್ನು ಪುನಃ ಸುಸ್ಥಿತಿಗೆ ತರುತ್ತದೆ. ಈವರೆಗೆ ಸುಮಾರು 1 ಲಕ್ಷಕ್ಕೂ ಅಧಿಕ ಕಿ.ಮೀಗಳಲ್ಲಿ ಈ ಕೆಲಸವನ್ನು ಹೆಚ್ಚಾಗಿ ಯಂತ್ರಗಳ ಮೂಲಕವೇ ನಿರ್ವಹಿಸಲಾಗಿದೆ.

ವರ್ಷದಿಂದ ವರ್ಷಕ್ಕೆ ರೈಲು ಸಂಚಾರ ಹೆಚ್ಚಾಗುತ್ತಿರುವುದರಿಂದ ರೈಲುಗಳ ನಡುವೆ ಸಿಗುವ ನಿರ್ವಹಣಾ ಸಮಯ ಕಡಿಮೆಯಾಗುತ್ತಿದೆ. ರೈಲು ಸಂಚಾರಕ್ಕೆ ಅಡ್ಡಿಯಾಗದಂತೆ ಕಡಿಮೆ ಸಮಯದಲ್ಲಿ ಹೆಚ್ಚಿನ ಕೆಲಸಮಾಡಲು ಈ ಯಂತ್ರಗಳು ಸಹಕಾರಿಯಾಗಿವೆ. ವಿಶೇಷವಾಗಿ ಗಂಟೆಗೆ 110 ಕಿಲೋಮೀಟರ್‌ಗಿಂತ ಹೆಚ್ಚಿನ ವೇಗದಲ್ಲಿ ರೈಲುಗಳು ಸಂಚರಿಸುವ ಸ್ಥಳಗಳಲ್ಲಿ ಸುಮಾರು 17,500 ಕಿಲೋಮೀಟರ್ ಉದ್ದದ ಸುರಕ್ಷತಾ ಬೇಲಿಗಳನ್ನು ಅಳವಡಿಸಲಾಗಿದೆ. ಇದು ಹಳಿಗಳ ಮೇಲೆ ಜನರು ಮತ್ತು ಜಾನುವಾರುಗಳ ಪ್ರವೇಶವನ್ನು ತಡೆಯಲು ಸಹಾಯ ಮಾಡುತ್ತದೆ. ರೈಲು ಹಳಿ ಬದಲಿಸುವ ಪಾಯಿಂಟ್ಸ್ ಮತ್ತು ಕ್ರಾಸಿಂಗ್‌ಗಳಲ್ಲಿ 36,000 'ಥಿಕ್-ವೆಬ್ ಸ್ವಿಚ್' ಗಳನ್ನು ಮತ್ತು 7,500 ವೆಲ್ಡಬಲ್ ಸಿಎಂಎಸ್ ಕ್ರಾಸಿಂಗ್‌ಗಳನ್ನು ಅಳವಡಿಸಲಾಗಿದೆ. ಇವು ದೀರ್ಘಕಾಲ ಬಾಳಿಕೆ ಬರುವುದಲ್ಲದೆ, ರೈಲುಗಳ ಸುಗಮ ಚಲನೆಗೆ ಅನುವು ಮಾಡಿಕೊಡುತ್ತವೆ. 2019ರಲ್ಲಿ ಅಳವಡಿಸಿಕೊಳ್ಳಲಾದ ಹೆಚ್ಚು ಅಗಲವಾದ ಮತ್ತು ತೂಕದ ಸ್ಲೀಪರ್‌ಗಳು ವಿಶೇಷವಾಗಿ ಬೇಸಿಗೆಯ ತೀವ್ರ ಶಾಖದ ಸಮಯದಲ್ಲಿ ಹಳಿಗಳ ಸ್ಥಿರತೆಯನ್ನು ಹೆಚ್ಚಿಸುತ್ತವೆ. ಗರ್ಡರ್ ಸೇತುವೆಗಳ ಮೇಲೆ ಅಳವಡಿಸಲಾದ 'ಹೆಚ್-ಬೀಮ್' ಸ್ಲೀಪರ್ ಗಳು ಮತ್ತು ರೈಲ್ವೆ ಯಾರ್ಡ್‌ಗಳ ಮೂಲಕ ಹಾದುಹೋಗುವ 'ಲಾಂಗ್ ವೆಲ್ಡ್‌ಡ್ರೈಲ್ಸ್' ರೈಲ್ವೆ ಜಾಲವನ್ನು ಮತ್ತಷ್ಟು ಬಲಪಡಿಸಿವೆ. ಗಂಟೆಗೆ 130 ಕಿಲೋಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ವೇಗವನ್ನು ತಡೆದುಕೊಳ್ಳುವ ಹಳಿಗಳ ಪ್ರಮಾಣವು ಶೇ. 6 ರಿಂದ ಸುಮಾರು ಶೇ. 23 ಕ್ಕೆ ಏರಿದೆ. ಗಂಟೆಗೆ 110 ಕಿಲೋಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ವೇಗಕ್ಕೆ ಸೂಕ್ತವಾದ ಹಳಿಗಳ ಪ್ರಮಾಣವು ಸುಮಾರು ಶೇಕಡಾ 40 ರಿಂದ 80ಕ್ಕೆ ಏರಿಕೆಯಾಗಿದೆ. ಇದು ಪ್ರಯಾಣದ ಸಮಯವನ್ನು ಕಡಿಮೆ ಮಾಡಿದೆ. ಸಮಯ ಪಾಲನೆಯನ್ನು ಸುಧಾರಿಸಿದೆ ಮತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ನಂತಹ ಸೆಮಿ-ಹೈಸ್ಪೀಡ್ ರೈಲು ಸೇವೆಗಳನ್ನು ಒದಗಿಸಲು ಸಾಧ್ಯವಾಗಿಸಿದೆ.

ಈ ಎಲ್ಲಾ ಆಧುನೀಕರಣ ಕ್ರಮಗಳ ಒಟ್ಟು ಫಲಿತಾಂಶವು ಸುರಕ್ಷತೆಯನ್ನು ಹೆಚ್ಚಿಸುತ್ತದೆ. ಗಂಭೀರ ರೈಲು ಅಪಘಾತಗಳ ಸಂಖ್ಯೆಯು 2014-15ರಲ್ಲಿ 135 ಇದ್ದದ್ದು 2025-26ರ ವೇಳೆಗೆ 16ಕ್ಕೆ ಇಳಿದಿದೆ. ಅಂದರೆ ಸುಮಾರು ಶೇಕಡಾ 89 ರಷ್ಟು ಇಳಿಕೆ ಕಂಡಿದೆ. ಪ್ರತಿ ಮಿಲಿಯನ್ ರೈಲು ಕಿಲೋಮೀಟರ್‌ಗೆ ಸಂಭವಿಸುವ ಅಪಘಾತದ ದರವು 0.11 ರಿಂದ 0.01 ಕ್ಕೆ ಸುಧಾರಿಸಿದೆ. ಇದು ಶೇ.90ರಷ್ಟು ಸುಧಾರಣೆಯಾಗಿದೆ.

ರೈಲು ಸಂಚಾರ, ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದರೂ ಸಹ ಅಪಘಾತಗಳ ಸಂಖ್ಯೆ ಇಳಿಕೆಯಾಗಿರುವುದು ಗಮನಾರ್ಹ. ವೆಬ್-ಆಧಾರಿತ 'ಟ್ರ್ಯಾಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್' (ಟಿಎಂಎಸ್) ಈಗ ಅಲ್ಟ್ರಾಸಾನಿಕ್ ಪರೀಕ್ಷೆ, ಪ್ರಯಾಣದ ಗುಣಮಟ್ಟದ ರೀಡಿಂಗ್ ಮತ್ತು ಹಳಿಯ ವಿನ್ಯಾಸದ ದತ್ತಾಂಶಗಳನ್ನು ಒಂದೇ ವೇದಿಕೆಯಲ್ಲಿ ಲಭ್ಯವಾಗುವಂತೆ ಮಾಡಿದೆ. ಇದರಿಂದ ಆದ್ಯತೆಗಳನ್ನು ನಿರ್ಧರಿಸಲು ಮತ್ತು ಸಮಯಕ್ಕೆ ಸರಿಯಾಗಿ ಕ್ರಮ ಕೈಗೊಳ್ಳಲು ಸುಲಭವಾಗಿದೆ.

ಹನ್ನೆರಡು ವರ್ಷಗಳ ಹಿಂದೆ ಭಾರತದ ಶೇಕಡಾ 60 ರಷ್ಟು ರೈಲು ಹಳಿಗಳ ವೇಗವು ಗಂಟೆಗೆ 110 ಕಿಲೋಮೀಟರ್ ಗಿಂತ ಕಡಿಮೆ ಇತ್ತು. ಹಳಿಗಳ ಬಿರುಕುಗಳು ಸಾಮಾನ್ಯವಾಗಿದ್ದವು ಮತ್ತು ಹೆಚ್ಚಿನ ನಿರ್ವಹಣಾ ಕೆಲಸಗಳನ್ನು ಕೈಯಿಂದಲೇ ಮಾಡಲಾಗುತ್ತಿತ್ತು. ಇಂದು ಸುಮಾರು ಶೇಕಡಾ 80 ರಷ್ಟು ಜಾಲವು ಗಂಟೆಗೆ 110 ಕಿಲೋಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ವೇಗವನ್ನು ನಿಭಾಯಿಸುತ್ತದೆ. ಹಳಿ ಮತ್ತು ವೆಲ್ಡಿಂಗ್ ವೈಫಲ್ಯಗಳು ಶೇಕಡಾ 90 ರಷ್ಟು ಕಡಿಮೆಯಾಗಿವೆ ಮತ್ತು ಸುಮಾರು 1,800 ಟ್ರ್ಯಾಕ್ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ. ಲಕ್ಷಾಂತರ ಪ್ರಯಾಣಿಕರಿಗೆ ಮತ್ತು ಸರಕು ಸಾಗಣೆಯ ಮೇಲೆ ಅವಲಂಬಿತವಾಗಿರುವ ವ್ಯವಹಾರಗಳಿಗೆ ಈ ಬದಲಾವಣೆಗಳು ನಿಜವಾದ ವ್ಯತ್ಯಾಸವನ್ನು ಉಂಟುಮಾಡುತ್ತಿವೆ. ಸುಗಮ ಪ್ರಯಾಣ, ಕಡಿಮೆ ಸಮಯ ಮತ್ತು ನಂಬಿಕಸ್ತ ರೈಲು ಜಾಲವನ್ನು ಇದು ಒದಗಿಸುತ್ತಿದೆ. ಕೆಲಸವು ಇನ್ನೂ ಪೂರ್ಣಗೊಂಡಿಲ್ಲ, ಆದರೆ ಈವರೆಗಿನ ಪ್ರಗತಿಯು ನಿರಂತರ ಪ್ರಯತ್ನ ಮತ್ತು ಹೂಡಿಕೆಯಿಂದ ಏನನ್ನು ಸಾಧಿಸಬಹುದು ಎಂಬುದನ್ನು ತೋರಿಸಿಕೊಟ್ಟಿದೆ.

ಇರಾನ್‌ನಲ್ಲಿ ಅಮೆರಿಕದ ರಕ್ಷಣಾ ಕಾರ್ಯಾಚರಣೆಯ ಹಿಂದಿನ ನಿಗೂಢತೆ

ಅಶ್ವಿನ್ ಬಿಲ್ವಪತ್ರ

ಕೊಲ್ಲಿ ಸಮರದ ವೇಳೆ ಅಮೆರಿಕದ ಯುದ್ಧ ವಿಮಾನವೊಂದು ಪತನಗೊಂಡುದು, ಇರಾನಿನಲ್ಲಿ ಬಿದ್ದ ಸೈನಿಕನನ್ನು ಬಳಿಕ ಅಮೆರಿಕವು ವಿಶೇಷ ಕಾರ್ಯಾಚರಣೆ ನಡೆಸಿ ಕರೆತಂದುದು ಎಲ್ಲರಿಗೂ ತಿಳಿದಿರುವುದೆ. ವಿಮಾನ ಪತನದ ಕೆಲವು ವಾರಗಳ ಮೊದಲು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ 'ಇರಾನಿನ ಮೇಲೆ ಅಮೆರಿಕವು ಸಂಪೂರ್ಣ ವಾಯು ಪ್ರಾಬಲ್ಯ ಸ್ಥಾಪಿಸಿದೆ' ಎಂದು ಹೇಳಿದ್ದರು. ಇರಾನ್‌ನ ಬಳಿ ವಿಮಾನ ನಿರೋಧಕ ಸಾಧನವೇ ಇಲ್ಲ ಎಂದು ಹೇಳಿದ್ದ ಟ್ರಂಪ್, ಇರಾನಿನ ರಾಡಾರ್‌ಗಳನ್ನು ಸಂಪೂರ್ಣ ನಾಶಪಡಿಸಲಾಗಿದೆ ಎಂದು ಕೊಚ್ಚಿಕೊಂಡಿದ್ದರು. ಅಮೆರಿಕದ ಯುದ್ಧ ವಿಮಾನಗಳಿಗೆ ಇರಾನ್ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿದೆ ಎಂದು ಮಾರ್ಚ್ 24ರಂದು ಟ್ರಂಪ್ ನುಡಿದಿದ್ದರು.

ಆದರೆ ಅವರು ಹಾಗೆ ಹೇಳಿದ 9 ದಿನಗಳ ಬಳಿಕ ಅಂದರೆ ಏ.3ರಂದು ಅಮೆರಿಕದ ಯುದ್ಧವಿಮಾನ 'ಎಫ್-15ಇ'ಯನ್ನು ಇರಾನ್‌ನ ನೈಋತ್ಯ ಭಾಗದಲ್ಲಿ ಹೊಡೆದುರುಳಿಸಲಾಯಿತು. ಇರಾನಿನ ಸೈನಿಕನೊಬ್ಬ ಹೆಗಲ ಮೇಲಿಂದ ಉಡಾಯಿಸುವ ಕ್ಷಿಪಣಿ ಪ್ರಯೋಗಿಸಿ ಅದನ್ನು ಉರುಳಿಸಿದ್ದಾಗಿ ಅಮೆರಿಕವು ಹೇಳಿಕೊಂಡಿತು. ಆದರೆ ತಾವು ಹೊಸದಾದ ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಯುದ್ಧ ವಿಮಾನ ಹೊಡೆದು ಹಾಕಿದ್ದಾಗಿ ಇರಾನ್ ಹೇಳಿಕೊಂಡಿತು.

ಯಾವುದನ್ನು ನಂಬುವುದೋ ತಿಳಿಯದು. ಆದರೆ ಅಮೆರಿಕದ ಅತ್ಯಂತ ಪ್ರಬಲ ಯುದ್ಧ ವಿಮಾನವು ಬಿದ್ದುದಂತೂ ಸತ್ಯ. ಐದು ವಾರಗಳ ಕಾಲ ಅಮೆರಿಕವು ನಡೆಸಿದ ಬಾಂಬ್ ದಾಳಿಯ ಬಳಿಕವೂ ಇರಾನ್ ತನ್ನ ವಾಯು ರಕ್ಷಣಾ ವ್ಯವಸ್ಥೆಯನ್ನು ಉಳಿಸಿಕೊಂಡು ಈ ಅತ್ಯಾಧುನಿಕ ಯುದ್ಧ ವಿಮಾನ ಹೊಡೆದು ಹಾಕಿತೆಂದರೆ ಅದು ಆಶ್ಚರ್ಯಕರವೇ. ಸೈನಿಕನೊಬ್ಬ ಹೆಗಲ ಮೇಲಿಂದ ಉಡಾಯಿಸುವ ಕ್ಷಿಪಣಿ ಬಳಸಿ ಅದನ್ನು ಕೆಡವಿ ಹಾಕಿದ್ದು ನಿಜವಾದರೆ ಅದು ಕೂಡಾ ಆಶ್ಚರ್ಯವೇ. ಏಕೆಂದರೆ ಇಲ್ಲಿ ಯಾವುದೇ ವಿವರಣೆಯೂ ವಿಶ್ವಾಸ ಮೂಡಿಸುವಂತಿಲ್ಲ. ಪ್ರತಿಯೊಂದು ವಿವರಣೆ ಕೂಡಾ ಹಲವು ಅನುಮಾನ ಹುಟ್ಟಿಸುವಂತಿದೆ.

ವಿವಾದಾತೀತವಾಗಿರುವುದೆಂದರೆ ಒಂದೇ ವಿಷಯ- ಯುದ್ಧ ವಿಮಾನ ಹೊಡೆದುರುಳಿಸಲ್ಪಟ್ಟಿತೆಂಬುದು! ವಿಮಾನದಲ್ಲಿದ್ದ ಇಬ್ಬರು ಪೈಲಟ್‌ಗಳು ವಿಮಾನದಿಂದ ಇಜೆಕ್ಟ್ ಆಗಿ ಇರಾನಿನ ಪರ್ವತ ಪ್ರದೇಶದಲ್ಲಿ ಆಶ್ರಯಪಡೆದರು. ಅಮೆರಿಕವು ಅವರಿಗಾಗಿ ಹುಡುಕಾಟ ಆರಂಭಿಸಿ ಅವರನ್ನು ರಕ್ಷಿಸಲು ಸಫಲವಾಯಿತು. ಬಳಿಕ ಅಮೆರಿಕವು ಇದು ಅಮೆರಿಕದ ಮಿಲಿಟರಿ ಇತಿಹಾಸದಲ್ಲೇ ಅತ್ಯಂತ ಸಂಕೀರ್ಣ ರಕ್ಷಣಾ ಕಾರ್ಯಾಚರಣೆ ಎಂದು ಬಣ್ಣಿಸಿತು.

ಹಾಗೆ ಉರುಳಿದ 'ಎಫ್-15ಇ ಸ್ಟ್ರೈಕ್ ಈಗಲ್' ಯುದ್ಧ ವಿಮಾನವು ಶತ್ರು ರಾಷ್ಟ್ರದೊಳಕ್ಕೆ ತೀರಾ ಒಳನುಗ್ಗಿ ದಾಳಿ ಮಾಡುವಂತಹ ಸಾಮರ್ಥ್ಯ ಹೊಂದಿರುವಂತಹುದು. ಅಂತಹ ಒಂದು ವಿಮಾನದ ತಯಾರಿ ವೆಚ್ಚ 100 ಮಿಲಿಯ ಡಾಲರ್. ಅದರಲ್ಲಿ ಇಬ್ಬರು ಪ್ರಯಾಣಿಸುತ್ತಾರೆ. ಮುಂಭಾಗದಲ್ಲಿ ಪೈಲಟ್ ಮತ್ತು ಹಿಂಭಾಗದಲ್ಲಿ 'ಶಸ್ತ್ರಾಸ್ತ್ರ ವ್ಯವಸ್ಥೆ ಆಫೀಸರ್' (ಡಬ್ಲ್ಯುಎಸ್‌ಒ). ಕರ್ನಲ್ ಶ್ರೇಣಿಯ ಡಬ್ಲ್ಯುಎಸ್‌ಒ ಯಾವೆಲ್ಲ ಗುರಿಗಳಿಗೆ ದಾಳಿ ನಡೆಸಬೇಕು ಎಂದು ನಿರ್ಧರಿಸುತ್ತಾನೆ.

ಅಮೆರಿಕದ ಪೈಲಟ್‌ನ ಸಂಕೇತ ನಾಮ 'ಡ್ಯೂಡ್ 44 ಆಲ್ಫಾ'. ಡಬ್ಲ್ಯುಎಸ್‌ಒ ಸಂಕೇತನಾಮ 'ಡ್ಯೂಡ್ 44 ಬ್ರಾವೊ'. ಇವರಿಬ್ಬರ ಕುರಿತು ಇಷ್ಟೇ ತಿಳಿದಿರುವುದು. ಅವರ ನಿಜವಾದ ಹೆಸರುಗಳನ್ನು ಅಮೆರಿಕ ಬಹಿರಂಗಪಡಿಸಲಿಲ್ಲ.

ಇರಾನ್‌ನಲ್ಲಿ ಬಿದ್ದಿದ್ದ ತನ್ನ ಸೈನಿಕನನ್ನು ರಕ್ಷಿಸಲು ಅಮೆರಿಕ ನಡೆಸಿದ ಕಾರ್ಯಾಚರಣೆಯ ಹಿಂದೆ ಬೇರೆಯೆ ಉದ್ದೇಶಗಳಿದ್ದವೆ?



ಅಮೆರಿಕದ ವಿಮಾನಗಳ ಅವಶೇಷಗಳು

ಈ ವಿಮಾನವುದ ದಾಳಿಗೆ ಸಿಲುಕಿ ಉರುಳಿದ್ದು ನೈಋತ್ಯ ಇರಾನ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾಗ. ತಕ್ಷಣವೇ ಇರಾನಿನ ಸೈನಿಕರು ಅವರಿಗಾಗಿ ಹುಡುಕಾಟ ಆರಂಭಿಸಿದರು. ಇರಾನಿನ ಸೇನೆಯು ಕರೆ ನೀಡಿದರನ್ವಯ ಇರಾನಿನ ನಾಗರಿಕರು ಕೂಡಾ ಶೋಧ ನಡೆಸಲಾರಂಭಿಸಿದರು.

ಇಬ್ಬರೂ ಸೈನಿಕರು ಸುರಕ್ಷಿತವಾಗಿ ವಿಮಾನದಿಂದ ಇಜೆಕ್ಟ್ ಆಗಿದ್ದರು. ಆದರೆ ನಂತರ ಏನಾಯಿತೆಂಬುದರ ಬಗ್ಗೆ ಮಾತ್ರ ಸ್ಪಷ್ಟ ವಿವರಗಳು ಸಿಗುವುದಿಲ್ಲ. ಪೈಲಟ್ ಇರಾನ್‌ನ ಖುಜೆಸ್ತಾನ್ ಪ್ರಾಂತ್ಯದಲ್ಲಿ ಹಾಗೂ ಕರ್ನಲ್ ಇರಾನಿನ ಜಾಗ್ರೋಸ್ ಪರ್ವತ ಪ್ರದೇಶದಲ್ಲಿ ಬಿದ್ದ ಎಂದು ಹೇಳಲಾಯಿತು. ಆದರೆ ಆದೇಕೆ ಇಬ್ಬರು ಪೈಲಟ್‌ಗಳು ಅಷ್ಟು ದೂರದಲ್ಲಿ ವಿಭಿನ್ನ ಪ್ರಾಂತ್ಯಗಳಲ್ಲಿ ನೆಲಕ್ಕೆ ಬಿದ್ದರು ಎಂಬ ಕುರಿತಂತೆ ಯಾವುದೇ ಸ್ಪಷ್ಟನೆ ಸಿಗಲಿಲ್ಲ. ಡಬ್ಲ್ಯುಎಸ್‌ಒ ಸೈನಿಕ 480 ಕಿ.ಮೀ.ನಷ್ಟು ಒಳಗೆ ಇರಾನ್‌ನಲ್ಲಿ ಬಿದ್ದಿದ್ದ.

ರಕ್ಷಣೆ ಕಾರ್ಯಾಚರಣೆ

ಅಮೆರಿಕವು ಇಬ್ಬರು ಸೈನಿಕರನ್ನು ರಕ್ಷಿಸಲು ಕ್ಷಿಪ್ರ ಕಾರ್ಯಾಚರಣೆ ನಡೆಸಿತು. ಒಂದು ಹೆಲಿಕಾಪ್ಟರ್ ಹಾಗೂ ಮತ್ತೊಂದು ಯುದ್ಧ ವಿಮಾನ ಇರಾನ್‌ನ ವಾಯುಪ್ರದೇಶವನ್ನು ಪ್ರವೇಶಿಸಿತು. ನೆಲಕ್ಕೆ ಬಿದ್ದಿರುವ ಪೈಲಟ್‌ಗಳಿಗೆ ರಕ್ಷಣೆ ನೀಡುವುದು ಮತ್ತು ಅವರನ್ನು ಸುರಕ್ಷಿತವಾಗಿ ಕರೆತರುವುದು ಈ ಕಾರ್ಯಾಚರಣೆಯ ಉದ್ದೇಶವಾಗಿತ್ತು. ವಿಮಾನದ ಪೈಲಟ್‌ನನ್ನು ಗಂಟೆಯೊಳಗೆ ಪತ್ತೆ ಹಚ್ಚಿ ರಕ್ಷಿಸಲಾಯಿತು. ಈ ಬೆಳವಣಿಗೆ ವೇಳೆ ಅಮೆರಿಕದ ಹೆಲಿಕಾಪ್ಟರ್‌ಗೆ ಇರಾನ್ ಹಾರಿಸಿದ ಗುಂಡು ತಗಲಿತಾದರೂ ಅದು ಸುರಕ್ಷಿತವಾಗಿ ಇರಾನ್‌ನಿಂದ ಹೊರಬರಲು ಸಫಲವಾಯಿತು.

ಅಮೆರಿಕಕ್ಕೆ ಇನ್ನೊಬ್ಬ ಸೈನಿಕನನ್ನು ರಕ್ಷಿಸುವುದೇ ಕಠಿಣವಾದುದಾಗಿತ್ತು. ಆತ ಇರಾನ್‌ನ ಪರ್ವತ ಪ್ರದೇಶದಲ್ಲಿ ಇರುವುದು ಅಮೆರಿಕಕ್ಕೆ ತಿಳಿದಿತ್ತಾದರೂ ಆತನಿರುವ ನಿಖರ ಜಾಗ ತಿಳಿದಿರಲಿಲ್ಲ. ಅಮೆರಿಕ ಹೇಳುವ ಪ್ರಕಾರ ಬಿದ್ದ ರಭಸಕ್ಕೆ ಆತನ ಕಾಲಿನ ಮೂಳೆಗೆ ಏಟಾಗಿತ್ತು. ಆದರೂ ಆತ ನಡೆಯಲು ಶಕ್ತನಾಗಿದ್ದ. ಆತ ಪರ್ವತವೊಂದನ್ನೇರಿ ಅಲ್ಲಿ ಕಲ್ಲುಬಂಡೆಗಳ ಮಧ್ಯೆ ಅವಿತು ಕುಳಿತಿದ್ದ. ಇರಾನ್ ಆತನ ತಲೆಗೆ 60 ಸಾವಿರ ಡಾಲರ್ ಬಹುಮಾನ ಘೋಷಿಸಿತು. ಆತನನ್ನು ಪತ್ತೆ ಹಚ್ಚಿ ಕೊಲ್ಲುವಂತೆ ಅಥವಾ ತಮಗೆ ಒಪ್ಪಿಸುವಂತೆ ಇರಾನ್ ಮಿಲಿಟರಿಯು ನಾಗರಿಕರಿಗೆ



ಕರೆ ನೀಡಿತು. ಇತ್ತ ಅಮೆರಿಕನ್ ಮಿಲಿಟರಿಗೂ 14 ಗಂಟೆಗಳ ಕಾಲ ಆ ಸೈನಿಕನಿಂದ ಯಾವುದೇ ಸುದ್ದಿ ಬರಲಿಲ್ಲ. ಆ ಬಳಿಕ "ಗಾಡ್ ಈಸ್ ಗುಡ್" ಎಂಬ ತುಣುಕು ಸಂದೇಶ ಬಂತು. ಮತ್ತಾವುದೇ ವಿವರವಿಲ್ಲ! ಇದು ಆತನದ್ದೇ ಸಂದೇಶವೆ ಅಥವಾ ಇರಾನ್ ಅಮೆರಿಕವನ್ನು ಬಲೆಗೆ ಕೆಡವಲು ಕಳಿಸಿದ ಸಂದೇಶವೆ ಎಂಬ ಗೊಂದಲ ಅಮೆರಿಕದ ಮಿಲಿಟರಿ ತಜ್ಞರಿಗೆ.

ಆದರೆ ಬಳಿಕ ಅಮೆರಿಕ ಇದು ತಮ್ಮ ಸೈನಿಕನದ್ದೇ ಸಂದೇಶ ಎಂಬ ನಿರ್ಧಾರಕ್ಕೆ ಬಂತು. ಅದನ್ನು ಯಾವ ರೀತಿ ದೃಢಪಡಿಸಲಾಯಿತೆಂಬ ವಿವರ ನೀಡಲಿಲ್ಲ. 'ಘೋಸ್ಟ್ ಮರ್ಮರ್' ಎಂಬ ಅತ್ಯಾಧುನಿಕ ವ್ಯವಸ್ಥೆಯ ಮೂಲಕ ಆತನ ಇರವನ್ನು ಪತ್ತೆ ಹಚ್ಚಲಾಯಿತೆಂಬ ಮಾತುಗಳು ಹರಿದಾಡಿದವು. ಮನುಷ್ಯನ ಹೃದಯಬಡಿತವನ್ನು ಬಹುದೂರದಿಂದಲೇ ಆಲಿಸಿ ಆತ ಎಲ್ಲಿದ್ದಾನೆಂದು ಪತ್ತೆ ಹಚ್ಚುವ ಸಾಧನವನ್ನು ಇದಕ್ಕಾಗಿ ಬಳಸಲಾಯಿತು ಎಂಬುದಾಗಿ ಹೇಳಲಾಗುತ್ತಿದೆ. ಆದರೆ ಅಮೆರಿಕವು ಅಧಿಕೃತವಾಗಿ ಇದನ್ನು ಎಲ್ಲಿಯೂ ದೃಢಪಡಿಸಿಲ್ಲ.

ಅಮೆರಿಕದ ಕಾರ್ಯಾಚರಣೆ ಮತ್ತು ಅದರ ನಿಗೂಢತೆ

ಕೆಲವೇ ಗಂಟೆಗಳಲ್ಲಿ ಇಸ್ಫಹಾನ್ ಪ್ರದೇಶದಲ್ಲಿ ಅಮೆರಿಕದ ವಿಮಾನಗಳು ಹಾರಾಡತೊಡಗಿದವು. ಒಟ್ಟು 155 ವಿಮಾನಗಳು (4 ಬಾಂಬರ್‌ಗಳು, 64 ಫೈಟರ್ ಜೆಟ್‌ಗಳು, 48 ಇಂಧನ ಪೂರೈಕೆ ಟ್ಯಾಂಕರ್‌ಗಳು, 13 ರಕ್ಷಣಾ ವಿಮಾನಗಳು ಸೇರಿದಂತೆ) ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡವು. ಬಳಸದೆ ಬಿಟ್ಟಿದ್ದ ಕೃಷಿ ಪ್ರದೇಶದ ಏರ್‌ಸ್ಟ್ರಿಪ್‌ನ್ನು ತಾತ್ಕಾಲಿಕ ನೆಲೆಯನ್ನಾಗಿ ಮಾಡಲಾಯಿತು.

ಮೊತ್ತ ಮೊದಲ ಕ್ಷಣದಿಂದಲೇ ಇದೊಂದು ರಕ್ಷಣಾ ಕಾರ್ಯಾಚರಣೆ ಎಂಬಂತೆ ಕಂಡುಬರಲೇ ಇಲ್ಲ. ಇಸ್ಫಹಾನ್ ಮೇಲೆ ವೈಮಾನಿಕ ಪ್ರಾಬಲ್ಯದ ಕೋಟೆಯನ್ನೇ ಕಟ್ಟಿದಂತೆ ಭಾಸವಾಯಿತು. ನೆಲದಲ್ಲಿ ಏನು ನಡೆಯುತ್ತಿದೆಯೋ ಅದು ಯಾರಿಗೂ ತಿಳಿಯದ ರೀತಿಯಲ್ಲಿ ಅಮೆರಿಕದ ಈ ವಾಯು ಕೋಟೆ ನಿರ್ಮಾಣವಾಗಿತ್ತು.

ಬಳಿಕ ಪರ್ವತ ಪ್ರದೇಶದಲ್ಲಿದ್ದ ಸೈನಿಕನನ್ನು ತಲುಪಿ ಆತನನ್ನು ಸುರಕ್ಷಿತವಾಗಿ ನೆಲೆಗೆ ತರಲಾಯಿತು. ತಮ್ಮ ನೆಲೆಗೆ ಇರಾನ್ ಪಡೆಗಳು ಹಿಂಬಾಲಿಸಿ ಬರದಂತೆ ಮಾಡಲು ಅಮೆರಿಕದ ವಿಮಾನಗಳು ರಸ್ತೆಯುದ್ದಕ್ಕೂ ಬಾಂಬ್ ಚೆಲ್ಲಿ ರಸ್ತೆ ಹಾಳುಮಾಡಿದವು. ತಾವು ನೆಲೆ ಸ್ಥಾಪಿಸಿದ ಫಾರ್ಮ್ ಕಡೆಗೆ ವೈರಿ ರಾಷ್ಟ್ರದ ಒಬ್ಬನೇ ಒಬ್ಬ ಸೈನಿಕ ಪ್ರವೇಶಿಸದ ರೀತಿಯಲ್ಲಿ ಬಂದೋಬಸ್ತು ಮಾಡಿದರು. ಇದೇ ವೇಳೆ ಎರಡು ಸರಕುಸಾಗಣಾ ವಿಮಾನಗಳು ಅಲ್ಲಿ ಕಾದು ನಿಂತಿದ್ದವು. ಆದರೆ ಅವುಗಳಿಗೆ ಮೇಲೇರಲಾಗಲಿಲ್ಲ. ಅವು ಅಲ್ಲೇ ಉಳಿಯಬೇಕಾಯಿತು. ಅಲ್ಲಿನ ಮರಳಿನ ಕಾರಣದಿಂದಾಗಿ ವಿಮಾನದ ಚಕ್ರಗಳು ಹೂತು ಹೋದವು ಎಂಬುದು ಅಮೆರಿಕ ನೀಡುತ್ತಿರುವ ಕಾರಣ. ಆದರೆ ಬಳಿಕ ತಿಳಿದುಬಂದಂತೆ ಇರಾನಿನ ಸೈನಿಕರು ಹಾರಿಸಿದ ಗುಂಡೇಟುಗಳಿಂದ ವಿಮಾನಗಳಿಗೆ ಬಹಳಷ್ಟು ಹಾನಿಯಾಗಿತ್ತು. ಈ ವಿಮಾನಗಳು ವೈರಿ ರಾಷ್ಟ್ರದ ಕೈಗೆ ಸಿಗದಂತೆ ಮಾಡಲು ಅಮೆರಿಕವು ಅವುಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿತು. ಜತೆಗೇ ಹಾನಿಗೀಡಾದ 4 ಹೆಲಿಕಾಪ್ಟರ್‌ಗಳಿಗೂ ಬೆಂಕಿ ಹಚ್ಚಲಾಯಿತು.

ಹೆಚ್ಚುವರಿಯಾಗಿ ಆಗಮಿಸಿದ ಕೆಲವು ಅಮೆರಿಕನ್ ವಿಮಾನಗಳು ರಕ್ಷಿಸಲ್ಪಟ್ಟ ಸೈನಿಕನನ್ನು ಹೊತ್ತು ಬೆಳಕು ಮೂಡುವುದರೊಳಗೆ ಇರಾನ್‌ನ ವಾಯುಪ್ರದೇಶ ದಾಟಿ ಹೊರ ಬಂದವು.

ಉತ್ತರವಿಲ್ಲದ ಪ್ರಶ್ನೆಗಳು

ಅಮೆರಿಕದ ಇಷ್ಟು ದೊಡ್ಡ ಮಟ್ಟದ ಕಾರ್ಯಾಚರಣೆಯು ನಿಜವಾಗಿಯೂ ಒಬ್ಬ ಸೈನಿಕನನ್ನು ರಕ್ಷಿಸಲು ನಡೆದುದೇ ಅಥವಾ ಅದರ ಹಿಂದೆ ಬೇರೆಯೆ ಆದ ಇನ್ನೂ ದೊಡ್ಡ ಯೋಜನೆ ಇತ್ತೆ? ಅಮೆರಿಕ ನೆಲೆ ಸ್ಥಾಪಿಸಿದ ಫಾರ್ಮ್ ಶಹ್ರೇಜಾ ನಗರದಿಂದ 14 ಮೈಲು ದೂರವಿದೆ. ಇರಾನ್ ಸಂಸ್ಕರಿತ ಯುರೇನಿಯಂನನ್ನು ಸಂಗ್ರಹಿಸಿಟ್ಟಿರುವ ಜಾಗವು ಇಸ್ಫಹಾನ್ ಪ್ರಾಂತ್ಯದಲ್ಲಿದೆಯೆಂಬುದಾಗಿ ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ಈ ಹಿಂದೆಯೇ ಖಚಿತಪಡಿಸಿತ್ತು. ಇರಾನ್ ಬಳಿ 440 ಕಿಲೋ ಯುರೇನಿಯಂ ಇದೆ ಎಂದು ಅಂದಾಜಿಸಲಾಗಿದ್ದು, ಇದರಿಂದ 10 ಪರಮಾಣು ಬಾಂಬುಗಳನ್ನು ತಯಾರಿಸಬಹುದಾಗಿದೆ. ಈ ಯುರೇನಿಯಂನ್ನು ಇರಾನ್‌ನಿಂದ ತರುವುದೇ ಅಮೆರಿಕದ ಮುಖ್ಯ ಕಾರ್ಯಾಚರಣೆಯಾಗಿತ್ತೆಂದು ಅನುಮಾನ ವ್ಯಕ್ತಪಡಿಸಲಾಗುತ್ತಿದೆ.

ಅಮೆರಿಕದ ವಿಮಾನ ಪತನಗೊಳ್ಳುವ ಹತ್ತು ದಿನಗಳ ಮೊದಲು ವಾಲ್ ಸ್ಟ್ರೀಟ್ ಜರ್ನಲ್ ಪತ್ರಿಕೆಯು ವಿಶೇಷ ವರದಿಯೊಂದನ್ನು ಪ್ರಕಟಿಸಿ ಇರಾನ್‌ನ ಯುರೇನಿಯಂನ್ನು ತೆಗೆದುಕೊಂಡು ಬರಲು ವಿಶೇಷ ಕಮಾಂಡೋ ಕಾರ್ಯಾಚರಣೆ ನಡೆಸುವ ಬಗ್ಗೆ ಟ್ರಂಪ್‌ಗೆ ಸೇನಾಧಿಕಾರಿಗಳು ಮಾಹಿತಿ ನೀಡಿದ್ದರು ಎಂದಿತ್ತು. ವಾಷಿಂಗ್ಟನ್ ಪೋಸ್ಟ್ ಕೂಡಾ ಇದೇ ಸುದ್ದಿಯನ್ನು ದೃಢಪಡಿಸಿತ್ತು.

ಒಬ್ಬ ಸೈನಿಕನನ್ನು ರಕ್ಷಿಸಲು ಯಾವುದೇ ದೇಶವು ಅಷ್ಟು ದೊಡ್ಡ ಪ್ರಮಾಣದಲ್ಲಿ ಮಿಲಿಟರಿ ಶಕ್ತಿಯನ್ನು ಬಳಸುವುದಿಲ್ಲ. ಅಷ್ಟೆಲ್ಲಾ ಯುದ್ಧ ವಿಮಾನಗಳನ್ನು ಉಪಯೋಗಿಸುವುದಿಲ್ಲ. ಇಸ್ಫಹಾನ್‌ನಲ್ಲಿ ಅಮೆರಿಕ ನಡೆಸಿದ ಕಾರ್ಯಾಚರಣೆ ಗಮನಿಸುವಾಗ ಇದು ಸೈನಿಕನನ್ನು ರಕ್ಷಿಸಲು ತುರ್ತಾಗಿ ನಡೆಸಿದ ಕಾರ್ಯಾಚರಣೆಗಿಂತಲೂ ಹೆಚ್ಚಾಗಿ ಬಹಳ ಪೂರ್ವಸಿದ್ಧತೆಯೊಂದಿಗೆ ಸಾಕಷ್ಟು ಯೋಜನಾಬದ್ಧವಾಗಿ ನಡೆಸಿದ ಕಾರ್ಯಾಚರಣೆ ಎಂಬಂತೆ ಕಂಡುಬರುತ್ತದೆ.

ಈ ಕಾರ್ಯಾಚರಣೆಯ ಕುರಿತಂತೆ ಸ್ಪಷ್ಟತೆಯ ಅಲಭ್ಯತೆಯಿರುವುದು ಯಾವುದೇ ಸಂವಹನದ ಕೊರತೆಯಿಂದಲ್ಲ. ಇದು ಉದ್ದೇಶಪೂರ್ವಕ! ಕಾರ್ಯಾಚರಣೆಯ ವೇಗ, ಸಿದ್ಧತೆ, ಬಳಿಕ ವಿವರಗಳನ್ನೆಲ್ಲ ಮುಚ್ಚಿಟ್ಟ ರೀತಿ ಗಮನಿಸುವಾಗ ಇದು ನಿಗೂಢತೆ ಕಾಯ್ದುಕೊಂಡ ಕಾರ್ಯಾಚರಣೆ ಎಂಬುದು ಸ್ಪಷ್ಟವಾಗುತ್ತದೆ.

ಅಲ್ಲಿ ಮಹತ್ತರವಾದುದೇನೋ ಸಂಭವಿಸಿರುವುದು ದಿಟ. ರಾಜಕೀಯ ದಾಟದಲ್ಲಿ ಮೌನವೆಂಬುದು ಖಾಲಿಯಾಗಿರುವುದಿಲ್ಲ. ನಿಜವಾದ ಗುರಿ ಬೇರೇಯೇ ಆಗಿತ್ತೆಂಬುದು ಅದರ ಸಂಕೇತವಾಗಿರುತ್ತದೆ.

ನಾವೇಕೆ ಪುಸ್ತಕ ಓದಬೇಕೆಂದರೆ...

ಯಜ್ಞ ನಾರಾಯಣ ಉಳ್ಳೂರ

ಪುಸ್ತಕಗಳು ಬದುಕಿನ ಕೈಗನ್ನಡಿ ಇದ್ದಂತೆ. ಪುಸ್ತಕಗಳು ಸಮಾಜದ ಪ್ರತಿಬಿಂಬ, ಪುಸ್ತಕಗಳು ಮಾನವ ಮಿತ್ರ. ಪುಸ್ತಕಗಳು ಜ್ಞಾನ ನೀಡುವ ಕಲ್ಪವೃಕ್ಷಗಳಿದ್ದಂತೆ.

"ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ" ಎಂದಿದೆ ಗೀತೆ. ಪ್ರಪಂಚದಲ್ಲಿ ಜ್ಞಾನಕ್ಕಿಂತ ಮಿಗಿಲಾದುದು ಇಲ್ಲ. ನಮ್ಮ ಅಜ್ಞಾನವೇ ಬದುಕಿನ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ನಾವು ಬದುಕಿನಲ್ಲಿ ಜ್ಞಾನವನ್ನು ಗಳಿಸಬೇಕು. ನಮ್ಮೆಲ್ಲ ಸಮಸ್ಯೆಗಳಿಗೆ ಜ್ಞಾನದಿಂದ ಪರಿಹಾರವಿದೆ. ಜ್ಞಾನದಿಂದ ನಮ್ಮ ಮನಸ್ಸು ವಿಶಾಲವಾಗುತ್ತದೆ. ಜ್ಞಾನಾರ್ಜನೆಗಾಗಿ ನಾವು ಉತ್ತಮ ಪುಸ್ತಕಗಳನ್ನು ಓದಬೇಕು. ಜ್ಞಾನಾರ್ಜನೆಗೆ ಪುಸ್ತಕ ಓದುವುದಕ್ಕಿಂತ ನೇರವಾದ, ಸುಲಭವಾದ ಬೇರೆ ಮಾರ್ಗವಿಲ್ಲ.

ಉತ್ತಮ ಪುಸ್ತಕಗಳ ಓದಿನಿಂದ ನಮ್ಮ ಮನಸ್ಸಿಗೆ ಹಿತಾನುಭವವಾಗುತ್ತದೆ, ಸಂತೋಷವಾಗುತ್ತದೆ. ಆ ಓದಿನ ಸಮಯದಲ್ಲಿ ನಮ್ಮ ಬದುಕಿನ ಸಮಸ್ಯೆಗಳನ್ನೆಲ್ಲ ನಾವು ಮರೆಯುತ್ತೇವೆ. ಓದಿನ ಸುಖದಲ್ಲಿ ನಾವು ನಮ್ಮ ಪ್ರಪಂಚವನ್ನೇ ತಾತ್ಕಾಲಿಕವಾಗಿ ಮರೆತು ಬಿಡುತ್ತೇವೆ. ಇದೇ ಓದಿನ ಸುಖ, ಓದಿನ ಖುಷಿ. ನಮ್ಮ ಮನಸ್ಸು ಒಂದಿಷ್ಟು ಹೊತ್ತು ದೈನಂದಿನ ಜೀವನದ ರಗಳೆಗಳನ್ನೆಲ್ಲ ಮರೆತು ಬೇರೊಂದು ಲೋಕದಲ್ಲಿ ವಿಹರಿಸುತ್ತದೆ. ಓದುವ ಹವ್ಯಾಸ ಇಲ್ಲದವರು ಇಂತಹ ಸುಖದಿಂದ ವಂಚಿತರೇ ಸರಿ. ಜನಸಾಮಾನ್ಯರಲ್ಲಿ, ಮುಖ್ಯವಾಗಿ ಯುವಕರಲ್ಲಿ ಓದುವ ಹವ್ಯಾಸವನ್ನು ಉತ್ತೇಜಿಸುವ ಉದ್ದೇಶದಿಂದಾಗಿ ಯುನೆಸ್ಕೊ 1995ರಿಂದ ವಿಶ್ವ ಪುಸ್ತಕ ದಿನಾಚರಣೆಯನ್ನು ಪ್ರತಿವರ್ಷ ಏ. 23ರಂದು ಆಚರಿಸಲಾರಂಭಿಸಿತು. ಪುಸ್ತಕಗಳನ್ನು ಓದುವುದು ಕೂಡಾ ಒಂದು ರೀತಿಯ ವಿದ್ಯಾಭ್ಯಾಸ ಎನ್ನುತ್ತಾರೆ. ಪುಸ್ತಕಾಭ್ಯಾಸವು ತಿಳುವಳಿಕೆ, ಓದಿನ ಖುಷಿಯ ಜೊತೆಗೆ ಯೋಚನಾ ಶಕ್ತಿಯನ್ನು ಓದುಗನಿಗೆ ನೀಡುತ್ತದೆ. ನಮ್ಮದೇ ಸಣ್ಣ ಪ್ರಪಂಚದಲ್ಲಿ ನಾವಿರುವಾಗ ಉತ್ತಮ ಪುಸ್ತಕಗಳ ಓದು ನಮ್ಮ ಪ್ರಪಂಚದ ಪರಿಧಿಯನ್ನು ವಿಸ್ತರಿಸುತ್ತದೆ.



ನಮಗೆ ನಮ್ಮದೇ ಕಷ್ಟಗಳು, ಸಮಸ್ಯೆಗಳು ನಮ್ಮ ಬದುಕಿನಲ್ಲಿ ದೊಡ್ಡದೆನಿಸಬಹುದು. ಬೇರೆಯವರ ಕಷ್ಟ ನಷ್ಟಗಳನ್ನು ಓದಿ ತಿಳಿದುಕೊಂಡಾಗ ನಮ್ಮ ಕಷ್ಟಗಳು ನಗಣ್ಯವೆನಿಸಬಹುದು. ಓದುವಿಕೆಯು ಹೊಸ ಆಲೋಚನಗಳತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಒಂದು ಒಳ್ಳೆಯ ಪುಸ್ತಕ ಓದಲು ದೊರೆತಾಗ ನಾವು ಅದರ ಓದಿನಲ್ಲಿ ನಮ್ಮನ್ನೇ ಮರೆಯುತ್ತೇವೆ. ಒಳ್ಳೆಯ ಪುಸ್ತಕವನ್ನು ಮತ್ತೆ ಮತ್ತೆ ಓದಿದಾಗ ಹೊಸ ಹೊಸ ಅರ್ಥಗಳು ನಮ್ಮ ಅರಿವಿಗೆ ಬರುತ್ತದೆ. ಉತ್ತಮ ಪುಸ್ತಕಗಳು ಮನುಷ್ಯ ಸ್ವಭಾವವನ್ನು ಅರ್ಥೈಸಿಕೊಳ್ಳಲು ನಮಗೆ ನೆರವಾಗುತ್ತದೆ. ಓದಿನ ಹವ್ಯಾಸವು ಓದುಗನ ಬುದ್ಧಿಯನ್ನು ಹೆಚ್ಚು ಸೂಕ್ಷ್ಮಗೊಳಿಸುತ್ತದೆ, ಹರಿತವಾಗಿಸುತ್ತದೆ.

ನಮ್ಮ ಬದುಕು ಸಹನೀಯವಾಗಲು, ಸಾರ್ಥಕವಾಗಲು ಉತ್ತಮ ಪುಸ್ತಕಗಳನ್ನು ಓದಬೇಕು. ಪುಸ್ತಕ ಗಳ ಪುಟಗಳಲ್ಲಿ ಪ್ರಪಂಚದ ಜ್ಞಾನವೆಲ್ಲ ಅಡಗಿದೆ. ಪುಸ್ತಕಗಳ ಪುಟ ಪುಟಗಳಲ್ಲಿರುವ ಅಕ್ಷರಗಳು, ಪದಗಳು ನಿರ್ಜೀವವಲ್ಲ. ಅವು ಓದುಗನೊಂದಿಗೆ ಸಂತೋಷಿಸುತ್ತವೆ, ದುಃಖಿಸುತ್ತವೆ, ನಲಿಯುತ್ತವೆ. ಸದಾ ಹರಿದಾಡುತ್ತಿರುವ ಚಂಚಲ ಮನಸ್ಸನ್ನು ಏಕಾಗ್ರತೆಗೊಳಿಸಲು ನಾವು ಉತ್ತಮ ಪುಸ್ತಕಗಳನ್ನು ಓದಬೇಕು. ನಮ್ಮ ಮನಸ್ಸು ಆಲೋಚನೆಗಳ ಗುಚ್ಛವಾಗಿದ್ದು, ನಮ್ಮ ಆಲೋಚನೆಗಳೇ ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ. ಉತ್ತಮ ಆಲೋಚನೆಗಳು ಮೂಡಿ ಬರಲು ನಾವು ಉತ್ತಮ ಪುಸ್ತಕಗಳನ್ನು ಓದಬೇಕು. ಉತ್ತಮ ಪುಸ್ತಕಗಳ ಓದಿನಿಂದ

ಇಂದು ವಿಶ್ವ ಪುಸ್ತಕ ದಿನ. ನಮ್ಮ ಮಾನಸಿಕ ಆರೋಗ್ಯಕ್ಕೆ ಉತ್ತಮ ಪುಸ್ತಕಗಳ ಓದು ಅಗತ್ಯವಾಗಿದೆ.

ಓದುಗನ ಏಕಾಗ್ರತೆಯು ವೃದ್ಧಿಯಾಗುವುದಲ್ಲದೆ ಆತನ ಸೃಜನಶೀಲತೆ, ಕಲ್ಪನಾ ಶಕ್ತಿ ಹೆಚ್ಚುತ್ತದೆ. ಬದುಕಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವು ಓದುಗನಿಗೆ ಲಭಿಸುತ್ತದೆ. ಸರಿಯಾದ ಕಾಲದಲ್ಲಿ, ಸರಿಯಾದ ಪುಸ್ತಕಗಳನ್ನು ಓದಿದಾಗ ಉಂಟಾಗುವ ಪರಿಣಾಮವು ವಿಶೇಷವಾದುದು.

ಮಕ್ಕಳು, ವಿದ್ಯಾರ್ಥಿಗಳು ಪಾಠ ಪುಸ್ತಕಗಳ ಜೊತೆಗೆ ಅವರಿಗೆ ಆಸಕ್ತಿ ಇರುವ ಇತರ ಪುಸ್ತಕಗಳನ್ನು ಓದುವಂತೆ ಶಿಕ್ಷಕರು ಹಾಗೂ ಪಾಲಕರು ಪ್ರೋತ್ಸಾಹಿಸಬೇಕು. ಇಂದಿನ ದಿನಗಳಲ್ಲಿ ಪೋಷಕರ ಅತಿಯಾದ ಆರೈಕೆಯಲ್ಲಿ ಬೆಳೆಯುವ ಮಕ್ಕಳಿಗೆ ಕಷ್ಟ ಸುಖಗಳ ಅರಿವು ಇರುವುದಿಲ್ಲ. ಹಾಗಾಗಿ ತಮ್ಮ ಜೀವನದಲ್ಲಿ ಒಂದು ಸಣ್ಣ ಸಮಸ್ಯೆ ಎದುರಾದರೂ ಕಂಗಾಲಾಗಿ ಬಿಡುತ್ತಾರೆ. ಭವಿಷ್ಯದ ಬದುಕಿನಲ್ಲಿ ಕಷ್ಟಗಳೆದುರಾದಾಗ ಗೊಂದಲಕ್ಕೊಳಗಾಗುತ್ತಾರೆ. ಉತ್ತಮ ಪುಸ್ತಕಗಳ ಓದಿನಿಂದ ಅವರಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ. ಓದುವಿಕೆಯಿಂದ ವಿದ್ಯಾರ್ಥಿಗಳಲ್ಲಿ ಉಚ್ಚಾರದಲ್ಲಿ ಸ್ಪಷ್ಟತೆ, ಮಾತಿನಲ್ಲಿ ನಿರರ್ಗಳತೆ, ವಿಷಯ ಸಂಗ್ರಹ ಹೆಚ್ಚುತ್ತದೆ. ಓದುವ ಅಭ್ಯಾಸದಿಂದಾಗಿ ಅವರಲ್ಲಿ ಶಬ್ದ ಸಂಗ್ರಹವು ಉತ್ತಮಗೊಳ್ಳುತ್ತದೆ. ಓದುವ ಅಭ್ಯಾಸವು ವಿದ್ಯಾರ್ಥಿ ಜೀವನದ ರಾಜಮಾರ್ಗವಾಗಿದೆ. ಶಿಕ್ಷಕರಿಗಾಗಲಿ, ಪೋಷಕರಿಗಾಗಲೀ ಓದುವ ಹವ್ಯಾಸವಿದ್ದಲ್ಲಿ ಮಕ್ಕಳು ಬೇಗನೆ ಅವರನ್ನು ಅನುಸರಿಸುತ್ತಾರೆ. ಏಕೆಂದರೆ ಸಾಮಾನ್ಯವಾಗಿ ಮಕ್ಕಳು ತಮ್ಮ ಸುತ್ತಲಿನವರ ನಡವಳಿಕೆ, ಕ್ರಿಯೆಗಳನ್ನು ಗಮನಿಸುತ್ತಾರೆ ಹಾಗೂ ಅದನ್ನು ಅನುಕರಿಸಲು ತೊಡಗುತ್ತಾರೆ. ಮಕ್ಕಳ ಮೇಲೆ ಹೆಚ್ಚು ಪ್ರಭಾವ ಬೀರುವವರೆಂದರೆ ಶಿಕ್ಷಕರು ಹಾಗೂ ಪೋಷಕರು.

ದೇಹಾರೋಗ್ಯಕ್ಕೆ ಪೌಷ್ಟಿಕ ಆಹಾರವು ಅಗತ್ಯವಾಗಿರುವಂತೆ, ನಮ್ಮ ಮಾನಸಿಕ ಆರೋಗ್ಯಕ್ಕೆ ಉತ್ತಮ ಪುಸ್ತಕಗಳ ಓದುವಿಕೆ ಅತ್ಯಗತ್ಯವಾಗಿದೆ. ಓದುವಿಕೆಯು ಒಂದು ಮಾನಸಿಕ ವ್ಯಾಯಾಮವಿದ್ದಂತೆ. ಪುಸ್ತಕ ಪ್ರೇಮಿಯಾಗಿ ಇಷ್ಟಪಟ್ಟು ಓದಿದಾಗ ನಮಗಾಗುವ ಆನಂದವೇ ಬೇರೆ ರೀತಿಯದು. ನಮ್ಮ ಬದುಕಿನ ಮೂಲ ಉದ್ದೇಶವೇ ಸಂತೋಷವಾಗಿರುವುದು, ನೆಮ್ಮದಿಯಾಗಿರುವುದು. ನಮ್ಮ ದೈನಂದಿನ ಹೋರಾಟ, ಪ್ರಯತ್ನಗಳೆಲ್ಲ ಅದಕ್ಕಾಗಿಯೇ ಇದೆ. ದಿನಾಲೂ ಕನಿಷ್ಟ ಪಕ್ಷ ಒಂದು ಗಂಟೆ ಸಮಯವಾದರೂ ಉತ್ತಮ ಪುಸ್ತಕಗಳ ಓದಿನಲ್ಲಿ ಕಳೆದಲ್ಲಿ ನಾವು ಸಂತೋಷವಾಗಿರಬಹುದು, ನೆಮ್ಮದಿಯಾಗಿರಬಹುದು.

ಉತ್ತಮ ಪುಸ್ತಕಗಳನ್ನು ಓದೋಣ, ಪುಸ್ತಕ ಪ್ರೀತಿಯನ್ನು ಉಳಿಸಿ, ಬೆಳೆಸೋಣ.

ಇರಾನ್ ಜತೆಗಿನ ಕದನ ವಿರಾಮ ಅನಿರ್ದಿಷ್ಟಾವಧಿಗೆ ವಿಸ್ತರಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಏಕೀಕೃತ ಶಾಂತಿ ಪ್ರಸ್ತಾವನೆಗೆ ಅವಕಾಶ



ವಾಷಿಂಗ್ಟನ್/ಇಸ್ಲಾಮಾಬಾದ್: ಇರಾನ್‌ನ ಭಿನ್ನಮತೀಯ ನಾಯಕತ್ವ ಯುದ್ಧವನ್ನು ಕೊನೆಗೊಳಿಸಲು ಏಕೀಕೃತ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಸಮಯ ನೀಡುವ ಉದ್ದೇಶದಿಂದ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಜತೆಗಿನ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿದ್ದಾರೆ.

ಏಪ್ರಿಲ್ 8ರಂದು ಘೋಷಿಸಲಾಗಿದ್ದ ಎರಡು ವಾರಗಳ ಕದನ ವಿರಾಮ ಮುಕ್ತಾಯಗೊಳ್ಳಲು ಕೆಲವೇ ಗಂಟೆಗಳ ಮೊದಲು ಈ ಘೋಷಣೆ ಹೊರಬಿದ್ದಿದೆ. ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಕೋರಿಕೆಯ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು



ಟ್ರಂಪ್ ತಿಳಿಸಿದ್ದಾರೆ. ಇದರಿಂದಾಗಿ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ವಿಶೇಷ ಪ್ರತಿನಿಧಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜೇರೆಡ್ ಕುಶ್ನರ್ ಅವರ ಇಸ್ಲಾಮಾಬಾದ್ ಭೇಟಿಯನ್ನು ಮುಂದೂಡಲಾಗಿದೆ.

ಸಾಗರ ದಿಗ್ಬಂಧನ ಮುಂದುವರಿಕೆ: ಕದನ ವಿರಾಮ ವಿಸ್ತರಿಸಿದರೂ, ಇರಾನ್ ಬಂದರುಗಳ ಮೇಲಿನ ಆರ್ಥಿಕ ದಿಗ್ಬಂಧನವನ್ನು ಮುಂದುವರಿಸಲು ಅಮೆರಿಕ ಸೇನೆಗೆ ಸೂಚಿಸಲಾಗಿದೆ. ಟೆಹ್ರಾನ್ ಮೇಲೆ ಒತ್ತಡ ಹೇರಲು ಈ ಕ್ರಮ ಅಗತ್ಯ ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ. ಆದರೆ, ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಾಗ್ಚಿ ಈ ದಿಗ್ಬಂಧನವನ್ನು ಯುದ್ಧದ ಕ್ರಮ ಮತ್ತು ''ಕದನ ವಿರಾಮದ ಉಲ್ಲಂಘನೆ'' ಎಂದು ಕರೆದಿದ್ದಾರೆ.

ಜಾರಿ ಮತ್ತು ನಿರ್ಬಂಧಗಳು: ಇರಾನ್‌ನ ಕಚ್ಚಾ ತೈಲವನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಎಂ/ಟಿ ಟಿಫಾನಿ ಎಂಬ ತೈಲ ಟ್ಯಾಂಕರ್ ಅನ್ನು ಅಮೆರಿಕ ಪಡೆಗಳು ಹಿಂದೂ ಮಹಾಸಾಗರದಲ್ಲಿ ಮಂಗಳವಾರ ವಶಕ್ಕೆ ಪಡೆದಿವೆ ಎಂದು ಪೆಂಟಗನ್ ತಿಳಿಸಿದೆ. ಇದರೊಂದಿಗೆ, ಇರಾನ್ ಪರವಾಗಿ ಶಸ್ತ್ರಾಸ್ತ್ರ ಸಂಗ್ರಹಣೆಯಲ್ಲಿ ತೊಡಗಿರುವ ಇರಾನ್, ಟರ್ಕಿ ಮತ್ತು ಯುಎಇ ಮೂಲದ 14 ಘಟಕಗಳು ಮತ್ತು ವ್ಯಕ್ತಿಗಳ ಮೇಲೆ ಅಮೆರಿಕದ ಹಣಕಾಸು ಇಲಾಖೆ ಹೊಸ ನಿರ್ಬಂಧಗಳನ್ನು ವಿಧಿಸಿದೆ.

ಚೀನಾ-ರಷ್ಯಾ ಎಚ್ಚರಿಕೆಯ ಪ್ರತಿಕ್ರಿಯೆ: ಈ ಕದನ ವಿರಾಮ ವಿಸ್ತರಣೆಯನ್ನು ಸ್ವಾಗತಿಸಿರುವ ಚೀನಾ ಮತ್ತು ರಷ್ಯಾ ಎಚ್ಚರಿಕೆಯ ಪ್ರತಿಕ್ರಿಯೆ ನೀಡಿವೆ. ಪ್ರಾದೇಶಿಕ ಸ್ಥಿರತೆಗಾಗಿ ಸಾಗರ ದಿಗ್ಬಂಧನವನ್ನು ತೆರವುಗೊಳಿಸುವಂತೆ ಅಮೆರಿಕವನ್ನು ಒತ್ತಾಯಿಸಿವೆ. ಪಾಕಿಸ್ತಾನದ ಮಧ್ಯಸ್ಥಿಕೆಯನ್ನು ಶ್ಲಾಘಿಸಿದ ಚೀನಾ, ಜಾಗತಿಕ ಇಂಧನ ಪೂರೈಕೆ ವ್ಯವಸ್ಥೆಯನ್ನು ರಕ್ಷಿಸಲು ಉಭಯ ದೇಶಗಳು ಪರಸ್ಪರ ರಿಯಾಯಿತಿ ನೀಡಬೇಕು ಎಂದು ಪ್ರತಿಪಾದಿಸಿದೆ.

ಆರ್ಥಿಕ ಮತ್ತು ಪ್ರಾದೇಶಿಕ ಪರಿಣಾಮ: ಫೆ.28ರಂದು ಯುದ್ಧ ಪ್ರಾರಂಭವಾದಾಗಿನಿಂದ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ.30 ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 95 ಡಾಲರ್ ತಲುಪಿದೆ. ಇರಾನ್‌ನ ಖಾರ್ಗ್ ದ್ವೀಪದ ತೈಲ ಸಂಗ್ರಹಣಾ ಘಟಕಗಳು ಭರ್ತಿಯಾಗುತ್ತಿದ್ದು, ತೈಲ ಬಾವಿಗಳನ್ನು ಮುಚ್ಚುವ ಪರಿಸ್ಥಿತಿ ಎದುರಾಗಬಹುದು ಎಂದು ಅಮೆರಿಕ ಎಚ್ಚರಿಸಿದೆ. ಜಾಗತಿಕ ಇಂಧನ ಪೂರೈಕೆಯ ಶೇ.20 ರಷ್ಟು ಹಾದುಹೋಗುವ ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್ ಹೊಂದಿರುವ ನಿಯಂತ್ರಣವನ್ನು ತಪ್ಪಿಸಲು ಅಮೆರಿಕ ಈ ದಿಗ್ಬಂಧನ ಹೇರಿದೆ.

ರಾಜತಾಂತ್ರಿಕ ಸಿದ್ಧತೆಗಳು: ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಎರಡನೇ ಸುತ್ತಿನ ಮಾತುಕತೆಗಾಗಿ ಪಾಕಿಸ್ತಾನ, 10,000 ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದೆ. ಆದರೆ, ಮಾತುಕತೆಯ ನಿಖರ ದಿನಾಂಕ ಇನ್ನೂ ನಿಗದಿಯಾಗಿಲ್ಲ. ಏ.11 ಮತ್ತು 12ರಂದು ನಡೆದ ಮೊದಲ ಸುತ್ತಿನ ಮಾತುಕತೆಗಳು ಯಾವುದೇ ಫಲಿತಾಂಶ ನೀಡಿರಲಿಲ್ಲ.

ಹೆಜ್ಬೊಲ್ಲಾ ನಿಶ್ಶಸ್ತ್ರಗೊಳಿಸಲು ಸಹಕರಿಸುವಂತೆ ಇಸ್ರೇಲ್ ಮನವಿ

ವಾಷಿಂಗ್ಟನ್‌ನಲ್ಲಿ ದ್ವಿಪಕ್ಷೀಯ ಮಾತುಕತೆಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ಹೆಜ್ಬೊಲ್ಲಾವನ್ನು ನಿಶ್ಶಸ್ತ್ರಗೊಳಿಸಲು ಸಹಕರಿಸುವಂತೆ ಲೆಬನಾನ್‌ಗೆ ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯಾನ್ ಸಾರ್ ಕರೆ ನೀಡಿದ್ದಾರೆ. ರಾಜತಾಂತ್ರಿಕ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಸಾರ್, ಇರಾನ್ ಬೆಂಬಲಿತ ಉಗ್ರಗಾಮಿ ಸಂಘಟನೆ ಹೆಜ್ಬೊಲ್ಲಾ, ಶಾಂತಿ ಮತ್ತು ಸಹಜ ಸ್ಥಿತಿಗೆ ಏಕೈಕ ಅಡ್ಡಿ. ಸಣ್ಣ ಗಡಿ ವಿವಾದಗಳನ್ನು ಸುಲಭವಾಗಿ ಪರಿಹರಿಸಬಹುದು. ಹೆಜ್ಬೊಲ್ಲಾವನ್ನು ಹತ್ತಿಕ್ಕುವುದರಿಂದ ಲೆಬನಾನ್ ಸಾರ್ವಭೌಮತ್ವ ಮತ್ತು ಇರಾನ್ ಪ್ರಭಾವದಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಈ ಮಾತುಕತೆಗಳು, ದಶಕಗಳ ನಂತರ ಉಭಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಮೊದಲ ನೇರ ರಾಜತಾಂತ್ರಿಕ ಸಂವಹನವಾಗಿದೆ. ಪ್ರಸ್ತುತ, ಇಸ್ರೇಲ್ ಸೇನೆ, ದಕ್ಷಿಣ ಲೆಬನಾನ್‌ನಲ್ಲಿ 10 ಕಿಮೀ ಬಫರ್ ವಲಯವನ್ನು ಕಾಯ್ದುಕೊಂಡಿದೆ. ಉತ್ತರ ಇಸ್ರೇಲ್ ಅನ್ನು ಗುರಿಯಾಗಿಸಿಕೊಂಡು ಉಡಾಯಿಸುವ ಅಲ್ಪ-ದೂರದ ರಾಕೆಟ್‌ಗಳು ಮತ್ತು ಟ್ಯಾಂಕ್ ವಿರೋಧಿ ಕ್ಷಿಪಣಿಗಳನ್ನು ತಡೆಯಲು ಈ ಆಯಕಟ್ಟಿನ ವಲಯ ಸ್ಥಾಪಿಸಲಾಗಿದೆ. ಉಭಯ ದೇಶಗಳ ನಡುವಿನ ಅಧಿಕೃತ ಚರ್ಚೆಗಳು ಗುರುವಾರವೂ ಮುಂದುವರಿಯಲಿವೆ.

ಅಮೆರಿಕದ 11 ವಿಜ್ಞಾನಿಗಳ ಸಾವು

2023ರಿಂದೀಚೆಗೆ ಅಮೆರಿಕದಲ್ಲಿ 11 ವಿಜ್ಞಾನಿಗಳ ಅಸಹಜ ಸಾವು ಮತ್ತು ನಾಪತ್ತೆ ಪ್ರಕರಣಗಳನ್ನು ರಾಷ್ಟ್ರೀಯ ಭದ್ರತಾ ಬೆದರಿಕೆಯಾಗಿ ಪರಿಗಣಿಸಲಾಗುತ್ತಿದೆ. ಪರಮಾಣು ಮತ್ತು ಏರೋಸ್ಪೇಸ್ ಸಂಶೋಧನೆಗೆ ಸಂಬಂಧಿಸಿದ ಈ ಘಟನೆಗಳ ಹಿಂದೆ ಗೂಢಚಾರಿಕೆ ಅಥವಾ ಇರಾನ್‌ನಲ್ಲಿ ಅಣ್ವಸ್ತ್ರ



ಸಂಶೋಧನೆಗೆ ನಂಟಿದೆಯೇ? ಎಂಬ ಪ್ರಶ್ನೆ ಹುಟ್ಟುಹಾಕಿದೆ. ಮಾರ್ಚ್‌ನಲ್ಲಿ ಮ್ಯಾಸಚೂಸೆಟ್ಸ್ ಸರೋವರದಲ್ಲಿ ಫಾರ್ಮಾಸ್ಯೂಟಿಕಲ್ ಸಂಶೋಧಕ ಜೇಸನ್ ಥಾಮಸ್ ಮೃತ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಪ್ರಕರಣಕ್ಕೆ ಹೊಸ ತಿರುವು ನೀಡಿತು. ಅವರು ಮೂರು ತಿಂಗಳಿನಿಂದ ಕಾಣೆಯಾಗಿದ್ದರು. 2022ರಿಂದ ಅನೇಕ ವಿಜ್ಞಾನಿಗಳು ಅನುಮಾನಾಸ್ಪದ ಪರಿಸ್ಥಿತಿಯಲ್ಲಿ ಮೃತಪಟ್ಟಿದ್ದಾರೆ ಅಥವಾ ಕಾಣೆಯಾಗಿದ್ದಾರೆ.ಇವರಲ್ಲಿ ಕೆಲವರು ಲಾಸ್ ಅಲಮೋಸ್ ನ್ಯಾಷನಲ್ ಲ್ಯಾಬ್, ನಾಸಾ ಜೆಟ್ ಪ್ರೊಪಲ್ಷನ್ ಲ್ಯಾಬ್ ಮತ್ತು ಎಂಐಟಿ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿದ್ದರು. ವೈಟ್ ಹೌಸ್ ಹೇಳುವಂತೆ, ಎಫ್‌ಬಿಐ ಮತ್ತು ಇತರ ಸಂಸ್ಥೆಗಳು ಈ ಪ್ರಕರಣಗಳನ್ನು ಒಟ್ಟಾಗಿ ಪರಿಶೀಲಿಸುತ್ತಿವೆ. ವಿವಿಧ ಇಲಾಖೆಗಳು ಮಾಹಿತಿ ಹಂಚಿಕೊಳ್ಳುತ್ತಿದ್ದು, ಇದಕ್ಕೆ ಯಾವುದೇ ಸಂಬಂಧ ವಿದೆಯೇ ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿವೆ.



ದಿಗ್ಬಂಧನ ಮೀರಿ ಸಾಗಿದ ಇರಾನ್‌ನ 34 ಟ್ಯಾಂಕರ್

ಅಮೆರಿಕದ ನೌಕಾ ನಾಕಾಬಂದಿಗೆ ಟೆಹರಾನ್ ಸೆಡ್ಡು

ದುಬೈ: ಇರಾನ್ ನೌಕಾ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವ ಅಮೆರಿಕದ ನೌಕಾ ದಿಗ್ಬಂಧನದ ಹೊರತಾಗಿಯೂ, ಇರಾನ್‌ಗೆ ಸೇರಿದ ಕನಿಷ್ಠ 34 ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯ ಮೂಲಕ ಯಶಸ್ವಿಯಾಗಿ ಸಂಚರಿಸಿವೆ ಎಂದು ವರದಿಯಾಗಿದೆ.

ಏ.13ರಂದು ದಿಗ್ಬಂಧನ ಪ್ರಾರಂಭವಾದಾಗಿನಿಂದ ಇರಾನ್ ಸಂಬಂಧಿತ 19 ಟ್ಯಾಂಕರ್‌ಗಳು ಪರ್ಷಿಯನ್ ಕೊಲ್ಲಿಯಿಂದ ಹೊರಹೋಗಿವೆ ಮತ್ತು 15 ಟ್ಯಾಂಕರ್‌ಗಳು ಅರೇಬಿಯನ್ ಸಮುದ್ರದಿಂದ ಒಳಬಂದಿವೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದೆ. ಹೊರಹೋದ ಹಡಗುಗಳ ಪೈಕಿ ಆರು ಹಡಗುಗಳು ಸುಮಾರು 10.7 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಸಾಗಿಸಿವೆ ಎಂದು ದೃಢಪಟ್ಟಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆ ಬೆಲೆಗಿಂತ ಬ್ಯಾರೆಲ್‌ಗೆ 10 ಡಾಲರ್ ರಿಯಾಯಿತಿ ದರದಲ್ಲಿ ಮಾರಾಟವಾದರೂ, ಈ ಸಾಗಾಟದಿಂದ ಇರಾನ್‌ಗೆ ಸುಮಾರು 910 ಮಿಲಿಯನ್ ಡಾಲರ್ ಆದಾಯ ಲಭಿಸಿದೆ ಎಂದು ಅಂದಾಜಿಸಲಾಗಿದೆ.

ತಂತ್ರಗಳು ಮತ್ತು ತಪಾಸಣೆ: ಇರಾನ್ ಧ್ವಜ ಹೊಂದಿರುವ ಡೊರೆನಾ' ಎಂಬ ಸೂಪರ್ ಟ್ಯಾಂಕರ್ ತನ್ನ ಗುರುತಿನ ಸಂಕೇತಗಳನ್ನು(ಟ್ರಾನ್ಸ್ ಪಾಂಡರ್) ಆಫ್ ಮಾಡುವ ಮೂಲಕ ಅಮೆರಿಕದ ಕಣ್ಗಾವಲು ತಪ್ಪಿಸಿ ಸಾಗಿದೆ. ಅಂಕಿ-ಅಂಶಗಳ ಪ್ರಕಾರ, ವರ್ಟೆಕ್ಸ್ ಹಡಗು ಏ.17ರಂದು ಇರಾನ್ ಸಮುದ್ರ ಗಡಿಯನ್ನು ದಾಟಿದ್ದು, ಮಲೇಷ್ಯಾ ಕರಾವಳಿಯಲ್ಲಿ ತೈಲವನ್ನು ಮತ್ತೊಂದು ಹಡಗಿಗೆ ವರ್ಗಾಯಿಸುವ ಮೂಲಕ ಮೂಲವನ್ನು ಮರೆಮಾಚಿದೆ. ಕಳೆದ ವರ್ಷ ಅಮೆರಿಕದಿಂದ ನಿರ್ಬಂಧಕ್ಕೆ ಒಳಗಾಗಿದ್ದ ಮುರ್ಲಿ ಕಿಶನ್ ಮತ್ತು ಅಲಿಸಿಯಾ ಹಡಗುಗಳು ಏ.14ರಂದು ಜಲಸಂಧಿ ಪ್ರವೇಶಿಸಿವೆ.

ಮಿಲಿಟರಿ ಕಾರ್ಯಾಚರಣೆ: ದಿಗ್ಬಂಧನ ಆರಂಭವಾದಾಗಿನಿಂದ ಅಮೆರಿಕ ಪಡೆಗಳು 28 ಹಡಗುಗಳನ್ನು ಮರಳಿ ಬಂದರಿಗೆ ಕಳುಹಿಸಿವೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ಮಂಗಳವಾರ ತಿಳಿಸಿದೆ. ಈವರೆಗೆ ಒಮಾನ್ ಕೊಲ್ಲಿಯಲ್ಲಿ ಒಂದು ಕಂಟೈನರ್ ಹಡಗನ್ನು ವಶಕ್ಕೆ ಪಡೆಯಲಾಗಿದೆ ಮತ್ತು ಇಂಡೋ-ಪೆಸಿಫಿಕ್ ವಲಯದಲ್ಲಿ ಒಂದು ಟ್ಯಾಂಕರ್ ಅನ್ನು ತಪಾಸಣೆ ಮಾಡಲಾಗಿದೆ. ಈ ಕಾರ್ಯತಂತ್ರ ಯಶಸ್ವಿಯಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದು, ಅಂತಿಮ ಒಪ್ಪಂದವಾಗುವವರೆಗೆ ದಿಗ್ಬಂಧನ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಇರಾನ್ ಹೊಸ ಆದೇಶ: ಏ.18ರಂದು ಹಾರ್ಮುಜ್ ಜಲಸಂಧಿಯ ನಿಯಂತ್ರಣ ತನ್ನ ಹಳೆಯ ಸ್ಥಿತಿಗೆ ಮರಳಿದೆ ಎಂದು ಇರಾನ್ ನೌಕಾಪಡೆ ಘೋಷಿಸಿದೆ. ಎಲ್ಲಾ ಹಡಗುಗಳ ಸಂಚಾರಕ್ಕೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನೌಕಾಪಡೆಯ ಅನುಮತಿ ಕಡ್ಡಾಯ ಎಂದು ಇರಾನ್ ಆದೇಶಿಸಿದೆ. ಹೊಸ ಆದೇಶದ ಪ್ರಕಾರ, ನಾಗರಿಕ ಹಡಗುಗಳು ಇರಾನ್ ಸೂಚಿಸಿದ ಮಾರ್ಗದಲ್ಲೇ ಚಲಿಸಬೇಕು ಮತ್ತು ಮಿಲಿಟರಿ ಹಡಗುಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.



ವಿಮೆ ಇಲ್ಲ, ಕಾಯುತ್ತಿರುವ ಹಡಗುಗಳು

ಇತ್ತೀಚಿನ ಸ್ಯಾಟಲೈಟ್ ಚಿತ್ರಗಳು ಅರಬ್ಬಿ ಸಮುದ್ರದ ಉತ್ತರ ಭಾಗದಲ್ಲಿ ಅಮೆರಿಕದ ನೌಕಾಪಡೆ, ತನ್ನ ಕಣ್ಗಾವಲನ್ನು ಹೆಚ್ಚಿಸಲು ಹೆಚ್ಚಿನ ಯುದ್ಧನೌಕೆಗಳನ್ನು ನಿಯೋಜಿಸಿರುವುದನ್ನು ದೃಢಪಟ್ಟಿದೆ. ಘೋಸ್ಟ್ ಫ್ಲೀಟ್ ಎಂದು ಕರೆಯಲ್ಪಡುವ ಇರಾನ್ ಟ್ಯಾಂಕರ್‌ಗಳು ಬಳಸುವ ರಹಸ್ಯ ಮಾರ್ಗಗಳನ್ನು ಬಂದ್ ಮಾಡುವುದು ಇದರ ಮುಖ್ಯ ಉದ್ದೇಶ. ಇದೇ ವೇಳೆ, ಅಮೆರಿಕ ಮತ್ತು ಇರಾನ್ ಎರಡೂ ರಾಷ್ಟ್ರಗಳ ಸ್ಪಷ್ಟ ಅನುಮತಿ ಇಲ್ಲದೆ ಸಂಚರಿಸುವ ಹಡಗುಗಳಿಗೆ ಲಂಡನ್‌ನ ವಿಮಾ ಕಂಪನಿಗಳು ವಿಮಾ ಸೌಲಭ್ಯ ಸ್ಥಗಿತಗೊಳಿಸಿವೆ. ಈ ತೀವ್ರ ಭದ್ರತಾ ಕ್ರಮಗಳಿಂದಾಗಿ 50ಕ್ಕೂ ಹೆಚ್ಚು ವಾಣಿಜ್ಯ ಹಡಗುಗಳು ಅಂತಾರಾಷ್ಟ್ರೀಯ ಸಮುದ್ರದಲ್ಲಿ ಲಂಗರು ಹಾಕಿ ಕಾಯುತ್ತಿವೆ.

ಪ್ರಾದೇಶಿಕ ಉದ್ವಿಗ್ನತೆ

ಕಳೆದ ಶನಿವಾರ ಜಲಸಂಧಿ ಸಂಚಾರಕ್ಕೆ ಮುಕ್ತವಾಗಿದೆ ಎಂದು ಇರಾನ್ ಘೋಷಿಸಿದ ನಂತರ ಕನಿಷ್ಠ 30 ಹಡಗುಗಳು ಸಂಚರಿಸಲು ಪ್ರಯತ್ನಿಸಿದ್ದವು. ಆದರೆ, ನಂತರ ಇರಾನ್ ಸೈನಿಕರು ಫ್ರೆಂಚ್ ಕಂಟೈನರ್ ಹಡಗು ಮತ್ತು ಭಾರತೀಯ ಟ್ಯಾಂಕರ್ ಮೇಲೆ ಗುಂಡಿನ ದಾಳಿ ನಡೆಸಿದ್ದರು. ಅಮೆರಿಕ ಮತ್ತು ಇರಾನ್ ಎರಡೂ ಹೇರಿರುವ ನಿರ್ಬಂಧಗಳಿಂದಾಗಿ ಹಡಗುಗಳ ಮಾಲೀಕರು ಇದನ್ನು ಡಬಲ್ ಬ್ಲಾಕೇಡ್(ದ್ವಿಮುಖ ದಿಗ್ಬಂಧನ) ಎಂದು ಕರೆದಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ಯುದ್ಧಕ್ಕೆ ಪೂರಕವಾಗುವ ಯಾವುದೇ ಸರಕು ಸಾಗಣೆಯನ್ನು ತಡೆಯುವುದು ಅಮೆರಿಕದ ಮುಖ್ಯ ಉದ್ದೇಶ.

ಕಿರುಸುದ್ದಿ

ನೇಪಾಳದಲ್ಲಿ ಪ್ರತಿಭಟನೆ: ಗೃಹ ಸಚಿವ ರಾಜೀನಾಮೆ

ಕಠ್ಮಂಡು: ಜೆನ್ ಝಿ ಪ್ರತಿಭಟನೆಯಿಂದ ತತ್ತರಿಸಿದ ನೇಪಾಳದಲ್ಲಿ ಪ್ರತಿಭಟನೆಕಾವು ಕಡಿಮೆಯಾಗಿ ನೂತನ ಸರ್ಕಾರದ ಆಡಳಿತ ಆರಂಭವಾದ ಬೆನ್ನಲ್ಲೇ ಮತ್ತೆ ಸಾರ್ವಜನಿಕ ಆಕ್ರೋಶ ಭುಗಿಲೆದ್ದಿದ್ದು, ಗೃಹ ಸಚಿವ ಸುಧನ್ ಗುರುಂಗ್ ರಾಜೀನಾಮೆ ನೀಡಿದ್ದಾರೆ. ಭಾರತ-ನೇಪಾಳ ಗಡಿಯಲ್ಲಿ ನೇಪಾಳದ ಸುಂಕ ಜಾರಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಸರ್ಕಾರದ ವಿರುದ್ಧ ಧಂಗೆ ಎದ್ದಿದ್ದಾರೆ. ಇದು ಸರಕುಗಳ ಸುಲಭ ಹರಿವನ್ನು ನಿರ್ಬಂಧಿಸುತ್ತಿದೆ. ಈ ಸುಂಕ ನೀತಿಯಿಂದ ನೇಪಾಳದ ಜನರಿಗೆ ಉತ್ಪನ್ನಗಳನ್ನು ದುಬಾರಿಯಾಗುತ್ತಿದೆ ಎಂದು ಜನರು ಆಕ್ರೋಶಗೊಂಡಿದ್ದಾರೆ. ಗಡಿ ತೆರಿಗೆ ನೀತಿಯು ಸಾರ್ವಜನಿಕ ಆಕ್ರೋಶವನ್ನು ಹುಟ್ಟುಹಾಕಿದೆ. ಭಾರತದಿಂದ ಆಮದು ಮಾಡಿಕೊಳ್ಳುವ 100 ರೂ. ಗಳಿಗಿಂತ ಹೆಚ್ಚು ಮೌಲ್ಯದ ಸರಕುಗಳ ಮೇಲೆ ಕಡ್ಡಾಯ ಸುಂಕವನ್ನು ವಿಧಿಸುವ ಸರ್ಕಾರದ ನಿರ್ಧಾರವು ಅಶಾಂತಿಗೆ ಪ್ರಮುಖ ಪ್ರಚೋದನೆಯಾಗಿದೆ. ಭಾರತದ ಗಡಿ ಚೆಕ್‌ಪೋಸ್ಟ್‌ಗಳಲ್ಲಿ ನೇಪಾಳ ಪೊಲೀಸರು ಮತ್ತು ಜನರ ನಡುವಿನ ಘರ್ಷಣೆಯ ವಿಡಿಯೋಗಳು ವೈರಲ್ ಆಗುತ್ತಿವೆ.

ಮಾಲೆಗಾಂವ್ ಪ್ರಕರಣದ 4 ಆರೋಪಿಗಳ ಬಿಡುಗಡೆ

ಮುಂಬೈ: 2006ರ ಮಾಲೆಗಾಂವ್ ಸರಣಿ ಬಾಂಬ್ ಸ್ಫೋಟ ಪ್ರಕರಣದ ನಾಲ್ವರು ಆರೋಪಿಗಳನ್ನು ಬಾಂಬೆ ಹೈಕೋರ್ಟ್ ಬುಧವಾರ ಬಿಡುಗಡೆ ಮಾಡಿದೆ. 31 ಜನರ ಸಾವಿಗೆ ಕಾರಣವಾದ ಈ ಘಟನೆಯ 19 ವರ್ಷಗಳ ನಂತರ ಎಲ್ಲಾ ಭಯೋತ್ಪಾದನೆಯ ಆರೋಪಗಳನ್ನು ರದ್ದುಗೊಳಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್ ಮತ್ತು ನ್ಯಾಯಮೂರ್ತಿ ಶ್ಯಾಮ್ ಚಂದಕ್ ಅವರನ್ನೊಳಗೊಂಡ ವಿಭಾಗೀಯ ಪೀಠ, ರಾಜೇಂದ್ರ ಚೌಧರಿ, ಧನ್ ಸಿಂಗ್, ಮನೋಹರ್ ರಾಮ್ ಸಿಂಗ್ ನರ್ವಾರಿಯಾ ಮತ್ತು ಲೋಕೇಶ್ ಶರ್ಮಾ ಸಲ್ಲಿಸಿದ್ದ ಮೇಲ್ಮನವಿಗಳನ್ನು ಪುರಸ್ಕರಿಸಿದೆ. ಭಾರತೀಯ ದಂಡ ಸಂಹಿತೆ ಮತ್ತು ಯುಎಪಿಎ ಕಾಯ್ದೆಯಲ್ಲಿ ಆರೋಪ ಹೊರಿಸಿದ್ದ 2023ರ ವಿಶೇಷ ಎನ್‌ಐಎ ನ್ಯಾಯಾಲಯದ ಆದೇಶ ರದ್ದಾಗಿದೆ.

ಸೆಪ್ಟೆಂಬರ್ 8, 2006ರಂದು ಮಾಲೆಗಾಂವ್‌ನಲ್ಲಿ ನಾಲ್ಕು ಸ್ಫೋಟಗಳು ಸಂಭವಿಸಿದ್ದವು. ಹಮೀದಿಯಾ ಮಸೀದಿ ಮತ್ತು ಬಡಾ ಕಬರಿಸ್ತಾನ್ ಆವರಣದಲ್ಲಿ ಮೂರು ಬಾಂಬ್‌ಗಳು ಹಾಗೂ ಮುಶಾವರತ್ ಚೌಕ್‌ನಲ್ಲಿ ನಾಲ್ಕನೇ ಬಾಂಬ್ ಸ್ಫೋಟಗೊಂಡಿತ್ತು. ಈ ಸ್ಫೋಟಗಳಲ್ಲಿ 31 ಜನರು ಮೃತಪಟ್ಟಿದ್ದು, 312 ಜನರು ಗಾಯಗೊಂಡಿದ್ದರು. ಮಹಾರಾಷ್ಟ್ರ ಭಯೋತ್ಪಾದನಾ ವಿರೋಧಿ ದಳ(ಎಟಿಎಸ್) ಮತ್ತು ಸಿಬಿಐ ನಡೆಸಿದ ಆರಂಭಿಕ ತನಿಖೆಯಲ್ಲಿ ಒಂಬತ್ತು ಮುಸ್ಲಿಂ ವ್ಯಕ್ತಿಗಳನ್ನು ಬಂಧಿಸಲಾಗಿತ್ತು. 2016ರಲ್ಲಿ ವಿಶೇಷ ನ್ಯಾಯಾಲಯ ಅವರ ಬಿಡುಗಡೆಗೆ ಆದೇಶಿಸಿತ್ತು. 2011ರಲ್ಲಿ ತನಿಖೆ ಕೈಗೆತ್ತಿಕೊಂಡ ಎನ್‌ಐಎ, ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಬಂಧಿಸಿತ್ತು.

ಪ.ಬಂಗಾಳ, ಅಸ್ಸಾಮಿನಲ್ಲಿ ಕಾಂಗ್ರೆಸ್ ಸೋಲು ಖಚಿತ

ಕೋಲ್ಕತ್ತಾ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ಅವಹೇಳನ ನಡೆಸುವ ಮೂಲಕ ರಾಜಕೀಯ ಚರ್ಚೆಯನ್ನು ಅತ್ಯಂತ ಕೀಳುಮಟ್ಟಕ್ಕಿಳಿಸಿರುವುದು ಅವರು ಗಾಂಧಿ ಕುಟುಂಬದ ಜತೆಗೆ ಹೊಂದಿರುವ ನಿಕಟ ನಂಟಿನ ಪರಿಣಾಮವಾಗಿದೆ. ಕಾಂಗ್ರೆಸಿನ ಋಣಾತ್ಮಕ ನಡವಳಿಕೆಯಿಂದಾಗಿ ಪ.ಬಂ.ದಲ್ಲಿ ಕಾಂಗ್ರೆಸ್ ಈ ಬಾರಿ ಖಾತೆ ತೆರೆಯಲೂ ತಿಣುಕಾಡಬೇಕಿದೆ. ಅಸ್ಸಾಮಿನಲ್ಲಿ ಕೂಡ ಗ್ರಾಂಡ್ ಓಲ್ಡ್ ಪಾರ್ಟಿಗೆ ದೊಡ್ಡ ಸೋಲು ಕಾದಿದೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಬುಧವಾರ ಭವಿಷ್ಯ ನುಡಿದಿದ್ದಾರೆ. ಪ.ಬಂ.ದಲ್ಲಿ ಕೇವಲ ಬಿಜೆಪಿ ಶಾಸಕರ ಆಯ್ಕೆ ಅಥವಾ ಬಿಜೆಪಿ ಸರಕಾರವನ್ನು ತರುವುದಕ್ಕಾಗಿ ನೀವು ಮತ ನೀಡುತ್ತಿಲ್ಲ, ಬದಲಿಗೆ ರಾಜ್ಯದ ಆಮೂಲಾಗ್ರ ಪರಿವರ್ತನೆಗಾಗಿ ಬಿಜೆಪಿ ಬೆಂಬಲಿಸಿ ಎಂದು ಅವರು ಮನವಿ ಮಾಡಿಕೊಂಡರು.

ಅವರು ನ್ಯೂ ಬರಾಕ್‌ಪುರ್ ಬಳಿಯ ದಮ್ ದಮ್ ಮತ್ತು ಉತ್ತರ 24 ಪರಗಣಾಸ್‌ನ ಹಬ್ರಾದಲ್ಲಿ ನಡೆದ ಚುನಾವಣಾ ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಿ, ಕಾಂಗ್ರೆಸ್ ಹಲವು ರಾಜ್ಯಗಳಲ್ಲಿ ಶೋಚನೀಯ ಸೋಲನ್ನು ಉಣ್ಣುವತ್ತ ಸಾಗುತ್ತಿದೆ. ತಮಿಳ್ನಾಡು ಮತ್ತು ಪುದುಚೇರಿಗಳಲ್ಲಿ ಕಾಂಗ್ರೆಸ್ ಎರಡಂಕೆ ದಾಡುವುದಿಲ್ಲ. ಪ.ಬಂ.ದಲ್ಲಿ ಖಾತೆ ತೆರೆಯಲೂ ಕಷ್ಟವಾಗಲಿದೆ. ಅಸ್ಸಾಮಿನಲ್ಲಿ ಈ ಹಿಂದೆಂದಿಗಿಂತ ದೊಡ್ಡ ಸೋಲನ್ನು ಅನುಭವಿಸಲಿದೆ ಎಂದರು.

ಮಮತಾ ದೀದಿಯವರೇ, ಕಾಂಗ್ರೆಸ್ ಜೊತೆಗಿನ ನಿಮ್ಮ ನಂಟು ನಿಮ್ಮ ರಾಜಕೀಯವಾಗಿ ನಿಮ್ಮನ್ನು ಇನ್ನಷ್ಟು ಹದಗೆಡಿಸಲಿದೆ ಎಂದು ಅವರು ಎಚ್ಚರಿಸಿದರು.

ಮೋದಿ ನೀಡಿದ 10 ರೂ. ನೋಟಿಗೆ ಭಾರೀ ಬೇಡಿಕೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ ರ‍್ಯಾಲಿ ವೇಳೆ ಸಣ್ಣ ಅಂಗಡಿಯೊಂದರಿಂದ 10 ರೂ. ಝುಲ್ಮುರಿ ಸವಿದ ವಿಡಿಯೋ ಎಲ್ಲೆಡೆ ವೈರಲ್ ಆಗಿತ್ತು. ಇದರ ಬೆನ್ನಲ್ಲೇ ಮೋದಿ ನೀಡಿದ 10



ರೂ. ನೋಟಿಗೆ ಭಾರೀ ಬೇಡಿಕೆ ಬಂದಿದೆ.

ಝುಲ್ಮುರಿ ಅಂಗಡಿ ಮಾಲೀಕನಿಗೆ ಮೋದಿ ನೀಡಿದ ಹತ್ತು ರೂಪಾಯಿ ತನಗೆ ನೀಡಿದರೆ ಅದರ ಬದಲಿಗೆ 1,11,000 ರೂ. ನೀಡುವುದಾಗಿ ಹರ್ಯಾಣದ ವ್ಯಕ್ತಿಯೊಬ್ಬರು ಬೇಡಿಕೆ ಇಟ್ಟಿದ್ದಾರೆ. ಈ ವಿಚಾರ ಇದೀಗ ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ಸದ್ದು ಮಾಡಿದೆ. ಝುಲ್ಮುರಿ ಸವಿದ ಬಳಿಕ ತುಂಬಾ ರುಚಿಯಾಗಿದೆ ಎಂದು ಮೋದಿ ಮೆಚ್ಚುಗೆ ಸೂಚಿಸಿದ್ದರು. ಝುಲ್ಮುರಿ ಸವಿಯುತ್ತಲೇ ಮೋದಿ ಅವರು ಅಲ್ಲಿ ನೆರೆದಿದ್ದ ಸ್ಥಳೀಯ ಮಹಿಳೆಯರು ಮತ್ತು ಮಕ್ಕಳೊಂದಿಗೆ ಮಾತನಾಡಿದ್ದರು. ಅಲ್ಲದೇ ತಾವು ಸವಿಯುತ್ತಿದ್ದ ಝುಲ್ಮುರಿಯನ್ನು ಅಲ್ಲಿನ ಮಕ್ಕಳಿಗೆ ಹಂಚಿದ್ದರು.

ತಾವು ಝುಲ್ಮುರಿ ಸೇವಿಸುತ್ತಿದ್ದ ಫೋಟೋ ಮತ್ತು ವಿಡಿಯೋವನ್ನು ಮೋದಿ ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದು, ಅದು ಕೆಲವೇ ಗಂಟೆಗಳಲ್ಲಿ ಸುಮಾರು 100 ಮಿಲಿಯನ್ ವೀಕ್ಷಣೆಯನ್ನು ಪಡೆದುಕೊಂಡಿದೆ ಎಂದು ವರದಿಯಾಗಿದೆ.

ಭಕ್ತರ ದರ್ಶನಕ್ಕೆ ಕೇದಾರನಾಥ ದೇಗುಲ ಮುಕ್ತ

ಕೇದಾರನಾಥ(ಉತ್ತರಾಖಂಡ): ಪವಿತ್ರ ಕೇದಾರನಾಥ ದೇಗುಲದ ದ್ವಾರವನ್ನು ಶಾಸ್ತ್ರೋಕ್ತವಾಗಿ ಬುಧವಾರ ಭಕ್ತರಿಗೆ ತೆರೆಯಲಾಯಿತು. ಈ ವೇಳೆ ಭಕ್ತರಿಂದ ಹರ ಹರ ಮಹಾದೇವ ಮತ್ತು ಜೈ ಬಾಬಾ ಕೇದಾರ ಘೋಷಣೆಗಳು ಮೊಳಗಿದವು. ಬೆಳಗ್ಗೆ 8ಕ್ಕೆ ಧಾರ್ಮಿಕ ಆಚರಣೆಗಳು, ವೈದಿಕ ಮಂತ್ರಗಳ ನಡುವೆ ದೇಗುಲದ ದ್ವಾರ ತೆರೆಯಲಾಯಿತು. ದೇಗುಲವನ್ನು 51 ಕ್ವಿಂಟಾಲ್ ಹೂವುಗಳಿಂದ ಅಲಂಕರಿಸಿದ್ದು, ಇದೊಂದು ಭವ್ಯ ರೋಮಾಂಚಕ, ದೈವಿಕ ಕ್ಷಣವಾಗಿ ಮಾರ್ಪಟ್ಟಿತು. ಪವಿತ್ರ ಚಾರ್ ದಾಮ್ ಯಾತ್ರೆಯ ಭಾಗವಾಗಿರುವ ಕೇದಾರನಾಥ ದೇಗುಲದಲ್ಲಿ ಶಿವನ ಆಶೀರ್ವಾದ ಪಡೆಯಲು ದೇಶ ಮತ್ತು ವಿದೇಶದ ಸಾವಿರಾರು ಭಕ್ತರು ಕಠಿಣ ಯಾತ್ರೆಯನ್ನು ನಡೆಸುತ್ತಾರೆ.

ಚಳಿಗಾಲದಲ್ಲಿ ಆರು ತಿಂಗಳ ಕಾಲ ದೇಗುಲ ಮುಚ್ಚುವುದರಿಂದ, ಈ ಅವಧಿಯಲ್ಲಿ ದೇಗುಲ ಬಾಗಿಲು ತೆರೆಯಲಾಗುತ್ತದೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ವರ್ಷ | ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಪ್ರಧಾನಿ ಮೋದಿ

ಯಾವುದೇ ರೀತಿಯ ಭಯೋತ್ಪಾದನೆಗೆ ಭಾರತ ಬಗ್ಗಲ್ಲ

ಹೊಸದಿಲ್ಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ವರ್ಷ ತುಂಬಿದ ಸಂದರ್ಭದಲ್ಲಿ ಅಗಲಿದ ನತದೃಷ್ಟ ಬಂಧುಗಳಿಗೆ ಬುಧವಾರ ಶ್ರದ್ಧಾಂಜಲಿ ಸಲ್ಲಿಸಿದ ಪ್ರಧಾನಿ ನರೇಂದ್ರ ಮೋದಿಯವರು, ಅಗಲಿದ ಬಂಧುಗಳ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ. 2025ರ ಏ.22ರಂದು ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಧರ್ಮ ಕೇಳಿ ಬರ್ಬರ ನರಮೇಧ ಎಸಗಿದ ಪಾಕ್ ಪ್ರಾಯೋಜಿತ ಭಯೋತ್ಪಾದಕರ ಕ್ರೌರ್ಯವನ್ನು ಭಾರತ ಎಂದೂ ಮರೆಯದು. ಈ ದಾಳಿ ಭಾರತದ ಆತ್ಮಸಾಕ್ಷಿಯನ್ನು ತೀವ್ರವಾಗಿ ಕಾಡಿದ್ದುಷ್ಟ್ರಿ, ಯಾವುದೇ ರೀತಿಯ ಭಯೋತ್ಪಾದನೆಗೆ ದೇಶ ತಲೆಬಾಗದು ಎಂದು ಘೋಷಿಸಿದ್ದಾರೆ.



ಕಳೆದ ವರ್ಷ ಇದೇ ದಿನ ಪಹಲ್ಗಾಮ್‌ನಲ್ಲಿ ಕ್ರೂರ ಹತ್ಯಾಕಾಂಡದಲ್ಲಿ ಬಲಿಯಾದ ಅಮಾಯಕರನ್ನು ಸ್ಮರಿಸಿಕೊಂಡ ಅವರು, ಈ ಬಂಧುಗಳನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಅವರ ಅಗಲುವಿಕೆಯ ನೋವಿನಲ್ಲಿನಲುಗಿರುವ ಕುಟುಂಬಗಳ ಜೊತೆನನ್ನ ಭಾವನೆಗಳೂ ಇವೆ ಎಂದು ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಒಂದು ರಾಷ್ಟ್ರವಾಗಿ ನಾವು ದುಃಖ ಮತ್ತು ದೃಢ ಸಂಕಲ್ಪದಲ್ಲಿ ಯಾವತ್ತೂ ಒಂದಾಗಿ ನಿಲ್ಲುತ್ತೇವೆ.ಯಾವುದೇ ರೀತಿಯ ಭಯೋತ್ಪಾದನೆಗೆ ಭಾರತ ಬಗ್ಗುವುದಿಲ್ಲ. ಭಯೋತ್ಪಾದಕರ ಈ ಹೀನ ಸಂಚು ಎಂದೂ ಯಶಸ್ವಿಯಾಗಲು ಬಿಡುವುದಿಲ್ಲ ಎಂದು ಅವರು ಸಾರಿದರು.

ಸುಂದರ ಪ್ರವಾಸಿ ತಾಣವಾದ ಪಹಲ್ಗಾಮ್‌ಗೆ ಹೋಗಿದ್ದ ಪ್ರವಾಸಿಗರ ಮೇಲೆ ಹೇಯ ದಾಳಿ ನಡೆಸಿದ್ದ ಜಿಹಾದಿ ಭಯೋತ್ಪಾದಕರು 26ಮಂದಿಯನ್ನು ಅವರ ಧರ್ಮ ಕೇಳಿ ಇತರ ಮತೀಯರಿಂದ ಪ್ರತ್ಯೇಕಿಸಿ ಕುಟುಂಬದ ಮಹಿಳೆಯರು, ಮಕ್ಕಳೆದುರೇ ಹಿಂದು ಪುರುಷರನ್ನು ಗುಂಡಿಕ್ಕಿ ಹತ್ಯೆಗೈದು ಅಟ್ಟಹಾಸ ಮೆರೆದಿದ್ದರು.

ಪಹಲ್ಗಾಮ್‌ನ ಬೈಸರಣ್ ಕಣಿವೆಯಲ್ಲಿ ದಾಳಿ ನಡೆದ ಸ್ಥಳದಲ್ಲಿ ಕಪ್ಪು ಅಮೃತಶಿಲೆಯೊಂದರ ಸ್ಮಾರಕ ನಿರ್ಮಿಸಿ ಅದರಲ್ಲಿ ಬಲಿಯಾದ ಎಲ್ಲ 26 ಮಂದಿ ಸಂತ್ರಸ್ತರ ಹೆಸರುಗಳನ್ನು ಬರೆದು ಶ್ರದ್ಧಾಂಜಲಿ ಸಲ್ಲಿಸಲಾಗಿತ್ತು. ಈ ಸ್ಮಾರಕ ಲಿಡ್ಡರ್ ನದಿಯ ದಡದಲ್ಲಿ ತಲೆ ಎತ್ತಿ ನಿಂತಿದೆ.

ಕುಕೃತ್ಯಗಳಿಗೆ ಉತ್ತರ ಖಾತ್ರಿ: ಸೇನೆ

ಪ್ರಧಾನಿಯವರ ಪೋಸ್ಟ್‌ಗೆ ಕೆಲವೇ ನಿಮಿಷಗಳ ಮುನ್ನ ಭಾರತೀಯ ಸೇನೆಯು, ''ಭಾರತ ವಿರುದ್ಧದ ಕುಕೃತ್ಯಗಳಿಗೆ ಉತ್ತರ ಖಾತ್ರಿ ಇರುತ್ತದೆ. ಮಾತ್ರವಲ್ಲದೆ ಯಾವತ್ತೂ ನ್ಯಾಯ ಒದಗಿಸಲಾಗುತ್ತದೆ ''ಎಂದೂ ಎಕ್ಸ್‌ನಲ್ಲಿ ತಿಳಿಸಿತ್ತು.ಅಲ್ಲದೆ, ಮುನ್ನಾ ದಿನ ಮಾಡಿದ್ದ ಇನ್ನೊಂದು ಪೋಸ್ಟ್‌ನಲ್ಲಿ, ಭಯೋತ್ಪಾದಕ ಸಂಚುಕೋರರಿಗೆ ಖಡಕ್ ಎಚ್ಚರಿಕೆ ನೀಡಿದ್ದ ಭಾರತೀಯ ಸೇನೆಯು, ಮಾನವೀಯತೆಯ ಗಡಿಗಳನ್ನು ಮೀರಿದಾಗ ನಿರ್ಣಾಯಕ ಉತ್ತರ ಕಾದಿರುತ್ತದೆ. ನ್ಯಾಯ ಒದಗಿಸಲಾಗುತ್ತದೆ ಮತ್ತು ಭಾರತ ಒಂದಾಗಿ ಎದ್ದು ನಿಲ್ಲುತ್ತದೆ ಎಂದು ಒತ್ತಿ ಹೇಳಿತ್ತು. ಇದರ ಜತೆಗೆ ಆಪರೇಷನ್ ಸಿಂದೂರ್‌ನ್ನು ಸಂಕೇತಿಸುವ ಗ್ರಾಫಿಕ್ ಒಂದನ್ನೂ ಪೋಸ್ಟ್ ಮಾಡಲಾಗಿತ್ತು. ಆಪರೇಷನ್ ಸಿಂದೂರ್ ಮೂಲಕ ಗಡಿಯಾಚೆಯ ಲಷ್ಕರ್ ತೊಯ್ಬಾ, ಜೈಶ್ ಇ ಮೊಹಮ್ಮದ್, ಹಿಜ್ಬುಲ್ ಮುಜಾಹಿದ್ದೀನ್‌ನ 9 ಭಯೋತ್ಪಾದಕ ನೆಲೆಗಳು ನಾಶಗೊಳಿಸಲಾಗಿತ್ತಲ್ಲದೆ, 100ಕ್ಕೂ ಅಧಿಕ ಭಯೋತ್ಪಾದಕರನ್ನು ಕೊಲ್ಲಲಾಗಿತ್ತು. ಪಾಕಿಸ್ತಾನಿ ಸೇನೆ ಭಾರತದ ಮೇಲೆ ದಾಳಿಗೆ ಮುಂದಾಗಿದ್ದರಿಂದ 4 ದಿನಗಳ ಕಾಲ ತೀವ್ರ ಸಂಘರ್ಷ ಉಂಟಾಗಿ ಕೊನೆಗೆ ಪಾಕಿಸ್ತಾನದ ಕೋರಿಕೆಯ ಮೇರೆಗೆ ಮೇ 10ರಂದು ಕದನ ವಿರಾಮ ಘೋಷಿಸಲಾಗಿತ್ತು. ಅನಂತರ , ಭಾರತೀಯ ಭದ್ರತಾ ಪಡೆಗಳು ಜಮ್ಮು-ಕಾಶ್ಮೀರದಲ್ಲಿ ''ಆಪರೇಷನ್ ಮಹಾದೇವ್''ಮೂಲಕ ಈ ನರಮೇಧದಲ್ಲಿ ಪಾಲ್ಗೊಂಡ ಎಲ್ಲ ಭಯೋತ್ಪಾದಕರನ್ನೂ ಹುಡುಕಿ ಹುಡುಕಿ ಕೊಂದುಹಾಕಿದ್ದವು.

ಭಾರತದ ಸೇನಾ ಶಕ್ತಿ ಪ್ರದರ್ಶನ



ಸುಲ್ತಾನ್‌ಪುರ: ಉತ್ತರ ಪ್ರದೇಶದ ಸುಲ್ತಾನ್ಪುರ ಜಿಲ್ಲೆಯ ಪೂರ್ವಾಂಚಲ್ ಎಕ್ಸ್‌ಪ್ರೆಸ್ ವೇನಲ್ಲಿ ತುರ್ತು ಏರ್‌ಸ್ಟ್ರಿಪ್‌ನಲ್ಲಿ ಫೈಟರ್-ಜೆಟ್ ಕಾರ್ಯಾಚರಣೆಗಳನ್ನು ಒಳಗೊಂಡ ಎರಡು ದಿನಗಳ ಭಾರತೀಯ ವಾಯುಪಡೆ(ಐಎಎಫ್) ತಾಲೀಮು ಬುಧವಾರ ಪ್ರಾರಂಭವಾಗಿದೆ.

ಸುಲ್ತಾನ್ಪುರದ ಪೂರ್ವಾಂಚಲ್ ಎಕ್ಸ್‌ಪ್ರೆಸ್ ವೇನಲ್ಲಿ ಟೇಕ್‌ಆಫ್ ಮತ್ತು ಲ್ಯಾಂಡಿಂಗ್ ಅಭ್ಯಾಸ ವೇಳೆ ಜಾಗ್ವಾರ್ ಫೈಟರ್ ಜೆಟ್ ಅನ್ನು ಇಳಿಸುವ ಮೂಲಕ ವಾಯುಪಡೆ ಹೊಸ ಸಾಧನೆಗೈದಿದೆ. ತುರ್ತು ಸಂದರ್ಭಗಳಲ್ಲಿ ಪರ್ಯಾಯ ರನ್ ವೇಗಳಾಗಿ ಎಕ್ಸ್‌ಪ್ರೆಸ್ ವೇಗಳ ಬಳಕೆಯನ್ನು ಪರೀಕ್ಷಿಸಲು ಫೈಟರ್ ವಿಮಾನಗಳು ಟಚ್-ಅಂಡ್-ಗೋ ಕಾರ್ಯಾಚರಣೆಗಳನ್ನು ನಡೆಸುತ್ತಿರುವ ಅರ್ವಲ್-ಕಿರಿ ಕರ್ವತ್ ಏರ್‌ಸ್ಟ್ರಿಪ್‌ನಲ್ಲಿ ಈ ತಾಲೀಮು ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಾಗ್ವಾರ್ ಜತೆಗೆ, ಐಎಎಫ್‌ನ ಸು-30 ಮತ್ತು ಮಿರಾಜ್ ಫೈಟರ್ ಜೆಟ್‌ಗಳು ಸಹ ಪ್ರದರ್ಶನದಲ್ಲಿ ಭಾಗವಹಿಸಿದ್ದವು.

ಕಿರುಸುದ್ದಿ

ಮಸೂದೆ ವಿರೋಧಕ್ಕೆ ಖಂಡನೆ



◆**ಮುಂಡರಗಿ:** ಕೇಂದ್ರ ಸರ್ಕಾರ ದೇಶದ ಮಹಿಳೆಯರಿಗೆ ತರಲು ಹೊರಟಿರುವ ಶೇ.33ರಷ್ಟು ಮಹಿಳಾ ಮೀಸಲಾತಿ ಮಸೂದೆಗೆ ವಿರೋಧ ಪಕ್ಷಗಳು ವಿರುದ್ಧ ಮತ ಚಲಾಯಿಸುವ ಮೂಲಕ ದೇಶದ ಮಹಿಳೆಯರಿಗೆ ಅವಮಾನ ಮಾಡಿ, ಈಗ ಜನರ ಮುಂದೆ ಮೊಸಳೆ ಕಣ್ಣೀರು ಹಾಕುತ್ತಿರುವುದು ನಾಚಿಕೆಗೇಡಿ ಸಂಗತಿ ಎಂದು ಸಾಮಾಜಿಕ ಕಾರ್ಯಕರ್ತ ಮಂಜುನಾಥ ಇಟಗಿ ಆರೋಪಿಸಿದರು. ಈ ಕುರಿತು ಪ್ರಕಟಣೆ ನೀಡಿರುವ ಅವರು, ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳು ನಾವು ಮಹಿಳಾ ಮಸೂದೆ ಪರವಾಗಿದ್ದೇವೆ. ಆದರೆ ದೇಶದ ದಕ್ಷಿಣ ರಾಜ್ಯಗಳಿಗೆ ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಅನ್ಯಾಯವಾಗುತ್ತದೆ ಎಂದು ಮಹಿಳಾ ಮಸೂದೆ ವಿರುದ್ಧ ಮತ ಚಲಾಯಿಸಿದ್ದೇವೆ ಎಂದು ಹೇಳಿಕೆ ನೀಡಿರುವುದು ದುರದೃಷ್ಟಕರ. ಹಾಗಾದರೆ 1971 ರಲ್ಲಿ ಇಂದಿರಾಗಾಂಧಿ ಅವರು ಪ್ರಧಾನಮಂತ್ರಿಯಾಗಿದ್ದಾಗ ಮೊದಲ ಬಾರಿಗೆ ಕ್ಷೇತ್ರ ವಿಂಗಡಣೆ ಮಾಡಲಾಯಿತು. ಆಗ ದಕ್ಷಿಣ ರಾಜ್ಯಗಳಿಗೆ ಲೋಕಸಭಾ ಕ್ಷೇತ್ರಗಳು ಹೇಗೆ ಕಡಿಮೆ ಆದವು, ಆವಾಗ ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳ ಎಂ.ಪಿ ಸ್ಥಾನಗಳು ಕಡಿಮೆ ಆಗಲು ಕಾಂಗ್ರೆಸ್ ಪಕ್ಷ ನೇರ ಹೊಣೆ ಹೊರಬೇಕು. 1971 ರಲ್ಲಿ ಯಾವ ಆಧಾರದಲ್ಲಿ ಕ್ಷೇತ್ರ ಮರು ವಿಂಗಡಣೆ ಮಾಡಲಾಯಿತು. ಈಗ ನರೇಂದ್ರ ಮೋದಿ ಸರ್ಕಾರ ಜಾರಿಗೊಳಿಸಲು ಹೊರಟಿರುವ ಕ್ಷೇತ್ರ ವಿಂಗಡಣೆ ಅಡ್ಡಿ ಮಾಡುತ್ತಿರುವವರು,ಆವಾಗ ಬರದಿರುವ ಸಮಸ್ಯೆ ಈಗ ಏಕೆ?. 2011 ರ ಜನಗಣತಿ ಆಧಾರದ ಮೇಲೆ ಕ್ಷೇತ್ರ ಮರು ವಿಂಗಡಣೆಯನ್ನು ವಿರೋಧ ಮಾಡುವುದು ಬಿಟ್ಟು,ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಮರು ವಿಂಗಡಣೆ ಮಸೂದೆ ಬೆಂಬಲಿಸಬೇಕು ಎಂದು ಆಗ್ರಹಿಸಿದರು.

ವಿದ್ಯುತ್ ಕಂಬ ಸರಿಪಡಿಸಿ



◆**ನವಲಗುಂದ:** ಪಟ್ಟಣದ ಕುರಟ್ಟಿಯವರ ಪ್ಲಾಟಿನಲ್ಲಿ 24X7 ಕುಡಿಯುವ ನೀರು ಪೂರೈಕೆಯ ಕಾಮಗಾರಿ ನಡೆಯುತ್ತಿರುವ ಸಂದರ್ಭದಲ್ಲಿ ವಿದ್ಯುತ್ ಕಂಬ ಬಾಗಿದ್ದು ಅದನ್ನು ಸರಿಪಡಿಸಿ ಮುಂದಾಗುವಂತಹ ಅನಾಹುತವನ್ನು ತಪ್ಪಿಸಬೇಕೆಂದು ಶಿವರಾಜ ಲಕ್ಕುಂಡಿ ಆಗ್ರಹಿಸಿದರು. ಈ ಕುರಿತು ಸಾರ್ವಜನಿಕರೊಂದಿಗೆ ಪುರಸಭೆಯ ಮುಖ್ಯಾಧಿಕಾರಿ ಶರಣು ಪೂಜಾರ ಅವರಿಗೆ ಮನವಿ ನೀಡಿ ಮಾತನಾಡಿದ ಅವರು, ಸುಮಾರು 2 ವರ್ಷ ಆಗುತ್ತಾ ಬಂದರೂ ಸಹ ಕಾಮಗಾರಿ ಸಂದರ್ಭದಲ್ಲಿ ಬಾಗಿರುವಂತಹ ವಿದ್ಯುತ್ ಕಂಬ ಸರಿ ಮಾಡುತ್ತಿಲ್ಲ, ಈ ಕುರಿತು ಪುರಸಭೆಯವರಿಗೆ ಹಾಗೂ ಸಂಬಂಧಪಟ್ಟ ಗುತ್ತಿಗೆದಾರನಿಗೆ ತಿಳಿಸಿದರು ಯಾವುದೇ ಪ್ರಯೋಜನ ವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಮಾತನಾಡಿ, 24X7 ಕುಡಿಯುವ ನೀರು ಪೂರೈಕೆಯ ಕಾಮಗಾರಿ ಸಂದರ್ಭದಲ್ಲಿ ಆಗಿರುವಂತಹ ಯಾವುದೇ ಅವಘಡ ಸರಿಪಡಿಸುವ ಕೆಲಸ ಗುತ್ತಿಗೆದಾರರದ್ದು, ಕುರಟ್ಟಿಯವರ ಪ್ಲಾಟಿನಲ್ಲಿ ಬಾಗಿರುವಂತಹ ಕಂಬವು ಮಳೆ ಗಾಳಿಯ ರಭಸಕ್ಕೆ ಯಾರ ಮೇಲಾದರು ಬಿದ್ದು ಏನಾದರೂ ಅನಾಹುತ ಸಂಭವಿಸಿದರೆ ಯಾರು ಜವಾಬ್ದಾರರು? ಕೂಡಲೇ ಸಂಬಂಧಪಟ್ಟ ಗುತ್ತಿಗೆದಾರರು ಆ ಬಾಗಿರುವಂತಹ ವಿದ್ಯುತ್ ಕಂಬವನ್ನು ಸರಿ ಮಾಡಬೇಕು ಎಂದು ಆಗ್ರಹಿಸಿದರು. ಮಹಮ್ಮದಲಿ ಮಿರ್ಜಿ, ಮಲ್ಲಿಕಾರ್ಜುನಸ್ವಾಮಿ ಮಠಪತಿ, ಗಂಧರ್ವ ಹುಬ್ಬಳ್ಳಿ ಉಪಸ್ಥಿತರಿದ್ದರು.

ನಿಮ್ಮ ಹೆಸರಿನಲ್ಲಿ ಸಸಿ ನೆಡಿ



◆**ಲಕ್ಷ್ಮೇಶ್ವರ:** ತಾಲೂಕು ಕಾನೂನು ಸೇವಾ ಸಮಿತಿ ಲಕ್ಷ್ಮೇಶ್ವರ, ವಕೀಲರ ಸಂಘ ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ಹಾಗೂ ಅರಣ್ಯ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಭೂ ದಿನದ ಪ್ರಯುಕ್ತ ನ್ಯಾಯಲಯದ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು. ಹಿರಿಯ ದಿವಾಣಿ ನ್ಯಾಯಾಧೀಶ ಭರತ್ ಯೋಗಿಶ್ ಕರಗುದರಿ ಮಾತನಾಡಿ, ಭೂಮಿಯೊಂದಿಗೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅವಿನಾಭಾವ ಸಂಬಂಧವಿದ್ದು ಪಾಶ್ಚಾತ್ಯ ಸಂಸ್ಕೃತಿಯಿಂದ ಆದರ ಕೊಂಡಿ ಕಳಚಿದೆ. ಅದನ್ನು ಮತ್ತೆ ಕೂಡಿಸುವದರ ಜೊತೆಗೆ ಪರಿಸರವನ್ನು ಉಳಿಸೋಣ. ಪ್ರತಿಯೊಬ್ಬ ವಕೀಲರು, ಸಿಬ್ಬಂದಿ ತಮ್ಮ ಹೆಸರಿನಲ್ಲಿ ಒಂದು ಸಸಿ ನೆಟ್ಟು ಅದನ್ನು ಕಾಪಾಡುವ ಸಂಕಲ್ಪ ಕೈಗೊಂಡು ನ್ಯಾಯಾಲಯ ಆವರಣವನ್ನು ಸುಂದರ ಪರಿಸರವಾಗಿಸೋಣ ಎಂದರು. ದಿವಾಣಿ ನ್ಯಾಯಾಧೀಶ ಸತೀಶ ಎಂ. ಮಾತನಾಡಿದರು. ಹಿರಿಯ ವಕೀಲ ಎಸ್.ಪಿ.ಬಳಿಗಾರ, ಸಹಾಯಕ ಸರ್ಕಾರಿ ಅಭಿಯೋಜಕಿ ಹೀನಾಕೌಸರ ಗಂಜಿಹಾಳ, ಉಪ ವಲಯ ಅರಣ್ಯಾಧಿಕಾರಿ ಪ್ರಕಾಶ ಕರಗುಪ್ಪಿ, ವಕೀಲರ ಸಂಘದ ಅಧ್ಯಕ್ಷ ಬಿ.ವಿ.ನೇಕಾರ್, ಉಪಾಧ್ಯಕ್ಷ ಎಸ್. ಎಂ.ನಾವಿ, ಪ್ರಧಾನ ಕಾರ್ಯದರ್ಶಿ ವಿ.ಎಸ್.ಪಶುಪತಿಹಾಳ, ಹಿರಿಯ ವಕೀಲರುಗಳಾದ ಬಿ.ಎಸ್.ಘೋಂಗಡಿ, ಮಹೇಶ ಹಾರೋಗೇರಿ, ನ್ಯಾಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು. ಗಸ್ತು ಅರಣ್ಯ ಪಾಲಕ ಮಂಜುನಾಥ ಚೌವ್ಹಾಣ ನಿರೂಪಿಸಿದರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ | ಜಿಲ್ಲಾಧಿಕಾರಿ ಸೂಚನೆ

ಕುಡಿಯುವ ನೀರು ಸಮರ್ಪಕ ಪೂರೈಸಿ



72 ದಿನಗಳಿಗೆ ನೀರು ಲಭ್ಯ

ಜಿಲ್ಲೆಯ ಜಗಳೂರು ಗ್ರಾಮದ ಹತ್ತಿರ ನಿರ್ಮಿಸಿರುವ ಜಲಸಂಗ್ರಹಾಗಾರ ಕೆರೆಯ ಸದ್ಯ ನೀರಿನ ಸಂಗ್ರಹಣಾ ಸಾಮರ್ಥ್ಯ 2510 ಎಂ ಎಲ್ ಡಿ (0.08 ಟಿಎಂಸಿ) ಇದೆ. ಆ ನೀರು ರೋಣ, ಗಜೇಂದ್ರಗಡ ಮತ್ತು ನರೇಗಲ್ ಪಟ್ಟಣಗಳಿಗೆ 7 ತಿಂಗಳಿಗೆ ಸಾಕಾಗುತ್ತದೆ. ನವಿಲು ತೀರ್ಥ ಡ್ಯಾಂ ದಲ್ಲಿ (ಲೈವ್ ಸ್ಟೋರೇಜ್) 8.259 ಟಿಎಂಸಿ ನೀರು, ಭದ್ರಾ ಡ್ಯಾಂ ದಲ್ಲಿ (ಲೈವ್ ಸ್ಟೋರೇಜ್) 25.548 ಟಿಎಂಸಿ ನೀರು, ಶಿಂಗಟಾಲೂರ ಬ್ಯಾರೇಜ್ ದಲ್ಲಿ (ಲೈವ್ ಸ್ಟೋರೇಜ್) 1.828 ಟಿಎಂಸಿ ನೀರು ಸಂಗ್ರಹವಿದೆ. ಪ್ರಸ್ತುತ ಲಭ್ಯವಿರುವ ನೀರು ಮುಂದಿನ 72 ದಿನಗಳಿಗೆ ಸಾಕಾಗಲಿದೆ ಎಂದು ಸಂಬಂಧಿತ ಅಧಿಕಾರಿಗಳು ಸಭೆಗೆ ತಿಳಿಸಿದರು.

> ನೀರಿನ ಸಮಸ್ಯೆ ಉದ್ಭವಿಸಬಹುದಾದ 9 ನಗರ ಸ್ಥಳೀಯ ಸಂಸ್ಥೆಗಳಲ್ಲಿನ 60 ವಾರ್ಡುಗಳನ್ನು ಮುಂಜಾಗ್ರತೆಗಾಗಿ ಗುರುತಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಕುಡಿಯುವ ನೀರು ಕೊರತೆ ಆಗಬಹುದಾದ ವಾರ್ಡುಗಳಲ್ಲಿ ಒಪ್ಪಂದದಾಗ್ಗಿ ಗುರುತಿಸಲಾದ ಹೆಚ್ಚಿನ ಇಳುವರಿ ನೀಡುವ 29 ಬೋರ್‌ವೆಲ್‌ಗಳನ್ನು ಗುರುತಿಸಲಾಗಿದೆ.
>
> ■ **ಬಸನಗೌಡ ಕೋಟೂರ,** ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ

◆**ಗದಗ:** ಪ್ರಸ್ತುತ ಬೇಸಿಗೆ ದಿನಗಳಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆಗೆ ಪ್ರಥಮಾದ್ಯತೆ ಮೇರೆಗೆ ಇಲಾಖಾಧಿಕಾರಿಗಳು ಕಾರ್ಯನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಯುದ್ಧೋಪಾದಿಯಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಖಾಸಗಿ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಸಲು ತಯಾರಿ ಮಾಡಿಟ್ಟುಕೊಳ್ಳಬೇಕು. ಈಗಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದರು.

ಬೇಸಿಗೆ ದಿನಗಳಲ್ಲಿ ಬಿಸಿಲಿನ ತಾಪದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಹಿರಿಯ ನಾಗರಿಕರು, ಗರ್ಭಿಣಿಯರು ಚಿಕ್ಕಮಕ್ಕಳಿಗೆ ಬಿಸಿಲಿನ ತಾಪಮಾನದಿಂದ ಆರೋಗ್ಯ ಸಮಸ್ಯೆ ಉಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಡಿವೈಎಸ್‌ಪಿ ಮಹಾಂತೇಶ ಸಜ್ಜನರ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್., ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ ಕೆ., ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ರಾಜಾರಾಮ್ ಪವಾರ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಎಸ್. ಬುರುಡಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

55 ಗ್ರಾಮ ಗುರುತು

ಗದಗ ಜಿಲ್ಲೆಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆಯಿಲ್ಲ. ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾದ ಒಟ್ಟು 55 ಗ್ರಾಮಗಳನ್ನು ಮುಂಜಾಗ್ರತೆಗಾಗಿ ಗುರುತಿಸಲಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಸಭೆಗೆ ತಿಳಿಸಿದರು.

ಜಾಗೃತಿ ಕಾರ್ಯಕ್ರಮ

ಬೇಸಿಗೆ ದಿನಗಳಲ್ಲಿ ಬಿಸಿಲಿನ ತಾಪ ಹೆಚ್ಚಾಗುವ ಸಂಭವವಿರುವುದರಿಂದ ಹೀಟ್‌ವೇವ್‌ನಿಂದ ಆರೋಗ್ಯ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್. ನೀಲಗುಂದ ತಿಳಿಸಿದರು.

ಶಿಕ್ಷಣ ಬದುಕಿನ ದೊಡ್ಡ ಶಕ್ತಿ: ಜಿ.ಎಸ್. ಪಾಟೀಲ



◆**ಮುಂಡರಗಿ:** ಶಿಕ್ಷಣವೇ ಬದುಕಿನ ದೊಡ್ಡ ಶಕ್ತಿ. ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಶಿಕ್ಷಣದಿಂದಲೇ ಸಮಾಜದಲ್ಲಿ ಸಮಾನತೆ ಸಾಧ್ಯವೆಂದು ಹೇಳಿದ್ದರು. ಅದೇ ಮಾರ್ಗದಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರನ್ನು ದೊಡ್ಡ ಸ್ಥಾನಗಳಿಗೆ ತಲುಪಿಸುವ ಕೆಲಸ ಮಾಡಿದ ರಾಮಣ್ಣ ಮೇಗಲಮನಿ ಅವರ ಕುಟುಂಬದ ಕಾರ್ಯ ನಿಜವಾಗಿಯೂ ಪ್ರಶಂಸನೀಯ ಎಂದು ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಅವರು ಡಂಬಳ ಹೋಬಳಿಯ ಅತ್ತಿಕಟ್ಟಿ ತಾಂಡ ಗ್ರಾಮದಲ್ಲಿ ಮೇಗಲಮನಿ ಕುಟುಂಬದವರಿಂದ ಹಿರಿಯರಾದ ಸೋಮಪ್ಪ ಮತ್ತು ಫಕೀರಪ್ಪ ಸವಿ ನೆನಪಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಹಾಗೂ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಮಾಜಿ ಸಚಿವ ಎಸ್.ಎಸ್.ಪಾಟೀಲ ಮಾತನಾಡಿ, ಸಮಾಜದಲ್ಲಿ ಪ್ರಗತಿ ಸಾಧಿಸಲು ಶಿಕ್ಷಣವೇ ಪ್ರಮುಖ ಸಾಧನವಾಗಿದ್ದು, ಯುವಕರು ಶಿಕ್ಷಣದ ಮೂಲಕ ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದರು.

ಗದಗ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಬಿ.ಅಸೂಟಿ, ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ಮುಂಡರಗಿ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಡಿ.ಡಿ.ಮೋರನಾಳ, ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್., ಗ್ಯಾರಂಟಿ ಸಮಿತಿ ಸದಸ್ಯ ರಾಮಣ್ಣ ಮೇಗಲಮನಿ, ತಾಪಂ ಇಒ ವಿಶ್ವನಾಥ ಹೊಸಮನಿ, ಸಮಾಜ ಕಲ್ಯಾಣ ಅಧಿಕಾರಿ ಬಿಎಸ್. ಯಲಿವಾಳ, ಟಿಹೆಚ್.ಗಂಗಾಧರ ಅಣ್ಣಿಗೇರಿ, ವಿ.ಬಿ.ಸೋಮನಕಟ್ಟಿಮಠ, ಬಸವರಡ್ಡಿ ಬಂಡಿಹಾಳ, ನಾಗರಾಜ ಸಜ್ಜನ, ವಿಶ್ವನಾಥ ಪಾಟೀಲ, ಭುವನೇಶ್ವರ ಕಲ್ಲುಕುಟಿಗರ, ಎಚ್.ಡಿ.ಪೂಜಾರ, ಚೈತ್ರ ಹಿತ್ತಲಮನಿ, ನಾಗಪ್ಪ ಮೇಗಲಮನಿ, ಪ್ರಾಚಾರ್ಯ ಮಹಾಲಿಂಗೇಶ್ವರ ಮೇಗಲಮನಿ, ಆರ್ ಎಫ್‌ಒ ಮಂಜುನಾಥ ಮೇಗಲಮನಿ, ಖ್ಯಾತ ವೈದ್ಯ ಡಾ.ಶರಣಪ್ಪ ಮೇಗಲಮನಿ, ಗ್ರಾಮಸ್ಥರು ಇದ್ದರು. ಪಿಯುಸಿಯಲ್ಲಿ ಉತ್ತಮ ಫಲಿತಾಂಶ ಪಡೆದವರನ್ನು, ಕಲಾವಿದರನ್ನು, ಕುಸ್ತಿ ಪಟುಗಳನ್ನು, ಅಂತಾರಾಷ್ಟ್ರೀಯ ಯೋಗಪಟುಗಳನ್ನು, ವಿವಿಧ ರಂಗದಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ಶಾಸಕರು, ಗ್ರಾಮದ ಹಿರಿಯರು, ಗ್ಯಾರಂಟಿ ಸಮಿತಿ ಸದಸ್ಯರು, ಕುಟುಂಬದ ಸಂಬಂಧಿಕರು ರಾಮಣ್ಣ ಮೇಗಲಮನಿ ಮತ್ತು ಸಂಗವ್ವ ಮೇಗಲಮನಿ ಅವರಿಗೆ ಗೌರವ ಸನ್ಮಾನ ಮಾಡಿದರು.

ದೌರ್ಜನ್ಯ ತಡೆ ಅಕ್ಕಪಡೆ ಕಾರ್ಯ: ಇಟಗಿ



◆**ಧಾರವಾಡ:** ನಗರದ ಕರ್ನಾಟಕ ಬಾಲವಿಕಾಸ ಅಕ್ಯಾಡೆಮಿ ಕಚೇರಿ ಭವನದಲ್ಲಿ ಅಕ್ಯಾಡೆಮಿ ಅಧ್ಯಕ್ಷ ಅಡವೀಶ ಇಟಗಿ ಅಧ್ಯಕ್ಷತೆಯಲ್ಲಿ ಅಕ್ಕ ಪಡೆಯ ಮೊದಲ ಅಕಾರಿಗಳು ಹಾಗೂ ಸಿಬ್ಬಂದಿ ಸಭೆ ಜರುಗಿತು.

ಸಭೆಯಲ್ಲಿ ಮಾತನಾಡಿದ ಅಧ್ಯಕ್ಷ ಅಡವೀಶ ಇಟಗಿ, ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೆ ಸರ್ಕಾರ ಅಕ್ಕಪಡೆ ಯೋಜನೆ ಜಾರಿಗೆ ತಂದಿದ್ದು, ಸಂಕಷ್ಟದಲ್ಲಿ ಇರುವ ಮಹಿಳೆಯರಿಗೆ ಭದ್ರತೆ ಒದಗಿಸಲಿದೆ ಎಂದರು.

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಹಾಗೂ ಅಪ್ರಾಪ್ತ ಹೆಣ್ಣುಮಕ್ಕಳ ಸಂರಕ್ಷಣೆ ಅಕ್ಕಪಡೆಯ ಉದ್ದೇಶ. ಇದು ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಮಹತ್ವಕಾಂಕ್ಷೆ ಯೋಜನೆ. ಕಟ್ಟುನಿಟ್ಟಾಗಿ ಅನುಷ್ಠಾನಿಸಲು ಆದೇಶಿಸಿದರು. ಮಾಲ್, ಜಾತ್ರೆ, ಉತ್ಸವ, ಹಾಸ್ಟೇಲ್, ಕಾಲೇಜು, ಶಿಕ್ಷಣ ಸಂಸ್ಥೆಗಳು, ಟ್ಯೂಷನ್ ಕ್ಲಾಸ್‌ಗಳು ಸೇರಿದಂತೆ ಜನನಿಬೀಡ ಪ್ರದೇಶಗಳಲ್ಲಿ ಅಕ್ಕಪಡೆ ಪೆಟ್ರೋಲಿಂಗ್ ಮೂಲಕ ಜನಜಾಗೃತಿ ಮೂಡಿಸುವಂತೆ ಸೂಚಿಸಿದರು.

ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಮಹಿಳೆಯರ ಆಭರಣ ಕಳ್ಳತನ ಕುರಿತು ಅಕ್ಕಪಡೆಯು ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು. ಅಕ್ಕಪಡೆಗೆ ಪಾಳೆಯ ಪ್ರಕಾರ ಕಾರ್ಯನಿರ್ವಹಣೆ ಜವಾಬ್ದಾರಿ ಇದೆ. ಲ್ಯಾಪ್‌ಟಾಪ್, ಇಂಟರ್‌ನೆಟ್ ಸಹಿತ ಮೊಬೈಲ್ ನೀಡುವ ಕುರಿತಂತೆ ಸರ್ಕಾರದ ಜೊತೆ ಚರ್ಚಿಸುವುದಾಗಿ ತಿಳಿಸಿದ ಅಧ್ಯಕ್ಷ ಇಟಗಿ ತಿಳಿಸಿದರು. ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಹು-ಧ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಮಹಿಳಾ-ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ.ಎಚ್.ಎಚ್. ಕುಕನೂರ, ಕಾರ್ಯದರ್ಶಿ ಅನ್ನಪೂರ್ಣ ಸಂಗಳದ ಇದ್ದರು.

ನಾಳೆಯಿಂದ ಆಧ್ಯಾತ್ಮಿಕ ಪುರಾಣ ಪ್ರವಚನ

◆**ನರಗುಂದ:** ಪಟ್ಟಣದ ರಾಣಿ ಚನ್ನಮ್ಮ ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡ ಆಂಜನೇಯ ಸ್ವಾಮಿ ದೇವಸ್ಥಾನದ ಉದ್ಘಾಟನೆ, ಕಳಸಾರೋಹಣ ಮತ್ತು ನೂತನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಸಮಾರಂಭವು ಏ.28ರಂದು ನೆರವೇರಲಿದೆ.

ಇದರ ನಿಮಿತ್ತ ಏ.24 ರಿಂದ 28 ರವರೆಗೆ ಸಂಜೆ 6 ಗಂಟೆಗೆ ಪ್ರತಿನಿತ್ಯ ಪಂಚಗೃಹ ಗುಡ್ಡದ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿಯಿಂದ ಆಧ್ಯಾತ್ಮಿಕ ಪುರಾಣ ಪ್ರವಚನ ಕಾರ್ಯಕ್ರಮ ಜರುಗಲಿದೆ. ಏ.23ರ ಬೆಳಗ್ಗೆ 6 ಗಂಟೆಗೆ ನಗರದ ಸೋಮಾಪೂರ ಓಣಿಯ ಮಾರುತಿ ದೇವಸ್ಥಾನದಿಂದ ಆಂಜನೇಯಸ್ವಾಮಿ ಮೂರ್ತಿಯನ್ನು ಸಕಲ ವಾದ್ಯಮೇಳಗಳೊಂದಿಗೆ ಪುರಪ್ರವೇಶ ಮಾಡಿಕೊಳ್ಳಲಾಗುವುದು. ಅದೇ ದಿನದಂದು ಸಂಜೆ ಆಂಜನೇಯ ಸ್ವಾಮಿಗೆ ಜಲಾದಿವಾಸ, ಧಾನ್ಯಾದಿವಾಸ, ಫಲಾಧಿವಾಸ, ಕ್ಷೀರಾದಿವಾಸ ಹಾಗೂ ಶಯನಾಧಿವಾಸ ಜರುಗುವುದು.

ಏ.28ರಂದು ಆಂಜನೇಯ ಸ್ವಾಮಿಗೆ ಮಹಾರುದ್ರಾಭಿಷೇಕ, ಅಘೋರ ಹೋಮ-ಹವನಾದಿಗಳೊಂದಿಗೆ ಶ್ರೀಗಳಿಂದ ಜೀವಕಳೆ ತುಂಬಿ ತದನಂತರ ಪೂರ್ಣಾಹುತಿ, ಮಹಾಮಂಗಳಾರತಿಯೊಂದಿಗೆ ಸಕಲ ಕಾರ್ಯಕ್ರಮಗಳು ಸಂಪನ್ನಗೊಳ್ಳುವವು. ಶಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಡಾ.ಗುರುಸಿದ್ಧವೀರ ಶಿವಾಚಾರ್ಯ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಶಾಂತಲಿಂಗ ಸ್ವಾಮೀಜಿ, ಸಿದ್ದಪ್ಪ ಕಲ್ಲಪ್ಪ ಕೋಟಿ ಅಧ್ಯಕ್ಷತೆ ವಹಿಸುವರು. ಶಾಸಕ ಸಿ.ಸಿ. ಪಾಟೀಲ ಉದ್ಘಾಟಿಸುವರು. ಅತಿಥಿಗಳಾಗಿ ಮಾಜಿ ಶಾಸಕ ಬಿ.ಆರ್. ಯಾವಗಲ್ಲ, ಅಭಿಯಂತರ ಎಸ್.ಎ. ಕಾಳಗಿ, ವೆಂಕರಡ್ಡಿ ಹುಚ್ಚರಡ್ಡಿ, ನಿವೃತ್ತ ಪ್ರಾಧ್ಯಾಪಕ ಪಿ.ಎಸ್. ಅಣ್ಣಿಗೇರಿ, ಶಶಿಧರ ಯಲಿಗಾರ, ಬಸವರಾಜ ಗೌಡಪ್ಪ ಬಿಲ್ಲಶಿವಣ್ಣವರ, ಪುರಸಭೆ ಮಾಜಿ ಸದಸ್ಯ ಫಕೀರಪ್ಪ ಹಾದಿಮನಿ, ಮಲ್ಲಿಕಾರ್ಜುನ ಮುನವಳ್ಳಿ, ಕೊಟ್ರಪ್ಪ ಮುದಗಲ್, ಸೋಮೇಶ್ವರ ಕ್ಲಾಥ್ ಸೆಂಟರ್, ಎಸ್. ಆರ್. ಮಠದ, ಎಚ್.ಬಿ. ಅಸೂಟಿ, ರುದ್ರಪ್ಪ ಗಡ್ಡಿ, ರಮೇಶ ಶಾಂತಗೇರಿ, ಡಾ.ಅಲ್ಲಾಭಕ್ಷ ಸರಾವರಿ, ಸಂಗಪ್ಪ ಕೊಣ್ಣೂರ, ನಂದೀಶ ಮಠದ, ಹನಮಂತ ಎಂ. ನಿರೂಪಣೆ ಮಾಡುವರೆಂದು ದೇವಸ್ಥಾನದ ಸದ್ಭಕ್ತ ಮಂಡಳಿ ತಿಳಿಸಿದೆ.

ವಿದ್ಯುತ್ ಟಿಸಿ ದುರಸ್ತಿ ಕೇಂದ್ರ ಸ್ಥಾಪಿಸಿ

◆**ಗಜೇಂದ್ರಗಡ:** ನಗರದ ರೋಣ ರಸ್ತೆಯಲ್ಲಿನ ಹೆಸ್ಕಾಂ ಕಚೇರಿಯ ಆವರಣದಲ್ಲಿ ವಿದ್ಯುತ್ ಟಿಸಿ ದುರಸ್ತಿ ಕೇಂದ್ರ ಸ್ಥಾಪನೆ ಹಾಗೂ ರೈತರಿಗೆ ಅನುಕೂಲವಾಗುವಂತಹ ಹಳೆಯ ಮಾನದಂಡಗಳ ನಿಯಮಾನುಸಾರ ಆರ್.ಆರ್. ನಂಬರ್ ಒದಗಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಘಟಕ ವತಿಯಿಂದ ಮನವಿ ಸಲ್ಲಿಸಲಾಯಿತು.

ಗೌರವಧ್ಯಕ್ಷ ಮಹಾದೇವ ವರ್ಣೇಕರ ಮಾತನಾಡಿ, ರೈತಾಪಿ ವರ್ಗದವರಿಗೆ ಅನುಕೂಲಕರವಾಗುವ ವಿದ್ಯುತ್ ಟಿಸಿ ದುರಸ್ತಿ ಕೇಂದ್ರ ಆರಂಭಿಸಿ ಶೀಘ್ರ ಟಿಸಿ ದೊರೆಯುವಂತೆ ಅನುಕೂಲ ಮಾಡಬೇಕು ಎಂದರು.

ಹೆಸ್ಕಾಂ ಉಪ ವಿಭಾಗಾಧಿಕಾರಿ ವಿರೇಶ ರಾಜೂರ ರೈತರ ಮನವಿ ಸ್ವೀಕರಿಸಿ, ಇದನ್ನು ಮೇಲಾಧಿಕಾರಿಗಳಿಗೆ ತಲುಪಿಸುವ ಕ್ರಮ ಕೈಗೊಳ್ಳಲಾಗುವುದು ಎಂದರು. ಸಂಘಟನೆಯ ತಾಲೂಕಾ ಗೌರವಧ್ಯಕ್ಷ ಮಹಾದೇವ ವರ್ಣೇಕರ, ತಾಲೂಕು ಅಧ್ಯಕ್ಷ ಅನೀಲ್ ಕರ್ಣೆ, ಅಂದಪ್ಪ ಅಂಗಡಿ,ಉದಯಸಿಂಗ ರಜಪೂತ, ಹುಚ್ಚುಸಾಬ ಬಡಿಗೇರ, ಬಸುರಾಜ ಹೂಗಾರ, ಶಿವಕುಮಾರ ಕಲ್ಮಠ, ಶಿವಯ್ಯ ಸಾಲಿಮಠ, ವಿನಾಯಕ ಆಚ್ಚಲಕರ, ಕಾಶಪ್ಪ ಆರೇರ, ಶರಣಪ್ಪ ಭಗವತಿ, ಎನ್. ಬಿ. ಶಿವಳ್ಳಿ, ವಿರೇಶ ಮಳೋತ್ತರ, ಸಂತೋಷ ಉಪ್ಪಾರ, ರೇಣುಕರಾಜ ಹರಪನಹಳ್ಳಿ, ಶರಣಪ್ಪ ಗಡಾದ, ಯಮನೂರ ಅಬ್ಬಿಗೇರಿ, ಯಮನಪ್ಪ ಮಾದರ, ಶರಣಪ್ಪ ಕಂಬಳಿ, ಕಳಕುಸಾ ಶಿಂಗ್ರಿ, ಯಮನೂರಪ್ಪ ವಾರಿಕಲ್ಲ, ಧರ್ಮಣ್ಣ ವದೆಗೋಳ, ಯಮನೂರಸಾಬ್ ನದಾಫ ಸೇರಿದಂತೆ ಇತರರಿದ್ದರು.



ನಾರೀಶಕ್ತಿ ಮಸೂದೆ ವಿರೋಧಕ್ಕೆ ಖಂಡನೆ



◆**ಮುಂಡರಗಿ:** ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಮಸೂದೆ ಸೋಲಿಗೆ ಕಾರಣರಾದ ಕಾಂಗ್ರೆಸ್ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳು ದೇಶದಲ್ಲಿ ಶೇ.50 ರಷ್ಟಿರುವ ಮಹಿಳೆಯರಿಗೆ ದ್ರೋಹವೆಸಗಿದ್ದಾರೆ. ಇಂಡಿ ಒಕ್ಕೂಟದ ಪಕ್ಷಗಳ ಮಹಿಳಾ ವಿರೋಧಿ ಮಾನಸಿಕ ಸ್ಥಿತಿ ಅನಾವರಣಗೊಂಡಿದೆ. ಮಹಿಳೆಯರಿಗೆ ಇವರು ಮೋಸಮಾಡಿದ್ದಾರೆ ಎಂದು ಮುಂಡರಗಿ ಬಿಜೆಪಿ ಮಂಡಳ ಅಧ್ಯಕ್ಷ ಡಾ.ಕುಮಾರಸ್ವಾಮಿ ಹಿರೇಮಠ ಆರೋಪಿಸಿದ್ದಾರೆ.

ಅವರು ಇಲ್ಲಿಯ ಬಿಜೆಪಿ ಕಾರ್ಯಾಲಯದಲ್ಲಿ ಮಂಡಳದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 1992 ರಿಂದ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ಚರ್ಚೆ ನಡೆಯುತ್ತಿದೆ. ಮೀಸಲಾತಿ ವಿಚಾರದಲ್ಲಿ ಆಗಿನಿಂದಲೂ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ ಆದಷ್ಟು ಬೇಗ ಕೊಡಬೇಕು ಎನ್ನುವುದು ಬಿಜೆಪಿ ನಿಲುವಿದೆ. ಆದರೆ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ನಾರೀಶಕ್ತಿ ವಂದನಾ ಮಸೂದೆಯನ್ನು ಲೋಕಸಭೆಯಲ್ಲಿ ಸೋಲಿಸಿರುವ ಕಾಂಗ್ರೆಸ್ ನಡೆ ಖಂಡನೀಯ ಎಂದರು.

ಪುರಸಭೆಯ ಮಾಜಿ ಅಧ್ಯಕ್ಷ ನಾಗೇಶ ಹುಬ್ಬಳ್ಳಿ ಹಾಗೂ ಹಿರಿಯ ಬಿಜೆಪಿ ಮುಖಂಡ ಕರಬಸಪ್ಪ ಹಂಚಿನಾಳ ಮಾತನಾಡಿದರು. ಕೊಟ್ರೇಶ ಅಂಗಡಿ, ಪ್ರಧಾನ ಕಾರ್ಯದರ್ಶಿಗಳಾದ ಪ್ರಶಾಂತಗೌಡ ಗುಡದಪ್ಪನವರ, ಬಸವರಾಜ ಬಿಳಿಮಗ್ಗದ, ಚಿನ್ನಪ್ಪ ವಡ್ಡಟ್ಟಿ, ಪವನ ಮೇಟಿ, ಮಂಜುನಾಥ ಮುಧೋಳ, ಮೈಲಾರಪ್ಪ ಕಲಕೇರಿ, ಶಿವಣ್ಣ ಚಿಕ್ಕಣ್ಣವರ, ರವಿಗೌಡ ಪಾಟೀಲ, ಶಿವಕುಮಾರ ಕುರಿ ಮುಂತಾದವರಿದ್ದರು.

ರಕ್ತದಾನ ಆರೋಗ್ಯಕ್ಕೆ ಒಳ್ಳೆಯದು: ರಾಧಿಕಾ


◆**ನವಲಗುಂದ:** ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯ್ ಕ್ಯೂ ಎ ಸಿ, ಭಾರತೀಯ ರೆಡ ಕ್ರಾಸ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಎಸ್‌ಎಸ್ ಹಾಗೂ ಧಾರವಾಡದ ರೋಟರಿ ಬ್ಲಡ್ ಬ್ಯಾಂಕ್ ಇವುಗಳ ಸಂಯುಕ್ತಾಶ್ರಯದಲ್ಲಿ ರಕ್ತದಾನ ಶಿಬಿರ ನಡೆಯಿತು.

ರೋಟರಿ ಬ್ಲಡ್ ಬ್ಯಾಂಕ್‌ನ ತಾಂತ್ರಿಕ ನಿರ್ದೇಶಕಿ ರಾಧಿಕಾ ಆಪ್ಟೆ ಮಾತನಾಡಿ, ಒಬ್ಬ ವ್ಯಕ್ತಿಯು ತನ್ನ ರಕ್ತವನ್ನು ಸ್ವಯಂಪ್ರೇರಿತವಾಗಿ ನೀಡುವುದರ ಮೂಲಕ ತುರ್ತು ಪರಿಸ್ಥಿತಿಯಲ್ಲಿರುವ ಇನ್ನೊಬ್ಬರ ಜೀವವನ್ನು ಉಳಿಸಬಹುದು. ಇದು ಮಾನವೀಯತೆಯ ಸಂಕೇತ, ಆತ್ಮತೃಪ್ತಿಯನ್ನು ನೀಡುತ್ತದೆ ಮತ್ತು ದಾನಿಯ ಆರೋಗ್ಯಕ್ಕೂ ಒಳ್ಳೆಯದು ಎಂದರು.

ಪ್ರಾಂಶುಪಾಲ ಡಾ. ಎಂ.ಬಿ.ಬಾಗಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಅರ್ಹತೆ ಇರುವ ಎಲ್ಲ ವಿದ್ಯಾರ್ಥಿಗಳು ರಕ್ತದಾನ ಮಾಡುವ ಮುಖಾಂತರ ಆಪತ್ಕಾಲದಲ್ಲಿರುವ ರೋಗಿಗಳಿಗೆ ನೆರವಾಗಬೇಕು ಹಾಗೂ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಬೇಕು ಎಂದರು. ನವಲಗುಂದ ಸಿಪಿಐ ರವಿಕುಮಾರ ಕಪ್ಪತ್ತನವರ, ಪಿಎಸ್ಐ ಜನಾರ್ದನ್ ಭಟ್ರಳ್ಳಿ ಹಾಗೂ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿ 40 ಯೂನಿಟ್ ರಕ್ತದಾನ ಮಾಡಿದರು. ಶ್ರೀಧರ ಕಲ್ಲೂರ ನಿರೂಪಿಸಿದರು. ಸವಿತಾ ಚಿಕ್ಕಣ್ಣವರ ಸ್ವಾಗತಿಸಿದರು. ಡಾ ಸಂತೋಷ ಹುಬ್ಬಳ್ಳಿ ವಂದಿಸಿದರು. ಪ್ರೊ. ಸಾತಿಹಾಳ, ಗಣೇಶ್ ಧೋಂಗಡಿ, ಗಂಗಾಧರ ಗೌಡರ, ಪ್ರಸನ್ನ ಪಂಢರಿ, ಶ್ರೀಧರ ಲೋಣಕರ್, ಡಾ. ಗುಲಗಂಧಿ, ರವಿ ಬ್ಯಾಹಟ್ಟಿ, ಮಧು ಹುಣಸಗಿ, ಸುಜಾತಾ ಬರದೂರ, ಪ್ರಹತ್ ತಂದೂರ್, ವಸಂತ ಮುಂದಿನಮನಿ, ಜ್ಯೋತಿಭಾ ದೊಡಮನಿ, ಭಾರತಿ ಭೋವಿ, ಸುರೇಶ ಬಾರಕೇರ ಮುಂತಾದವರಿದ್ದರು.



ಬಸ್ಸಮ್ಮ ಪಾಟೀಲ ಶಾಲೆಗೆ ಸಿಬಿಎಸ್‌ಇ ಮಾನ್ಯತೆ



◆**ರೋಣ:** ಪಟ್ಟಣದಲ್ಲಿ ಕಳೆದ 34 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಆರ್‌ಜಿಎಸ್ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಯಾದ ಮಾತೋಶ್ರೀ ಬಸ್ಸಮ್ಮ ಎಸ್ ಪಾಟೀಲ ಶಾಲೆಗೆ ಕೇಂದ್ರ ಸರ್ಕಾರ ಸಿಬಿಎಸ್‌ಇ ಮಾನ್ಯತೆ ನೀಡಿದೆ ಎಂದು ಸಂಸ್ಥೆಯ ನಿರ್ದೇಶಕ ಹಾಗೂ ಕೆಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಐ.ಎಸ್.ಪಾಟೀಲ ಹೇಳಿದರು.

ಅವರು ಆರ್‌ಜಿಎಸ್ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಶಾಸಕ ಜಿ.ಎಸ್.ಪಾಟೀಲರು ಗ್ರಾಮೀಣ ಭಾಗಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು ಎಂಬ ದೃಷ್ಟಿಯಿಂದ 34 ವರ್ಷಗಳ ಹಿಂದೆ ಶಿಕ್ಷಣ ಸಂಸ್ಥೆಯನ್ನು ಕಟ್ಟಿದರು. ನಂತರ ಸಾವಿರಾರು ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕುವಂತೆ ನೋಡಿಕೊಂಡಿರುವುದು ಸಂಸ್ಥೆ ಬೆಳವಣಿಗೆಗೆ ಬಹು ಮುಖ್ಯ ಕಾರಣವಾಗಿದ್ದು,ಇಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿ ತಲೆ ಎತ್ತಿ ನಿಂತಿದೆ ಎಂದರು.

ರೋಣ ಪಟ್ಟಣದಲ್ಲಿ ಸಿಬಿಎಸ್‌ಇ ಶಿಕ್ಷಣ ಇಲ್ಲದಿರುವುದು ಬೇಸರ ತರಿಸಿತ್ತು. ಆದರೆ ಜಿ.ಎಸ್.ಪಾಟೀಲರ ಪ್ರಾಮಾಣಿಯ ಪ್ರಯತ್ನದಿಂದ ಪಟ್ಟಣಕ್ಕೆ ಕೇಂದ್ರ ಸರ್ಕಾರ ಸಿಬಿಎಸ್‌ಇ ಶಾಲೆಯನ್ನು ತೆರೆಯಲು ಅಧಿಕೃತ ಮಾನ್ಯತೆಯನ್ನು ನೀಡಿರುವುದು ಸ್ವಾಗತರ್ಹವಾಗಿದೆ. ಇದರಿಂದ ಪಟ್ಟಣ ಸೇರಿದಂತೆ ಗ್ರಾಮೀಣ ಭಾಗಗಳ ಬಡ ಪ್ರತಿಭಾವಂತ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಪಡೆಯಲು ಸಹಕಾರಿಯಾಗುತ್ತದೆ ಎಂದರು.

ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ, ಪ್ರಾಚಾರ್ಯರಾದ ಡಾ. ಐ.ಬಿ.ಕೊಟ್ಟೂರಶೆಟ್ಟರ, ಶ್ರೀಶೈಲ್ ಸಂಗೋಟಿ ಉಪಸ್ಥಿತರಿದ್ದರು.

ಭಾರೀ ಮಳೆ-ಗಾಳಿಗೆ ಜಕ್ಕಲಿ ಗ್ರಾಮ ತತ್ತರ

◆**ರೋಣ/ ನರೇಗಲ್ಲ:** ಮಂಗಳವಾರ ಸಂಜೆ ಆರಂಭಗೊಂಡ ಭಾರೀ ಗಾಳಿ ಮಳೆಯಿಂದ ತಾಲೂಕಿನಲ್ಲಿ ಗಿಡ ಮರಗಳು ಸೇರಿದಂತೆ 30ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿದ್ದು, 20ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ.

ಮಂಗಳವಾರ ಮಧ್ಯಾಹ್ನದ ಸುಮಾರಿಗೆ ಸಣ್ಣಗೆ ಆರಂಭಗೊಂಡ ಮಳೆಯೂ ಸಂಜೆಯಾಗುತ್ತಲೇ ತನ್ನ ಆರ್ಭಟವನ್ನು ಮೆರೆದಿದ್ದಾನೆ. ಇದರಿಂದ ಕೊತಬಾಳ, ಜಕ್ಕಲಿ, ಬೂದಿಹಾಳ, ರೋಣ ಸೇರಿದಂತೆ ಅನೇಕ ಗ್ರಾಮಗಳಲ್ಲಿ ನೂರಾರು ಸಂಖ್ಯೆಯಲ್ಲಿ ಮರಗಳು ಬಿದ್ದಿವೆ. ಇನ್ನು ಕೊತಬಾಳ ಗ್ರಾಮದಲ್ಲಿ ಬೃಹತ್ ಮರವೊಂದು ವಿದ್ಯುತ್ ಪೂರೈಕೆ ಮಾಡುವ ತಂತಿಯ ಮೇಲೆ ಬಿದ್ದ ಪ್ರಯುಕ್ತ ಕೆಲ ಗಂಟೆಗಳು ಆತಂಕದ ವಾತವರಣವನ್ನು ಮೂಡಿಸಿತ್ತು. ತಾಲೂಕಿನ ಜಕ್ಕಲಿ ಗ್ರಾಮದಲ್ಲಿ ಭಾರೀ ಪ್ರಮಾಣದ ಗಾಳಿಯಿಂದ ಗ್ರಾಮದಲ್ಲಿ ಸಾಕಷ್ಟು ಮರಗಳು ನೆಲಕ್ಕುರುಳಿವೆ. ಜಕ್ಕಲಿ ಮತ್ತು ಬೂದಿಹಾಳ ಗ್ರಾಮದಲ್ಲಿ 30ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಬಿದ್ದಿದ್ದಲ್ಲದೆ 20ಕ್ಕೂ ಹೆಚ್ಚು ಮನೆಗಳಿಗೆ ಹಾನಿ ಸಂಭವಿಸಿದೆ. ಪರಿಣಾಮ ಗ್ರಾಮಸ್ಥರು ಇಡೀ ರಾತ್ರಿಯನ್ನು ಆತಂಕದಲ್ಲಿಯೇ ಕಳೆದಿದ್ದಾರೆ. ಜೊತೆಗೆ ವಿದ್ಯುತ್ ಸಂಪರ್ಕ ಕೂಡ ಕಡಿತಗೊಂಡಿದ್ದು,ಇದರಿಂದ ಜಕ್ಕಲಿ, ಮಾರನಬಸರಿ, ಹಾಳಕೇರಿ, ನಿಡಗುಂದಿಕೊಪ್ಪ, ನಿಡಗುಂದಿ, ಕಳಕಾಪೂರ ಗ್ರಾಮಗಳ ಜನರು ಪರದಾಡುವಂತಾಗಿದೆ. ರೋಣ ಜಕ್ಕಲಿ ನರೇಗಲ್ಲ,ರೋಣ ಸೂಡಿ ಗಜೇಂದ್ರಗಡ, ರೋಣ ಬದಾಮಿ ಮುಖ್ಯ ರಸ್ತೆಗಳಲ್ಲಿ ಬೃಹತ್ ಮರಗಳು ರಸ್ತೆಗೆ ಬಿದ್ದ ಪರಿಣಾಮ ಸಂಚಾರ ವ್ಯವಸ್ಥೆಯಲ್ಲಿಯೂ ಕೂಡ ಅಸ್ತವ್ಯಸ್ತಗೊಂಡಿತು.



ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಿ

ಗಾಳಿ ಮಳೆಯಿಂದ ಹಾನಿಗೊಳಗಾಗಿರುವ ಜಕ್ಕಲಿ ಗ್ರಾಮಕ್ಕೆ ತಹಶೀಲ್ದಾರ್ ನಾಗರಾಜ ಕೆ. ಭೇಟಿ ನೀಡುವ ಮೂಲಕ ಪರಿಸ್ಥಿತಿ ಅವಲೋಕನ ನಡೆಸಿದರು. ಹಾನಿಗೊಳಗಾದ ಮನೆಗಳಿಗೆ ಭೇಟಿ ನೀಡಿ ಸಂತ್ರಸ್ತರಿಗೆ ಧೈರ್ಯ ತುಂಬಿದರು. ಜೊತೆಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಒದಗಿಸಿಕೊಡುವುದಾಗಿ ತಿಳಿಸಿದರು. ಇನ್ನು ಹೆಸ್ಕಾ ಮತ್ತು ಗ್ರಾ.ಪಂ ಅಧಿಕಾರಿಗಳ ಜೊತೆಗೆ ಸಭೆಗೆ ನಡೆಸಿದ ತಹಶೀಲ್ದಾರರು ಹೆಚ್ಚಿನ ಸಿಬ್ಬಂದಿ ಬಳಸಿಕೊಂಡು ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕು ಎಂದು ಸೂಚಿಸಿದ ಅವರು, ಜನರಿಗೆ ಕುಡಿಯುವ ನೀರು ತೊಂದರೆಯಾಗದಂತೆ ನಿಗಾವಹಿಸಬೇಕು ಎಂದು ಗ್ರಾ.ಪಂನವರಿಗೆ ತಿಳಿಸಿದರು. ನಂತರ ಅವರು ಗ್ರಾಮಸ್ಥರೊಂದಿಗೆ ಚರ್ಚಿಸಿ ಹಾನಿ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ನಿಡಲಾಗುವುದು ಎಂದರು.

- ರಸ್ತೆ ಕಾಣದೆ ನಡು ರಸ್ತೆಯಲ್ಲೇ ವಾಹನ ನಿಲ್ಲಿಸಿದ ವಾಹನ ಸವಾರರು
- ರೋಣ ಪಟ್ಟಣದಲ್ಲಿ ಚರಂಡಿ ನೀರು ರಸ್ತೆಗೆ ಹರಿದ ಪರಿಣಾಮ ವ್ಯಾಪಾರಸ್ಥರಿಗೆ ತೀವ್ರ ತೊಂದರೆ
- ರೋಣ ಪಟ್ಟಣದ ಬಸ್ ನಿಲ್ದಾಣದ ಬಳಿ ಸಿಸಿ ರಸ್ತೆ ನಿರ್ಮಾಣವಾಗುತ್ತಿದ್ದು, ಭಾರೀ ಮಳೆಯಿಂದ ಅಗೆದ ರಸ್ತೆಯಲ್ಲಿ ಮಳೆ ನೀರು ನಿಲ್ಲುವಂತಾಯಿತು
- ರಸ್ತೆ ಯಾವುದು ಎಂದು ಅರಿಯದೆ ವ್ಯಕ್ತಿಯೊಬ್ಬ ಚರಂಡಿಗೆ ಬಿದ್ದ ಘಟನೆ ಕೂಡ ನಡೆಯಿತು
- ಸ್ಥಳದಲ್ಲಿ ಕೆಲವರು ಕ್ಷಣದಲ್ಲಿ ಚರಂಡಿಗೆ ಬಿದ್ದ ವ್ಯಕ್ತಿ ರಕ್ಷಣೆ
- ನೆಲಕ್ಕುರುಳಿದ ಜಕ್ಕಲಿ ಗ್ರಾಮದ ಮೂರ್ನಾಲ್ಕು ಜಮೀನುಗಳಲ್ಲಿ ಬೆಳೆದಿದ್ದ ಬಾಳೆ ಬೆಳೆ

ಸಿಡಿಲು ಬಡಿದು ಗೋವಿನ ಜೋಳ ಸುಟ್ಟು ಭಸ್ಮ

◆**ಕಲಘಟಗಿ:** ಸಿಡಿಲು ಬಡಿದು ಸೋಲಾರ್ ಪ್ಯಾನಲ್ ಮತ್ತು ಸುಮಾರು 200 ಕ್ವಿಂಟಾಲ್ ಗೋವಿನ ಜೋಳ ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ತುಮರಿಕೊಪ್ಪ ಗ್ರಾಮದಲ್ಲಿ ಜರುಗಿದೆ.

ಬಿರುಗಾಳಿ ಸಹಿತ ಸಿಡಿಲು ಬಂದಿದ್ದರಿಂದ ರೈತ ರುದ್ರಯ್ಯ ಗೋಡಿಮನಿ ಎಂಬುವವರು ಮಾಡುತ್ತಿದ್ದ ಹೊಲದಲ್ಲಿ ಅಳವಡಿಸಲಾಗಿದ್ದ ಸೋಲಾರ್ ಪ್ಯಾನಲ್‌ಗೆ ಏಕಾಏಕಿ ಬೆಂಕಿ ತಗುಲಿದೆ. ಬೆಂಕಿಗೆ ಪ್ಯಾನಲ್ ಸಂಪೂರ್ಣ ಸುಟ್ಟು ಪಕ್ಕದಲ್ಲಿಯೇ ಇದ್ದ ಗೋವಿನಜೋಳದ ರಾಶಿಗೆ ತಗುಲಿದ್ದರಿಂದ 3.50 ಲಕ್ಷ ಕಿಮ್ಮತ್ತಿನ 200 ಕ್ವಿಂಟಲ್ ಜೋಳ ಹಾಗೂ ಕೃಷಿ ಪರಿಕರಗಳು ಸೇರಿದಂತೆ ಅಂದಾಜು 5 ಲಕ್ಷ ರೂ.ದಷ್ಟು ಹಾನಿಯಾಗಿದೆ. ಕೂಡಲೇ ಘಟನಾ ಸ್ಥಳಕ್ಕೆ ರೈತರು ಹಾಗೂ ಅಗ್ನಿಶಾಮಕ ದಳ ದೌಡಾಯಿಸಿ ಬೆಂಕಿ ನಂದಿಸಿದ್ದಾರೆ.

ಸಚಿವ ಸಂತೋಷ್ ಲಾಡ್ ಅವರ ಆಪ್ತ ಸಹಾಯಕ ಸೋಮಶೇಖರ್ ಬೆನ್ನೂರು ಹಾಗೂ ತಹಶೀಲ್ದಾರ್ ಬಸವರಾಜ ಹೊಂಕಣದವರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ತಹಶೀಲ್ದಾರ್ ಮಾತನಾಡಿ, ಆಕಸ್ಮಿಕವಾಗಿ ನಡೆದ ಈ ಘಟನೆಯಿಂದ ಅಪಾರ ಪ್ರಮಾಣದಲ್ಲಿ ಹಾನಿಯಾಗಿದ್ದು ಹಾನಿಯಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಪರಿಹಾರ ನೀಡುವುದಾಗಿ ತಿಳಿಸಿದರು. ಈ ಘಟನೆ ಬಗ್ಗೆ ಸಚಿವರ ಗಮನಕ್ಕೆ ತಂದು ರೈತರಿಗೆ ಆದ ಹಾನಿಗೆ ಪರಿಹಾರ ನೀಡುವುದಾಗಿ ಸಚಿವ ಸಂತೋಷ್ ಲಾಡ್ ಅವರ ಆಪ್ತ ಸಹಾಯಕ ಸೋಮಶೇಖರ್ ಬೆನ್ನೂರು ರೈತರಿಗೆ ಧೈರ್ಯ ತುಂಬಿದರು.



> ನಮಗೆ ಕೃಷಿ ಒಂದೇ ಆಧಾರವಾಗಿದ್ದು ಬೇರೆಯವರ ಹೊಲ ಲಾವಣಿಯಾಗಿ ಹಿಡಿದು ಸಾಲಾ ಮಾಡಿ ಕೃಷಿ ಮಾಡಿದ್ದೆವು. ಆದರೆ ನಿನ್ನೆ ನಡೆದ ಈ ಘಟನೆಯಿಂದ ಸಾಕಷ್ಟು ಹಾನಿಯಾಗಿ ಬದುಕಿನ ಆದಾಯ ಇಲ್ಲದಂತಾಗಿದೆ.
>
> ■ **ರುದ್ರಯ್ಯ ಗೋಡಿಮನಿ,** ರೈತ



ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ

ಬೆಂಗಳೂರು ನಗರ ಜಿಲ್ಲೆ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು 560038

ದೂರವಾಣಿ ಸಂಖ್ಯೆ : 080-25202265, ಇ-ಮೇಲ್ : dhobangaloreurban@gmail.com

ಸಂಖ್ಯೆ : ಜಿ.ಆ.ಕು.ಕ/ಅಭಿವೃದ್ಧಿ/ಟೆಂಡರ್/01/2026-27 ದಿನಾಂಕ: 17/04/2026

ಇ-ಟೆಂಡರ್ ಪ್ರಕಟಣೆ

ಟೆಂಡರ್ ಅಧಿಸೂಚನೆ ಸಂಖ್ಯೆ: DHO/DEV/TENDER/01/2026-27, ದಿನಾಂಕ: 17.04.2026

2026-27 ನೇ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ವ್ಯಾಪ್ತಿಯ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಗಳಲ್ಲಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸರ್ಕಾರದ ಮಾರ್ಗಸೂಚಿಗಳನ್ವಯ ಖಾಲಿ ಇರುವ ಅವಶ್ಯ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಗುತ್ತಿಗೆ ಆಧಾರದಡಿ ನೇಮಿಸಲು ಕೆಟಿಪಿಪಿ ನಿಯಮಾನುಸಾರ E-Procurement ಮುಖಾಂತರ ಟೆಂಡರ್‌ನ್ನು ಕರೆದಿದ್ದು https://kppp.karnataka.gov.in ಇ-ಪೋರ್ಟಲ್ ಮುಖಾಂತರ ಆಸಕ್ತಿಯುಳ್ಳ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್‌ನ್ನು ಇ-ಪೋರ್ಟಲ್ ಮುಖಾಂತರ ದಿನಾಂಕ: 18.04.2026 ರಿಂದ ದಿನಾಂಕ: 16.05.2026 ರಂದು ಮಧ್ಯಾಹ್ನ 03:00 ಗಂಟೆವರೆಗೂ ಸಲ್ಲಿಸಬಹುದಾಗಿರುತ್ತದೆ, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಹಳೇ ಟಿ ಬಿ ಆಸ್ಪತ್ರೆ ಆವರಣ, ಇಂದಿರಾನಗರ, ಬೆಂಗಳೂರು-560038 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ,
ಬೆಂಗಳೂರು ನಗರ ಜಿಲ್ಲೆ

DIPR/CP/286/Zen/2026-27

CHANGE OF NAME

I, **SUMAIYA FAHEEM (Old Name)** R/o H.No. 774/2 nd, S-1, Maimuna Complex, Kajubag, Karwar-581301. Dist : Uttar Kannada, Karnataka have changed my name to **SUMAIYA FAHEEM M SHAIKH (New Name)** Vide Affidavit Sworn Before Notary Patil V.H. on 21-04-2026

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ (ಉತ್ತರ) ಕಚೇರಿ, ಹುಬ್ಬಳ್ಳಿ.

ಸಂಖ್ಯೆ: ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 22-04-2026

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2025-26 ನೇ ಸಾಲಿನ ವಾರ್ಡ್ ವಾರು ಅನುದಾನ ಹಾಗೂ ಸನ್ 2025-26 ನೇ ಸಾಲಿನ ಅಮೃತ 2.0 ಅಡಿಯಲ್ಲಿ 2025-26 ನೇ ಸಾಲಿನ ಹಳ್ಳಿ ಅಭಿವೃದ್ಧಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000 ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

1) ಇಂಡೆಂಟ್ ನಂ - 57587, ರೂ. **46.93** ಲಕ್ಷ
2) ಇಂಡೆಂಟ್ ನಂ - 57588, ರೂ. **49.10** ಲಕ್ಷ
3) ಇಂಡೆಂಟ್ ನಂ - 57152, ರೂ. **22.00** ಲಕ್ಷ
4) ಇಂಡೆಂಟ್ ನಂ - ಎಸ್‌ಇ7667 ರೂ. **49.80** ಲಕ್ಷ
5) ಇಂಡೆಂಟ್ ನಂ - 57572 ರೂ. **313.00** ಲಕ್ಷ

ಮರು ಕರೆ ಕಾಮಗಾರಿಗಳು

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

6) ಇಂಡೆಂಟ್ ನಂ - 56095, ರೂ. **4.85** ಲಕ್ಷ (2ನೇ ಕರೆ)

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

7) ಇಂಡೆಂಟ್ ನಂ - 56539, ರೂ. **20.00** ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

8) ಇಂಡೆಂಟ್ ನಂ- 53181 ರೂ. 11.09 ಲಕ್ಷ (3ನೇ ಕರೆ)
9) ಇಂಡೆಂಟ್ ನಂ- 53182 ರೂ. 4.00 ಲಕ್ಷ (3ನೇ ಕರೆ)
10) ಇಂಡೆಂಟ್ ನಂ- 40855 ರೂ. 5.23 ಲಕ್ಷ (3ನೇ ಕರೆ)
11) ಇಂಡೆಂಟ್ ನಂ- 52872 ರೂ. 15.00 ಲಕ್ಷ (4ನೇ ಕರೆ)
12) ಇಂಡೆಂಟ್ ನಂ- 53504 ರೂ. 7.70 ಲಕ್ಷ (4ನೇ ಕರೆ)
13) ಇಂಡೆಂಟ್ ನಂ- 53963 ರೂ. 6.90 ಲಕ್ಷ (4ನೇ ಕರೆ)
14) ಇಂಡೆಂಟ್ ನಂ- 54176 ರೂ. 10.00 ಲಕ್ಷ (4ನೇ ಕರೆ)
15) ಇಂಡೆಂಟ್ ನಂ- 52870 ರೂ. 4.13 ಲಕ್ಷ (4ನೇ ಕರೆ)
16) ಇಂಡೆಂಟ್ ನಂ- 52391 ರೂ. 13.25 ಲಕ್ಷ (4ನೇ ಕರೆ)
17) ಇಂಡೆಂಟ್ ನಂ- 52868 ರೂ. 8.60 ಲಕ್ಷ (4ನೇ ಕರೆ)
18) ಇಂಡೆಂಟ್ ನಂ- 53984 ರೂ. 2.35 ಲಕ್ಷ (4ನೇ ಕರೆ)
19) ಇಂಡೆಂಟ್ ನಂ- 40530 ರೂ. 21.50 ಲಕ್ಷ (4ನೇ ಕರೆ)
20) ಇಂಡೆಂಟ್ ನಂ- 49589 ರೂ. 41.00 ಲಕ್ಷ (4ನೇ ಕರೆ)

ಇ.ಎಂ.ಡಿ., ಕಾಮಗಾರಿ ಅವಧಿ ಹಾಗೂ ಇತರೆ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ **ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)** ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836-2213834** ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ: **24-04-2026** ಪಡೆಯಬಹುದಾಗಿದೆ.

- ಕ್ರಮ ಸಂಖ್ಯೆ 01, 02, 08, 09 ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **05-05-2026** ರಂದು ಸಾಯಂಕಾಲ **4.00 ಘಂಟೆಯವರೆಗೆ. ಕ್ರಮ ಸಂಖ್ಯೆ 01, 02, 08, 09** ರ ಟೆಂಡರ್ ತೆರೆಯುವ ದಿನಾಂಕ: **06-05-2026** ರಂದು **ಸಾಯಂಕಾಲ 4.30 ಘಂಟೆಯ ನಂತರ.**
- ಕ್ರಮ ಸಂಖ್ಯೆ **03, 04, 06, 07, 10 ರಿಂದ 20** ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **11-05-2026** ರಂದು **ಸಾಯಂಕಾಲ 4.00 ಘಂಟೆಯವರೆಗೆ. ಕ್ರಮ ಸಂಖ್ಯೆ 03, 04, 06, 07, 10 ರಿಂದ 20** ರ ಟೆಂಡರ್ ತೆರೆಯುವ ದಿನಾಂಕ: **12-05-2026 ರಂದು ಸಾಯಂಕಾಲ 4.30 ಘಂಟೆಯ ನಂತರ.**
- **ಕ್ರಮ ಸಂಖ್ಯೆ 05** ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **25-05-2026** ರಂದು **ಸಾಯಂಕಾಲ 4.00 ಘಂಟೆಯವರೆಗೆ. ಕ್ರಮ ಸಂಖ್ಯೆ 05** ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: **26-05-2026 ರಂದು ತೆರೆಯಲಾಗುವುದು.** ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು. **ಕ್ರಮ ಸಂಖ್ಯೆ 05** ರ ಪೂರ್ವಭಾವಿ ಸಭೆಯ ದಿನಾಂಕ: **02-05-2026.**

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/86/ಅಡ್ವರ್ಟೋ/2026-27

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

AMBEDKAR DEVELOPMENT CORPORATION

ಜಿಲ್ಲಾ ಆಡಳಿತ ಭವನ, ನವನಗರ, ಕೋಣೆ ಸಂಖ್ಯೆ : 201, ಬಾಗಲಕೋಟೆ - 587 102. ದೂರವಾಣಿ : 08354-235214, ಇ-ಮೇಲ್ : dmbagalkot@rediffmail.com

ಸಂಖ್ಯೆ : ಡಾ॥ಬಿ.ಆರ್.ಅಂ.ಅ.ನಿ.ನಿ./ಜಿ.ವ್ಯ./ಬಾ./ಭೂ-ಒಯೋ/2026-27
ದಿನಾಂಕ : 18-04-2026

ಪ್ರಕಟಣೆ

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಭೂ-ಒಡೆತನ ಯೋಜನೆಯಡಿ ಈ ಕೆಳಗೆ ಕಾಣಿಸಿದ ಭೂ-ಮಾಲಿಕರಿಂದ ಪರಿಶಿಷ್ಟ ಜಾತಿಯ ಜನರಿಗೆ ಜಮೀನು ಮಾರಾಟಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ತಂಟೆ / ತಕರಾರು ಇದ್ದಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಸದರಿ ಜಮೀನಿಗೆ ಸಂಬಂಧಿಸಿದವರು ಯಾವುದೇ ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಯ ಏಳು (07) ದಿನಗಳ ಒಳಗೆ ಸೂಕ್ತ ದಾಖಲೆಯೊಂದಿಗೆ ಆಕ್ಷೇಪಣೆಗಳನ್ನು ಖುದ್ದಾಗಿ ಅಥವಾ ರಜಿಸ್ಟರ್ ಎಡಿ ಮೂಲಕ ಸಲ್ಲಿಸಬಹುದಾಗಿದೆ. ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಮುಂದಿನ ಖರೀದಿ ಪ್ರಕ್ರಿಯೆಗೆ ಕ್ರಮ ವಹಿಸಲಾಗುವುದು. ಪ್ರಕರಣದ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಭೂ ಮಾಲೀಕರ ಹೆಸರು ಮತ್ತು ವಿಳಾಸ	ಜಮೀನು ಇರುವ ಸ್ಥಳ	ಸರ್ವೆ ನಂಬರ್/ ವಿಸ್ತೀರ್ಣ
01	ರೇವಣಸಿದ್ದಪ್ಪ ಜಂಗಮಶೆಟ್ಟಿ ಮುತ್ತಪ್ಪ, ಮಲ್ಲಪ್ಪ ಜಂಗಮಶೆಟ್ಟಿ ಮುತ್ತಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/2 ವಿಸ್ತೀರ್ಣ 0.25 ಎಕರೆ
02	ಸದಾಶಿವ ಜಂಗಮಶೆಟ್ಟಿ ಶಿವನಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/8ವಿಸ್ತೀರ್ಣ 0.24 ಎಕರೆ
03	ಶೇಖರ ಜಂಗಮಶೆಟ್ಟಿ ಶಿವನಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/6 ವಿಸ್ತೀರ್ಣ 0.25 ಎಕರೆ
04	ಬಸಪ್ಪ ಜಂಗಮಶೆಟ್ಟಿ ಶಿವನಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/7 ವಿಸ್ತೀರ್ಣ 0.25 ಎಕರೆ
05	ಶೇಖರ ಜಂಗಮಶೆಟ್ಟಿ ರೇವನೆಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	88/12 ವಿಸ್ತೀರ್ಣ 1.05 ಎಕರೆ
06	ಕಲ್ಲಪ್ಪ ಪರಮಗೊಂಡ ಚನ್ನಪ್ಪ ಹಾಗೂ ನಿಂಗಪ್ಪ ಪರಮಗೊಂಡ ಚನ್ನಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	64/3 ವಿಸ್ತೀರ್ಣ 3.10 ಎಕರೆ

ಸಹಿ/- ರಮೇಶ ಜಿ. ಚವ್ಹಾಣ,
ಜಿಲ್ಲಾ ವ್ಯವಸ್ಥಾಪಕರು,
ಡಾ.ಬಿ.ಆರ್.ಅಂ.ಅ.ನಿ.ನಿ., ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/11/ಮಣಿಪಾಲ್/2026-27

ಕರ್ನಾಟಕ ಸರ್ಕಾರ

ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಕೊಠಡಿ ಸಂಖ್ಯೆ:216, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರಗ್ರಾಮ, ದೇವನಹಳ್ಳಿ-562110, ದೂರವಾಣಿ ಸಂ:080-29787455
ಇ-ಮೇಲ್: dombengalururural@gmail.com

ಸಂ: ಅಸಂಇ/ಬೆಂಗ್ರಾ/ ಹೊರ.ಸಂ/ ಟೆಂಡರ್/ ಸಿಆರ್-01/ 2026-27 ದಿನಾಂಕ: 22-04-2026

ಪ್ರಕಟಣೆ

2026-27ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕಛೇರಿ, ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರಗಳು, ಮೌಲಾನಾ ಆಜಾದ್ ಮಾದರಿ ಶಾಲೆಗಳು, ಮಹಿಳಾ ಪದವಿ ಪೂರ್ವ ಕಾಲೇಜು, ವಿದ್ಯಾರ್ಥಿ ನಿಲಯಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿ, ರಾತ್ರಿ ಕಾವಲುಗಾರರು, ಶುಶ್ರೂಷಕರು, ಗ್ರೂಪ್ ಡಿ ಹಾಗೂ ಜಿಲ್ಲಾ & ತಾಲ್ಲೂಕು ಮಟ್ಟದ ಕಛೇರಿಗೆ ವಾಹನ ಚಾಲಕರು, ಕಂಪ್ಯೂಟರ್ ಡಾಟಾ ಎಂಟ್ರಿ ಆಪರೇಟರ್‌ಗಳು, ಗ್ರೂಪ್ 'ಡಿ' ಹುದ್ದೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ (https://kppp.karnataka.gov.in) ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

1. ಟೆಂಡರ್‌ಗೆ ಇಟ್ಟ ಮೊತ್ತ ರೂ.1,34,50,000/- ಹಾಗೂ ಇ.ಎಂ.ಡಿ. ಮೊತ್ತ ರೂ.2,02,000/-
2. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 22-04-2026.
3. kppp-portal ಮುಖಾಂತರ ಅರ್ಹ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 07-05-2026 ಸಂಜೆ 4.00ಗಂಟೆಯೊಳಗೆ
4. kppp-portal ಮೂಲಕ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08-05-2026 (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).
5. kppp-portal ಮೂಲಕ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 15-05-2026 (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೊಠಡಿ ಸಂಖ್ಯೆ:216, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ-562110 (ದೂರವಾಣಿ ಸಂಖ್ಯೆ: 080-29787455) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾ.ಸಾ.ಸಂ.ಇ/ವಾಪ್ರ/292/ಆಕಾಶ್/2025-26

CHANGE OF NAME

I, **FARIDA ASIF ALI (Old Name)** R/o H.No. 183, Chittakula Maniyarwada, Karwar-581352, Dist : Uttar Kannada, Karnataka have changed my name to **FARIDA ASIFALI SHAIKH (New Name)** Vide Affidavit Sworn Before Notary Patil V.H. on 21-04-2026

CHANGE OF NAME

I, **MOHAMED MAHABOOB SHRIFF** (Old Name) Resident of No: 31 Ayat Mension, 1st Cross 1st Main, Raghavendra Swamy Colony, Kavalbyrasandra L R Bande, Bangalore North, R T Nagar, Bengaluru, Karnataka, Pin Code: 560032, have changed my name as **MEHBOOB SHAREEF** (New Name) henceforth I will be called and recognized by new name for all future purposes, dated: 22/04/2026.

CHANGE OF NAME

I, **MOHAMMED BILAL (Old Name)** R/o H.No. 183, Chittakula Maniyarwada, Karwar-581352, Dist : Uttar Kannada, Karnataka have changed my name to **MOHAMMED BILAL ASIFALI SHAIKH (New Name)** Vide Affidavit Sworn Before Notary Patil V.H. on 21-04-2026

CHANGE OF NAME

I, **KAVITA GANESH TANKASALI** (Old Name) Resident of H No: 25 SLV Garden Kanakapura Main Road Kaggalipura, Bangalore Pin - 560082, have changed my name as **KAVITA SHANKARAPPA RATHODI** (New Name) henceforth I will be called and recognized by new name for all future purposes, dated: 22/04/2026.

CHANGE OF NAME

I, **NASIRAHMED PEERSAHEB KALBURGI (Old Name)** R/o H.No. 84, Kalavidar Plot, Well Come Hall Road, Anand Nagar, Hubballi-580024. Dharwad have changed my name to **NASIR AHMED KALBURGI (New Name)** Vide Affidavit Sworn Before Notary Shivalli M.A. on 21-04-2026

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ

ನಂ:ಕಾ.ನಿ.ಇಂ/ ಗ್ರಾಕುನೀ & ನೈವಿ/ಧಾ/ ಕಿಇಂ-1/ಇ-ಟೆಂಡರ್/ 2026-27/ 87
ದಿನಾಂಕ: 22-04-2026

WORK ಟೆಂಡರ್‌ನ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

ವಿಷಯ: ಕಾಮಗಾರಿಯ ಟೆಂಡರ್‌ನ ಪ್ರಕಟಣೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ್ ಕರೆಯಲಾಗಿದೆ.

ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಧಾರವಾಡ ಜಿಲ್ಲೆ: ಸಾಮಾನ್ಯ : Works Indent No: RWSSD/2026-27/WS/WORK_INDENT10034

ಕನಿಷ್ಠ ಮೊತ್ತ: **165.51** ಲಕ್ಷ, ಗರಿಷ್ಠ ಮೊತ್ತ: **165.51** ಲಕ್ಷ

ಗುತ್ತಿಗೆ ಕಾರ್ಯಾಕ್ರಮದ ವಿವರಗಳು ಈ ಕೆಳಗಿನಂತಿದೆ. (Calender of Events)

1. ಖಾಲಿ ಟೆಂಡರ್ ಫಾರ್ಮಗಾಗಿ ಇ-ಪ್ರೋಕ್ಯೂರಮೆಂಟ್ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: **23.04.2026 ರಿಂದ 04.05.2026 ಸಾಯಂಕಾಲ 04.00 ಗಂಟೆಗೆ.**
2. ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **05.05.2026 ಸಾಯಂಕಾಲ 04.30 ಗಂಟೆಗೆ.**
3. ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಮ್.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ **kppp.karnataka.gov.in** ನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಮಾಡಿದವರು ಹೊಂದಿರುತ್ತಾರೆ.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಧಾರವಾಡ.

ವಾ.ಸಾ.ಇ./ಧಾರವಾಡ/85/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಿರಿಯೂರು-577598

ದೂರವಾಣಿ ಸಂಖ್ಯೆ:08193-271630 emil: ghhiriyur@gmail.com

ಸಂ.ಸಾ.ಆ(ಹಿ)/ನಾ.ಕ್ಲಿ./ಗ್ರೂಫ್ ಡಿ/ಟೆಂ/29/2026-27 ದಿನಾಂಕ: 21.04.2026

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ದ್ವಿ-ಲಕೋಟೆ ಪದ್ಧತಿ)

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹಿರಿಯೂರು ಇಲ್ಲಿನ ನಾನ್ ಕ್ಲಿನಿಕಲ್ ಮತ್ತು ಗ್ರೂಫ್ ಡಿ ಹಾಗೂ ಕಂಪ್ಯೂಟರ್ ಆಪರೇಟರ್ ಸೇವೆಯನ್ನು ನಿರ್ವಹಿಸಲು 2026-27ನೇ ಸಾಲಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ದಿ:31/03/2027 ರವರೆಗೆ ಪ್ರತಿಷ್ಠಿತ ನೊಂದಾಯಿತ ಸಂಸ್ಥೆಯವರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ, ಇ ಪ್ರೊಕ್ಯೂರ್ಮೆಂಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ. ಇ-ಟೆಂಡರ್ ವಿವರ ಈ ಕೆಳಕಂಡಂತೆ ಇರುತ್ತದೆ. **(1)** ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ 100 ಬೆಡ್ ಆಸ್ಪತ್ರೆ, 100 ಹಾಸಿಗೆ : ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹಿರಿಯೂರು 10 ಜನ ನಾನ್ ಕ್ಲಿನಿಕಲ್ ಸಿಬ್ಬಂದಿ, 10 ಗ್ರೂಫ್ ಡಿ ಸಿಬ್ಬಂದಿ 01 ಡಾಟಾ ಎಂಟ್ರಿ ಆಪರೇಟರ್. **(2)** ಇ-ಟೆಂಡರ್ ಫಾರಂ ಬೆಲೆ:- ಇ ಪ್ರೊಕ್ಯೂರ್ಮೆಂಟ್ ನಿಯಮಾನುಸಾರ **(3)** ಅಂತರ್ ಜಾಲದಲ್ಲಿ ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ:- 22.04.2026 ರಿಂದ 21.05.2026 ರವರೆಗೆ **(4)** ಅಂತರ್ ಜಾಲದಲ್ಲಿ ಟೆಂಡರ್ ಫಾರಂಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕ:-21.05.2026 ಅಪರಾಹ್ನ 5.00 ಗಂಟೆಗೆ **(5)** ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ:- 22.05.2026 ಬೆಳಿಗ್ಗೆ 11.00 ಗಂಟೆಗೆ ಸ್ಥಳ:-ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ತಾ.ಸಾ.ಆಸ್ಪತ್ರೆ, ಹಿರಿಯೂರು **(6)** ಟೆಂಡರ್ ಅವಧಿ:-ಕಾರ್ಯಾದೇಶ ನೀಡಿದ ದಿನಾಂಕದಿಂದ 31/03/2027ರ ವರೆಗೆ ಅಥವಾ ಮುಂದಿನ ಆದೇಶದ ವರೆಗೆ

(7) ಇ.ಎಂ.ಡಿ 10 ನಾನ್ ಕ್ಲಿನಿಕಲ್ ಸಿಬ್ಬಂದಿಗೆ 20% ರಂತೆ:-ರೂ. 619852.56/-
(8) ಇ.ಎಂ.ಡಿ 10, ಗ್ರೂಫ್ ಡಿ ಸಿಬ್ಬಂದಿಗೆ 2.50% ರಂತೆ:-ರೂ. 62943.39/-
(9) ಇ.ಎಂ.ಡಿ 01, ಡಾಟಾ ಎಂಟ್ರಿ ಅಪರೇಟ್ ರೂ. 5928/-
(10) ಇ-ಟೆಂಡರ್ ವೆಬ್ ಸೈಟ್ ವಿಳಾಸ:-
https://kppp.karnataka.gov.in/#/

DIPR/CTA/KSMCA/56/2026-27

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸತ್ರೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು -584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್ /ಸರಬರಾಜು/ಟೆಂಡರ್/2026-27 ದಿನಾಂಕ:21.04.2026

ಇ-ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಹಾಗೂ ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಗೆ ಅವಶ್ಯವಿರುವ ಹೆಚ್‌ಎನ್‌ಎಸ್ ಐಟಂಗಳು ಹಾಗೂ ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯ ಕೇಂದ್ರ ಪ್ರಯೋಗಾಲಯಕ್ಕೆ ಹಾಗೂ ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳು ಮತ್ತು ಸರ್ಜಿಕಲ್ಸ್ ಮತ್ತು ಮಿಸ್ಲೇನಿಯಸ್ ಐಟಂಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ವಿವಿಧ ರಸಾಯನಿಕಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು (ಆರ್‌ಜಿಎಸ್‌ಎಸ್‌ಹೆಚ್) /ಟೆಂಡರ್/ ಡಯಾ-ಕೆಮ್/159/2026-27 (DME/2026-27IND2253)	99.34
2	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯ ಕೇಂದ್ರ ಪ್ರಯೋಗಾಲಯಕ್ಕೆ ಅವಶ್ಯವಿರುವ ರಸಾಯನಿಕಗಳು, ರಿಏಜೆಂಟ್ಸ್‌ಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್ (ಆರ್‌ಜಿಎಸ್‌ಎಸ್‌ಹೆಚ್)/ಲ್ಯಾಬ್/160/ 2026-27 (DME/2026-27/ IND2257)	91.64
3	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಸರ್ಜಿಕಲ್ಸ್ ಮತ್ತು ಮಿಸ್ಲೇನಿಯಸ್ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು (ಆರ್‌ಜಿಎಸ್‌ಎಸ್‌ಹೆಚ್)/ಟೆಂಡರ್/ ಸರ್ಜಿಕಲ್/ 161/2026-27 (DME/ 2026-27/IND2262)	86.42
4	ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಹೆಚ್‌ಎನ್‌ಎಸ್ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಹೆಚ್‌ಎನ್‌ಎಸ್/01/2026-27/ ಕಾಲ್-2 (DME/2026-27/ IND2177)	83.00

1) ಟೆಂಡರ್‌ಗಳನ್ನು ದಿನಾಂಕ: 22.04.2026 ರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, **2) ಪ್ರಶ್ನೆಗಳಿಗೆ ಕೊನೆಯ ದಿನಾಂಕ:** 29.04.2026 ರ ಸಾಯಂಕಾಲ 5.00 ಗಂಟೆಯವರೆಗೆ, **3)ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 06.05.2026 ರ ಸಾಯಂಕಾಲ 5.00ಗಂಟೆವರೆಗೆ, **4) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ :** 08.05.2026 ಬೆಳಿಗ್ಗೆ 11.30ಗಂಟೆಗೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೆ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

DIP/RCR/32/KSMC&A/34/2025-26

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

ಸಂಖ್ಯೆ:ರಾಮಪಾ/ತಾಂತ್ರಿಕ/ದರಪಟ್ಟಿ/2026-27 ದಿನಾಂಕ:18-04-2026

ದರಪಟ್ಟಿ ಆಹ್ವಾನ ಪ್ರಕಟಣೆ.

ರಾಯಚೂರು ಮಹಾನಗರ ಪಾಲಿಕೆವತಿಯಿಂದ ನಗರದಸಾರ್ವಜನಿಕರ ಸೇವೆಗಳಿಗಾಗಿ ಕೆಲವು ಯಂತ್ರೋಪಕರಣಗಳನ್ನು ಖರೀದಿ ಮಾಡಲು ಉದ್ದೇಶಿಸಲಾಗಿದ್ದು, ಈ ಯಂತ್ರೋಪಕರಣಗಳಿಗೆದರ ಸೂಚಿಲಭ್ಯವಿಲ್ಲದಕಾರಣ ಆಸಕ್ತ ತಯಾರಕರಿಂದ ಅಥವಾ ಅಧಿಕೃತ ವಿತರಕರಿಂದ ಸ್ಪರ್ಧಾತ್ಮಕ ದರ ಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಯಂತ್ರೋಪಕರಣಗಳ ವಿವರ	ಪ್ರಮಾಣ	ದರ (Lakhs)
I	Designing, supplying, installing, testing and commissioning of 150 TPD capacity Solid Waste Management processing plant for handling wet waste, dry waste and mixed municipal solid waste, comprising of multi-stage trommel screening system with 120/100 mm, 35 mm and 4 mm screens, followed by pre-sorting, preparatory and refinement sections, complete with conveyor systems, feeding arrangements, segregation units, transfer points, and all required electro-mechanical components including motors, gearboxes, control panels, cabling and automation systems, suitable for continuous operation, including fabrication, erection, alignment, trial run and performance testing, and including all materials, labour, transportation, loading and unloading, lead and lift, tools and tackles and all incidental charges complete as per specifications and as directed by the Engineer-in-Charge.	01 Set	
2	Supplying, delivering and commissioning truck mounted refuse compactor vehicles of 16 cubic metre capacity, consisting of suitable truck chassis with mounted hydraulic compactor body, hopper, compaction mechanism, hydraulic system, control panel and all standard accessories, suitable for municipal solid waste collection and transportation, complete with rear loading arrangement, leachate collection tank, safety features and necessary fittings, including registration, insurance, initial fuel, tools, accessories including all transportation, loading and unloading, testing and commissioning and all incidental charges complete as directed by the Engineer-in-Charge.	01 Set	

ಷರತ್ತುಗಳು : 1) ಆಸಕ್ತರು ತಮ್ಮ ಸಂಸ್ಥೆಯ ಪತ್ರ ಶೀರ್ಷಿಕೆಯಡಿ (Letterhead) ದರಗಳನ್ನು ನಮೂದಿಸಿ ಸಲ್ಲಿಸಬೇಕು. 2) ವಿವರವಾದ ತಾಂತ್ರಿಕ ನಿರ್ದಿಷ್ಟತೆಗಳಿಗಾಗಿ ಕಾರ್ಯಪಾಲಕ ಅಭಿಯಂತರರ ಕಛೇರಿಯನ್ನು ಸಂಪರ್ಕಿಸುವುದು. 3) ಯಾವುದೇ ದರ ಪಟ್ಟಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಛೇರಿಯು ಕಾಯ್ದಿರಿಸಿ ಕೊಂಡಿರುತ್ತದೆ. 4) ದರ ಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ:27- 4-2026 ಸಂಜೆ 5:00 ಗಂಟೆವರಗೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/31KSMCA/33/2026-27



ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕನೀನಿನಿ. ಮಎಕಾನಿ, ವಿಭಾಗ ನಂ.1 ರಾಮದುರ್ಗ

ಅಲ್ಪಾವದಿ ಟೆಂಡರ್ ಪ್ರಕಟಣೆ ಕರೆ

ಉಲ್ಲೇಖ:-ಕಾ.ಇಂ/ಕನೀನಿನಿ/ಮಎಕಾನಿ.ವಿ-1/ಡಿ.ಜಿ/ಟೆಂಪ್ರ/8.ಟ್ಯಾಂಕ ಪಿಲ್ಲಿಂಗ್/ಎರಡನೇಯ ಕರೆ ಸಂಖ್ಯೆ:125, ದಿ :21/04/2026.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ., ಮಎಕಾನಿ, ವಿಭಾಗನಂ.1 ರಾಮದುರ್ಗ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ-IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. 8 ಟ್ಯಾಂಕ ಪಿಲ್ಲಿಂಗ್ ಸ್ಟೇಜ್-II ಟರ್ನ-ಕೀ ಆಧಾರಿತ ಕಾಮಗಾರಿಗೆ (ಕಾಮಗಾರಿಯ ಇಂಡೆಂಟ್ ನಂಬರ 3924/Call-2) ಟೆಂಡರ್ ಕರೆಯಲಾಗಿದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ. 39.22 ಕೋಟಿ ಇರುತ್ತದೆ.

(ಜಿಎಸ್‌ಟಿ ಹೊರತುಪಡಿಸಿ) (ಒಟ್ಟು ಕಾಮಗಾರಿ-1) ಇ ಎಂ ಡಿ ಮೊತ್ತವು ಕೆ.ಪಿ.ಪಿ. ಪೋರ್ಟಲ್ ನಲ್ಲಿ ಪ್ರಕಟಿಸಲಾಗಿರುತ್ತದೆ.

1:ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ:21/04/2026 ರಿಂದ 30/04/2026 ರವರೆಗೆ 17.00 ಗಂಟೆಗೆ ಸಾಯಂಕಾಲ, 2:ಪ್ರೀ ಬಿಡ್ ಮೀಟಿಂಗ್ (ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಾಫೀ ಬೋರ್ಡ ಬಿಲ್ಡಿಂಗ್ ಬೆಂಗಳೂರು ಕಚೇರಿಯಲ್ಲಿ ಕರೆಯಲಾಗಿದೆ.):24/04/2026 12.30 ಗಂಟೆಗೆ ವರೆಗೆ, 3:ಟೆಂಡರ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ದಿನಾಂಕ (ಕಾನಿಇಂ ಕನೀನಿನಿ, ಮಎಕಾನಿ ವಿಭಾಗ ನಂ.1 ರಾಮದುರ್ಗ): 27/04/2026 ರವರೆಗೆ 17.00 ಗಂಟೆಗೆ ಸಾಯಂಕಾಲ ವರೆಗೆ, 4:ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 02/05/2026 ಸಾಯಂಕಾಲ 17:30 ಗಂಟೆಯ ನಂತರ, 5:ಆರ್ಥಿಕ ಬಿಡ್‌ತೆರೆಯುವ ದಿನಾಂಕ:04/05/2026 ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ, 6:ಕಾಲಾವಧಿ:18 ತಿಂಗಳು (ಮಳೆಗಾಲ ಸಹಿತ), 7:ಇ.ಎಂ.ಡಿ ಮೊತ್ತ :0.392 ಕೋಟಿ.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್:- 08335- 242143

ಸಹಿ/-(ಪಿ.ಇ.ನಾಗರಾಜ)
ಕಾರ್ಯಪಾಲಕ ಇಂಜಿನಿಯರ್,(ಪ್ರ)
ಕನೀನಿನಿ., ಮಎಕಾನಿ, ವಿಭಾಗ ನಂ.1 ರಾಮದುರ್ಗ

DIPR/BGM/RO-NO-138/KSMCA/2026-27

ಇಂದಿನ ಉತ್ಪನ್ನವಾರು ದರ
ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಅಲಸಂದೆ ಕಾಳು	3029	3029
ಕಡಲೆಕಾಳು	2139	5640
ಉದ್ದಿನಕಾಳು	6111	6611
ಧನಿಯಾ	8525	8525
ಒಣ ಮೆಣಸಿನಕಾಯಿ	3000	55110
ಹೆಸರುಕಾಳು	1499	5450
ನೆಲಗಡಲೆ (ಶೇಂಗಾ)	3069	5200
ಜೋಳ	1829	3052
ಮೆಕ್ಕೆಜೋಳ	1525	1851
ಸಾಸುವೆ	4852	5310
ಈರುಳ್ಳಿ	500	2100
ಆಲೂಗಡ್ಡೆ	1100	1700
ಕುಸುಬೆ	5556	5736
ಸೋಯಾಬಿನ್	4710	5608
ತೊಗರಿ	4052	4052

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸಾಧನೆ



◆**ಕೊಪ್ಪಳ:** ಜಿಲ್ಲೆಯ ಕಿಡದಾಳದಲ್ಲಿರುವ ಶ್ರೀ ಶಾರದಾ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿ ತೇಜಸ್ (ಪ್ರಸ್ತುತ 4ನೇ ತರಗತಿ) ಅವರು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ 2026ನಲ್ಲಿ ವಿಶಿಷ್ಟ ದಾಖಲೆ ಸಾಧನೆ ಮಾಡಿ ಶಾಲೆಗೂ ಜಿಲ್ಲೆಗೂ ಹೆಮ್ಮೆ ತಂದಿದ್ದಾರೆ.

ತೇಜಸ್ ಅವರು ಕಣ್ಣುಮುಚ್ಚಿದ (ಬ್ಲೈಂಡ್ ಫೋಲ್ಡ್) ಸ್ಥಿತಿಯಲ್ಲಿ ಮ್ಯಾಪ್ ಪಜಲ್‌ಗಳನ್ನು ಅಚ್ಚುಕಟ್ಟಾಗಿ ಹಾಗೂ ಅತ್ಯಂತ ವೇಗವಾಗಿ ಪರಿಹರಿಸುವ ಅಪೂರ್ವ ಸಾಮರ್ಥ್ಯ ಪ್ರದರ್ಶಿಸಿ, ನಿಗದಿತ 5 ನಿಮಿಷಗಳಿಗಿಂತ ಮುಂಚೆಯೇ ಕಾರ್ಯವನ್ನು ಪೂರ್ಣಗೊಳಿಸಿ ಈ ಸಾಧನೆಯನ್ನು ಮಾಡಿದ್ದಾರೆ.

ಈ ಸಾಧನೆ ಅವರ ಪರಿಶ್ರಮ, ಏಕಾಗ್ರತೆ, ತೀಕ್ಷ್ಣ ಸ್ಮರಣಾಶಕ್ತಿ ಹಾಗೂ ನಿರಂತರ ಅಭ್ಯಾಸದ ಫಲವಾಗಿದ್ದು, ಅವರ ಭವಿಷ್ಯದಲ್ಲಿ ಇನ್ನಷ್ಟು ಮಹತ್ತರ ಸಾಧನೆಗಳಿಗೆ ದಾರಿಯಾಗಿದೆ.

ತೇಜಸ್ ಅವರ ಪೋಷಕರು ತಮ್ಮ ಮಗನ ಸಾಧನೆಗೆ ಅಪಾರ ಹೆಮ್ಮೆ ವ್ಯಕ್ತಪಡಿಸಿದ್ದು, ಅವನು ಚಿಕ್ಕ ವಯಸ್ಸಿನಿಂದಲೇ ಶಿಸ್ತಿನ, ಗಮನದ ಹಾಗೂ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಾನೆ. ವಿದ್ಯಾಭ್ಯಾಸದಲ್ಲಿಯೂ ಉತ್ತಮ ಸಾಧನೆ ಮಾಡುತ್ತಿದ್ದು, ದೇವರ ಆಶೀರ್ವಾದದಿಂದ ಬೆಳೆಯುತ್ತಿರುವ ಪ್ರತಿಭಾವಂತ ಬಾಲಕ ಎಂದು ತಿಳಿಸಿದ್ದಾರೆ.

ಶಾಲೆಯ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರು ತೇಜಸ್ ಅವರನ್ನು ಅತ್ಯಂತ ಶಿಸ್ತುಬದ್ಧ, ಏಕಾಗ್ರತೆ ಹೊಂದಿದ ಮತ್ತು ವಿದ್ಯಾಭ್ಯಾಸದಲ್ಲಿ ಶ್ರೇಷ್ಠ ಸಾಧನೆ ಮಾಡುವ ವಿದ್ಯಾರ್ಥಿ ಎಂದು ಶ್ಲಾಘಿಸಿದ್ದು, ಇಂತಹ ಸಾಧನೆಗಳು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕರು ಹಾಗೂ ಪೋಷಕರು ತೇಜಸ್ ಅವರ ಸಾಧನೆಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಸಂಭ್ರಮದ ನಂದಿಕೋಲು ಮೆರವಣಿಗೆ



◆**ಕುರುಗೋಡು:** ಮಾನವೀಯ ನೆಲೆಗಟ್ಟಿನಲ್ಲಿ ಬದುಕನ್ನು ಕಟ್ಟಿಕೊಳ್ಳುವುದಕ್ಕೆ 12ನೇ ಶತಮಾನದ ವಚನಕಾರರು ವಚನಗಳು ಇಂದಿಗೂ ಎಂದು ಹಂಪಿ ಸಾವಿರ ಮಠದ ವಾಮದೇವ ಮಹಾಂತ ಶಿವಾಚಾರ್ಯರು ತಿಳಿಸಿದರು.

ಸಮೀಪದ ಎಮ್ಮಿಗನೂರು ಗ್ರಾಮದ ಜಗಜ್ಯೋತಿ ಬಸವೇಶ್ವರ ಸೇವಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 893ನೇ ಬಸವ ಜಯಂತಿಯ ನಿಮಿತ್ತ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, ಪರಿಶುದ್ಧ ಮಾನಗಳಲ್ಲಿ ಕೌಟುಂಬಿಕವಾಗಿ ಹಲವಾರು ಸಂಬಂಧಗಳು ದೂರವಾಗುತ್ತಿದ್ದು ಮರು ಸಂಬಂಧಗಳು ಗಟ್ಟಿಗೊಳ್ಳಲು ವಚನಗಳು ನಮ್ಮೆಲ್ಲರಿಗೆ ದಾರಿದೀಪವಾಗಿವೆ ಎಂದರು. ನಂತರ ಗೆಣಿಕೆಹಾಳ್ ಮಠದ ಹಂಪಯ್ಯ ಸ್ವಾಮಿ ಮಾತನಾಡಿ, ಬಸವಣ್ಣನವರೊಂದಿಗೆ ಹಲವಾರು ವಚನಕಾರರು ಸಮ ಸಮಾಜದ ನಿರ್ಮಾಣಕ್ಕೆ ಬದುಕನ್ನು ಮೀಸಲಾಗಿತ್ತು. ನಮ್ಮೆಲ್ಲರಿಗೂ ಕೂಡ ಮಾರ್ಗದರ್ಶಕರಾಗಿದ್ದಾರೆ ಎಂದರು.

ಭಾವಚಿತ್ರ ಮೆರವಣಿಗೆಯಲ್ಲಿ ಮಹಿಳೆಯರ ಕುಂಭ ಕಳಸ ಭಜನೆ ವೀರಗಾಸೆ ನಂದಿಕೋಲು ಕಲಾತಂಡಗಳು ಜೋಡಿ ಎತ್ತಿನ ಮೆರವಣಿಗೆ ಗಮನ ಸೆಳೆದವು.

ಈ ವೇಳೆ ಎಚ್ ವೀರಾಪುರ ಜ್ಞಾನಜ್ಯೋತಿ ಶಿವಲಿಂಗ ಮಂದಿರದ ಚೆಡಿಎಸ್ ತಾತನವರು ಪ್ರಮುಖರಾದ ಬಿ.ಪ್ರವೀಣ್, ಬಿ. ಸದಾಶಿವಪ್ಪ, ಗೆಣಿಕೆಹಾಳ್ ಹಂಪಯ್ಯ ಸ್ವಾಮಿ, ಬಸವರಾಜ್, ಶರಣಪ್ಪ, ಜಿಡಿಮೂರ್ತಿ, ವೀರೇಶ್, ಸಜ್ಜನರ ಬಸವರಾಜ, ರಮೇಶ, ಸದಾಶಿವ, ಜಡೇಶ ಸೇರಿದಂತೆ ವೀರಶೈವ ಲಿಂಗಾಯತ ಮತ್ತು ವಿವಿಧ ಸಮಾಜದ ಹಿರಿಯರು ಯುವಕರು ಮಕ್ಕಳು ಮಹಿಳೆಯರು ಇದ್ದರು.

ಕಿರುಸುದ್ದಿ

ಮಲ್ಲಿಕಾರ್ಜುನ ಖರ್ಗೆ ಕ್ಷಮೆಯಾಚಿಸಲಿ: ಜಿಗಜಿಣಗಿ

ವಿಜಯಪುರ: ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕರಿಗೆ ಹೋಲಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಡೆ ಖಂಡನಾರ್ಹ. ಕೂಡಲೇ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ಮೋದಿ ಹಾಗೂ ದೇಶದ ಸಮಸ್ತ ಜನತೆಗೆ ಕ್ಷಮೆಯಾಚಿಸಬೇಕು ಎಂದು ಸಂಸದ ರಮೇಶ ಜಿಗಜಿಣಗಿ ಒತ್ತಾಯಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಓಲೈಸಲು ಈ ರೀತಿ ಒಬ್ಬ ದೇಶದ ಹೆಮ್ಮೆಯ ಪ್ರಧಾನಿಯನ್ನೇ ಅವಮಾನಿಸಿ ಕೀಳು ಮಟ್ಟದ ಪದ ಪ್ರಯೋಗಿಸಿರುವುದು ಖರ್ಗೆ ಅವರ ಹಿರಿತನಕ್ಕೆ ಶೋಭೆ ತರುವಂತಹದಲ್ಲ. ಪ್ರಧಾನಿ ಅವರನ್ನು ಭಯೋತ್ಪಾದಕರು ಎಂದು ಕರೆದಿರುವುದು ಒಂದು ದೊಡ್ಡ ಅಗೌರವ ಹಾಗೂ ಸಾಂವಿಧಾನಿಕ ಹುದ್ದೆಗೆ ತೋರಿದ ಅತ್ಯಂತ ಅಗೌರವವಾಗಿದೆ.

ಗುಜರಾಜ್ ಚುನಾವಣೆ ವೇಳೆ ಹತ್ತು ತಲೆಯ ರಾವಣನಿಗೆ ಮೋದಿಯವರನ್ನು ಖರ್ಗೆ ಹೋಲಿಸಿದ್ದರು. ಅಷ್ಟೇ ಅಲ್ಲ ಕರ್ನಾಟಕ ಚುನಾವಣೆ ವೇಳೆ ಕಲಬುರಗಿಯಲ್ಲಿ ಮೋದಿ ಅವರನ್ನು ವಿಷದ ಹಾವಿಗೆ ಹೋಲಿಸಿದ್ದರು. ಮತ್ತೊಂದು ಬಾರಿ ಮೋದಿ ಅವರು ಆಯ್ಕೆಯಾದರೆ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುವುದಿಲ್ಲ ಎಂದು ಸಂಸತ್ ಒಳಗೆ ಮಾತನಾಡುವಾಗ ಹೇಳಿದ್ದರು. ಈಗ ಭಯೋತ್ಪಾದಕ ಎಂದು ಕರೆದಿದ್ದಾರೆ ಇದು ಸರಿಯಾದ ಬೆಳವಣಿಗೆ ಅಲ್ಲ ಎಂದು ಅವರು ಕಿಡಿಕಾರಿದ್ದಾರೆ.

ವಿದ್ಯುತ್ ಅವಘಡ: ರೂ.8ಲಕ್ಷ ಮೌಲ್ಯದ ಸಾಮಗ್ರಿ ಹಾನಿ

ಹಾವೇರಿ: ಜಿಲ್ಲೆಯ ರಾಣೇಬೆನ್ನೂರ ತಾಲೂಕು ಮೇಡ್ಲೇರಿ ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ ಇಲೆಕ್ಟ್ರಿಕ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡು ಸುಮಾರು 8 ಲಕ್ಷ ರೂ.ಗಳಷ್ಟು ಹಾನಿ ಸಂಭವಿಸಿದೆ.

ಮಳೆ ಗಾಳಿ ಇದ್ದುದ್ದರಿಂದ ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಇಲೆಕ್ಟ್ರಿಕ್ ಶಾರ್ಟ್ ಸರ್ಕ್ಯೂಟ್ ಆಗಿ ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡಿದೆ. ಬ್ಯಾಂಕಿನಲ್ಲಿದ್ದ ಬಂಡಲ್ ಕೌಂಟಿಂಗ್ ಮಶೀನ್, ಲ್ಯಾನ್ ನೆಟವರ್ಕ್, ಸಿಸಿಟಿವಿ ಸಿಸ್ಟಂ, ಪಾಸ್‌ಬುಕ್ ಪ್ರಿಂಟರ್, ಯುಪಿಎಸ್, ನೋಟ್ ಕೌಂಟಿಂಗ್ ಮಶೀನ್, ಕಂಪ್ಯೂಟರ್‌ಗಳು, ಟೇಬಲ್, ಕುರ್ಚಿ, ಕೇಬಲ್ ಸೇರಿದಂತೆ ಸುಮಾರು 8ಲಕ್ಷ ರೂ.ಗಳಷ್ಟು ಹಾನಿ ಸಂಭವಿಸಿದೆ ಎಂದು ಬ್ಯಾಂಕಿನ ಮ್ಯಾನೇಜರ್ ನಾಗೇಂದ್ರಬಾಬು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲಕ್ಕೆ ಹೆದರಿ ಆತ್ಮಹತ್ಯೆ

ಹಾವೇರಿ: ಮನೆ ಕಟ್ಟಲಿಕ್ಕೆ ಕೈಗಡ ಸಾಲ ಮಾಡಿಕೊಂಡಿದ್ದ ವ್ಯಕ್ತಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ದೇವಿಹೊಸೂರು ಗ್ರಾಮದಲ್ಲಿ ನಡೆದಿದೆ.

ನವೀನ ರಾಜೇಂದ್ರಪ್ಪ ಆಲದಕಟ್ಟಿ (28) ಮೃತ ದುರ್ದೈವಿಯಾಗಿದ್ದಾರೆ. ಇವರು ಮದ್ಯ ವ್ಯಸನಿಯಾಗಿದ್ದು, ಮನೆ ಕಟ್ಟಲಿಕ್ಕೆ ಗ್ರಾಮದಲ್ಲಿ ಕೈಗಡ ಸಾಲವನ್ನು ಮಾಡಿಕೊಂಡಿದ್ದ. ಮಾಡಿದ ಸಾಲವನ್ನು ತೀರಿಸಲಾಗದ ಚಿಂತೆಯಲ್ಲಿ ಗ್ರಾಮದ ಗಣೇಶ ಕೊಡಮಗ್ಗಿ ಎಂಬುವವರ ಜಮೀನಿನಲ್ಲಿ ಗಿಡಕ್ಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆಂದು ಮೃತನ ಪತ್ನಿ ರಾಧಿಕಾ ಆಲದಕಟ್ಟಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎತ್ತುಗಳ ಕೂಡಿ ಹಾಕಿದ್ದ ವ್ಯಕ್ತಿ ವಿರುದ್ಧ ಪ್ರಕರಣ ದಾಖಲು

ಭಟ್ಕಳ: ಪಟ್ಟಣದ ಬಂದರ ರಸ್ತೆಯಲ್ಲಿ ವಧೆ ಮಾಡುವ ಉದ್ದೇಶದಿಂದ ಅಕ್ರಮವಾಗಿ ಎತ್ತುಗಳನ್ನು ಕೂಡಿ ಹಾಕಿದ ವ್ಯಕ್ತಿಯ ಮೇಲೆ ನಗರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪಟ್ಟಣದ ಬಂದರ ರೋಡ್ 3ನೇ ಕ್ರಾಸ್ ನಿವಾಸಿ ಮೊಹಮ್ಮದ ಶಿಯಾಮ್ ಮಹಮ್ಮದ್ ಜಾಫರ್ (42) ಆರೋಪಿ. ಪಟ್ಟಣದ ಬಂದರ ರೋಡ್ 6ನೇ ಕ್ರಾಸನಲ್ಲಿರುವ ಇವರ ಮನೆಯಲ್ಲಿ ಅಂದಾಜು 2 ಲಕ್ಷ ಮೌಲ್ಯದ 2 ಎತ್ತುಗಳನ್ನು ಅಕ್ರಮವಾಗಿ ಕೂಡಿ ಹಾಕಿದ್ದರು. ಎತ್ತುಗಳನ್ನು ಬೇರೆಡೆ ಸಾಗಾಟ ಮಾಡುವ ಸಮಯದಲ್ಲಿ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ವಶಪಡಿಸಿಕೊಂಡಿದ್ದಾರೆ.

'ನಾನೂ ಕಾಫಿರ' ಪುಸ್ತಕ ಬಿಡುಗಡೆಗೊಳಿಸಿ ಸೂಲಿಬೆಲೆ ಮಾತು
ಅಂಬೇಡ್ಕರ್‌ರ ಹಿಂದೂ ನಿಲುವು ಮಾದರಿ

ಹುಬ್ಬಳ್ಳಿ: ಪ್ರತಿಯೊಬ್ಬ ಹಿಂದುವೂ ಅಚ್ಚರಿ ಪಡುವಂತಹ ಅಪ್ಪಟ ಮಾದರಿಯ ಹಿಂದುತ್ವ ಬಾಬಾ ಸಾಹೇಬರಲ್ಲಿತ್ತು ಎಂಬುದು ಸತ್ಯವಾದ ಮಾತು. ಡಾ.ಅಂಬೇಡ್ಕರ್ ಅವರು ಹಿಂದು ಮತ್ತು ಮುಸ್ಲಿಮರ ಬಗ್ಗೆ ಯಾವ ಭಾವನೆ ಇಟ್ಟುಕೊಂಡಿದ್ದರು ಎನ್ನುವುದನ್ನು 'ನಾನೂ ಕಾಫಿರ' ಪುಸ್ತಕ ಅದ್ಭುತವಾಗಿ ಅನಾವರಣಗೊಳಿಸಿದೆ ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಹೇಳಿದರು.

ನಗರದ ಸವಾಯಿ ಗಂಧರ್ವ ಸಭಾಭವನದಲ್ಲಿ ಲೋಕಹಿತ ಟ್ರಸ್ಟ್ ಹುಬ್ಬಳ್ಳಿ ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕ ಸಹಯೋಗದಲ್ಲಿ ಮಂಗಳವಾರ ಸಂಜೆ ನಡೆದ ಸಮಾರಂಭದಲ್ಲಿ ಡಾ.ಸುಧಾಕರ ಹೊಸಳ್ಳಿ ರಚಿಸಿದ 'ನಾನೂ ಕಾಫಿರ' (ಬಾಬಾ ಸಾಹೇಬರ ಹಿಂದುತ್ವ ಕಥನ)ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಹಲವು ದಶಕಗಳಿಂದ ಒಂದು ವರ್ಗ ನಿರಂತರವಾಗಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಹೇಳಿರುವ ಸುಳ್ಳುಗಳನ್ನೇ ಎಡಪಂಥೀಯರು ಬಂಡವಾಳ ಮಾಡಿಕೊಂಡಿದ್ದಾರೆ. ಸಮ ಸಮಾಜ ನಿರ್ಮಿಸುವಲ್ಲಿ ಬಾಬಾ ಸಾಹೇಬರು ಶ್ರಮ ವಹಿಸದೇ ಇದ್ದಿದ್ದರೆ ಇಂದು ದಲಿತರಿಗೆ ಅವಕಾಶಗಳು ಇರುತ್ತಿರಲಿಲ್ಲ. ಬಾಬಾ ಸಾಹೇಬರು ತಾವು ಅನುಭವಿಸಿದ ಕಷ್ಟ, ಅಸ್ಪೃಶ್ಯತೆ ಬೇರೆಯವರು ಅನುಭವಿಸಬಾರದು ಎಂದು ಸರ್ವರಿಗೂ ಸಮಾನತೆಯ ಬದುಕನ್ನು ನೀಡುವ ಸಂವಿಧಾನ ನೀಡಿದ್ದಾರೆ ಎಂದರು.

ಅನೇಕ ವರ್ಷಗಳಿಂದ ಬಾಬಾ ಸಾಹೇಬರನ್ನು ಹತ್ತಿಕ್ಕುವ ಕೆಲಸ ನಡೆದಿದ್ದು ಇದರಿಂದ ಹೆಚ್ಚು ಲಾಭವಾಗಿದ್ದು ಎಡಪಂಥೀಯರಿಗೆ ಮಾತ್ರ. ಕಳೆದ ಮೂರು ದಶಕಗಳಿಂದ ಅಂಬೇಡ್ಕರ್ ಬಗ್ಗೆ ಕೆಲ ವರ್ಗ ಸುಳ್ಳು ಹೇಳುತ್ತಲೆ ಬಂದಿದೆ.



ನಾನೂ ಕಾಫಿರ್ ಪುಸ್ತಕದಲ್ಲಿ ಬಿ.ಆರ್. ಅಂಬೇಡ್ಕರ್ ಅವರ ಇಸ್ಲಾಂ ಧರ್ಮದ ಕುರಿತಾದ ನಿಲುವು ಹಾಗೂ ಹಿಂದು ಧರ್ಮದ ಮೇಲಿದ್ದ ಬಾಂಧವ್ಯದ ಕುರಿತಾಗಿ ಅದ್ಭುತ ಮಾಹಿತಿ ಒದಗಿಸುತ್ತಿದೆ ಎಂದು ತಿಳಿಸಿದರು.

ಬಾಬಾ ಸಾಹೇಬರು ತಾವು ಅನುಭವಿಸಿದ ಕಷ್ಟ ಅಸ್ಪೃಶ್ಯತೆ ಬೇರೆಯವರು ಅನುಭವಿಸಬಾರದು ಎಂದು ಸರ್ವರಿಗೂ ಸಮಾನತೆಯ ಬದುಕನ್ನು ನೀಡುವ ಸಂವಿಧಾನ ನೀಡಿದ್ದಾರೆ.

ಮನೆಯಲ್ಲಿ ವಿವಿಧ ದೇವರನ್ನು ಪೂಜಿಸುವವನು ಕಾಫಿರ ಎಂಬುವುದು ಇಸ್ಲಾಂ ಧರ್ಮದ ವಾದವಾಗಿದೆ. ಕೆಟ್ಟ ಮುಸ್ಲಿಮರ ಮಧ್ಯೆ ಒಳ್ಳೆಯ ಮುಸ್ಲಿಮರನ್ನು ನಂಬದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಹ್ಮದ್‌ಬಿನ್ ತುಘಲಕ್ ಸೇರಿದಂತೆ ಮುಸ್ಲಿಮರು ನಡೆಸಿದ ಘೋರ ದಾಳಿಯ ಸತ್ಯವನ್ನು ಇತಿಹಾಸದಿಂದ ಅಳಿಸಿ ಹಾಕಲಾಗಿದೆ. ಮುಸ್ಲಿಮರು ಹಿಂದುಗಳ ಹತ್ಯೆ ಹಾಗೂ ದೇವಸ್ಥಾನ ನಾಶ ಮಾಡಿದ್ದರು. 40 ಸಾವಿರಕ್ಕೂ ಅಧಿಕ ಹಿಂದು ದೇವಾಲಯಗಳನ್ನು ಘಜನಿ ಮಹ್ಮದ್ ಹಾಗೂ ಮಹ್ಮದ್ ಘೋರಿ ಅವರು ಧ್ವಂಸಗೊಳಿಸಿದ್ದಾರೆ ಎಂದು ಅಂಬೇಡ್ಕರ್ ಅವರು ಪುಸ್ತಕದಲ್ಲಿ ಉಲ್ಲೇಖ ಮಾಡಿದ್ದಾರೆ ಎಂದರು.

ಅಂಬೇಡ್ಕರ್ ಅವರು ಮಹಾತ್ಮಗಾಂಧಿ ಅವರನ್ನು ಬಹಳ ವಿರೋಧಿಸಿದ್ದರು. ಸಂವಿಧಾನ ನೀಡುವಾಗ ಇದು ಒಳ್ಳೆಯವರ ಕೈಯಲ್ಲಿ ಇದ್ದರೆ ಒಳ್ಳೆಯದು ಆಗುತ್ತದೆ. ಇಲ್ಲವಾದರೆ ಕೆಟ್ಟದಾಗುತ್ತದೆ ಎಂದು ಹೇಳಿದ್ದರು. ಕಾಂಗ್ರೆಸ್ ಪಕ್ಷ ಮುನ್ನಡೆಸಿದ ಒಂದೇ ಕುಟುಂಬ ಸಂವಿಧಾನವನ್ನು ಅನೇಕ ಬಾರಿ ತಿದ್ದುಪಡಿ ಮಾಡಿದೆ ಎಂದು ಆರೋಪಿಸಿದರು.

ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ, ಲೇಖಕ ಸುಧಾಕರ ಹೊಸಳ್ಳಿ, ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕಾರ್ಯದರ್ಶಿ ಜನಮೇಜಯ ಉಮರ್ಜಿ ಮಾತನಾಡಿದರು. ಲೋಕಹಿತ ಟ್ರಸ್ಟ್ ಕಾರ್ಯದರ್ಶಿ ಶ್ರೀಧರ ನಾಡಿಗೇರ ಸೇರಿದಂತೆ ಅನೇಕರಿದ್ದರು.

ರಂಗಭೂಮಿ ಕಲಾವಿದರು ನಾಡಿನ ಸಂಪತ್ತು: ದೇಸಾಯಿ

ಯಲಬುರ್ಗಾ: ನಾಟಕ ಪ್ರಾಚೀನವಾದ ಕಲೆ.ರಂಗಭೂಮಿ ಕಲಾವಿದರು ನಾಡಿನ ಸಂಪತ್ತು. ಕಲಿತ ಕಲೆಗಳಲ್ಲಿ ನಾಟಕ ಒಂದಾಗಿದೆ ಎಂದು ಮಾಜಿ ತಾಪಂ ಸದಸ್ಯ ಸುಧಾಕರ ದೇಸಾಯಿ ಹೇಳಿದರು.

ತಾಲೂಕಿನ ಚಿಕ್ಕಮ್ಯಾಗೇರಿ ಗ್ರಾಮದಲ್ಲಿ ಕಲ್ಯಾಣ ಬಸವಲಿಂಗೇಶ್ವರ ಹಾಗೂ ಬಸವ ಜಯಂತಿ ನಿಮಿತ್ತ ಮಾರುತೇಶ್ವರ ಯುವ ನಾಟಕ ಸಂಘ ಸಹಯೋಗದಲ್ಲಿ ಕೆರಳಿದ ಗಂಡು ಹುಲಿ ಎಂಬ ಸಾಮಾಜಿಕ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿ, ಕನ್ನಡ ಭಾಷೆ ಉಳಿವು,ಬೆಳವಣಿಗೆಯಲ್ಲಿ ಮತ್ತು ಸ್ವಾತಂತ್ರ್ಯ ಆಂದೋಲನದಲ್ಲಿ ರಂಗಭೂಮಿ ಪಾತ್ರ ವಿಶಿಷ್ಟವಾದುದಾಗಿದೆ ಎಂದರು.

ಮಾಜಿ ಜಿಪಂ ಉಪಾಧ್ಯಕ್ಷ ಶಿವಶಂಕರಾವ ದೇಸಾಯಿ ಮಾತನಾಡಿ, ನಾಟಕಗಳು ಜನರಲ್ಲಿ ದೇಶಭಕ್ತಿ, ಸ್ವಾತಂತ್ರ್ಯದ ಕಿಚ್ಚು ಮೂಡಿಸುತ್ತಿದ್ದವು.ಬ್ರಿಟಿಷ್ ಆಡಳಿತದ ಕ್ರೌರ್ಯ, ಗುಲಾಮಗಿರಿ ಇವು ಬಿಂಬಿಸುತ್ತಿದ್ದವು ಎಂದರು.

ಅಮೃತಪ್ಪ ದೇಸಾಯಿ ದಳಪತಿ ಮಾತನಾಡಿದರು.

ಗವಿಸಿದ್ಧಪ್ಪ ಅಟಮಾಳಗಿ. ಸಂಗಪ್ಪ ಬಿಸಿರೊಟ್ಟಿ. ಹಂಪಯ್ಯ ಸ್ವಾಮಿ ಹಿರೇಮಠ, ಬಸವರಾಜ ಬಾವಿ, ಗವಿಸಿದ್ದಪ್ಪ ಚಂಡೂರ, ಸಿದ್ದಪ್ಪ ಕೂಕನಪಳ್ಳಿ, ಮಾದೇವಪ್ಪ ಅಂಗಡಿ, ಸುಗೀರಪ್ಪ ಬಳಿಗೇರ್, ಶಿವಪ್ಪ ಹೂಗಾರ, ರಾಮಣ್ಣ ಆಡಿನ್,ಪಕೀರಪ್ಪ ಇಟಗಿ, ಕಲ್ಲಪ್ಪ ದೇಸಾಯಿ, ಗುರಪ್ಪ ತೋಟದ. ಗದಿಗೆಪ್ಪ ತೋಟದ್, ಮುದುಕಪ್ಪ ಆಡಿನ್, ಅಕ್ಬರಲಿ ನದಾಫ್, ಸಂಗಮೇಶ್ ದಪೇದ್, ಕಳಕಯ್ಯ ಹಿರೇಮಠ, ಸುಭಾಸ ವದ್ನಾಳ, ಯಮನೂರಪ್ಪ ಎಚ್.ಕುರಿ, ಶರಣಪ್ಪ ಕಮ್ಮಾರ್, ಸಿದ್ದರಾಮಪ್ಪ ಕೊಳಜಿ, ಯಮನೂಸಾಬ ನದಾಫ್, ಭೀಮರಾವ್, ಶರಣಪ್ಪ ದೇಸಾಯಿ, ಸಂಗಪ್ಪ ಮೇಣಸಗೇರಿ, ಹಾಲಪ್ಪ ಚವಡಿ, ಯಲ್ಲಪ್ಪ ಸೂಡಿ, ರಾಮಣ್ಣ ಹಿರೇಮನಿ, ಪ್ರಭುಗೌಡ ಮೇಟಿ, ಕಳಕಪ್ಪ ತಳವಾರ, ಶರಣಪ್ಪ ಕರಡದ, ಈರಪ್ಪ ಕಮ್ಮಾರ್, ಬಾಬುಸಾಬ್ ನದಾಫ್, ಶರಣಪ್ಪ ಅಂಗಡಿ, ಶರಣಪ್ಪ ಬಿಂದ್ಗಿ, ಷಣ್ಮುಖಯ್ಯ ಹಿರೇಮಠ, ಪಂಪಣ್ಣ ಕೊಳಜಿ, ಗುರುನಾಥ ಅಟಮಾಳಗಿ ಇದ್ದರು.



ಶಿಷ್ಟಾಚಾರದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದ: ಗುತ್ತೇದಾರ್

ಕಲಬುರಗಿ: ಶಿಷ್ಟಾಚಾರ ಪಾಲಿಸದ ಶಾಸಕ ಬಿ.ಆರ್.ಪಾಟೀಲ ಮತ್ತು ಇತರರು ಶಿಷ್ಟಾಚಾರದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗಿದೆ ಎಂದು ಜಿಪಂ ಮಾಜಿ ಉಪಾಧ್ಯಕ್ಷ ಹರ್ಷ ಗುತ್ತೇದಾರ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಕಳೆದ ಮೂರು ವರ್ಷಗಳಲ್ಲಿ ಆಳಂದ ತಾಲೂಕಿನಲ್ಲಿ ಶಿಷ್ಟಾಚಾರ ಎನ್ನುವುದು ಕಾಣೆಯಾಗಿದೆ. ತಾಲೂಕಿನಲ್ಲಿ ಸರ್ಕಾರದ ವಿವಿಧ ಕಾಮಗಾರಿಗಳನ್ನು ಜನರಿಂದ ನೇರವಾಗಿ ಆಯ್ಕೆ ಮಾಡಿಸದೆ ಕೆಎಂಎಫ್ ಅಧ್ಯಕ್ಷ ಆರ್.ಕೆ. ಪಾಟೀಲ ಅವರು ಗುದ್ದಲಿ ಪೂಜೆ ಮಾಡುತ್ತಿರುವುದಾಗಿ ಆರೋಪಿಸಿದ್ದಾರೆ.

ಶಾಸಕ ಬಿ.ಆರ್.ಪಾಟೀಲ ಅವರ ಸಹೋದರ ಪುತ್ರ ಆರ್.ಕೆ.ಪಾಟೀಲ ಅವರು ಯಾವುದೇ ಹುದ್ದೆಯಲ್ಲಿರದಿದ್ದರೂ ಸರ್ಕಾರದ ವಿವಿಧ ಯೋಜನೆಗಳ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ. ಅಧಿಕಾರಿಗಳು ಇಲ್ಲಿ ಶಿಷ್ಟಾಚಾರ ಪಾಲಿಸುತ್ತಿಲ್ಲ, ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದ ಮೂಲಕ ವಿತರಣೆ ಮಾಡಬೇಕಾದ ಬೀಜಗಳು ಮತ್ತು ಸ್ಪ್ರಿಂಕ್ಲರ್ ಪೈಪ್‌ಗಳನ್ನು ದುರುಪಯೋಗ ಮಾಡಲಾಗಿದೆ. ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಈಗಾಗಲೇ ಪತ್ರ ಬರೆದಿರುವುದಾಗಿ ತಿಳಿಸಿದ್ದಾರೆ.

ಗೊಮ್ಮಟದಲ್ಲಿ ಕೋಟ್ಯಾಂತರ ರೂಪಾಯಿ ನೇಮಕಾತಿ ಹಗರಣ ನಡೆದಿದೆ. ಅದರ ಬಗ್ಗೆ ಮಾತನಾಡಲು ಶಾಸಕರಿಗೆ ಸಮಯವಿಲ್ಲ, ಅವರು ಕೇವಲ ಬಿಜೆಪಿ ಮತ್ತು ಕೇಂದ್ರ ಸರ್ಕಾರವನ್ನು ಟೀಕಿಸಲು ಮಾತ್ರ ಸಮಯ ಬಳಸುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಕ್ಷೇತ್ರದಲ್ಲಿ ಹೆಚ್ಚು ಸಮಯ ಕಳೆಯದಿರುವುದು ಅವರ ಸಾಮಾಜಿಕ ಜಾಲತಾಣಗಳಲ್ಲೇ ಗೋಚರಿಸುತ್ತದೆ ಎಂದು ಟೀಕಿಸಿದ್ದಾರೆ.

ಶಿಷ್ಟಾಚಾರ ಉಲ್ಲಂಘನೆ: ಶಾಸಕ ಬಿ.ಆರ್.ಪಾಟೀಲ್

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ವಿವಿಯ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಸ್ಥಳೀಯ ಶಾಸಕರನ್ನು ಕಾರ್ಯಕ್ರಮಕ್ಕೆ ಕರೆಯದೇ ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ ಎಂದು ಕಾಂಗ್ರೆಸ್ ಶಾಸಕ ಬಿ.ಆರ್ .ಪಾಟೀಲ್ ಆರೋಪಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಘಟಿಕೋತ್ಸವಕ್ಕೆ ಸ್ಥಳೀಯ ಶಾಸಕ ಹಾಗೂ ಸಂಸದರನ್ನು ಆಹ್ವಾನಿಸದೆ ನಿರ್ಲಕ್ಷ್ಯ ತೋರಲಾಗಿದೆ. ಅಲ್ಲದೇ ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆರನ್ನು ಕಡೆಗಣಿಸಲಾಗಿದೆ ಎಂದು ದೂರಿದ್ದು, ಈ ಹಿನ್ನೆಲೆದಲ್ಲಿ ಇಂದು ಕಾರ್ಯಕ್ರಮ ಬಹಿಷ್ಕರಿಸುವುದಾಗಿ ಪಾಟೀಲ ಘೋಷಿಸಿದ್ದಾರೆ.

ಕುಲಪತಿ ವಿರುದ್ಧ ಗಂಭೀರ ಪ್ರಕರಣ ದಾಖಲಾಗಿದ್ದು, ನರೋಣಾ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿರುವುದರ ಜೊತೆಗೆ ಚಾರ್ಜ್‌ಶೀಟ್ ಸಹ ಸಲ್ಲಿಕೆಯಾಗಿದೆ. ಇಂತಹ ಆರೋಪಿಯೊಂದಿಗೆ ಉಪರಾಷ್ಟ್ರಪತಿ ಹಾಗೂ ರಾಜ್ಯಪಾಲರು ಒಂದೇ ವೇದಿಕೆ ಹಂಚಿಕೊಳ್ಳಬಾರದು ಎಂದು ಆಗ್ರಹಿಸಿದರು.

ಕುಲಪತಿ ಭಟ್ಟು ಸತ್ಯನಾರಾಯಣ ಅಧಿಕಾರ ದುರುಪಯೋಗಪಡಿಸಿಕೊಂಡು ಅಕ್ರಮ ನೇಮಕಾತಿಗಳನ್ನು ನಡೆಸಿದ್ದಾರೆ ಎಂಬ ಆರೋಪವನ್ನೂ ಪಾಟೀಲ್ ಮಾಡಿದ್ದಾರೆ. ತೆಲಂಗಾಣ ಮೂಲದವರನ್ನು ಅಕ್ರಮವಾಗಿ ನೇಮಕ ಮಾಡಲಾಗಿದೆ ಹಾಗೂ ರಾಜ್ಯದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ.ಪಿಆರ್‌ಒ ನೇಮಕಾತಿ ವಿಚಾರದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಪತ್ರ ಬರೆದಿದ್ದರೂ, ಕೌನ್ಸಿಲ್ ಸಭೆ ನಡೆಸಿ ನಿಯಮ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಎಂಎಲ್‌ಸಿ ರಮೇಶ್ ಬಾಬು ಕ್ಷಮೆ ಕೇಳಲಿ

ಕಲಬುರಗಿ: ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಅವಹೇಳನಕಾರಿಹೇಳಿಕೆನೀಡಿರುವಕಾಂಗ್ರೆಸ್‌ಎಂಎಲ್‌ಸಿ ರಮೇಶ್ ಬಾಬು ವಿರುದ್ಧ ಬಿಜೆಪಿ ಎಸ್ಸಿ ಮೋರ್ಚಾ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ರಮೇಶ್ ಬಾಬು ಕೂಡಲೇ ಬಹಿರಂಗ ಕ್ಷಮೆಯಾಚಿಸದಿದ್ದರೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ಎಂದು ಮುಖಂಡ ಡಾ. ಅಂಬಾರಾಯ ಅಷ್ಟಗಿ ಹೇಳಿದರು.



ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ದಲಿತ ಮಹಾಸಭಾ ಮೂಲಕ ಶೋಷಿತ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸುತ್ತಿರುವ ಛಲವಾದಿ ನಾರಾಯಣಸ್ವಾಮಿ ಬುದ್ಧ, ಬಸವ, ಅಂಬೇಡ್ಕರರ ಸಿದ್ಧಾಂತ ಮೈಗೂಡಿಸಿಕೊಂಡವರು. ಈ ಹಿಂದೆ ಕಾಂಗ್ರೆಸ್ ಪಕ್ಷವು ಅಂಬೇಡ್ಕರರನ್ನು ಹೀನಾಯವಾಗಿ ನಡೆಸಿ, ಎರಡು ಬಾರಿ ಚುನಾವಣೆಯಲ್ಲಿ ಸೋಲಿಸಿದ ಇತಿಹಾಸ ಹೊಂದಿದೆ. ಕಾಂಗ್ರೆಸ್‌ನ ದಲಿತ ವಿರೋಧಿ ನೀತಿ ಖಂಡಿಸಿ ಛಲವಾದಿ ಅವರು ನರೇಂದ್ರ ಮೋದಿ ಅಭಿವೃದ್ಧಿ ಶೀಲ ವಿಚಾರ ಒಪ್ಪಿ ಬಿಜೆಪಿ ಸೇರಿದ್ದಾರೆ ಎಂದು ವಿವರಿಸಿದರು.

ವಿರೋಧ ಪಕ್ಷದ ನಾಯಕ ನಂತರ ಛಲವಾದಿ ರಾಜ್ಯ ಸರ್ಕಾರದ ಭ್ರಷ್ಟಾಚಾರ ಮತ್ತುವೈಫಲ್ಯ ಸಮರ್ಥವಾಗಿ ಎತ್ತಿ ತೋರಿಸುತ್ತಿದ್ದಾರೆ. ಇದನ್ನು ಸಹಿಸಲಾಗದ ಕಾಂಗ್ರೆಸ್ ಮುಖಂಡರು ಅವರ ಮೇಲೆ ಹಲ್ಲೆ ಹಾಗೂ ಜೀವ ಬೆದರಿಕೆ ಹಾಕುತ್ತಿದ್ದಾರೆ. ಮೊದಲು ಜೆಡಿಎಸ್‌ನಲ್ಲಿದ್ದು ದೇವೇಗೌಡರ ಬಾಗಿಲು ಕಾಯುತ್ತಿದ್ದ ರಮೇಶ್ ಬಾಬು, ಈಗ ಕಾಂಗ್ರೆಸ್ ಸೇರಿ ಹರಕು ಬಾಯಿಂದ ಏಕವಚನದಲ್ಲಿ ನಿಂದಿಸುತ್ತಿದ್ದಾರೆ. ರಮೇಶ್ ಕೂಡಲೇ ಕ್ಷಮೆಯಾಚಿಸಬೇಕು ಎಂದರು.

ಈ ವೇಳೆ ಕಲಬುರಗಿ ಗ್ರಾಮಾಂತರ ಜಿಲ್ಲಾ ಬಿಜೆಪಿಯ ಪ್ರಮುಖರಾದ ಬಸವರಾಜ ಬೆಣ್ಣೂರಕರ್, ಮಹೇಂದ್ರ ಎನ್.ಪೂಜಾರಿ, ಮಲ್ಲಿಕಾರ್ಜುನ ಜಿನಕೇರಿ, ಧರ್ಮಣ್ಣ ಇಟಗಾ, ಸಂತೋಷ ಹಾದಿಮನಿ, ಗಣೇಶ ವಳಕೇರಿ, ಎಸ್.ಜಿ. ಭಾರತಿ, ಅನೀಲ ಜಾಧವ, ಡಾ. ಅಶೋಕ ಬಬಲಾದ, ಡಾ. ಜೈಕುಮಾರ್ ಸೇರಿ ಅನೇಕರು ಇದ್ದರು.

ತೋರುಗಾಣಿಕೆಯ ಹೇಳಿಕೆಯಿಂದ ನ್ಯಾಯ ಸಿಗಲ್ಲ: ವಿ.ಎಸ್.ಉಗ್ರಪ್ಪ

ಧಾರವಾಡ: ಕೇಂದ್ರ, ರಾಜ್ಯ ಸರ್ಕಾರಗಳು ಎಸ್ಸಿ-ಎಸ್ಟಿ ಹಾಗೂ ಹಿಂದುಳಿದ ವರ್ಗಗಳ ಜನರ ಸಂವಿಧಾನ ಬದ್ಧ ಮೀಸಲಾತಿ ಜಾರಿಗೊಳಿಸದೆ ಮೋಸ ಮಾಡುತ್ತಿವೆ ಎಂದು ಕಾಂಗ್ರೆಸ್ ಪಕ್ಷದ ರಾಜ್ಯ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೇ.56 ಮೀಸಲಾತಿ ಜಾರಿಗೊಳಿಸಲು ರಾಜ್ಯ ಸರ್ಕಾರ ಸರ್ವಪಕ್ಷಗಳ ಸಭೆ ಕರೆಯುವಂತೆ ಒತ್ತಾಯಿಸಿದರು. ಚುನಾವಣೆ ವೇಳೆ ಮೀಸಲಾತಿ ಕೊಡುತ್ತೇವೆಂದು ಹೇಳಿಕೆ ನೀಡಿ, 2022ರಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಮೀಸಲಾತಿ ಹೆಚ್ಚಿಸಿ ಕಾನೂನು ಮಾಡಿದೆ. ಅದರ ಜಾರಿಗೆ ಸರ್ಕಾರಗಳು ಮುತುವರ್ಜಿ ವಹಿಸುತ್ತಿಲ್ಲ, ಹೀಗಾಗಿ ಸಾಮಾಜಿಕ ನ್ಯಾಯಕ್ಕೆ ಗ್ರಹಣ ಹಿಡಿದಿದೆ ಎಂದು ದೂರಿದರು.

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಈ ಇಚ್ಛಾಶಕ್ತಿ ಏಕೆ ತೋರುತ್ತಿಲ್ಲ? ಮೀಸಲಾತಿ ವಿಚಾರವಾಗಿ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಪತ್ರ ಬರೆದರೆ ಸಾಲದು. ಸರ್ವ ಪಕ್ಷಗಳ ಸಭೆ ಕರೆದು ಚರ್ಚಿಸಿ ದೆಹಲಿಗೆ ಹೋಗಿ ಕುಳಿತು ಕಾನೂನನ್ನು ಪರಿಚ್ಛೇದ 9ಕ್ಕೆ ಸೇರ್ಪಡೆ ಮಾಡಬೇಕು. ಕಾಲಹರಣ ಮಾಡಿದರೆ ಎಸ್ಸಿ-ಎಸ್ಟಿ ಹಾಗೂ ಹಿಂದುಳಿದ ಜನಾಂಗ ಕಟ್ಟಿಕೊಂಡು ಬೀದಿಗೆ ಇಳಿದು ಹೋರಾಟ ಅನಿವಾರ್ಯ ಆಗಲಿದೆ ಎಂದು ಎಚ್ಚರಿಸಿದರು.

> **ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ ಸಾಮಾನ್ಯ. ಮುಖ್ಯಮಂತ್ರಿ ಸ್ಥಾನ ಬೇಕು ಎನ್ನುವ ಅಪೇಕ್ಷೆ ತಪ್ಪೇನಿಲ್ಲ, ಬಿಜೆಪಿಯ ಈ ಹಿಂದಿನ ಅವಧಿಯಲ್ಲಿ ಮೂವರು ಮುಖ್ಯಮಂತ್ರಿಗಳಾಗಿದ್ದಾರೆ. ಆದೇನೆ ಇದ್ದರೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಈ ಗೊಂದಲಕ್ಕೆ ತೆರೆ ಎಳೆಯಲಿದೆ.**
>
> ■ ವಿ.ಎಸ್.ಉಗ್ರಪ್ಪ, ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷ

ತೋರುಗಾಣಿಕೆಯ ಹೇಳಿಕೆಯಿಂದ ನ್ಯಾಯ ಸಿಗೋದಿಲ್ಲ. ಕಾನೂನು ಕಾರ್ಯರೂಪ ನೀಡಬೇಕು. ಈ ವಿಚಾರವಾಗಿ ರಾಜ್ಯ ಪ್ರವಾಸ ಮಾಡಿ ಹೋರಾಟ ಮಾಡುತ್ತಿದ್ದೇವೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಬಸವರಾಜ ಬೊಮ್ಮಾಯಿ ಸೇರಿದಂತೆ ಪ್ರಮುಖರ ಗಮನಕ್ಕೆ ತರಲಾಗಿದ್ದು, ಬರುವ ದಿನಗಳಲ್ಲಿ ಅಹೋರಾತ್ರಿ ಹೋರಾಟಕ್ಕೂ ನಾವು ಸಿದ್ಧರಿದ್ದೇವೆ ಎಂದು ಹೇಳಿದರು.

ಸಂಭ್ರಮದ ಜೋಡೆತ್ತಿನ ಮೆರವಣಿಗೆ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಈಶ್ವರ ಮಂದಿರದಲ್ಲಿ (ಶಂಕರಲಿಂಗ ಗುಡಿ) ರೈತಾಪಿ ವರ್ಗದ ಸದಸ್ಯರ ನೇತೃತ್ವದಲ್ಲಿ ವಿಶ್ವಗುರು ಬಸವೇಶ್ವರ ಜಯಂತಿಯನ್ನು ಶ್ರದ್ಧಾ, ಭಕ್ತಿಯಿಂದ ಆಚರಿಸಿದರು. ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಈಶ್ವರಲಿಂಗಕ್ಕೆ ಅಭಿಷೇಕ, ಪೂಜೆ ಸಲ್ಲಿಸಿ ಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅನ್ನಪ್ರಸಾದ ಕೂಡ ನಡೆಯಿತು. ಸಂಜೆ 4 ಗಂಟೆಗೆ ಜೋಡೆತ್ತಿನ ಬಂಡಿಯಲ್ಲಿ ಬಸವೇಶ್ವರ ಭಾವಚಿತ್ರದೊಂದಿಗೆ ಜೋಡೆತ್ತಗಳು ಭವ್ಯ ಮೆರವಣಿಗೆ ನಡೆಯಿತು. ಪಟ್ಟಣದ ವಿವಿಧ ಮಾರ್ಗದಲ್ಲಿ ಸಂಚರಿಸಿ ಮರಳಿ ಈಶ್ವರ ಮಂದಿರಕ್ಕೆ ತಲುಪಿತು. ಅಲಂಕಾರಗೊಂಡ ಜೋಡೆತ್ತುಗಳು ಕರಡಿ, ಮಜಲು ವಾದ್ಯ, ಜಯಘೋಷ ಸಾರ್ವಜನಿಕರ ಗಮನ ಸೆಳೆಯಿತು. ಶ್ರದ್ಧಾ ಭಕ್ತಿಯಿಂದ ಜೋಡೆತ್ತುಗಳ ಮೆರವಣಿಗೆಯೊಂದಿಗೆ ಬಸವ ಜಯಂತಿ ಆಚರಿಸಿದರು. ನೂರಾರು ಜನ ರೈತರು ಪಾಲ್ಗೊಂಡಿದ್ದರು. ರೈತ ಮುಖಂಡರಾದ ಈರಪ್ಪ ತಪಶೆಟ್ಟಿ, ಅಣ್ಣು ಮೋರೆ, ಮಲ್ಲಪ್ಪ ಪರಮರೆಡ್ಡಿ, ರಾಮು ಬನಸೋಡೆ, ರೇವಣಸಿದ್ದಪ್ಪ ತಪಶೆಟ್ಟಿ, ಸಂಗು ಚಿಮ್ಮಲಗಿ ಸೇರಿ ಇತರರು ಇದ್ದರು.



ರಂಗಭೂಮಿಗೆ ಕಲಾವಿದರ ಕೊರತೆ: ಎ.ಎಂ. ಹಾಲಯ್ಯ

ಹೂವಿನ ಹಡಗಲಿ : ಬಹುತೇಕ ಕಲಾವಿದರು ತಮ್ಮ ಕುಟುಂಬ ಜೀವನ ನಿರ್ವಹಣೆಗಾಗಿ ರಂಗಭೂಮಿ ಪ್ರವೇಶ ಮಾಡಿರುತ್ತಾರೆ. ತಮ್ಮ ಕಷ್ಟ ನೋವು ನಲಿವುಗಳನ್ನು ಮರೆತು ಪ್ರೇಕ್ಷಕರನ್ನು ರಂಜಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ರಂಗಭೂಮಿ ಕಲಾವಿದರ ಕೊರತೆ ಉಂಟಾಗಿದೆ ಪೌರಾಣಿಕ ಐತಿಹಾಸಿಕ ಭಕ್ತಿ ಪ್ರಧಾನ ನಾಟಕಗಳಲ್ಲಿ ಅಭಿನಯಿಸುವ ಕಲಾವಿದರು ಇಲ್ಲದಂತಾಗಿದೆ ಈಗಿನ ಯುವಕ ಯುವತಿಯರು ಮುಂದಾಗಬೇಕೆಂದು ರಾಜ್ಯ ಪ್ರಶಸ್ತಿ ಪುರಸ್ಕೃತ ಎ.ಎಂ ಹಾಲಯ್ಯ ಶಾಸ್ತ್ರಿಗಳು ಕರೆ ನೀಡಿದರು.

ತಾಲೂಕಿನ ಸೋಗಿ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು. ಶ್ರೀ ವೀರೇಶ್ವರ ಸಾಂಸ್ಕೃತಿಕ ದೊಡ್ಡಾಟ ಸಂಘ(ರಿ) ಸೋಗಿ, ನೊಂದಾಯಿತ ಸಂಘ ಸಂಸ್ಥೆಗಳ ಧನ ಸಹಾಯ ಯೋಜನೆಯಡಿಯಲ್ಲಿ ಜಾನಪದ ರಂಗ ಸಂಭ್ರಮ 2026 ನೇ ಸಾಲಿನ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಅವರು ಮಾತನಾಡಿದರು.



ಮುಖ್ಯ ಅತಿಥಿ ಎಂಬಿ ಬಸವರಾಜ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಹವ್ಯಾಸಿ ಕಲಾವಿದರು ಜಾತ್ರೆಗಳಲ್ಲಿ ನಾಟಕಗಳ ಮೂಲಕ ಜನರಿಗೆ ಮನರಂಜನೆ ನೀಡುತ್ತಿದ್ದರು. ಜೊತೆಗೆ ಸಮಾಜಮುಖಿ ಸಂದೇಶಗಳನ್ನು ಸಾರುತ್ತಿದ್ದರು. ಹೀಗಾಗಿ ರಂಗಭೂಮಿ ತಲೆಯು ತಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೈ. ಮಲ್ಲಪ್ಪ ಗವಾಯಿ ಪ್ರಾಸ್ತವಿಕವಾಗಿ ಮಾತನಾಡಿ, ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯವೈಖರಿಗಳ ಬಗ್ಗೆ ಕಲಾವಿದರಿಗೆ ಮಾಹಿತಿ ತಿಳಿಸಿ ಇಲಾಖೆಯಿಂದ ದೊರೆಯುವ ಸವಲತ್ತುಗಳ ಬಗ್ಗೆ ಕಲಾವಿದರಿಗೆ/ ಜನರಿಗೆ ತಿಳಿಸಿಕೊಟ್ಟರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸಿದ್ದಲಿಂಗೇಶ್ ಕೆ. ರಂಗಣ್ಣನವರನ್ನು ಸ್ಮರಿಸಿದರು.

ಅತಿಥಿಗಳಾಗಿ ದೂಪದ ಕೊಟ್ರಪ್ಪ, ಎಸ್ ಡಿ ಎಂ ಸಿ ಅಧ್ಯಕ್ಷ ಹಗರನೂರು ಸಿದ್ದಪ್ಪ, ಡಾ. ಎಸ್. ಕರಿಬಸಪ್ಪ ಕಲಾವಿದರಾದ ಬೆಲ್ಲದ ಕೊಟ್ರಪ್ಪ, ಸಂಗ್ಯಾ ಬಾಳ್ಯಾ ಬಯಲಾಟ ಭಾಗವತರಾದ ಗಚ್ಚಿನಮನಿ ಕೊಟ್ರಪ್ಪ, ಕೋಗಳಿ ಕುಬೇರಪ್ಪ, ಡಿ. ಹೊನ್ನೇಶ್ ಕವಿಗಳು, ಹೆಚ್. ಕಲ್ಲೇಶ್, ಸಿ. ನಾಗಭೂಷಣ, ಹಾರ್ಮೋನಿಯಂ ಬಿ. ಕಸ್ತೂರಪ್ಪ, ಮದ್ದಳೆ ವಾದಕರಾದ ಕರಿಬಸಪ್ಪ ವೈ. ಕಾಂತೇಶ್. ಬಿ ಇತರರಿದ್ದರು.

ಪ್ರಸ್ತುತ ಕಾರ್ಯಕ್ರಮಗಳಾದ ಬಯಲಾಟ ಹಾಡುಗಳು, ಜನಪದ ಗೀತೆ ಗಾಯನ, ತತ್ವಪದ ಗಾಯನ, ನಂತರ ಸಂಗ್ಯಾ ಬಾಳ್ಯಾ ಬಯಲಾಟವನ್ನು ಕೋಗಳಿಯ ಕಲಾವಿದರು ಪ್ರಸ್ತುತಪಡಿಸಿ ಜನ ಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾದರು.

ಖರ್ಗೆ ಹೇಳಿಕೆಗೆ ಆಲದಕಟ್ಟಿ ಅಸಮಾಧಾನ

ಹಾವೇರಿ: ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಹಾಗೂ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಕುರಿತು ಟೆರರಿಸ್ಟ್ ಎಂದು ಕರೆದಿರುವುದು ಭಾರತದ ಸಂವಿಧಾನಕ್ಕೆ ಮಾಡಿದ ಅವಮಾನ.

ಸಂವಿಧಾನಬದ್ಧವಾಗಿ ಚುನಾವಣೆಗಳನ್ನು ಎದುರಿಸಿ ಬಹುಮತವನ್ನು ಪಡೆದು ಪ್ರಧಾನಮಂತ್ರಿ ಹುದ್ದೆಯನ್ನು ಅಲಂಕರಿಸಿದ ಮೋದಿ ಕುರಿತ ಹೇಳಿಕೆಗೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ.ಸಂತೋಷ ಆಲದಕಟ್ಟಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ತಮಿಳುನಾಡಿನ ಚುನಾವಣೆ ವೇಳೆ ಪತ್ರಿಕಾಗೋಷ್ಠಿಯಲ್ಲಿ ಮೋದಿಯವರು ಟೆರರಿಸ್ಟ್ ಎಂದು ಸಂಬೋಧಿಸಿರುವುದು ಖರ್ಗೆಯವರಿಗೆ ಶೋಭೆ ತರುವಂತದ್ದಲ್ಲ. ಖರ್ಗೆಯವರು ಕೇವಲ ಮೋದಿಯವರಿಗೆ ಅವಮಾನಿಸಿದ್ದಲ್ಲ, ಇದು ದೇಶದ ಜನರಿಗೆ ಮಾಡಿದ ಅಪಮಾನ. ಕಾಂಗ್ರೆಸ್‌ನ ನಾಯಕರು ಇತ್ತಿಚೆಗೆ ಮಾನಸಿಕ ಸಮತೋಲನ ಕಳೆದುಕೊಂಡು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವಮಾನಿಸುತ್ತಿದ್ದಾರೆ. ಅಲ್ಲದೇ ಸಂವಿಧಾನಬದ್ಧ ಆಯ್ಕೆಯಾದ ವ್ಯಕ್ತಿಗಳನ್ನು ಅಸಂವಿಧಾನಿಕವಾಗಿ ಟೀಕಿಸುತ್ತಿದ್ದಾರೆ. ರಾಜಕೀಯ ಆರೋಪ ಪ್ರತ್ಯಾರೋಪಗಳು ಅಭಿವೃದ್ಧಿ ಕಾರ್ಯಗಳ ಬಗ್ಗೆ ನಡೆಯಬೇಕೆ ಹೊರತು ಯಾವುದೇ ವ್ಯಕ್ತಿಯನ್ನು ವೈಯಕ್ತಿಕವಾಗಿ ಟೀಕಿಸುವ ಮಟ್ಟಕ್ಕೆ ಹೋಗಬಾರದು. ಖರ್ಗೆ ತಮ್ಮ ಹೇಳಿಕೆಯನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಸಂತೋಷ ಆಲದಕಟ್ಟಿ ಆಗ್ರಹಿಸಿದ್ದಾರೆ.

ಉಪರಾಷ್ಟ್ರಪತಿಗಳಿಗೆ ಬೀಳ್ಕೊಡುಗೆ


ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಉಪರಾಷ್ಟ್ರಪತಿ ಸಿ.ಪಿ.ರಾಧಕೃಷ್ಣನ್ ಅವರನ್ನು ಗುರುವಾರ ಕಲಬುರಗಿ ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹೆಲೋತ್,ಸಚಿವ ಶರಣಬಸಪ್ಪ ದರ್ಶನಪುರ ಬೀಳ್ಕೊಡುಗೆ ನೀಡಿದರು.



ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಶರಣಪ್ಪ ಎಸ್.ಡಿ., ಪಾಲಿಕೆ ಆಯುಕ್ತ ಅವಿನಾಶ್ ಶಿಂದೆ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ವ್ಯಕ್ತಿ ನೇಣಿಗೆ ಶರಣು

ಸಿದ್ದಾಪುರ: ಪಟ್ಟಣದ ಪ್ರತಿಷ್ಠಿತ ಕುಟುಂಬದ ಯುವಕನೋರ್ವ ಸ್ಟಾಕ್ ಎಕ್ಸಚೇಂಜ್ ಟ್ರೇಡಿಂಗ್‌ನಲ್ಲಿ ಹಣವನ್ನು ಕಳೆದುಕೊಂಡು ನೇಣಿಗೆ ಕತ್ತನ್ನು ಒಡ್ಡಿದ ಹೃದಯ ವಿದ್ರಾವಕ ಘಟನೆ ಬುಧವಾರ ಸಂಭವಿಸಿದೆ. ಡಾ.ಚಂದ್ರಶೇಖರ ಚಂದ್ರಬಾಬು ಪಂಡಿತ ಅವರ ಮಗನಾದ ಹರ್ಷವರ್ಧನ (22) ಪಂಡಿತ ಎಂಬ ಈ ಯುವಕನು ಮೊಬೈಲ್ ಮೂಲಕ ಸ್ಟಾಕ್ ಎಕ್ಸಚೇಂಜ್ ಟ್ರೇಡಿಂಗ್‌ನಲ್ಲಿ ಹಣ ಹಾಕುತ್ತಿದ್ದು ಹಣದ ಹೂಡಿಕೆಯಲ್ಲಿ ನಷ್ಟವಾಗಿ ಅದನ್ನೇ ಮನಸ್ಸಿಗೆ ಹಚ್ಚಿಕೊಂಡಿದ್ದನು. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಸರಾಯಿ ಕುಡಿಯುವ ಚಟವನ್ನೂ ಅಂಟಿಸಿಕೊಂಡಿದ್ದನು. ಬುಧವಾರ ಬೆಳಗಿನ ಜಾವದಿಂದ 11.30ರ ಒಳಗೆ ತಾನು ವಾಸಿಸುವ ಮನೆಯ ಕೋಣೆಯ ಒಳಗೆ ಫ್ಯಾನಿಗೆ ನೇಣು ಹಾಕಿಕೊಂಡು ತಮ್ಮ ಮಗ ಮೃತಪಟ್ಟಿದ್ದಾನೆ. ಈ ಸಾವಿನಲ್ಲಿ ಬೇರೇನೂ ಸಂಶಯವಿಲ್ಲ ಎಂದು ಮೃತನ ತಂದೆ ಚಂದ್ರಶೇಖರ ಪಂಡಿತ ಸ್ಥಳೀಯ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ಆರ್‌ಸಿಬಿ	6	4	2	0	8	+1.171
ಹೈದರಾಬಾದ್	7	4	3	0	8	+0.820
ರಾಜಸ್ಥಾನ	6	4	2	0	8	+0.599
ದಿಲ್ಲಿ	6	3	3	0	6	-0.130
ಗುಜರಾತ್	6	3	3	0	6	-0.821
ಮುಂಬೈ	6	2	4	0	4	+0.067
ಚೆನ್ನೈ	6	2	4	0	4	-0.780
ಲಖನೌ	6	2	4	0	4	-1.173
ಕೆಕೆಆರ್	7	1	5	1	3	-0.879

ಕಿರುಸುದ್ದಿ

ಭಾರತಕ್ಕೆ ಬಾಂಗ್ಲಾದೇಶ ಎದುರು

ಸಾಫ್ ಮಹಿಳಾ ಫುಟ್ಬಾಲ್ ಚಾಂಪಿಯನ್‌ಶಿಪ್

ಹೊಸದಿಲ್ಲಿ: ಗೋವಾದ ಮಾರ್ಗಾವ್‌ನಲ್ಲಿ ಮೇ 25ರಿಂದ ಜೂನ್ 6ರವರೆಗೆ ನಡೆಯಲಿರುವ ಸಾಫ್ ಮಹಿಳಾ ಫುಟ್ಬಾಲ್ ಚಾಂಪಿಯನ್ ಶಿಪ್‌ನಲ್ಲಿ ಭಾರತ ತಂಡ ಬಿ ಗುಂಪಿನಲ್ಲಿ ಸ್ಥಾನ ಪಡೆದಿದೆ. ಭಾರತದ ಜೊತೆ ಬಿ ಗುಂಪಿನಲ್ಲಿ ಬಾಂಗ್ಲಾದೇಶ ಮತ್ತು ಮಾಲ್ಡೀವ್ಸ್ ತಂಡಗಳಿವೆ. ಎ ಗುಂಪಿನಲ್ಲಿ ನೇಪಾಳ, ಶ್ರೀಲಂಕಾ ಮತ್ತು ಭೂತಾನ್ ತಂಡಗಳು ಸ್ಥಾನ ಪಡೆದಿವೆ. ಪ್ರತಿ ಗುಂಪಿನ ಮೊದಲ ಎರಡು ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ಡ್ರಾ ಪ್ರಕ್ರಿಯೆ ಢಾಕಾದಲ್ಲಿರುವ ಸಾಫ್ ಕಾರ್ಯಾಲಯದಲ್ಲಿ ಬುಧವಾರ ನಡೆಯಿತು. ಪಾಕಿಸ್ತಾನ ಈ ಬಾರಿ ತನ್ನ ತಂಡವನ್ನು ಕಳುಹಿಸದಿರಲು ನಿರ್ಧರಿಸಿದೆ. ಇದು ಭಾರತ ಆತಿಥ್ಯ ವಹಿಸುವ ಎರಡನೇ ಸಾಫ್ ಮಹಿಳಾ ಚಾಂಪಿಯನ್‌ಶಿಪ್ ಆಗಿದ್ದು, ಮೊದಲು 2016ರಲ್ಲಿ ಪಶ್ಚಿಮ ಬಂಗಾಳದ ಸಿಲಿಗುರಿಯಲ್ಲಿ ನಡೆದಿತ್ತು. ಆ ವೇಳೆ ಭಾರತ ನಾಲ್ಕನೇ ಬಾರಿಗೆ ಪ್ರಶಸ್ತಿ ಗೆದ್ದಿತ್ತು. ಗೋವಾಕ್ಕೆ ಇದು ಎರಡನೇ ಸಾಫ್ ಟೂರ್ನಿಯ ಆತಿಥ್ಯ. 1999ರ ಪುರುಷರ ಚಾಂಪಿಯನ್‌ಶಿಪ್ ಕೂಡ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದಿತ್ತು.

ಫಿಫಾ ಆಧಾರದ ಮೇಲೆ ಪೋಲ್: ಭಾರತ ಮಹಿಳಾ ಸಾಫ್ ಚಾಂಪಿಯನ್‌ಶಿಪ್‌ನಲ್ಲಿ 5 ಬಾರಿ (2010, 2012, 2014, 2016, 2019) ಚಾಂಪಿಯನ್ ಆಗಿರುವ ದಾಖಲೆ ಹೊಂದಿದೆ. ಆದರೆ ಇತ್ತೀಚಿನ ಎರಡು ಆವೃತ್ತಿಗಳಲ್ಲಿ ಬಾಂಗ್ಲಾದೇಶ (2022, 2024) ಜಯ ಸಾಧಿಸಿದೆ. ಫಿಫಾ ಮಹಿಳಾ ರ‍್ಯಾಂಕಿಂಗ್ ಆಧಾರದಲ್ಲಿ ಸೀಡಿಂಗ್ ಮಾಡಲಾಗಿದ್ದು, ಭಾರತ (69ನೇ ಸ್ಥಾನ) ಮತ್ತು ನೇಪಾಳ (87) ಮೊದಲ ಪೊಟ್‌ನಲ್ಲಿ, ಬಾಂಗ್ಲಾದೇಶ (112) ಮತ್ತು ಶ್ರೀಲಂಕಾ (162) ಎರಡನೇ ಪೊಟ್‌ನಲ್ಲಿ, ಭೂತಾನ್ (164) ಮತ್ತು ಮಾಲ್ಡೀವ್ಸ್ (167) ಮೂರನೇ ಪೊಟ್‌ನಲ್ಲಿ ಇದ್ದವು.

ಫಿಫಾ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾರತ



ಹೊಸದಿಲ್ಲಿ: ಜಾಗತಿಕ ಫುಟ್ಬಾಲ್ ಆಡಳಿತ ಸಂಸ್ಥೆಯಾದ ಫಿಫಾ ಆಯ್ಕೆ ಮಾಡಿದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮ (ವಾಣಿಜ್ಯ ತಂತ್ರಯೋಜನೆ 2026)ದಲ್ಲಿ ಭಾರತ ಸ್ಥಾನ ಪಡೆದಿದೆ. ಈ ಯೋಜನೆಗೆ ಜರ್ಮನಿ, ನೆದರ್ಲೆಂಡ್ಸ್, ಸ್ವೀಡನ್, ಸ್ಕಾಟ್ಲೆಂಡ್, ಕೆನಡಾ, ಮೆಕ್ಸಿಕೊ, ಫಿನ್‌ಲ್ಯಾಂಡ್, ಘಾನಾ, ಜೋರ್ಡನ್, ಲಿಥುವೇನಿಯಾ ಹಾಗೂ ಪರಾಗ್ವೆ ದೇಶಗಳು ಆಯ್ಕೆಯಾಗಿವೆ. ಭಾರತವನ್ನು ಈ ಕಾರ್ಯಕ್ರಮಕ್ಕೆ ಸೇರಿಸಿಕೊಳ್ಳುವುದನ್ನು ಅಖಿಲ ಭಾರತೀಯ ಫುಟ್ಬಾಲ್ ಸಂಸ್ಥೆ ಸಲ್ಲಿಸಿದ ಅರ್ಜಿ ಹಾಗೂ ಅದರ ನಂತರ ನೀಡಿದ ವಿವರವಾದ ಪ್ರಸ್ತುತಿಯ ಆಧಾರದ ಮೇಲೆ ದೃಢಪಡಿಸಲಾಗಿದೆ. ಈ ತರಬೇತಿ ಕಾರ್ಯಕ್ರಮವು 2026ರ ಮೇದಿಂದ ಅಕ್ಟೋಬರ್‌ವರೆಗೆ ಅಂತರ್ಜಾಲದ ಮೂಲಕ ನಡೆಯಲಿದೆ. ದೇಶದ ಮಹಿಳಾ ಫುಟ್‌ಬಾಲ್ ಕ್ಷೇತ್ರದ ವಿವಿಧ ಭಾಗಿಗಳ ಅಗತ್ಯಗಳಿಗೆ ಅನುಗುಣವಾಗಿ ಈ ಕೋರ್ಸ್ ರೂಪಿಸಲಾಗುತ್ತದೆ.

ಭಾರತೀಯ ಫುಟ್‌ಬಾಲ್ ಮಹಾಸಂಘಕ್ಕೆ ಈಗ ವಾಣಿಜ್ಯ ಸಹಭಾಗಿಯ ಬೆಂಬಲ ದೊರೆತಿದ್ದು, ಈ ಕಾರ್ಯಕ್ರಮವು ಕ್ಲಬ್‌ಗಳಿಗೆ ದೀರ್ಘಕಾಲಿಕ ಮಾದರಿಗಳನ್ನು ನಿರ್ಮಿಸಲು ಅಗತ್ಯವಾದ ಜ್ಞಾನ ಮತ್ತು ಸಾಧನಗಳನ್ನು ಒದಗಿಸಲಿದೆ. ಜೊತೆಗೆ, ಏಷ್ಯಾ ಖಂಡದ ಫುಟ್ಬಾಲ್ ಆಡಳಿತ ಸಂಸ್ಥೆಯಾದ ಏಷ್ಯನ್ ಫುಟ್ಬಾಲ್ ಸಂಸ್ಥೆ ಪರಿಚಯಿಸಲು ಉದ್ದೇಶಿಸಿರುವ ಮಹಿಳಾ ಕ್ಲಬ್ ಮಾನ್ಯತಾ ವ್ಯವಸ್ಥೆಗೆ ಸಿದ್ಧರಾಗಲು ಸಹಾಯ ಮಾಡಲಿದೆ.

ವೇಗಿಗಳ ದಾಳಿಗೆ ಕುಸಿದ ಆರ್‌ಆರ್ | ಜಡೇಜಾ ಆಸರೆ

ಲಖನೌಗೆ ಸ್ಪರ್ಧಾತ್ಮಕ ಗುರಿ



ಲಖನೌ: ಲಖನೌ ವೇಗಿಗಳ ಬಿಗಿ ದಾಳಿಯ ನಡುವೆ ತಾಳ್ಮೆ ಪ್ರದರ್ಶಿಸಿ ಆಸರೆಯಾದ ರವೀಂದ್ರ ಜಡೇಜಾ ರಾಜಸ್ಥಾನ ರಾಯಲ್ಸ್ ತಂಡವನ್ನು ಉತ್ತಮ ಸ್ಕೋರ್‌ನತ್ತ ಸಾಗಿಸಿದರು.

ದಿಢೀರ್ ಕುಸಿತ ಕಂಡಿರುವ ರಾಯಲ್ಸ್, ಸೂಪರ್ ಜೇಂಟ್ಸ್ ವಿರುದ್ಧದ ಪಂದ್ಯದಲ್ಲಿ 159 ರನ್‌ಗಳಿಸಿ ಸವಾಲೊಡ್ಡಿದೆ. ವೈಭವ್ ಸೂರ್ಯವಂಶಿ, ಜೈಸ್ವಾಲ್ ಉತ್ತಮ ಆರಂಭ ಕೊಟ್ಟರೂ, ಮುಂದೆ ಕುಸಿತ ಕಂಡ ರಿಯಾನ್ ಪಡೆ ತತ್ತರಿಸಿತು. ಶಮಿ(30/2), ಮೋಹ್ಸಿನ್(17/2) ಹಾಗೂ ಪ್ರಿನ್ಸ್(29/2) ದಾಳಿಗೆ ದಿಗ್ವೇಶ್ ಸಾಥ್ ಸಿಕ್ಕ ನಂತರ ಲಖನೌ ಮಿಂಚಿತು. ಆದಾಗ್ಯೂ ಇದೇ ಪಂದ್ಯದ ಮೂಲಕ ಮೈದಾನಕ್ಕೆ ಮರಳಿದ ಮಯಾಂಕ್ ಯಾದವ್ 4 ಓವರ್‌ಗಳಲ್ಲಿ 56 ರನ್ ನೀಡಿ ದುಬಾರಿಯಾದರು.

ಜಡೇಜಾ ಆಸರೆ: ಜೈಸ್ವಾಲ್(22) ಆರಂಭಿಕ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮೂರನೇ ಓವರ್‌ನಲ್ಲಿ ಶಮಿ, ಜೈಸ್ವಾಲ್ ಹಾಗೂ ಜುರೇಲ್(0) ವಿಕೆಟ್ ಪಡೆದರು. ಮುಂದಿನ ಓವರ್‌ನಲ್ಲಿ ವೈಭವ್ ಕೂಡ (8) ವಿಕೆಟ್ ಒಪ್ಪಿಸಿದರು. ರಿಯಾನ್ ಪರಾಗ್ ಮತ್ತು ಹೆಟ್ಮೇರ್ ಕೊಂಚ ಹೊತ್ತು ನಿಂತರು. ಪವರ್‌ಪ್ಲೇ ಅಂತ್ಯಕ್ಕೆ ತಂಡ 44 ರನ್‌ಗಳಿಸಿತ್ತು. ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಹೆಟ್ಮೇರ್ (22) ಮೊಹ್ಸಿನ್‌ಗೆ ಕ್ಯಾಚಿತ್ತರು. ಜಡೇಜಾ(43★) ಮತ್ತು ಫೆರಾರಿಯಾ(20) ಉತ್ತಮ ಬ್ಯಾಟಿಂಗ್ ಮಾಡಿ ಆಸರೆಯಾದರು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. ರಾಜಸ್ಥಾನ ಅಲ್ಲಿ 66 ರನ್ ಗಳಿಸಿತು. ಕೊನೆಯ ಓವರ್‌ನಲ್ಲಿ ಮಿಂಚಿನಾಟ. ಫೆರಾರಿಯಾ ವಿಕೆಟ್ ಒಪ್ಪಿಸಿದ ನಂತರ ಶುಭಂ ದುಬೆ ಇಂಪ್ಯಾಕ್ಟ್ ಆಟಗಾರನಾಗಿ ಬ್ಯಾಟಿಂಗ್‌ಗಿಳಿದರು. ಅಂತಿಮ ಎರಡು ಓವರ್‌ಗಳಲ್ಲಿ ಇಬ್ಬರೂ ಅಬ್ಬರಿಸಿದರು. ಡೆತ್ ಓವರ್‌ನಲ್ಲಿ ಆರ್‌ಆರ್ 49 ರನ್‌ಗಳಿತು.

500 ರನ್- ವೈಭವ್ ಇತಿಹಾಸ

ತಮ್ಮ ಬ್ಯಾಟಿಂಗ್‌ನೊಂದಿಗೆ ವಿಶ್ವ ಕ್ರಿಕೆಟ್‌ನಲ್ಲಿ ದಾಖಲೆಗಳ ಮೇಲೆ ದಾಖಲೆಗಳನ್ನು ಮಾಡುತ್ತಿರುವ 15 ವರ್ಷದ ವೈಭವ್ ಸೂರ್ಯವಂಶಿ ಮತ್ತೊಂದು ಮೈಲುಗಲ್ಲು ದಾಟಿದರು. ಪ್ರತಿ ಪಂದ್ಯಕ್ಕೂ ಹೊಸದೊಂದು ದಾಖಲೆಗಳನ್ನು ಮಾಡುವ ಅವರು, ಇದೀಗ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಮಹತ್ವದ ದಾಖಲೆಗಳನ್ನು ಮಾಡಿದ್ದಾರೆ. ವೃತ್ತಿಜೀವನದಲ್ಲಿ ತಮ್ಮ ಎರಡನೇ ಆವೃತ್ತಿಯಾಡುತ್ತಿರುವ ಅವರು, 500 ರನ್ ದಾಟಿದರು. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಅನ್‌ಕ್ಯಾಪ್ಡ್ ಆಟಗಾರರು ಮಾಡದ ಕೆಲವು ರೋಮಾಂಚನಕಾರಿ ದಾಖಲೆಗಳನ್ನೂ ಅವರು ಮಾಡಿದ್ದಾರೆ.

ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ

14 ಮಾತ್ರ ಪಂದ್ಯಗಳನ್ನಾಡಿರುವ ವೈಭವ್ ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ 500 ರನ್ ಮಾಡಿರುವ ದಾಖಲೆ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದ್ದಾರೆ. ಮೊದಲ ಸ್ಥಾನದಲ್ಲಿ ಶೌನ್ ಮಾರ್ಷ್(11 ಇನ್ನಿಂಗ್ಸ್) ಇದ್ದು ಎರಡನೇ ಸ್ಥಾನದಲ್ಲಿ ಮ್ಯಾಥೀವ್ ಹೈಡನ್(13 ಇನ್ನಿಂಗ್ಸ್) ಇದ್ದಾರೆ.

ಕಡಿಮೆ ಬಾಲ್‌ನಲ್ಲಿ ದಾಖಲೆ

ಐಪಿಎಲ್‌ನಲ್ಲಿ ಈವರೆಗೂ 227 ಬಾಲ್‌ಗಳನ್ನು ಮಾತ್ರ ಆಡಿರುವ ವೈಭವ್ ಸೂರ್ಯವಂಶಿ ಅತಿ ವೇಗವಾಗಿ 500 ರನ್ ಬಾರಿಸಿದ ಆಟಗಾರ ಎಂಬ ದಾಖಲೆ ಮಾಡಿದರು. ಇದಕ್ಕೂ ಮೊದಲು ಗ್ಲೇನ್ ಮ್ಯಾಕ್ಸ್‌ವೇಲ್ 260 ಬಾಲ್‌ಗಳಲ್ಲಿ 500 ಬಾರಿಸಿ ಹೊಂದಿದ್ದರು.

ಅತಿ ಕಡಿಮೆ ಬಾಲ್‌ಗಳಲ್ಲಿ 500 ರನ್ ಬಾರಿಸಿದ ಪ್ಲೇಯರ್ಸ್(ಐಪಿಎಲ್‌ನಲ್ಲಿ)

ಆಟಗಾರ	ಬಾಲ್
ವೈಭವ್	227
ಮ್ಯಾಕ್ಸ್‌ವೇಲ್	260
ಪ್ರಿಯಾಂಶ್	278
ಸೆಹವಾಗ್	280
ನಮನ್	283

ಅತಿ ಕಿರಿಯ: ಐಪಿಎಲ್‌ನಲ್ಲಿ 500 ರನ್ ಬಾರಿಸಿದ ಅತಿ ಕಿರಿಯ ಆಟಗಾರ ಎಂಬ ದಾಖಲೆಯನ್ನೂ ವೈಭವ್ ಸೂರ್ಯವಂಶಿ ಮಾಡಿದ್ದಾರೆ. 15 ವರ್ಷದ ವೈಭವ್ ಪೃಥ್ವಿ ಶಾ ದಾಖಲೆ ಮುರಿದಿದ್ದಾರೆ.

ಅತಿ ಕಡಿಮೆ ವಯಸ್ಸಿನಲ್ಲಿ 500 ರನ್

ಆಟಗಾರ	ವಯಸ್ಸು
ವೈಭವ್	15 ವರ್ಷ, 26 ದಿನ
ಪೃಥ್ವಿ ಶಾ	19 ವರ್ಷ, 164 ದಿನ
ಸಂಜು ಸ್ಯಾಮ್ಸನ್	19 ವರ್ಷ, 195 ದಿನ
ಪಂತ್	19 ವರ್ಷ, 220 ದಿನ
ಕಿಶನ್	19 ವರ್ಷ, 295 ದಿನ

ಇಂದು ಎಲ್‌ಕ್ಲಾಸಿಕೊ ಪಂದ್ಯ | ಧೋನಿ ಕಣಕ್ಕೆ?

ಮುಂಬೈ-ಚೆನ್ನೈ ಫೈಟ್

ಪಿಚ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ರನ್ ಹೊಳೆ ಹರಿಯುವ ಸಾಧ್ಯತೆ ಇದೆ. ಹೆಚ್ಚಿನ ಬೌನ್ಸ್ ಇರಲಿದೆ. ಮಳೆ ಸಾಧ್ಯತೆ ಕಮ್ಮಿ. ಸ್ಪಿನ್ನರ್‌ಗಳಿಗೆ ಸ್ವಲ್ಪ ಆಸರೆಯಾಗುತ್ತದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಇರಲಿದೆ. ಟಾಸ್ ಗೆದ್ದವರು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದೇ ಜಾಸ್ತಿ.



ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಗುರುವಾರದ ಎಲ್‌ಕ್ಲಾಸಿಕೊ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಸದ್ಯ ಅಂಕಪಟ್ಟಿಯಲ್ಲಿ ಕೆಳಗಿರುವ ಎರಡೂ ತಂಡಗಳು ಗೆಲುವಿನ ಹಳಿಗೆ ಮರಳಲು ಪ್ರಯತ್ನಿಸಲಿವೆ. ಹಿಂದಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಹೈದರಾಬಾದ್ ವಿರುದ್ಧ ಸೋಲನುಭವಿಸಿದರೆ, ಇತ್ತ ಮುಂಬೈ ಇಂಡಿಯನ್ಸ್ ಭರ್ಜರಿ ಪ್ರದರ್ಶನ ನೀಡಿದ್ದು, ಗುಜರಾತ್ ವಿರುದ್ಧ ಗೆಲುವು ಸಾಧಿಸಿದೆ.

ಎರಡೂ ತಂಡಗಳು ಚೇಬಿನಲ್ಲಿ ಸಮಾನ ಅಂಕಗಳನ್ನು ಹೊಂದಿವೆ. ಮೊದಲನೇ ಪಂದ್ಯದಲ್ಲಿ ಗೆದ್ದಿದ್ದ ಮುಂಬೈ ಸತತ ಮೂರು ಸೋಲುಗಳನ್ನು ಎದುರಿಸಿತ್ತು. ಇತ್ತ ಚೆನ್ನೈ ಮೂರು ಸೋಲಿನ ನಂತರ ಸತತ ಎರಡು ಗೆಲುವು ಸಾಧಿಸಿತ್ತು. ಆದರೆ ಕಳೆದ ಪಂದ್ಯದಲ್ಲಿ ಮತ್ತೊಮ್ಮೆ ಸೋಲನುಭವಿಸಿತು. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಎಲ್‌ಕ್ಲಾಸಿಕೊ ಪಂದ್ಯ ನಡೆಯಲಿದೆ.

ಚೆನ್ನೈ ತಂಡಕ್ಕೆ ವಿಶ್ವಾಸ: ಸಂಜು ಸ್ಯಾಮ್ಸನ್ ಲಯಕ್ಕೆ ಮರಳಿದರೂ ಕಳೆದ ಪಂದ್ಯದಲ್ಲಿ ಮತ್ತೊಮ್ಮೆ ನಿರಾಸೆ ಮೂಡಿಸಿದ್ದಾರೆ. 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ಆಯುಷ್ ಮಾತ್ರೆ ಗಾಯದಿಂದ ಹೊರನಡೆದಿರುವುದು ತಂಡಕ್ಕಾದ ದೊಡ್ಡ ಆಘಾತ. ಮಧ್ಯಮ ಕ್ರಮಾಂಕದಲ್ಲಿ ಸರ್ಫರಾಜ್ ಖಾನ್, ಡೇವಾಲ್ಡ್ ಬ್ರೇವಿಸ್ ಸಿಕ್ಕಾಗಲೆಲ್ಲಾ ಅಬ್ಬರದ ಬ್ಯಾಟಿಂಗ್ ಮಾಡಿದ್ದಾರೆ. ಫಿನಿಶಿಂಗ್‌ನಲ್ಲಿ ದುಬೆ ಸಿದ್ಧರಾಗಿದ್ದಾರೆ. ಇತ್ತ ಬೌಲಿಂಗ್‌ನಲ್ಲಿ ಓವರ್‌ಟನ್ ಲಯದಲ್ಲಿದ್ದಾರೆ. ಕಳೆದೆರಡು ಪಂದ್ಯಗಳಲ್ಲಿ ಪರಿಣಾಮಕಾರಿ ಬೌಲಿಂಗ್ ಮಾಡಿದ್ದಾರೆ. ಇನ್ನು ತಂಡಕ್ಕೆ ಸ್ಪೆನ್ಸರ್ ಜಾನ್ಸನ್ ಕೂಡ ಬಂದಿದ್ದು, ವೇಗದಲ್ಲಿ ಬಲ ತಂದಿದೆ. ಸ್ಪಿನ್ ವಿಭಾಗದಲ್ಲಿ ನೂರ್ ಅಹ್ಮದ್ ಮಿಂಚಿರುವುದು ವಿಶ್ವಾಸ ಹಿಗ್ಗಿಸಿದೆ. ಮುಖ್ಯವಾಗಿ ಅಭ್ಯಾಸದ ವೇಳೆ ಧೋನಿ ಕೀಪಿಂಗ್ ಮಾಡಿದ್ದು, ತಂಡದಲ್ಲಿ ಮತ್ತು ಅಭಿಮಾನಿಗಳಲ್ಲಿ ಮಂದಹಾಸ ಮೂಡಿಸಿದೆ.


ಮುಂಬೈಗೆ ಗೆಲುವಿನ ತವಕ: ಮುಂಬೈ ಇಂಡಿಯನ್ಸ್ ತನ್ನ ಆರಂಭಿಕ ಪಂದ್ಯದಲ್ಲಿ ಗೆಲುವು ಸಾಧಿಸಿತ್ತು. ಬಳಿಕ ನಡೆದ ಎಲ್ಲಾ ಪಂದ್ಯಗಳಲ್ಲಿ ಸೋತರೂ ಕಳೆದ ಪಂದ್ಯದಲ್ಲಿ ತಿಲಕ್ ವರ್ಮಾ ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಪಂದ್ಯಾವಳಿಯಲ್ಲಿ ಮರಳಿದೆ. ತಿಲಕ್ ವರ್ಮಾ ಶತಕ ಮುಂಬೈ ತಂಡದಲ್ಲಿ ಎಲ್ಲಿಲ್ಲದ ಉತ್ಸಾಹ ಹುಟ್ಟುಹಾಕಿದೆ. ಬೂಮ್ರಾ ವಿಕೆಟ್ ಪಡೆದಿದ್ದಾರೆ. ಅಶ್ವಿನಿ ಕುಮಾರ್ ಕಳೆದ ಪಂದ್ಯದಲ್ಲಿ ಪ್ರಮುಖ 4ವಿಕೆಟ್ ಕಿತ್ತರು. ರಯಾನ್ ರಿಕೆಲ್ಟನ್ ಲಯದ ಹುಡುಕಾಟದಲ್ಲಿದ್ದಾರೆ. ಸೂರ್ಯ ಕೂಡ ಲಯದಲ್ಲಿಲ್ಲ. ಡಿಕಾಕ್ ಆಡಿದ ಮೊದಲ ಪಂದ್ಯದಲ್ಲೇ ಶತಕ ಬಾರಿಸಿ ಮಿಂಚಿದ್ದಾರೆ.

ಪಂದ್ಯದ ವಿವರ

ಯಾವಾಗ: ಗುರುವಾರ, ಎಲ್ಲಿ: ಮುಂಬೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಮಾಣಿಕ್ ಶಾ ಪರೇಡ್ ಮೈದಾನದಿಂದ ಓಟ

10-ಕೆ ಬೆಂಗಳೂರಿನಲ್ಲಿ 36 ಸಾವಿರಕ್ಕೂ ಹೆಚ್ಚು ಅಥ್ಲೀಟ್ಸ್



- ಎಲೈಟ್ ಓಟಗಾರರು: 98
- ಓಪನ್ 10ಕೆ: 22,189
- ಹಿರಿಯ ನಾಗರಿಕರ ಓಟ: 1,559
- ದಿವ್ಯಾಂಗರ ವಿಭಾಗ: 804
- ಮಜ್ಜಾ ರನ್: 12,171

ಬೆಂಗಳೂರು: ಭಾನುವಾರನಡೆಯಲಿರುವ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 18ನೇ ಆವೃತ್ತಿಗೆ ಭಾರೀ ಸಿದ್ಧತೆಗಳು ನಡೆದಿವೆ. ಏಪ್ರಿಲ್ 26ರಂದು ನಡೆಯುವ ಈ ಮ್ಯಾರಥಾನ್‌ನಲ್ಲಿ 36,000ಕ್ಕೂ ಹೆಚ್ಚು ಓಟಗಾರರು ಭಾಗವಹಿಸಲಿದ್ದಾರೆ. ಪ್ರಮುಖ ಆರಂಭ ಸ್ಥಳ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣಿಕ್ ಶಾ ಪರೇಡ್ ಮೈದಾನ ಆಗಿದ್ದು, ಓಟಗಾರರು ಉಲ್ಲೂರ್ ಕೆರೆ, ಡಿಕ್ಸನ್ಸ್ ರಸ್ತೆ ಮತ್ತು ವಿಧಾನ ಸೌಧ ಸೇರಿದಂತೆ ನಗರದ ಪ್ರಮುಖ ಮಾರ್ಗಗಳಲ್ಲಿ ಓಡಲಿದ್ದಾರೆ. ಬುಧವಾರದಂದುಮಾಧ್ಯಮಗೋಷ್ಠಿನಡೆಸಿದ ಆಯೋಜಕರು, ಕೂಟದ ಸಮಯದಲ್ಲಿರುವ ವ್ಯವಸ್ಥೆಗಳ ಬಗ್ಗೆ ವಿಸ್ತಾರವಾಗಿ ತಿಳಿಸಿದರು.

ರೇಸ್ ಸಮಯ ಪಟ್ಟಿ

ವಿಭಾಗ	ಆರಂಭ	ಅಂತ್ಯ
ಮಹಿಳಾ 10ಕೆ	05:30	06:10
ಪುರುಷರ 10ಕೆ	06:08	06:43
ಓಪನ್ 10ಕೆ	06:10	08:45
ಹಿರಿಯ/ ದಿವ್ಯಾಂಗರ ಓಟ	08:00	09:00
ಮಜ್ಜಾ ರನ್	08:30	10:00

ಆರೋಗ್ಯ ಮತ್ತು ಭದ್ರತೆ

- 30 ಹಾಸಿಗೆ ವೈದ್ಯಕೀಯ ಕೇಂದ್ರ, (ಐಸಿಯು ಸಹಿತ)
- 5 ಮಾರ್ಗ ಮಧ್ಯ ವೈದ್ಯಕೀಯ ಕೇಂದ್ರಗಳು
- 10 ಆಂಬ್ಯುಲೆನ್ಸ್‌ಗಳು, ಬೈಕ್ ಮೆಡಿಕ್ಸ್
- 250+ ವೈದ್ಯಕೀಯ ಸಿಬ್ಬಂದಿ

ಇತರ ವ್ಯವಸ್ಥೆಗಳು

- 1200ಕ್ಕೂ ಹೆಚ್ಚು ಸ್ವಯಂಸೇವಕರು
- 1000 ಪೊಲೀಸ್ ಸಿಬ್ಬಂದಿ
- 8 ನೀರಿನ ಕೇಂದ್ರಗಳು, 3 ರಿಹೈಡ್ರೇಷನ್ ಕೇಂದ್ರ
- ಶೂನ್ಯ ತ್ಯಾಜ್ಯ ಮಾದರಿ

ವಿಶೇಷತೆಗಳು

- ಬಿಎಮ್‌ಆರ್‌ಸಿಎಲ್ ಮೆಟ್ರೋ ಸೇವೆ ಬೆಳಗ್ಗೆ ಬೇಗ ಆರಂಭ
- ಡೊಳ್ಳು ಕುಣಿತ, ಸಾಂಸ್ಕೃತಿಕ ಚೀರಿಂಗ್ ವಲಯಗಳು
- ಶೂ ಸಂಗ್ರಹಣೆ, ಆಹಾರ ಹಂಚಿಕೆ

ಹೈದರಾಬಾದ್‌ಗೆ 47 ರನ್‌ಗಳ ಗೆಲುವು | ಮಾಲಿಂಗಾ 32/4

ದಿಲ್ಲಿ ಕ್ಯಾಪಿಟಲ್ಸ್‌ಗೆ ಸೋಲಿನ ಕಹಿ

ಸಂಕ್ಷಿಪ್ತ ಸ್ಕೋರ್

ಹೈದರಾಬಾದ್ 20 ಓವರ್‌ಗಳಲ್ಲಿ 242/2: ಅಭಿಷೇಕ್ 135*, ಕ್ಲಾಸೆನ್ 37*; ಅಕ್ಷರ್ 23/1
ದಿಲ್ಲಿ 20 ಓವರ್‌ಗಳಲ್ಲಿ 195/9: ನಿತಿಶ್ 57, ರಿಜ್ವಿ 41; ಮಾಲಿಂಗಾ 32/4, ಹರ್ಷ 12/3

ಹೈದರಾಬಾದ್: ಇಶಾನ್ ಮಾಲಿಂಗ್ ಅವರ ಕರಾರುವಾಕ್ ಬೌಲಿಂಗ್ ದಾಳಿ ಸಹಾಯದಿಂದ ದಿಲ್ಲಿ ತಂಡವನ್ನು ಮಣಿಸಿದ ಸನ್‌ರೈಸರ್ಸ್ ಹೈದರಾಬಾದ್ 47 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಅಭಿಷೇಕ್ ಶರ್ಮ ಅವರ ಅಬ್ಬರದ ಶತಕದ ಬ್ಯಾಟಿಂಗ್ ನೆರವಿನೊಂದಿಗೆ ದೊಡ್ಡ ಸ್ಕೋರ್ ಕಲೆಹಾಕಿದ್ದ ಹೈದರಾಬಾದ್ 2 ಸೋಲಿನ ನಂತರ ಹ್ಯಾಟ್ರಿಕ್ ಜಯ ಸಾಧಿಸಿತು. ಇದರೊಂದಿಗೆ ಗೆಲುವಿನನಾಗಾಲೋಟಮುಂದುವರಿಸುವ ಭರವಸೆಮೂಡಿಸಿತು. ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ಹೈದರಾಬಾದ್ 2 ವಿಕೆಟ್ ಮಾತ್ರ ಕಳೆದುಕೊಂಡು 242 ರನ್ ಗಳಿಸಿತು. ಅಭಿಷೇಕ್ ಶರ್ಮ (135*, 68ಎ, 10ಬೌ, 10ಸಿ) ರನ್ ಬಾರಿಸಿದರು. ಟ್ರಾವಿಸ್ ಹೆಡ್, ಕ್ಲಾಸೆನ್ 37 ರನ್ ಮಾಡಿದರು. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಪರ ಅಕ್ಷರ್ ಪಟೇಲ್ ಮಾತ್ರ ಒಂದು ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ದಿಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 195 ರನ್ ಗಳಿಸಿತು. ನಿತಿಶ್ ರಾಣಾ (57, 30ಎ, 7ಬೌ, 3ಸಿ) ರನ್ ಬಾರಿಸಿದರು. ರಿಜ್ವಿ 41 ರನ್ ಗಳಿಸಿದರು. ಹೈದರಾಬಾದ್ ಪರ ಇಶಾನ್ ಮಾಲಿಂಗಾ (4-0-32-4) ಮಿಂಚಿದರು.



ಅಭಿಷೇಕ್ ಶರ್ಮ 135 ರನ್ ಬಾರಿಸಿ ದಾಖಲೆ ಮಾಡಿದರು. ಹೈದರಾಬಾದ್ ಇನ್ನಿಂಗ್ಸ್ ಉದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದಿತು. ರನ್ ಉಳಿಸಿಕೊಳ್ಳುವ ಸಮಯದಲ್ಲಿ ಮಾಲಿಂಗಾ ತಮ್ಮ ಕರಾರುವಾಕ್ ದಾಳಿಯೊಂದಿಗೆ ದಿಲ್ಲಿ ಪಾಲಿನ ದುಃಸ್ವಪ್ನವಾದರು. ಮುಂದಿನ ಪಂದ್ಯದಲ್ಲಿ ಹೈದರಾಬಾದ್, ರಾಜಸ್ಥಾನವನ್ನು, ದಿಲ್ಲಿ ಪಂಜಾಬ್ ತಂಡವನ್ನು ಎದುರಿಸಲಿದೆ.

ಮಾಲಿಂಗಾ ಸ್ಟ್ರೈಕ್: ದಿಲ್ಲಿ ಮೊದಲಿನಿಂದಲೂ ಹಿನ್ನಡೆ ಅನುಭವಿಸಿತು, ನಿಸ್ಸಂಕಾ 8 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ನಿತಿಶ್ ರಾಣಾ ಅಬ್ಬರದ ಬ್ಯಾಟಿಂಗ್ ಮಾಡಿದರು. ರಾಹುಲ್ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಪವರ್‌ಪ್ಲೇ ಅಂತ್ಯಕ್ಕೆ 59 ರನ್‌ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ನಿತಿಶ್ ಸ್ಫೋಟಕ ಬೌಂಡರಿಗಳೊಂದಿಗೆ ಅರ್ಧ ಶತಕ ಪೂರೈಸಿಕೊಂಡು ಅಬ್ಬರದ ಬ್ಯಾಟಿಂಗ್ ಮುಂದುವರಿಸಿದರು. 37 ರನ್ ಗಳಿಸಿ ರಾಹುಲ್ ವಿಕೆಟ್ ಒಪ್ಪಿಸಿದರು. ಮುಂದೆ ಬಂದ ಸಮೀರ್ ರಿಜ್ವಿ ಕೂಡ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ರಾಣಾ 57, 30ಎ, 7ಬೌ, 1ಸಿಗೆ ಆಟ ನಿಲ್ಲಿಸಿದರು. ಅಲ್ಲಿಗೆ ದಿಲ್ಲಿ ಹೋರಾಟ ಮುಕ್ತಾಯಗೊಂಡಂತಾಯಿತು. ರಿಜ್ವಿ ಆಟ 41 ರನ್‌ಗೆ ಮುಗಿಯಿತು. ಮಿಲ್ಲರ್ ಶೂನ್ಯ ಸುತ್ತಿದರು. ಅಲ್ಲಿಗೆ ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. 108 ರನ್‌ಗಳಿಸಿತು. ಡೆತ್ ಓವರ್‌ನಲ್ಲಿ ದಿಲ್ಲಿ ಹೆಚ್ಚಿನ ಹೋರಾಟ ನಡೆಸಲೇ ಇಲ್ಲ. ಬಂದ ಬ್ಯಾಟಿಗರೆಲ್ಲರೂ ಬೇಗನೇ ವಿಕೆಟ್ ಒಪ್ಪಿಸಿದರು. 28 ರನ್ ಗಳಿಸುವಷ್ಟರಲ್ಲಿ ದಿಲ್ಲಿ 4 ವಿಕೆಟ್ ಕಳೆದುಕೊಂಡಿತು. ಅಂತಿಮವಾಗಿ 195 ರನ್‌ಗಳಿಸಿ ಹೋರಾಟ ನಿಲ್ಲಿಸಿತು. ಹೈದರಾಬಾದ್ ಪರ ಹರ್ಷ ದುಬೆ 12 ರನ್ ಮಾತ್ರಕ್ಕೆ 3 ವಿಕೆಟ್ ಪಡೆದುಕೊಂಡರೆ, ಇಶಾನ್ ಮಾಲಿಂಗಾ 32 ರನ್ ನೀಡಿ 4 ವಿಕೆಟ್ ಪಡೆದರು.

ಕೋಚ್ ಮೇಲೆ ಹಲ್ಲೆ: 3 ಕ್ರಿಕೆಟಿಗರು ಅಮಾನತು

ಹೊಸದಿಲ್ಲಿ: ಕೋಚ್ ಮೇಲೆ ಹಲ್ಲೆ ನಡೆಸಿದ ಪ್ರಕರಣದಲ್ಲಿ ಪುದುಚೇರಿ ಕ್ರಿಕೆಟ್ ಸಂಸ್ಥೆಪ್ರಥಮ ದರ್ಜೆ ಮೂರು ಕ್ರಿಕೆಟಿಗರನ್ನು ತಕ್ಷಣದಿಂದಲೇ ಅಮಾನತುಗೊಳಿಸಿದೆ.

ಅಮಾನತುಗೊಂಡ ಆಟಗಾರರು ಜೆ. ಕಾರ್ತಿಕೇಯನ್, ಎ. ಅರವಿಂದರಾಜ್ ಹಾಗೂ ಎಸ್. ಸಂತೋಷ್ ಕುಮಾರ್ ಆಗಿದ್ದಾರೆ. ಇವರು ಪುದುಚೇರಿ ತಂಡದ ಪರವಾಗಿ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಹಾಗೂ ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಗಳಲ್ಲಿ ಆಡಿದ್ದಾರೆ. ಅರವಿಂದರಾಜ್ ಕಳೆದ ಸೀಸನ್‌ನಲ್ಲೂ ತಂಡವನ್ನು ಪ್ರತಿನಿಧಿಸಿದ್ದರು. ಸಿಎಪಿ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ಈ ಮೂವರು ಆಟಗಾರರು ಕಳೆದ ಡಿಸೆಂಬರ್ 8ರಂದು ಅಂಡರ್-19 ತಂಡದ ಕೋಚ್ ವೆಂಕಟರಮನ್ ಮೇಲೆ ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿದ್ದಾರೆ. ಇವರ ವಿರುದ್ಧ ಹತ್ಯೆ ಯತ್ನ ಹಾಗೂ ಹಲ್ಲೆ ಪ್ರಕರಣ ದಾಖಲಿಸಲಾಗಿದೆ. ಸೇದುರಪೇಟೆ ಪೊಲೀಸ್ ಠಾಣೆಯ ಅಧಿಕಾರಿಗಳು ಎಫ್‌ಐಆರ್ ಸಂಖ್ಯೆ 100/2025 ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು, ಪ್ರಕರಣವು ಪುದುಚೇರಿ ನ್ಯಾಯಾಂಗ ಮ್ಯಾಜಿಸ್ಟ್ರೇಟ್-4 ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.

ಭಾರತೀಯ ವಾಲಿಬಾಲ್‌ಗೆ ಆಘಾತ | ನಿಯಮ ಪಾಲಿಸದ ಕಾರಣಕ್ಕೆ ಕ್ರಮ

ಎಫ್‌ಐವಿಬಿ ಅಂತಾರಾಷ್ಟ್ರೀಯ ಮಾನ್ಯತೆ ರದ್ದು!




ಹೊಸದಿಲ್ಲಿ: ಭಾರತೀಯ ವಾಲಿಬಾಲ್ ಫೆಡರೇಶನ್‌ಗೆ (ವಿಎಫ್‌ಐ) ನೀಡಲಾಗಿದ್ದ ತಾತ್ಕಾಲಿಕ ಮಾನ್ಯತೆಯನ್ನು ಅಂತಾರಾಷ್ಟ್ರೀಯ ವಾಲಿಬಾಲ್ ಫೆಡರೇಶನ್ ತಕ್ಷಣದಿಂದಲೇ ರದ್ದುಪಡಿಸಿದೆ.

ಎಫ್‌ಐವಿಬಿ ತನ್ನ ಪ್ರಕಟಣೆಯಲ್ಲಿ, ಕಾನೂನು ಮತ್ತು ಆಡಳಿತಾತ್ಮಕ ನಿಯಮಗಳನ್ನು ಪಾಲಿಸದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ, ಎಂದು ತಿಳಿಸಿದೆ. ವಿ ಎಫ್ ಐಯ ತಾತ್ಕಾಲಿಕ ಆಡಳಿತವು ಅಗತ್ಯ ನಿಯಮಗಳನ್ನು ಪಾಲಿಸದ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದಾಗಿ, ಆಡಳಿತದಲ್ಲಿ ಸ್ಥಿರತೆ ತರಲು ಸ್ಟಿಯರಿಂಗ್ ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯಲ್ಲಿ ರೋಹಿತ್ ರಾಜಪಾಲ್, ರಘುರಾಮ್ ಅಯ್ಯರ್, ಸ್ಟೀವ್ ಟಟ್ಟನ್, ಸ್ಟೀಫನ್ ಬಾಕ್ ಮತ್ತು ಹಿತೇಶ್ ಮಲ್ಹೋತ್ರಾ ಸೇರಿದ್ದಾರೆ. ಈ ಸಮಿತಿಯ ಪ್ರಮುಖ ಗುರಿ ಆಟಗಾರರ ಹಿತಾಸಕ್ತಿ ಕಾಪಾಡುವುದು. ಜೊತೆಗೆ ಆಟಗಾರರ ಆಯೋಗ ರಚನೆ, ರಾಜ್ಯ ಸಂಘಗಳ ಚುನಾವಣೆ ನಡೆಸುವುದು ಮತ್ತು ವಿ ಎಫ್ ಐ ಸಂವಿಧಾನವನ್ನು ಸರಿಪಡಿಸುವ ಜವಾಬ್ದಾರಿಯೂ ಇದೆ. ಇನ್ನೂ ಎಫ್‌ಐವಿಬಿ ತನ್ನ ವಾಲಿಬಾಲ್ ಎಂಪವರ್‌ಮೆಂಟ್ ಯೋಜನೆಯಡಿ ಭಾರತಕ್ಕೆ ಈ ವರ್ಷ ಸುಮಾರು 2.58 ಲಕ್ಷ ಡಾಲರ್ (ಸುಮಾರು 2.4 ಕೋಟಿ ರೂಪಾಯಿ) ನೆರವು ನೀಡಲಿದೆ. ಈ ಹಣವನ್ನು ಆಟಗಾರರ ಅಭಿವೃದ್ಧಿ ಮತ್ತು ರಾಷ್ಟ್ರೀಯ ತಂಡಗಳ ಉತ್ತೇಜನಕ್ಕೆ ಬಳಸಲಾಗುತ್ತದೆ. ಇತ್ತೀಚೆಗೆ, ಅಹಮದಾಬಾದ್‌ನ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಸೌಲಭ್ಯಗಳ ಕೊರತೆ ಕುರಿತು ದೂರು ನೀಡಿದ ನಂತರ, ಭಾರತೀಯ ಆಟಗಾರರಾದ ಆನಂದ್ ಕೆ ಮತ್ತು ಜಾನ್ ಜೋಸೆಫ್ ರಾಷ್ಟ್ರೀಯ ಶಿಬಿರವನ್ನು ತೊರೆದ ಘಟನೆ ಕೂಡ ವಿವಾದಕ್ಕೆ ಕಾರಣವಾಗಿತ್ತು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5962

ಎಡದಿಂದ ಬಲಕ್ಕೆ
1.ಹಾವನ್ನು ಆಭರಣವಾಗುಳ್ಳ ಶಿವ (5)
3. ಭಾಷೆಯೊಂದರ ವರ್ಣ (3)
5.ಉಗ್ರನಿಗೆ ಹತ್ತಿರದಲ್ಲೇ ಕಂಡ ಆಕಾಶಕಾಯ (2)
7.ಅರಿವನ್ನು ಪಡೆ-ಎಚ್ಚರಗೊಳ್ಳು (4)
9.ಅಂಬರೀಷ್-ಆರತಿ ಅಭಿನಯದ ಶರದ ಚಿತ್ರ ತಿರುಗಿದೆ (5)
10.ಇದು ನಿಬಂಧನೆಗಳ ಸಮೂಹ (5)
11.ಇದು ಗಂಡನ ಮನೆ (4)
12.ಕೊಂಚ-ಸ್ವಲ್ಪ ಎಂಬರ್ಥದ ಶಬ್ದ (2)
15.ಕಾನೂನು ಪ್ರಕ್ರಿಯೆಯಲ್ಲಿ ವಾದಿಸುವ ವ್ಯಕ್ತಿ (3)
16.ಹದ್ದಿನ ಚಿತ್ರವಿರುವ ಪತಾಕೆ (5)

ಮೇಲಿನಿಂದ ಕೆಳಕ್ಕೆ
1.ಇದು ಮೂಗಿನ ಆದಿಭಾಗ (3)
2.ನಡತೆಯಿಲ್ಲಿ ತಲೆಕೆಳಗಾಗಿದೆ (2)
4.ರವಿಯು ಅವಳಿಗೆ ಕೇಳಿಸಿದ ವಾದ್ಯಧ್ವನಿ (3)
6.ದುಡ್ಡಿನ ಯಜಮಾನಿಯಾಗಿ ಲಕ್ಷ್ಮಿ (5)
7.ಹೀನಾರ್ಥದಲ್ಲಿ ಮನುಷ್ಯನ ಮುಖ (2)
8.ಅರಿವು-ಗಮನಕ್ಕೆ ತರುವಿಕೆ (5)
10.ನೀರ ಬಿಂದುಗಳಿಂದ ಕೂಡಿರುವಂಥಾದ್ದು ತಲೆಕೆಳಗಾಗಿದೆ (2)
11.ಚಿಗುರು-ಅಂಕುರದ ಸಮಾನಪದ (3)
13.ತೊಡಕಿನಿಂದ ಕೂಡಿದ್ದು ತಲೆಕೆಳಗಾಗಿದೆ (3)
14.ಮನೆಯನ್ನು ಭದ್ರಪಡಿಸುವ ನೆಂಟ (2)

5961 ಉತ್ತರ

ಎಡದಿಂದ ಬಲಕ್ಕೆ:
1.ಕುಮಾರವ್ಯಾಸ
5.ಮಹಾನಗರ 8.ಪೇಷ್ಕಾರ
9.ಗೆಣ್ಣು 10.ಜಯ
11.ವರ 12.ಕಾಸು
14.ದವಸ 15.ರಸಬುರುಡೆ
17.ನರವಾಹನ

ಮೇಲಿನಿಂದ ಕೆಳಕ್ಕೆ :
2.ಮಾದಕಪೇಯ 3.ಸಮ
4.ಪರಮೇಶ್ವರ 6.ಹಾವುಗೆ
7.ಚರ 10.ಜಟಭರತ
11.ವಸತಿಗೃಹ
13.ಸುಮಾರು 14.ದಡ
16.ನಡೆ

ಕಿರುಸುದ್ದಿ

ಉದ್ಘಾಟನೆ ಇಂದು

ಮುಂಡರಗಿ: ತಾಲೂಕಿನ ಹೆಸರೂರ ಗ್ರಾಮದಲ್ಲಿ ಗರುಡದೇವರ ನೂತನ ದೇವಾಲಯ ಉದ್ಘಾಟನೆ ಹಾಗೂ ನೂತನ ಗರುಡ ದೇವರ ಮೂರ್ತಿ ಪ್ರತಿಷ್ಠಾಪನೆಯ ಕಾರ್ಯಕ್ರಮವು ಏ.23 ರಿಂದ 26 ರವರೆಗೆ ಜರುಗಲಿವೆ.

ಏ.23 ರಂದು ನೂತನ ಗರುಡ ದೇವರ ವಿಗ್ರಹ ಮುಂಡರಗಿ ನಗರದ ಗಣಪತಿ ದೇವಸ್ಥಾನದಿಂದ ಕುಂಭಮೇಳ ಹಾಗೂ ಸಕಲ ವಾದ್ಯಗಳಿಂದ ಪುರ ಪ್ರದೇಶ, ಗಂಗಾಸ್ಥಳಕ್ಕೆ ಕರೆದುಕೊಂಡು ಹೋಗುವುದು ಹಾಗೂ ಗ್ರಾಮದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ದೇವಾಲಯಕ್ಕೆ ಕರೆತಂದು ಜಲಾದಿವಾಸ ಹಾಗೂ ಕ್ಷೀರಾದಿವಾಸ ಕಾರ್ಯಕ್ಮರಗಳು ಜರಗುವವು. ರಾತ್ರಿ 10.30ಕ್ಕೆ ಸುಂಭ-ನಿಸುಂಭರ ವಧೆ ಬೈಲಾಟ ನಡೆಯಲಿದೆ. ಏ.24 ರಂದು ಅಂಕುಣರರ್ಪಣೆ ಯಜ್ಞಶಾಲಾ ತಯಾರಿ ಕಲಶಮಧ್ಯೋ ದೇವತಾಹ್ವನ ಧಾನ್ಯಾದಿವಾಸ ನಂತರ ರಾತ್ರಿ ಶಯ್ಯಾದಿವಾಸ ಕಾರ್ಯಕ್ರಗಳು ನಡೆಯುವವು. ಏ.25ರಂದು ವಿಗ್ರಹ ಪತಿಷ್ಠಾಪನೆ ಕಲಾ ಹೋಮ, ಪ್ರತಿಷ್ಠ ಹೋಮ, ಕಳಸಾರೋಹಣ, ದೀಪಸ್ಥಂಭ ಪ್ರತಿಷ್ಠಾಪನೆ ನಂತರ ಕದಳಿವೈದನ ಅಭಿಷೇಕ ಅಲಂಕಾರ ಮಹಾಪೂಜೆ, ದೇವರ ದರ್ಶನ ತೀರ್ಥ ಪ್ರಸಾದ ವಿತರಣೆ ನಡೆಯುವವು. ಏ.26 ರಂದು ಗರುಡ ದೇವರ ದೇವಸ್ಥಾನದಲ್ಲಿ 10.30ಕ್ಕೆ ಸಾಮೂಹಿಕ ವಿವಾಹಗಳು ಜರುಗುವುವು. ಬೆಳಗ್ಗೆ 11.30ಕ್ಕೆ ಧರ್ಮಸಭೆಯು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ ಸಾನ್ನಿಧ್ಯದಲ್ಲಿ ನಡೆಯುವುದು. ನೇತೃತ್ವವನ್ನು ವಿರುಪಾಪುರ-ಕಲಕೇರಿ ಗುರು ಮುರಕೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಭಿನವ ಮೃತ್ಯುಂಜಯ ಸ್ವಾಮೀಜಿ , ಬಳಗಾನೂರನ ಶಿವಶಾಂತವೀರ ಶರಣರು , ಮುಪ್ಪಿನ ಬಸವಲಿಂಗ ಸ್ವಾಮೀಜಿ, ಹೂವಿನಹಡಗಲ ಡಾ. ರಾಮಸ್ವಾಮಿ ರಾಕೇಶಯ್ಯ, ಚನ್ನಬಸಯ್ಯ ಕರಬಸಯ್ಯ ಹಿರೇಮಠ ಸ್ವಾಮೀಜಿ, ವೀರಯ್ಯ ಈಶ್ವರಯ್ಯ ಕನ್ನಾಳ ಸ್ವಾಮೀಜಿ ಭಾಗವಹಿಸುವರು.

ಬಾಗಿನ ಅರ್ಪಣೆ



ಗದಗ: ಕೃಷಿ ಇಲಾಖೆಯ ಯೋಜನೆಗಳನ್ನು ರೈತರು ಸದುಪಯೋಗ ಪಡಿಸಿಕೊಂಡು ಉನ್ನತಿ ಹೊಂದಬೇಕು. ಅಂದಾಗ ಮಾತ್ರ ಯೋಜನೆಗಳು ಯಶಸ್ವಿಯಾಗಲು ಸಾಧ್ಯ ಎಂದು ಸೊರಟೂರಿನ ಓಂಕಾರೇಶ್ವರ ಮಠದ ಫಕೀರೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲೂಕಿನ ಕಣವಿ ಗ್ರಾಮದ ಪ್ರಗತಿಪರ ರೈತ ಶರಣಪ್ಪಗೌಡ ಪಾಟೀಲ ಅವರ ತೋಟದಲ್ಲಿ ರಿವಾರ್ಡ್ ಯೋಜನೆಯಲ್ಲಿ ನಿರ್ಮಿಸಿದ ಕೃಷಿ ಹೊಂಡಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯುವ ಮುಖಂಡ ಕೆ.ಎಚ್. ಪಾಟೀಲ್ ಹಾಗೂ ಸಹಾಯಕ ಕೃಷಿ ನಿರ್ದೇಶಕ ಮಲ್ಲಯ್ಯ ಕೊರವನವರ ಮಾತನಾಡಿದರು. ಕೃಷಿ ಅಧಿಕಾರಿ ಎಫ್.ಸಿ. ಗುರಿಕಾರ, ತೋಟಗಾರಿಕೆ ಅಧಿಕಾರಿ ಶೈಲೇಂದ್ರ, ಬಿರಾದಾರ, ಶಿದ್ದಪ್ಪ ಕೋರಿ, ಅಜ್ಜಣ್ಣ ಹುಗ್ಗೆನ್ನವರ, ಬಸವರಾಜ ಬಂಡಕ್ಕನವರ, ಗಂಗಪ್ಪ ಗಡಾದ, ಪರಪ್ಪ ಕೊಳಿವಾಡ, ದೇವರೆಡ್ಡಿ ಅಗಸನಕೊಪ್ಪ ಸೇರಿದಂತೆ ರೈತರು ಇದ್ದರು. ರಿವಾರ್ಡ್ ಯೋಜನೆಯ ಕೃಷಿ ಹೊಂಡಕ್ಕೆ ಬಾಗಿನ ಅರ್ಪಿಸಲಾಯಿತು. ರೈತರೊಂದಿಗೆ ಸಂವಾದ ನಡೆಯಿತು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	1209-5470
ಉದ್ದಿನಕಾಳು	4412-4412
ಅಲಸಂದೆ	3819-6209
ಒಣ ಮೆಣಸಿನಕಾಯಿ	3399-38109
ಹೆಸರುಕಾಳು	1259-8395
ಶೇಂಗಾ	1890-6512
ಕಡಲೆಕಾಳು	11810-11810
ಹುರಳಿಕಾಳು	3039-4149
ಬೆಲ್ಲ	4948-4849
ಜೋಳ	1739-4429
ಮೆಕ್ಕೆಜೋಳ	1759-1710
ಸಾಸುವೆ	4819-5596
ಕುಸುಬೆ	4819-5596
ಸಜ್ಜೆ	2550-2550
ಸೂರ್ಯಕಾಂತಿ	5466-6069
ತೊಗರಿ	4314-5612
ಗೋಧಿ	1602-5619



ಲಕ್ಷ್ಮೇಶ್ವರ: ಇಲ್ಲಿನ ವಕೀಲರ ಸಂಘದಿಂದ ಜಗಜ್ಯೋತಿ ಬಸವಣ್ಣನವರ ಜಯಂತ್ಯುತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ವಕೀಲರಾದ ಎಸ್.ಪಿ ಬಳಿಗಾರ, ಬಿ.ಎಸ್ ಬಾಳೇಶ್ವರಮಠ, ಮಹೇಶ ಹಾರೋಗೇರಿ, ಬಿ.ಎಸ್ ಪಾಟೀಲ, ವಿ.ಎಸ್ ಪಶುಪತಿಹಾಳ, ಎನ್.ಎಂ ಗದಗ, ಪಿ.ಎಂ ವಾಲಿ ಸೇರಿ ಅನೇಕರಿದ್ದರು.

ಕಲೆ, ಕಲಾವಿದರಿಗೆ ಪ್ರೋತ್ಸಾಹ ಅಗತ್ಯ

ಗದಗ: ಕಲೆ ಎಂಬುವುದು ಎಲ್ಲರ ಬದುಕನ್ನು ಬೆಳಗುವ ಆತ್ಮಾನಂದದ ಮಾಧ್ಯಮ. ಕಾಲಮಾನಕ್ಕೆ ತಕ್ಕಂತೆ ಹೊಂದಿಸಿಕೊಳ್ಳುವ ಸಾಮರ್ಥ್ಯ ಕಲಾವಿದನಿಗಿದ್ದರೆ ಮಾತ್ರ ಕಲೆ ಮತ್ತು ಕಲಾವಿದ ಸೃಜನಶೀಲ ಲೋಕದಲ್ಲಿ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾನೆ. ಮಾಧ್ಯಮಗಳ ಭರಾಟೆಯಿಂದ ಕಲೆ ಹೊಸತನದತ್ತ ಮುಖ ಮಾಡುತ್ತಿದೆ. ಆದ್ದರಿಂದ ಕಲಾ ಅಧ್ಯಯನದಲ್ಲಿ ಬದಲಾವಣೆ ತರಬೇಕು. ಕಲೆ, ಕಲಾವಿದರ ಅಸ್ತಿತ್ವಕ್ಕೆ ಸರ್ಕಾರದ ಸಹಕಾರ ಅಗತ್ಯ ಎಂದು ವಿಜಯ ಲಲಿತಕಲಾ ಸಂಸ್ಥೆ ಅಧ್ಯಕ್ಷ ಪ್ರೊ. ಅಶೋಕ ಅಕ್ಕಿ ಅಭಿಪ್ರಾಯಪಟ್ಟರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದೃಶ್ಯ ಕಲಾವಿದರ ಸಂಘ ಹಾಗೂ ಪೂರ್ಣತಾರೆ ಜನಸೇವಾ ಸಂಸ್ಥೆ ಸಹಯೋಗದಲ್ಲಿ ತೋಂಟದ ಸಿದ್ದಲಿಂಗ ಶ್ರೀಗಳ ಕನ್ನಡ ಭವನ ಕ.ಸಾ.ಪ ಕಾರ್ಯಾಲಯದಲ್ಲಿ ಜರುಗಿದ ವಿಶ್ವಕಲಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ಉಪನ್ಯಾಸ ನೀಡಿದ ಡಾ.ವಿಜಯಲಕ್ಷ್ಮೀ ಗೇಟಿ ಮಾತನಾಡಿ, ಜನಪದ ಕಲೆಗಳು ಮಾನವನ ಬದಕಿನ ತಲ್ಲಣ ಮತ್ತು ಸಂಸ್ಕೃತಿ ಸಾಂಪ್ರದಾಯಗಳನ್ನು ಬಿಂಬಿಸುತ್ತವೆ. ಅಂತಹ ಕಲೆಗಳನ್ನು ಜನಪದರು ಕೆಮ್ಮಣ್ಣು, ಸುಣ್ಣ, ಸಗಣಿಯ ಮೂಲಕ ಭಿತ್ತಿ ಹಾಗೂ ಅಂಗಳದಲ್ಲಿ ರೇಖಾಚಿತ್ರ ಮುಖಾಂತರ ವ್ಯಕ್ತ ಪಡಿಸುತ್ತಿದದ್ದರು ಎಂದರು. ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಹಾಗೂ ಜಾನಪದ ವಿ.ವಿ. ಕುಲಸಚಿವ ಷಹಜಾನ ಮುದಕವಿ, ದೃಶ್ಯ ಕಲಾವಿದರ ಸಂಘದ ಅಧ್ಯಕ್ಷ ಡಾ. ಬಿ.ಎಲ್.ಚವ್ಹಾಣ ಮಾತನಾಡಿದರು. ಎಂ.ಆರ್. ಹೆಬ್ಬಳ್ಳಿ, ಬಿ.ಕೆ.ನಿಂಬನಗೌಡರ, ಬಸವರಾಜ ನೆಲಜೇರಿ, ರಮೇಶ ಮುರಗೋಡ ಕಲಾವಿದರನ್ನು ಸನ್ಮಾನಿಸಲಾಯಿತು. ವೈಷ್ಣವಿ ರಾಠೋಡ ನೃತ್ಯ ಪ್ರದರ್ಶನ ಜನಮನ ಸೆಳೆಯಿತು. ಡಾ. ದತ್ತಪ್ರಸನ್ನ ಪಾಟೀಲ್ ಸ್ವಾಗತಿಸಿದರು. ಡಿ.ಎಸ್. ಬಾಪುರಿ ವಂದಿಸಿದರು. ಬಸವರಾಜ ನೆಲಜೇರಿ ನಿರೂಪಿಸಿದರು.



ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದೃಶ್ಯ ಕಲಾವಿದರ ಸಂಘ ಹಾಗೂ ಪೂರ್ಣತಾರೆ ಜನಸೇವಾ ಸಂಸ್ಥೆ ಸಹಯೋಗದಲ್ಲಿ ತೋಂಟದ ಸಿದ್ದಲಿಂಗ ಶ್ರೀಗಳ ಕನ್ನಡ ಭವನ ಕ.ಸಾ.ಪ ಕಾರ್ಯಾಲಯದಲ್ಲಿ ನಡೆದ ವಿಶ್ವಕಲಾ ದಿನಾಚರಣೆಯನ್ನು ಉದ್ಘಾಟಿಸಲಾಯಿತು.

ಸಾಮಾನ್ಯ ಪ್ರವೇಶ ಪರೀಕ್ಷೆ ಪೂರ್ವಸಿದ್ಧತಾ ಸಭೆ | ಜಿಲ್ಲಾಧಿಕಾರಿ ಸೂಚನೆ

ಅಚ್ಚುಕಟ್ಟಾಗಿ ಸಿಇಟಿ ಪರೀಕ್ಷೆ ನಡೆಸಿ



ಗದಗ: ಜಿಲ್ಲೆಯಲ್ಲಿ ಏ.23 ಹಾಗೂ 24 ರಂದು ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಹಾಗೂ ಪಾರದರ್ಶಕವಾಗಿ ಜರುಗಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಿಇಟಿ ಪರೀಕ್ಷೆ ಕುರಿತು ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಪರೀಕ್ಷೆಗಳಲ್ಲಿ ಯಾವುದೇ ಅಕ್ರಮಗಳು ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷಾರ್ಥಿಗಳಿಗೆ ತುರ್ತು ಆರೋಗ್ಯ ತಪಾಸಣೆಗೆ ಸೂಕ್ತ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಡಿವೈಎಸ್‌ಪಿ ಮಹಾಂತೇಶ ಸಜ್ಜನರ, ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

- ಜಿಲ್ಲೆಯ 10 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ
- 3,533 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಮಾಹಿತಿ ನೀಡಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಸನಾಯಕ

ನಿಷೇಧಿತ ಪ್ರದೇಶ ಘೋಷಣೆ

ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡಲು ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಏ.23 ಮತ್ತು ಏ.24 ರಂದು ಬೆಳಗ್ಗೆ 8.30 ರಿಂದ ಸಂಜೆ 5ರವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾರ್ಥಿಗಳ ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿ ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ, ಐದು ಅಥವಾ ಐದಕ್ಕಿಂತ ಹೆಚ್ಚು ಜನರು ಗುಂಪುಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಬುಕ್‌ಸ್ಟಾಲ್ ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕೈಗಡಿಯಾರ, ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ರೀತಿಯ ಕೈಗಡಿಯಾರವನ್ನು ಕಟ್ಟಿಕೊಂಡು ತೆಗೆದುಕೊಂಡು ಹೋಗುವಂತಿಲ್ಲ. ಅಭ್ಯರ್ಥಿಗಳು ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳು, ಮೊಬೈಲ್ ಫೋನ್ , ಬ್ಲೂಟೂತ್ , ಸ್ಲೈಡ್ ರೂಲ್ಸ್ , ಕ್ಯಾಲ್ಕುಲೇಟರ್ , ವೈಟ್ ಫ್ಲೂಯಿಡ್ , ವೈರ್ ಲೆಸ್ ಸೆಟ್ಸ್, ಪೇಪರ್ ಚೀಟಿ, ಬುಕ್ಸ್ / ಮುಂತಾದವುಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದರು.

ಸಮಾನತೆ ಸಂದೇಶ ಸಾರಿದ ಬಸವಣ್ಣನವರು

ರೋಣ: ಕಲುಷಿತಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಬಸವ ತತ್ವ ಅಗತ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಸತತ 12 ವರ್ಷಗಳಿಂದ ಹಜರತ್ ಸುಲೇಮಾನ್ ಶಾವಲಿ ಅಜ್ಜನವರ ಗದ್ದುಗೆಯಲ್ಲಿ ಬಸವ ಜಯಂತಿಯನ್ನು ಆಚರಿಸುತ್ತಾ ಬರಲಾಗುತ್ತಿದೆ ಎಂದು ದರ್ಗಾದ ಪೀಠಾಧಿಪತಿ ಹಜರತ್ ಸುಲೇಮಾನ್ ಶಾವಲಿ ಅಜ್ಜನವರು ಹೇಳಿದರು.

ಅವರು ಪಟ್ಟಣದ ಹೊರಪೇಟೆಯಲ್ಲಿರುವ ದರ್ಗಾದಲ್ಲಿ ಜಗಜ್ಯೋತಿ ಬಸವಣ್ಣವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಆಶೀರ್ವಚನ ನೀಡಿದರು. ಬಸವಣ್ಣನವರು 12ನೇ ಶತಮಾನದಲ್ಲಿ ಸಮಾನತೆ ಸಾರಿದ ಮಹಾನ್ ಚೇತನವಾಗಿದ್ದು, ಅವರು ಅನುಭವ ಮಂಟಪವನ್ನು ಕಟ್ಟುವ ಮೂಲಕ ಸ್ತ್ರೀಯರಿಗೆ ಸ್ವಾತಂತ್ರ್ಯದ ಹಕ್ಕನ್ನು ನೀಡಿದವರು. ಬಸವಣ್ಣವರ ಚಿಂತನೆಗಳು ಮತ್ತು ಅವರ ತತ್ವಗಳು ಇಂದಿಗೂ ಪ್ರಸ್ತುತವಾಗಿದ್ದು, ಅವರು ಹಾಕಿಕೊಟ್ಟಿರುವ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ. ಅವರ ವಚನಗಳ ಅರ್ಥವನ್ನು ಅರಿಯಬೇಕಿದೆ ಎಂದರು.

ಬಸವ ಜಯಂತಿಯನ್ನು ನಮ್ಮ ದೇಶದಲ್ಲಿ ಅಲ್ಲದೆ ವಿಶ್ವದಲ್ಲೂ ಕೂಡ ಆಚರಿಸಲಾಗುತ್ತಿದೆ. ಲಂಡನ್‌ನಲ್ಲಿ ಅವರ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿದೆ. ಇಂತಹ ಸಮಾಜ ಸುಧಾರಕರನ್ನು ಒಂದು ವರ್ಗಕ್ಕೆ ಸಿಮಿತಗೊಳಿಸುವುದು ಸಲ್ಲ, ಬದಲಾಗಿ ಅವರು ಎಲ್ಲ ಸಮುದಾಯಗಳ ಸುಧಾರಕರಾಗಿ ಭೂಮಿಗೆ ಬಂದವರು. ಹೀಗಾಗಿ ಶರಣರ, ಸೂಫೀಗಳ, ಮಠಾಧೀಶರುಗಳನ್ನು ಪೂಜ್ಯ ಭಾವನೆಗಳಿಂದ ಕಾಣಬೇಕಿರುವುದು ಎಲ್ಲರ ಕರ್ತವ್ಯವಾಗಬೇಕು. ಅಂದಾಗ ಮಾತ್ರ ಸಮಾಜ ಪರಿವರ್ತನೆ ಹೊಂದಲು ಸಾಧ್ಯವಾಗುತ್ತದೆ ಎಂದರು.

ವಿದ್ಯಾವಂತ ಯುವಕರು ಬಸವಣ್ಣನವರ ವಚನ ಸಾಹಿತ್ಯವನ್ನು ತಿಳಿದುಕೊಳ್ಳಲು ಮುಂದಾಗಬೇಕು. ಹಾದಿ ತಪ್ಪುತ್ತಿರುವ ಸಮಯದಲ್ಲಿ ಅವರ ನುಡಿಗಳನ್ನು ಸಮಾಜಕ್ಕೆ ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು.ನಮ್ಮದು ಇತಿಹಾಸವುಳ್ಳ ಪರಂಪರೆಯಾಗಿದ್ದು, ನಮ್ಮ ಸಂಸ್ಕೃತಿ ಮತ್ತು ನಮ್ಮ ಜೀವನ ಪದ್ಧತಿ ಸುಧಾರಿಸಿಕೊಳ್ಳುವುದು ಕೂಡ ಮುಖ್ಯವಾಗಿದ್ದು, ಜಾತಿ ಧರ್ಮಗಳ ಭೇದ ಮಾಡದೆ ಪಾಲಕರು ತಮ್ಮ ಮಕ್ಕಳಿಗೆ ಸಮಾಜ ಸುಧಾರಕರ ಬಗ್ಗೆ ತಿಳಿಸುವ ಕಾರ್ಯ ಮಾಡಬೇಕು. ಅಂದಾಗ ಸಮಾಜದಲ್ಲಿ ತಮ್ಮ ಮಕ್ಕಳು ಗೌರವದಿಂದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಈ ಸಂಧರ್ಭದಲ್ಲಿ ಹೊರಪೇಟಿ ಓಣಿಯ ಮುಖಂಡರುಗಳು ಉಪಸ್ಥಿತರಿದ್ದರು.



ಶಂಕರಾಚಾರ್ಯರ ತತ್ವ ಸಾರ್ವಕಾಲಿಕ: ಡಿಸಿ

ಗದಗ: ಜಗದ್ಗುರು ಶಂಕರಾಚಾರ್ಯರು ಸನಾತನ ಧರ್ಮದ ಉಳಿವಿಗೆ ಕಾರಣರಾದವರು. ಸಾಮಾಜಿಕ ಸಾಮರಸ್ಯ ಮತ್ತು ಸಮಾನತೆ ಸಾರಿದವರು. ಅವರ ತತ್ವಗಳು ಸರ್ವಕಾಲದಲ್ಲಿಯೂ ಪ್ರಸ್ತುತವಾಗಿವೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.

ನಗರದ ಸಂಬಾಪುರ ರಸ್ತೆಯಲ್ಲಿನ ಶಂಕರ ಮಠದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆದಿ ಜಗದ್ಗುರು ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಂಕರಾಚಾರ್ಯರು 8ನೇ ಶತಮಾನದಲ್ಲಿದ್ದವರು. ಸನಾತನ ಸಂಸ್ಕೃತಿ ವಿನಾಶದ ಅಂಚಿನಲ್ಲಿದ್ದಾಗ ಶಂಕರಾಚಾರ್ಯರು ಸನಾತನ ಪರಂಪರೆಯನ್ನು ಪುನರ್‌ಸ್ಥಾಪನೆಮಾಡಿದ ಮಹಾನ್ ಚೇತನರಾಗಿದ್ದಾರೆ. ಸನಾತನ ಧರ್ಮವು ಜೀವನದ ಶೈಲಿಯಾಗಿದೆ. ಆರೋಗ್ಯ ಮತ್ತು ನೆಮ್ಮದಿ ಇದ್ದರೆ ಜೀವನದಲ್ಲಿ ಏನಾದರೂ ಸಾಧಿಸಬಹುದಾಗಿದೆ. ಅಂದಿನ ದಿನಗಳಲ್ಲಿ ಶಂಕರಾಚಾರ್ಯರು ಧರ್ಮ ರಕ್ಷಣೆಗಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸಂಚರಿಸಿದರು. ಲೋಕ ಕಲ್ಯಾಣದಲ್ಲಿ ತೊಡಗಿದ ಶಂಕರಾಚಾರ್ಯರು ಅಹಂ ಬ್ರಹ್ಮಾಸ್ಮಿ ಎಂದು ತತ್ವ ಪ್ರತಿಪಾದಿಸಿದರು ಎಂದರು.

ಹಿರಿಯ ಅಭಿವೃದ್ಧಿ ಅಧಿಕಾರಿ ಹಾಗೂ ಸಂಸ್ಕೃತಿ ಚಿಂತಕ ಎಂ.ಟಿ.ಭಟ್ ಮಾತನಾಡಿ, ಶಂಕರಾಚಾರ್ಯರು ಕೇರಳದಲ್ಲಿ ವೈಶಾಖ ಶುದ್ಧ ಪಂಚಮಿಯಂದು ಜನಿಸಿದರು. ಆತ್ಮ ಮತ್ತು ಪರಮಾತ್ಮ ಎರಡೂ ಬೇರೆ ಬೇರೆ ಅಲ್ಲ, ಎರಡೂ ಒಂದೇ. ಆತ್ಮನೆ ಪರಮಾತ್ಮ ಎಂದು ಸಾರಿದವರು. ಶಂಕರಾಚಾರ್ಯರು ಅದ್ವೈತ ವೇದಾಂತವನ್ನು ಪ್ರತಿಪಾದಿಸಿದವರು. ಸನಾತನ ಧರ್ಮದ ಉಳಿವಿಗಾಗಿ ಕಾಲ್ನಡಿಗೆಯಲ್ಲಿ ದೇಶದ ನಾಲ್ಕು ದಿಕ್ಕುಗಳಲ್ಲಿ ಸಂಚರಿಸಿದವರು. ಧಾರ್ಮಿಕ ಹಾಗೂ ಆಧ್ಯಾತ್ಮಿಕ ಲೋಕಕ್ಕೆ ಶಂಕರಾಚಾರ್ಯರು ಅಮೂಲ್ಯ ಕೊಡುಗೆ ಕೊಟ್ಟಿದ್ದಾರೆ ಎಂದರು.

ಸಮಾಜದ ಸಾಧಕರಿಗೆ ಹಾಗೂ ಹಿರಿಯರಿಗೆ ಸನ್ಮಾನಿಸಲಾಯಿತು. ರಾಮಚಂದ್ರ ಮೋನೆ, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ, ವೇದಮೂರ್ತಿ ರತ್ನಾಕರ್ ಭಟ್ ಜೋಶಿ, ಡಾ.ಕುಶಾಲ ಗೋಡಖಿಂಡಿ, ಆನಂದ ಗೋಡಖಿಂಡಿ, ದತ್ತಾತ್ರೇಯ ಜೋಶಿ, ಸುಮನ ಪಾಟೀಲ, ವೆಂಕಟೇಶ ಕುಲಕರ್ಣಿ, ಗಿರೀಶ ಕುಲಕರ್ಣಿ, ಸುಧೀಂದ್ರ ದೇಶಪಾಂಡೆ, ದತ್ತಣ್ಣ ಜೋಶಿ, ಗಿರೀಶ ಪಂತರ, ಅನಿಲ ತೆಂಬದಮನಿ, ರವೀಂದ್ರ ಜೋಶಿ, ಆರ್.ಎಸ್.ಕುಲಕರ್ಣಿ, ಕೃಷ್ಣ ನಾಡಿಗೇರ ಇದ್ದರು. ವೇದಮೂರ್ತಿ ಶಂಕರಭಟ್ ಸೊರಟೂರ, ವೇದಮೂರ್ತಿ ದತ್ತಂಭಟ್ಟ ತೆಂಬದಮನಿ, ವೇದಮೂರ್ತಿ ಗಣೇಶ ಭಟ್ ಪುರಾಣಿಕ ಇವರು ವೇದಘೋಷ ನಡೆಸಿಕೊಟ್ಟರು. ದತ್ತಪ್ರಸನ್ನಪಾಟೀಲ ನಿರೂಪಿಸಿದರು.



ಶರಣರ ಸಂದೇಶ ಅಳವಡಿಸಿಕೊಳ್ಳಿ



ಮುಂಡರಗಿ: ಬಸವಾದಿ ಶರಣರು ಈ ನಾಡಿನಲ್ಲಿ ಸಮಾನತೆ, ಸಾಮಾಜಿಕ ನ್ಯಾಯದ ಸಂದೇಶ ಸಾರಿದ್ದಾರೆ. ಅವರ ಸಂದೇಶವನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು ಆಚರಣೆಗೆ ತರಬೇಕು. ಆಗಲೇ ಶರಣರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಚಿಂತಕ ಪಾಲಾಕ್ಷಿ ಗಣದಿನ್ನಿ ಹೇಳಿದರು.

ಅವರು ಪಟ್ಟಣದ ಜಗದ್ಗುರು ತೋಂಟದಾರ್ಯ ಶಾಖಾ ಮಠದಲ್ಲಿ ಜರುಗಿದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಕೊಟ್ರೇಶ ಅಂಗಡಿ ಮಾತನಾಡಿ, ಬಸವಣ್ಣನವರು ಸಾಂಸ್ಕೃತಿಕ ನಾಯಕನಾಗಿರುವುದು ಈ ನಾಡಿನ ಪುಣ್ಯ. ಶರಣ ಪರಂಪರೆಯು ಈ ನಾಡಿನಲ್ಲಿ ಸಾಮಾಜಿಕ, ಧಾರ್ಮಿಕ ಸಮಾನತೆ ಸಾರಿದೆ ಎಂದರು. ಮಂಜುನಾಥ ಇಟಗಿ ಮಾತನಾಡಿ, ಶರಣರು ಈ ನಾಡಿನ ಹೆಮ್ಮೆ. ಬಸವಣ್ಣನವರ ಘನವಾದ ವ್ಯಕ್ತಿತ್ವ ಜಾಗತಿಕವಾಗಿ ಕನ್ನಡ ನಾಡಿಗೆ ಘನತೆ ತಂದು ಕೊಟ್ಟಿದೆ ಎಂದರು. ಶಿವಯೋಗಿ ಗಡ್ಡದ, ಈಶ್ವರಪ್ಪ ಬೆಟಗೇರಿ, ಗಿರೀಶಗೌಡ ಪಾಟೀಲ, ಶಿವಯೋಗಿ ಕೊಪ್ಪಳ, ನಾಗಪ್ಪ ಕುಬಸದ, ಸದಾಶಿವಯ್ಯ ಕಬ್ಬೂರಮಠ, ಸಿದ್ದಲಿಂಗೇಶ ಕಬ್ಬೂರಮಠ, ಸುಕನ್ಯಾ ಕಬ್ಬೂರಮಠ, ಶೋಭಾ ಅಂಗಡಿ, ಗೀತಾ ಬೆಳವಟಿಮಠ, ಪ್ರಭಾವತಿ ಕುಬಸದ, ಶಾಂತಾ ಕುಬಸದ, ಪಾರ್ವತಿ ಕುಬಸದ, ಅನ್ನಕ್ಕ ಸಜ್ಜನರ, ಮಂಗಳಾ ಕರ್ಜಗಿ, ಗಾಯಿತ್ರಿ ಹೀರೆಮಠ ಮುಂತಾದವರಿದ್ದರು.

ಆಕಾಶದ ಕೌತುಕಗಳ ಅಧ್ಯಯನಕ್ಕೆ ಸ್ಫೂರ್ತಿ

ಗದಗ: ಬೇಸಿಗೆ ರಜೆಯನ್ನು ಸದ್ವಿನಿಯೋಗಿಸಿಕೊಳ್ಳಲು ಮಕ್ಕಳಿಗೆ ಗದುಗಿನ ತಾರಾಲಯ ವೀಕ್ಷಣೆ ಒಂದು ಒಳ್ಳೆಯ ಅವಕಾಶವಾಗಿದ್ದು ಆಕಾಶದ ಕೌತುಕಗಳ ಅಧ್ಯಯನಕ್ಕೆ ಇದೊಂದು ಸ್ಫೂರ್ತಿ ಆಗಲಿದೆ ಎಂದು ಸಂಪನ್ಮೂಲ ವ್ಯಕ್ತಿ ಕವಿತಾ ದಂಡಿನ ಹೇಳಿದರು.

ಬೆಟಗೇರಿಯ ಖಗೋಳ ತಾರಾಲಯದಲ್ಲಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ) ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ಖಗೋಳ ವಿಸ್ಮಯ ಬೇಸಿಗೆ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕುತೂಹಲ, ಅನ್ವೇಷಣೆ, ವಿಸ್ಮಯ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿ ನಿಖರವಾದ ಅಧ್ಯಯನಕ್ಕೆ ದಾರಿ ತೋರುತ್ತವೆ. ಮಕ್ಕಳು ತಾರಾಲಯದಲ್ಲಿನ ಕುತೂಹಲಗಳನ್ನು ವೀಕ್ಷಿಸಿ ನಂತರ ಪ್ರಾಣಿ ಸಂಗ್ರಹಾಲಯಕ್ಕೆ ಭೇಟಿ ನೀಡಿ ಆನಂದಿಸಲು ಅನುಕೂಲ ಕಲ್ಪಿಸಲಾಗಿದ್ದು ಇದರ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಕೋಟುಮಚಗಿ ಸರ್ಕಾರಿ ಪ್ರೌಢ ಶಾಲೆಯ ವಿಜ್ಞಾನ ಶಿಕ್ಷಕಿ ಭುವನೇಶ್ವರಿ ಪೋಲೀಸ್ ಪಾಟೀಲ ಮಾತನಾಡಿದರು. ಶಿಕ್ಷಣ ಇಲಾಖೆಯ ಸಂಪನ್ಮೂಲ ವ್ಯಕ್ತಿಗಳಾದ ಎಂ.ಎಚ್. ಸವದತ್ತಿ, ಮಹ್ಮದ್‌ಶಫಿ ಯರಗುಡಿ, ಶ್ಯಾಮ್ ಲಾಂಡೆ, ಬಸವರಾಜ ಕಡಿವಾಲ ಇದ್ದರು.



ಮೇ 1ರಂದು ಭಗವಾನ್ ಬುದ್ಧ ಜಯಂತಿ

ಗದಗ: ಭಗವಾನ್ ಬುದ್ಧ ಭಗವಾನ್‌ಜಯಂತಿಯನ್ನು ಮೇ 1ರಂದು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಗವಾನ್ ಬುದ್ಧ ಜಯಂತಿ ನಿಮಿತ್ತ ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಾಲೂಕು ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಜಯಂತಿಯ ಆಚರಣೆಗೆ ಕ್ರಮ ವಹಿಸಬೇಕು. ಎಸ್.ಎಸ್.ಎಲ್.ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಸನ್ಮಾನ ಕಾರ್ಯಕ್ರಮವು ಜರುಗಲಿದೆ ಎಂದರು. ಎಸ್.ಎನ್.ಬಳ್ಳಾರಿ, ಸತೀಶ ಹೂಲಿ, ಐ.ಕೆ. ಕಮ್ಮಾರ, ಅಂದಾನಪ್ಪ ವಿಭೂತಿ, ಸತೀಶ ಪಾಶಿ, ಅಶೋಕ ಬರಗುಂಡಿ, ಪ್ರಕಾಶ ಅಸುಂಡಿ, ಸಿದ್ದಪ್ಪ ಲಿಂಗಧಾಳ, ರಮೇಶ ಕೊಳೂರು, ರಾಮಚಂದ್ರ ಹಂಸನೂರು, ವಾಸುದೇವ ಹುಣಸೀಮರದ, ಆರ್.ಬಿ.ಕರ್ಜಗಿ, ಆರ್.ಎಸ್.ರಜಪೂತ, ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯ ರಮೇಶ ಮಾವಿನಕಾಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜಕುಮಾರ ಸೊಪ್ಪಡ್ಲ, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.



ರೋಗಿಗಳ ಪಾಲಿಗೆ ಡಯಾಲಿಸಿಸ್ ಕೇಂದ್ರ ವರದಾನ

ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವ ಪಿಪಿಪಿ ಮಾದರಿಯಲ್ಲಿ ನ್ಯಾಷನಲ್ ಹೆಲ್ತ್ ಮಿಷನ್ ಅಡಿಯಲ್ಲಿ ಪಬ್ಲಿಕ್ ಪ್ರೈವೇಟ್ ಸಹಭಾಗಿತ್ವ (ಪಿಪಿಪಿ) ಡಿಸಿಡಿಸಿ ಹೆಲ್ತ್ ಸರ್ವಿಸ್ ಪ್ರೈವೇಟ್ ಲಿಮಿಟೆಡ್ (ಡಿಸಿಡಿಸಿ ಕಿಡ್ನಿ ಕೇರ್) ಸಹಯೋಗದಲ್ಲಿ 2 ಬೆಡ್ ಗಳ ಅತ್ಯಾಧುನಿಕ ಯಂತ್ರೋಪಕರಣವಿರುವ ಕೇಂದ್ರ ಸ್ಥಾಪನೆಯಾಗಿ ಕಿಡ್ನಿ ಸಮಸ್ಯೆಯಿಂದ ಆಸ್ಪತ್ರೆ ಬರುವ ರೋಗಿಗಳಿಗೆ ಉಚಿತ ಚಿಕಿತ್ಸೆ ಕೊಡುವ ಮೂಲಕ 2 ವರ್ಷದಲ್ಲಿ ಹೊಸಆಶಾಭಾವನೆ ಮೂಡಿಸಿದೆ.

ರಾಜ್ಯ ಸರ್ಕಾರ ಸಮುದಾಯ ಆರೋಗ್ಯ ಕೇಂದ್ರದ ಆಸ್ಪತ್ರೆಯಲ್ಲಿ ಬಡವರ ಹಾಗೂ ಉಳ್ಳವರಿಗೆ ಸಹಿತ ಡಯಾಲಿಸಿಸ್ ಸೌಲಭ್ಯ ದೊರಕಿಸಲು ಪ್ರಾರಂಭ ಮಾಡಿದ್ದು ಇದರ ಖರ್ಚನ್ನು ಸರ್ಕಾರ ಭರಿಸಲಿದೆ. ಗಂಭೀರ ಕಾಯಿಲೆ ಹೆಪಟೈಟಿಸ್ ಬಿಎಚ್‌ಸಿವಿ, ಎಚ್‌ಐವಿ ನೆಗೆಟಿವ್ ಇರೋರಿಗೆ ಇಲ್ಲೇ ಡಯಾಲಿಸಿಸ್ ಮಾಡಲಾಗುತ್ತಿದೆ. ಪ್ರತಿಯೊಬ್ಬ ಹೊಸ ರೋಗಿಗೆ ಹೊಸ ಕಿಟ್‌ನಿಂದ ಸಿಂಗಲ್ ಯೂಸ್ ಡೈಲಾಜರ್ ಬಳಸಲಾಗುತ್ತಿದೆ. ನಂತರ ಡಯಾಲಿಸಿಸ್ ಚಿಕಿತ್ಸೆ ನೀಡಲಾಗುತ್ತಿದೆ. ಐರನ್ ಇಂಜೆಕ್ಷನ್, ಇಪಿಒ. 4ಕೆ ಇಂಜಕ್ಷನ್ ನೀಡುವುದರಿಂದ ರಕ್ತ ಸಂಗ್ರಹಣೆಯಾಗುತ್ತದೆ ಕ್ರಿಯಾಟಿನ್



ಲೆವೆಲ್ ಆಧಾರದ ಮೇಲೆ ಚಿಕಿತ್ಸೆ ನೀಡಲಾಗುತ್ತಿದ್ದು, ದಿನಕ್ಕೆ 2 ಅತ್ಯಾಧುನಿಕ ಮಿಷನ್‌ನಲ್ಲಿ 3 ಪಾಳೆಯಲ್ಲಿ 6 ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದ್ದು ಕನಿಷ್ಠ ಒಂದು ರೋಗಿ ವಾರಕ್ಕೆ ಮೂರ ಬಾರಿ ಡಯಾಲಿಸಿಸ್ ಮಾಡಿಸಬೇಕಾಗುತ್ತದೆ. ತಿಂಗಳಿಗೆ 14 ರಿಂದ 15 ರೋಗಿಗಳಿಗೆ ಕನಿಷ್ಠ 130 ರಿಂದ 140 ಬಾರಿ ಡಯಾಲಿಸಿಸ್ ಮಾಡಿಸುವ ಮುಖಾಂತರ ರೋಗಿಗಳಿಗೆ ಡಯಾಲಿಸಿಸ್ ಕೇಂದ್ರದ ಇನ್ಚಾರ್ಜ್ ನಿಲುಫರ್ ಬಾನು, ಟೆಕ್ನಿಸಿಯನ್ ಈಶ್ವರಿ ಜುಟ್ಟಲದ,ಬಸಿರಾ ಬಾನು ಜಮಖಂಡಿ, ಡಿ ಗ್ರೂಪ್ ಉದ್ಯೋಗಿ ಮಹಾಂತೇಶ ಲಮಾಣಿ ರೋಗಿಗಳ ಸೇವೆಯಲ್ಲಿ ತೊಡಗಿದ್ದಾರೆ.

ಡಯಾಲಿಸಿಸ್ ಕೇಂದ್ರದಲ್ಲಿ ರೋಗಿಗಳಿಗೆ ವೀಕ್ಷಣೆಮಾಡಲು ಟಿವಿ ವ್ಯವಸ್ಥೆ, ಎಸಿ, ಸಿಸಿ ಕ್ಯಾಮರಾ, ಶುದ್ಧ ಕುಡಿಯುವ ನೀರು ಉತ್ತಮ ಆರೈಕೆ ಜೊತೆಗೆ ಆಸ್ಪತ್ರೆ ವೈದ್ಯರು ರೋಗಿಗಳ ಮೇಲೆ ನಿಗಾ ಇಡುತ್ತಿದ್ದಾರೆ, ಒಟ್ಟಾರೆ ಸಾವಿರಾರು ರೂಪಾಯಿ ಖರ್ಚು ಮಾಡಿ ಚಿಕಿತ್ಸೆ ತೆಗೆದುಕೊಳ್ಳಲು ಕಷ್ಟವಿರುವ ಬಡವರ ಪಾಲಿಗೆ ವರದಾನವಾಗಿದೆ ಈ ಡಯಾಲಿಸಿಸ್ ಕೇಂದ್ರ.

> ಈ ಲಕ್ಷ್ಮೇಶ್ವರ ಸಮುದಾಯ ಆರೋಗ್ಯ ಕೇಂದ್ರ ಡಯಾಲಿಸಿಸ್ ಕೇಂದ್ರ ಕಿಡ್ನಿ ರೋಗಿಗಳಿಗೆ ವರದಾನವಾಗಿದೆ. ಬಿಪಿಎಲ್, ಎಪಿಎಲ್ ಪಡಿತರ ಚೀಟಿ ಹೊಂದಿದವರು ಮತ್ತು ಸಾಮಾನ್ಯ ವರ್ಗ, ಒಬಿಸಿ ಹಾಗೂ ಎಸ್ ಸಿ, ಎಸ್ ಟಿ ವರ್ಗದ ಸಾರ್ವಜನಿಕರಿಗೆ ಕಿಡ್ನಿ ಸಮಸ್ಯೆಯಿಂದ ಬಳಲುವ ರೋಗಿಗಳಿಗೆ ಸರ್ಕಾರದಿಂದ ಉಚಿತವಾಗಿ ಚಿಕಿತ್ಸೆ ದೊರೆಯುತ್ತಿದ್ದು ಇದನ್ನು ಸದುಪಯೋಗ ಪಡೆದುಕೊಳ್ಳಬೇಕು.
>
> ■ ಸಿದ್ದಲಿಂಗೇಶ್ವರ ಶಿವಶಿಂಪಿಗೇರ, ಆಡಳಿತ ಅಧಿಕಾರಿ, ಜಿಲ್ಲಾ ಡಯಾಲಿಸಿಸ್ ಕೇಂದ್ರ

ದಿಗಂತ ವಿಶೇಷ

> ನಾನು ವಾರಕ್ಕೆ 3 ಸಲ ಡಯಾಲಿಸಿಸ್ ಮಾಡಿಸಬೇಕು. ಕಳೆದ 14 ತಿಂಗಳುಗಳಿಂದ ಚಿಕಿತ್ಸೆ ಪಡೆಯುತ್ತಿದ್ದೇನೆ. ಬೇರೆ ಖಾಸಗಿ ಆಸ್ಪತ್ರೆಯಲ್ಲಿ ಮಾಡಿಸಿಕೊಂಡರೆ ಒಂದು ಬಾರಿಗೆ ಆಸ್ಪತ್ರೆಗೆ ಹೋಗುವ ಖರ್ಚು ಹಿಡಿದು 4000 ರೂ. ಬೇಕಾಗುತ್ತದೆ. ತಿಂಗಳಿಗೆ ಒಟ್ಟು 48 ಸಾವಿರ ಖರ್ಚು ಆಗುತ್ತದೆ. ಆದರೆ ಇಲ್ಲಿ ಉತ್ತಮ ಚಿಕಿತ್ಸೆ ನೀಡುತ್ತಿದ್ದು ನಮ್ಮ ಕೈಹಿಡಿದಿದೆ.
>
> ■ ಮಂಜಪ್ಪ ದ್ಯಾಮಪ್ಪ ಕಬ್ಬೇರ, ಡಯಾಲಿಸಿಸ್ ಚಿಕಿತ್ಸಕ

ಹೆಚ್ಚಿದ ಬಿಡಾಡಿ ಗೂಳಿಗಳ ಹಾವಳಿ

ಸೀತಲ ಓಲೇಕಾರ

ಗಜೇಂದ್ರಗಡ: ಬಿಡಾಡಿ ಗೂಳಿಗಳ ಹಾವಳಿ ಹೆಚ್ಚಾಗಿದ್ದು, ಗಜೇಂದ್ರಗಡ ಪುರಸಭೆ ಅಧಿಕಾರಿಗಳು ಮಾತ್ರ ಮೌನಕ್ಕೆ ಶರಣಾಗಿದ್ದಾರೆ. ಹಲವು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ, ಪ್ರಾಣಿಗಳನ್ನು ಹಿಡಿದು ಗೋಶಾಲೆಗಳಿಗೆ ಬಿಡುವ ಕೆಲಸವನ್ನು ಅಧಿಕಾರಿಗಳು ಮಾಡುತ್ತಿಲ್ಲ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ಪಟ್ಟಣದ ಪ್ರಮುಖ ರಸ್ತೆ ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿ ಬಿಡಾಡಿ ಗೂಳಿಗಳ ಹಾವಳಿ ಮಿತಿಮೀರಿದ್ದು, ಸಾರ್ವಜನಿಕರು ಹೈರಾಣಾಗಿದ್ದಾರೆ. ರಸ್ತೆಯ ಮಧ್ಯದಲ್ಲೇ ಗೂಳಿಗಳು ಪರಸ್ಪರ ಗುದ್ದಾಡುವುದರಿಂದ ಪಾದಚಾರಿಗಳು ಹಾಗೂ ವಾಹನ ಸವಾರರು ಜೀವಭಯದಲ್ಲಿ ಓಡಾಡುವಂತಾಗಿದೆ. ನಗರದ ಪ್ರಮುಖ ಮುಖ್ಯರಸ್ತೆಗಳಾದ ದುರ್ಗಾ ವೃತ್ತ, ಜೋಡು ರಸ್ತೆ, ಕೊಳ್ಳಿಯವರ ವೃತ್ತ, ಬಸ್‌ನಿಲ್ದಾಣದ ಆವರಣ ಹಾಗೂ ಮಾರುಕಟ್ಟೆ ಪ್ರದೇಶಗಳೇ



ಈ ಬಿಡಾಡಿ ಪ್ರಾಣಿಗಳ ಅಚ್ಚುಮೆಚ್ಚಿನ ತಾಣಗಳಾಗಿವೆ. ಗುಂಪು ಗುಂಪಾಗಿ ರಸ್ತೆಯಲ್ಲೇ ಬೀಡುಬಿಡುವ ಈ ಪ್ರಾಣಿಗಳು ಸಂಚಾರಕ್ಕೆ ತೀವ್ರ ಅಡ್ಡಿಪಡಿಸುತ್ತಿವೆ. ವಾಹನಗಳು ಹಾರ್ನ್ ಮಾಡಿದರೂ ಜಗ್ಗದ ಈ ಪ್ರಾಣಿಗಳು, ಏಕಾಏಕಿ ರಸ್ತೆಗೆ ನುಗ್ಗುವುದರಿಂದ ದ್ವಿಚಕ್ರ ವಾಹನ ಸವಾರರು ಕೆಳಗೆ ಬಿದ್ದು ಗಾಯಗೊಂಡಿರುವ ನಿದರ್ಶನಗಳು ಸಾಕಷ್ಟಿವೆ. ಕೊಳ್ಳಿಯವರ ವೃತ್ತದಲ್ಲಿನ ತರಕಾರಿ ವ್ಯಾಪಾರಸ್ಥರು, ಅಂಗಡಿ ಮುಂಗಟ್ಟುಗಳ ಮುಂದೆ ಪ್ರಾಣಿಗಳು ಗುದ್ದಾಡುವುದರಿಂದ ಸ್ವಲ್ಪ ಯಾಮಾರಿದರೂ ಹಣ್ಣು-ತರಕಾರಿ ಅಂಗಡಿಗಳಿಗೆ ನುಗ್ಗಿ ನಾಶಪಡಿಸುತ್ತಿವೆ. ಕೂಡಲೇ ಬಿಡಾಡಿ ಗೂಳಿಗಳನ್ನು ಹಿಡಿದು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕು. ಪ್ರಾಣಿಗಳನ್ನು ಬೀದಿಗೆ ಬಿಡುವ ಮಾಲೀಕರನ್ನು ಗುರುತಿಸಿ ಅವರಿಗೆ ಭಾರಿ ದಂಡ ವಿಧಿಸಬೇಕು ಎಂದು ಜನರು ಆಗ್ರಹಿಸಿದ್ದಾರೆ.

ಏಕಾಏಕಿ ದಾಳಿ

ಬಿಡಾಡಿ ಗೂಳಿಗಳಿಂದ ಶಿವಾಜಿ ಜಯಂತಿ ಸಂದರ್ಭದಲ್ಲಿ ಮಹಿಳೆಯರ ಗುಂಪಿನ ಮೇಲೆ ಏಕಾಏಕಿ ಬಿಡಾಡಿ ಗೂಳಿ ದಾಳಿ ಮಾಡಿತ್ತು. ಅದರಲ್ಲಿ ಓರ್ವ ಮಹಿಳೆಗೆ ಮಾರಣಾಂತಿಕ ಗಾಯಗಳಾಗಿದ್ದವು. ಕೊಳ್ಳಿಯವರ ವೃತ್ತದಲ್ಲಿ ಬಿಡಾಡಿ ಗೂಳಿಗಳ ಕಾಳಗದಿಂದ ಅನೇಕ ವಾಹನಗಳು ಜಖಂಗೊಂಡಿದ್ದು, ನಿತ್ಯವೂ ಇವರ ಕಾಳಗ ಸಾಮಾನ್ಯವಾಗಿದೆ. ಇದಕ್ಕೆ ಜಿಲ್ಲಾಡಳಿತ, ಪುರಸಭೆ ಅಧಿಕಾರಿಗಳು ಶಾಶ್ವತ ಪರಿಣಾಮ ನೀಡಬೇಕು. ಇಲ್ಲವಾದರೆ ಮುಂದೆ ಸಂಭವಿಸಬಹುದಾದ ದುರ್ಘಟನೆಗಳಿಗೆ ಜಿಲ್ಲಾಡಳಿತ, ಸ್ಥಳೀಯ ಆಡಳಿತ ಹೊಣೆ ಹೊರಬೇಕಾಗುತ್ತದೆ ಎಂದು ಕರ್ನಾಟಕ ಅಭಿವೃದ್ಧಿ ವೇದಿಕೆ ರಾಜ್ಯಾಧ್ಯಕ್ಷ ವಿನಾಯಕ ಜರತಾರಿ ಎಚ್ಚರಿಸಿದ್ದಾರೆ.

> ಬಿಡಾಡಿ ದನಗಳನ್ನು ಹಿಡಿಯಲು ಹಲವಾರು ಬಾರಿ ಪ್ರಯತ್ನ ಮಾಡಿದ್ದೇವೆ. ಅವುಗಳು ಹೆದರಿ ದಿಕ್ಕಾಪಾಲಾಗಿ ಸಾರ್ವಜನಿಕರ ಆಸ್ತಿ ಹಾನಿಯಾದ ಘಟನೆಯೂ ಇದೆ. ಅದಕ್ಕೆ ಈ ಹಿಂದಿನ ಆಡಳಿತ ಮಂಡಳಿಯಿದ್ದಾಗ ಬಿಡಾಡಿ ದನಗಳನ್ನು ದತ್ತು ತೆಗೆದುಕೊಳ್ಳುವ ಸಾರ್ವಜನಿಕ ಪ್ರಕಟಣೆ ನೀಡಿದ್ದವು. ಆದರೆ ಯಾರೂ ಮುಂದೆ ಬಂದಿಲ್ಲ,
>
> ■ ಬಸವರಾಜ ಬಳಗಾನೂರ, ಮುಖ್ಯಾಧಿಕಾರಿ, ಪುರಸಭೆ, ಗಜೇಂದ್ರಗಡ

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅಭಿಮತ

ಸ್ವಾವಲಂಬನೆಯಿಂದ ಆತ್ಮನಿರ್ಭರ ಭಾರತ

ಕಲಬುರಗಿ: ಭಾರತ ನಿರ್ಣಾಯಕ ಘಟ್ಟದಲ್ಲಿ ನಿಂತಿದೆ. ದೇಶದಪ್ರಧಾನಿನರೇಂದ್ರ ಮೋದಿಜಿಯವರ ವಿಕಸಿತ ಭಾರತದ ದೃಷ್ಟಿಕೋನವು ನಮ್ಮೆಲ್ಲರ ಒಗ್ಗಟ್ಟಿನ ರಾಷ್ಟ್ರೀಯ ಧ್ಯೇಯವಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಬುಧವಾರ ಕಲಬುರಗಿ ಆಳಂದ ರಸ್ತೆಯ ಕಡಗಂಚಿ ಬಳಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿ ಮಾತನಾಡಿದ ಅವರು, ವಿಕಸಿತ ಭಾರತದ ಈ ದೃಷ್ಟಿಕೋನವು ನಮ್ಮ ಯುವಕರನ್ನು ನಾವೀನ್ಯತೆ, ನಾಯಕತ್ವ ಮತ್ತು ಸಮಗ್ರತೆಯಿಂದ ವರ್ತಿಸುವಂತೆ ಕರೆ ನೀಡುತ್ತದೆ. ನೀವೆಲ್ಲರೂ ಈ ಪ್ರಯಾಣದಲ್ಲಿ ಪಾಲುದಾರರಾಗಿದ್ದು, ನೀವು ಬಿಟ್ಟು ಹೋಗುತ್ತಿರುವ ತರಗತಿಯ ಕೊಠಡಿಗಳು ರಾಷ್ಟ್ರ ನಿರ್ಮಾಣಕ್ಕೆ ನಿಮ್ಮನ್ನು ಸಿದ್ಧಪಡಿಸಿವೆ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವ

ಆತ್ಮನಿರ್ಭರ ಭಾರತ ಎಂದರೆ ಸ್ವಾವಲಂಬಿ ಭಾರತದ ಧ್ಯೇಯದಷ್ಟೇ ಮಹತ್ವದ್ದಾಗಿದೆ. ಸ್ವಂತ ಸಾಮರ್ಥ್ಯ ಬಳಸುವುದು, ನಾವೀನ್ಯತೆಯನ್ನು ಬೆಳೆಸುವುದು, ಸ್ಥಳೀಯ ಉದ್ಯಮವನ್ನು ಬೆಂಬಲಿಸುವುದು ಮತ್ತು ನಮ್ಮ ವಾಸ್ತವಿಕತೆಗೆ ಅಗತ್ಯವಾದ ಪರಿಹಾರಗಳನ್ನು ರಚಿಸುವುದರ ಜೊತೆಗೆ ಜಾಗತಿಕ ವೇದಿಕೆಯಲ್ಲಿ ಸ್ಪರ್ಧಾತ್ಮಕವಾಗಿರುವಂತೆ ನೋಡಿಕೊಳ್ಳಬೇಕು. ನೀವು ಉದ್ಯಮಿಗಳಾಗಿ, ಸಂಶೋಧಕರಾಗಿ, ನಿರ್ವಾಹಕರಾಗಿ ಅಥವಾ ವೃತ್ತಿಪರರಾಗಿ, ಏನೇ ಆದರೂ ಸ್ವಾವಲಂಬಿ ಪರಿಸರವ್ಯವಸ್ಥೆ ಬಲಪಡಿಸುವಲ್ಲಿ ನಿಮ್ಮ ಪಾತ್ರ ಬಹಳ ನಿರ್ಣಾಯಕವಾಗಿರುತ್ತದೆ ಎಂದು ಕಿವಿಮಾತು ಹೇಳಿದರು. ರಾಜ್ಯಪಾಲ ಥಾವರ್‌ಚಂದ ಗೆಹೆಲೋತ್ ಮಾತನಾಡಿ, ಜ್ಞಾನ ಮತ್ತು ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿರುವ ಯುಗದಲ್ಲಿ ವಿದ್ಯಾರ್ಥಿಗಳಿಗೆ ನಿರಂತರವಾಗಿ ಕಲಿಯುವ ಸಾಮರ್ಥ್ಯ, ನಾವೀನ್ಯತೆಯ ಮನಸ್ಥಿತಿ ಮತ್ತು ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆ ಅತ್ಯಗತ್ಯವಾಗಿದೆ. ವಿದ್ಯಾರ್ಥಿಗಳು ಜ್ಞಾನ ವೈಯಕ್ತಿಕ ಯಶಸ್ಸಿಗೆ ಮಾತ್ರವಲ್ಲದೆ ಸಮಾಜ ಮತ್ತು ರಾಷ್ಟ್ರದ ಉನ್ನತಿಗಾಗಿಯೂ ಬಳಸಬೇಕು.ನಮ್ಮ ದೇಶದ ಯುವ ಶಕ್ತಿ ನಮ್ಮ ದೊಡ್ಡ ಆಸ್ತಿ. ಸ್ವಾವಲಂಬಿ ಭಾರತ ನಿರ್ಮಿಸುವಲ್ಲಿ ಯುವಶಕ್ತಿಯ ಪಾತ್ರ ಅತ್ಯಂತ ಮುಖ್ಯವಾಗಿದೆ. ಎಲ್ಲಿಗೆ ಹೋದರೂ, ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ, ಶ್ರೇಷ್ಠತೆ, ಪ್ರಾಮಾಣಿಕತೆ ಮತ್ತು ಸೇವಾ ಮನೋಭಾವವು ಯುವಜನತೆಯ ಮಾರ್ಗದರ್ಶಿ ತತ್ವಗಳಾಗಿರಲಿ ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರು ವಾರ್ಷಿಕ ವರದಿ ಮಂಡಿಸಿದರು. ವೇದಿಕೆಯಲ್ಲಿ ಕುಲಸಚಿವ ಪ್ರೊ.ಆರ್.ಆರ್.ಬಿರಾದಾರ, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಭರತ್ ಕುಮಾರ್ ಸೇರಿದಂತೆ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಮಾಜಿ ಸಂಸದ ಬಸವರಾಜ್ ಪಾಟೀಲ್ ಸೇಡಂ, ಸಹಾಯಕ ರಿಜಿಸ್ಟರ್ ಶ್ರವಣ, ಪಿ.ಆರ್.ಓ ಡಾ.ಗಣಪತಿ ಸಿನ್ನೂರ, ಎ.ಪಿ.ಆರ್.ಓ ಡಾ.ಪ್ರಕಾಶ ಬಾಳಿಕಾಯಿ, ಡಾ.ಸಾಯಿಕೃಷ್ಣ, ಡಾ. ಶಾಮಲಾ, ಪ್ರೊ.ಬಸವರಾಜ ಕುಪ್ಪಕಡಿ, ಡಾ.ಜೋಹೆರ್, ಡಾ.ಶ್ರೀಲಕ್ಷ್ಮೀ ಸೇರಿ ವಿವಿಧ ನಿಕಾಯಗಳ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳು ಸೇರಿ ಅನೇಕರು ಉಪಸ್ಥಿತರಿದ್ದರು.



769 ಅಭ್ಯರ್ಥಿಗಳಿಗೆ ಪದವಿ ಪ್ರದಾನ

ಇಲ್ಲಿನ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ವಿವಿಧ ವಿಭಾಗಗಳ ಒಟ್ಟು 769 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇದರಲ್ಲಿ 197 ಅಭ್ಯರ್ಥಿಗಳು ಪದವಿ, 547 ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ, 24 ಜನ ಪಿಎಚ್.ಡಿ ಹಾಗೂ ಓರ್ವ ಅಭ್ಯರ್ಥಿ ಎಂ.ಫಿಲ್ ಪದವಿ ಸ್ವೀಕರಿಸಿದರು. ಶೈಕ್ಷಣಿಕ ಸಾಧನೆ ಮಾಡಿದ ವಿವಿಧ ನಿಕಾಯಗಳ 23 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು.

ತಂದೆ ಸಾವು: ಗೋಲ್ಡ್ ಮೆಡಲಿಸ್ಟ್ ಗೈರು

ಪ್ರೊ.ಎ.ಎಂ. ಪಠಾಣ್ ಚಿನ್ನದ ಪದಕ ವಿಜೇತ, ಮಧ್ಯಪ್ರದೇಶ ಉಜ್ಜೈನ್ ಮೂಲದ ಬಿ.ಟೆಕ್ ವಿದ್ಯಾರ್ಥಿ ದಿವ್ಯಾಂಶು ಸಕ್ಸೇನಾ ಅವರ ತಂದೆ-ತಾಯಿ ಕಲಬುರಗಿಯ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲು ಆಗಮಿಸುತ್ತಿದ್ದ ಸಮಯದಲ್ಲಿ ಅಪಘಾತ ಸಂಭವಿಸಿ ಸ್ಥಳದಲ್ಲೇ ಅವರ ತಂದೆ ಶಿವಕುಮಾರ್ ಸಕ್ಸೇನಾ (59) ಮೃತಪಟ್ಟ ಹಿನ್ನೆಲೆ ದಿವ್ಯಾಂಶು ಘಟಿಕೋತ್ಸವ ಸಮಾರಂಭಕ್ಕೆ ಗೈರಾಗಿದ ಪ್ರಸಂಗ ನಡೆಯಿತು.

ಪರಿಸರ ಸಂರಕ್ಷಣೆ ಅಭಿವೃದ್ಧಿಯಷ್ಟೇ ಮುಖ್ಯವಾಗಿದೆ. ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ ಅಂದರೆ, ಒಬ್ಬ ವ್ಯಕ್ತಿಗೆ ತನ್ನ ಕೆಲಸ ಮಾಡುವ ಹಕ್ಕಿದೆ. ಆದರೆ, ಅದರ ಫಲಿತಾಂಶಗಳ ಬಗ್ಗೆ ಚಿಂತಿಸಬಾರದು. ಸರಳವಾಗಿ ಹೇಳುವುದಾದರೆ, ನಿಮ್ಮ ಕೆಲಸವನ್ನು ಸಂಪೂರ್ಣ ಸಮರ್ಪಣೆಯಿಂದ ಮಾಡಿ ಫಲಿತಾಂಶ ಬಗ್ಗೆ ಚಿಂತಿಸಬೇಡಿ. ಜ್ಞಾನವನ್ನು ಸಮಾಜದ ಕಲ್ಯಾಣಕ್ಕಾಗಿ ಉಪಯೋಗಿಸಿಕೊಳ್ಳಿ.

■ ಥಾವರ್‌ಚಂದ್ ಗೆಹೆಲೋತ್, ರಾಜ್ಯಪಾಲ

ಕಳೆದ ವರ್ಷದ ಪಹಲ್ಗಾಂ ಅಟ್ಯಾಕ್ ನಂತರ ನಡೆದ ಆಪರೇಷನ್ ಸಿಂದೂರ ಕಾರ್ಯಚರಣೆಯಲ್ಲಿ ಪಾಕ್ ಮೇಲೆ ಯುದ್ಧ ಸಾರಿದವರಲ್ಲಿ ಮೂವರು ಮಹಿಳಾ ಪೈಲೆಟ್‌ಗಳು ಇದ್ದರು. ಭಯೋತ್ಪಾದನೆ ವಿರುದ್ಧ ನಮ್ಮ ಸಮರ ಮುಂದುವರಿಯಲಿದೆ.

■ ಸಿ.ಪಿ. ರಾಧಾಕೃಷ್ಣನ್, ಉಪ ರಾಷ್ಟ್ರಪತಿ

ಗುರಿಕಾರ ದೊಡ್ಡಿ ಜನರ ನೋವಿಗೆ ಸ್ಪಂದನೆ ಅಗತ್ಯ। ಕತ್ತಲೆ ಬದುಕಿಗೆ ಬೆಳಕು ಯಾವಾಗ?

70 ವರ್ಷಗಳಿಂದ ವಿದ್ಯುತ್ ಸಂಪರ್ಕವಿಲ್ಲ!

▸ ಮಲ್ಲಿಕಾರ್ಜುನ ಗುತ್ತೇದಾರ

ಹುಣಸಗಿ: ತಾಲೂಕಿನ ವಜ್ಜಲ್ ಗ್ರಾಮ ಪಂಚಾಯತ ವ್ಯಾಪ್ತಿಗೆ ಒಳಪಡುವ ಮಂಜಲಾಪೂರಹಳ್ಳಿಯ ಗುರಿಕಾರ ದೊಡ್ಡಿಯಲ್ಲಿನ ಜನರು ಸುಮಾರು 70 ವರ್ಷಗಳಿಂದ ವಿದ್ಯುತ್ ಸಂಪರ್ಕವಿಲ್ಲದೆ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ.

ದಿಗಂತ ವಿಶೇಷ

ತಂತ್ರಜ್ಞಾನ ಯುಗದಲ್ಲಿ ದೇಶವೇ ಬೆಳಕಿನ ದಾರಿಯಲ್ಲಿ ಮುನ್ನಡೆಯುತ್ತಿದ್ದರೂ, ಈ ದೊಡ್ಡಿಯ ಜನರು ಇನ್ನೂ ಕತ್ತಲೆಯಲ್ಲೇ ಬದುಕುತ್ತಿರುವುದು ದುರಂತಕರ ಸಂಗತಿಯಾಗಿದೆ.

ವಿದ್ಯುತ್ ಇಲ್ಲದ ಕಾರಣ ಅಲ್ಲಿನ ಮಕ್ಕಳ ವಿದ್ಯಾಭ್ಯಾಸ ಗಂಭೀರವಾಗಿ ಹಿಂದುಳಿದಿದೆ. ರಾತ್ರಿ ವೇಳೆ ಬೆಳಕಿನ ಕೊರತೆಯಿಂದ ಓದಲು ಸಾಧ್ಯವಾಗದೆ, ಅವರ ಭವಿಷ್ಯವೇ ಕತ್ತಲೆಯೊಳಗೆ ಮುಳುಗುತ್ತಿದೆ. ಇನ್ನು ವಯೋವೃದ್ಧರು ರಾತ್ರಿ ಸಂಚರಿಸಲು ಸಾಧ್ಯವಾಗದೇ ತೊಂದರೆ ಅನುಭವಿಸುತ್ತಿದ್ದಾರೆ. ಇವರ ವಾಸಸ್ಥಾನ ಮಡ್ಡಿ ಪ್ರದೇಶದಲ್ಲಿರುವುದರಿಂದ ವಿಷ ಜಂತುಗಳ ಭೀತಿ ಸದಾ ಕಾಡುತ್ತಿದ್ದು, ಜನರ ಬದುಕು ಅಪಾಯದಲ್ಲಿದೆ.

ಈ ದುಸ್ಥಿತಿಯ ನಡುವೆಯೇ ನಡೆದ ದುರ್ಘಟನೆ ಒಂದು ಗ್ರಾಮಸ್ಥರ ಕಣ್ಣೀರನ್ನು ಹೆಚ್ಚಿಸಿದೆ. ರಾತ್ರಿ ವೇಳೆ ದಾರಿ ಕಾಣದೆ ಕಾಲುವೆಗೆ ಬಿದ್ದ ವೃದ್ಧನೊಬ್ಬ ಮೃತಪಟ್ಟ ಘಟನೆ, ಮೂಲಭೂತ ಸೌಕರ್ಯಗಳ ಕೊರತೆಯ ಕ್ರೂರ ಮುಖವನ್ನು ತೋರಿಸುತ್ತದೆ.

ಗ್ರಾಮದ ಜನರು ಹಲವು ಬಾರಿ ಜನಪ್ರತಿನಿಧಿಗಳ ಬಳಿ ಮನವಿ ಸಲ್ಲಿಸಿದ್ದರೂ, ಪ್ರತಿ ಬಾರಿ ಚುನಾವಣೆ ಸಮಯದಲ್ಲಿ ಮಾತ್ರ ಆಶ್ವಾಸನೆಗಳು ಸಿಗುತ್ತಿವೆ ಹೊರತು ಯಾವುದೇ ಕಾರ್ಯ ರೂಪಕ್ಕೆ ಬಂದಿಲ್ಲ ಎಂಬುದು ಗ್ರಾಮಸ್ಥರ ಆಕ್ರೋಶವಾಗಿದೆ. ವಿದ್ಯುತ್ ಸಂಪರ್ಕಕ್ಕಾಗಿ ಜನರು ತಮ್ಮದೇ ಹಣವನ್ನು ಸಂಗ್ರಹಿಸಿ, ಜೆಸ್ಕಾಂ ಗುತ್ತಿಗೆದಾರರ ಮೂಲಕ ಪ್ರಯತ್ನಿಸಿದರೂ, ಕಾಮಗಾರಿ ಅರ್ಧದಲ್ಲೇ ನಿಂತಿದೆ. ಕಂಬಗಳನ್ನು ನೆಟ್ಟಿರುವುದೇ ಹೊರತು ವಿದ್ಯುತ್ ಸಂಪರ್ಕ ಇನ್ನೂ ಲಭ್ಯವಾಗಿಲ್ಲ.

ಅಧಿಕಾರಿಗಳು ಸರಕಾರದ ಬಜೆಟ್ ಬಂದ ಬಳಿಕ ಕಾಮಗಾರಿ ಪೂರ್ಣಗೊಳಿಸುತ್ತೇವೆ ಎಂಬ ನೆಪ ಹೇಳುತ್ತಿರುವುದು ಗ್ರಾಮಸ್ಥರ ನಿರಾಶೆಯನ್ನು ಮತ್ತಷ್ಟು ಗಾಢಗೊಳಿಸಿದೆ. ವಿದ್ಯುತ್ ಸೌಲಭ್ಯ ದೊರೆತರೆ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ಸಿಗುತ್ತದೆ. ಮಕ್ಕಳಿಗೆ ಉತ್ತಮ ಶಿಕ್ಷಣದ ಅವಕಾಶಗಳು ದೊರೆಯುತ್ತವೆ. ಆರೋಗ್ಯದ ದೃಷ್ಟಿಯಿಂದಲೂ ಉತ್ತಮ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬ ಆಶಯ ಗುರಿಕಾರ ದೊಡ್ಡಿಯ ಜನರಲ್ಲಿ ಜೀವಂತವಾಗಿದೆ.

ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮಾನವೀಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಶೀಘ್ರದಲ್ಲಿ ವಿದ್ಯುತ್ ಸಂಪರ್ಕ ಒದಗಿಸಬೇಕೆಂಬುದು ಗ್ರಾಮಸ್ಥರ ಮನವಿ.



ಕತ್ತಲೆಯ ಬದುಕಿನಿಂದ ಬೆಳಕಿನ ದಾರಿಗೆ ಗುರಿಕಾರ ದೊಡ್ಡಿಯನ್ನು ಕೊಂಡೊಯ್ಯುವುದು ಸರ್ಕಾರದ ಮತ್ತು ಸಮಾಜದ ಜವಾಬ್ದಾರಿಯಾಗಿದೆ. ಅನುದಾನದ ಕೊರತೆಯಿಂದ ಕೆಲವೊಂದು ಗ್ರಾಮಗಳ ವಿದ್ಯುತ್ ಕಾಮಗಾರಿ ಬಾಕಿ ಉಳಿದಿವೆ. ಅನುದಾನ ಬಂದ ಕೂಡಲೇ ಸದರಿ ಗ್ರಾಮಕ್ಕೆ ವಿದ್ಯುತ್ ಸೌಲಭ್ಯ ಒದಗಿಸಲಾಗುವುದು.

■ ರಾಜಶೇಖರ, ಜೆಸ್ಕಾಂ ಇಇ ಸುರಪೂರ ವಿಭಾಗ

ಗುರಿಕಾರ ದೊಡ್ಡಿಯ ಜನತೆಯ ಸಮಸ್ಯೆ ನನ್ನ ಗಮನಕ್ಕೆ ಇದೆ. ಅಲ್ಲಿನ ಕುಟುಂಬಗಳಿಗೆ ವಿಶೇಷ ಅನುದಾನದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಈಗಾಗಲೇ ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದ್ದೇನೆ.

■ ರಾಜಾ ವೇಣುಗೋಪಾಲ ನಾಯಕ, ಶಾಸಕ ಸುರಪೂರ ಮತಕ್ಷೇತ್ರ

300ಕ್ಕೂ ಹೆಚ್ಚು ಅಡಿಕೆ ಮರಗಳು ಬೆಂಕಿಗಾಹುತಿ

ಸಿದ್ದಾಪುರ: ತಾಲೂಕಿನ ಅಣಲೇಬೈಲ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬುಧವಾರ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ರೈತರೊಬ್ಬರ ಬದುಕಿನ ಆಧಾರವಾಗಿದ್ದ ಅಡಿಕೆ ತೋಟ ಸಂಪೂರ್ಣ ನಾಶವಾಗಿದ್ದಾಗಿ ವರದಿಯಾಗಿದೆ. ಹೆಗ್ನೂರ ನಿವಾಸಿ ಸದಾನಂದ ಹೆಗಡೆ ಎಂಬುವವರಿಗೆ ಸೇರಿದ ಅಡಿಕೆ ತೋಟದಲ್ಲಿ ಬುಧವಾರ ಮಧ್ಯಾಹ್ನದ ವೇಳೆಗೆ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಕ್ಷಣಾರ್ಧದಲ್ಲಿ ತೋಟದಾದ್ಯಂತ ವ್ಯಾಪಿಸಿದ ಬೆಂಕಿಯು ಭೀಕರ ರೂಪ ತಾಳಿದೆ. ಈ ದುರ್ಘಟನೆಯಲ್ಲಿ ಸುಮಾರು 300ಕ್ಕೂ ಹೆಚ್ಚು ಫಸಲು ನೀಡುವ ಅಡಿಕೆ ಮರಗಳು ಹಾಗೂ ಹೊಸದಾಗಿ ನೆಡಲಾಗಿದ್ದ ಗಿಡಗಳು ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಸುಟ್ಟು ಕರಕಲಾಗಿವೆ ಎಂದು ತಿಳಿದುಬಂದಿದೆ.



ಕಿರುಸುದ್ದಿ

ಲೋಕಾ ದಾಳಿ: ಬಂಧನ

ಕಲಬುರಗಿ: ಕರ್ನಾಟಕ ಲೋಕಾಯುಕ್ತ ಮಾರ್ಗದರ್ಶನದಲ್ಲಿ ಜಿಲ್ಲೆಯ ಯಡ್ರಾಮಿ ತಾಲೂಕಿನ ಮಳ್ಳಿ ಗ್ರಾಮ ಪಂಚಾಯತಿಯಲ್ಲಿ ಭ್ರಷ್ಟಾಚಾರದ ವಿರುದ್ಧ ನಡೆದ ದಾಳಿಯಲ್ಲಿ ಕಂಪ್ಯೂಟರ್ ಆಪರೇಟರ್ ಬಂದೇನವಾಜ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ದೂರುದಾರ ಮಲ್ಲಿಕಾರ್ಜುನ್ (ಮಳ್ಳಿ ಗ್ರಾಮ, ಯಡ್ರಾಮಿ ತಾಲೂಕು, ಕಲಬುರಗಿ ಜಿಲ್ಲೆ) ನೀಡಿದ ದೂರಿನ ಮೇರೆಗೆ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ದೂರು ಪ್ರಕಾರ, ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆ ಸಹಾಯಧನ ಬಿಡುಗಡೆ ಮಾಡಲು ಬಂದೇನವಾಜ್ ಅವರು ರೂ. 20,000 ಲಂಚಕ್ಕೆ ಬೇಡಿಕೆ ಇಟ್ಟು, ಬಳಿಕ ರೂ. 10,000ಕ್ಕೆ ಒಪ್ಪಿಕೊಂಡಿದ್ದರು ಎನ್ನಲಾಗಿದೆ. ಇದಲ್ಲದೆ, ಆರೋಪಿಯು ರೂ. 5,000 ನಗದು ರೂಪದಲ್ಲಿ ಹಾಗೂ ರೂ. 3,000ನ್ನು ಫೋನ್ ಪೇ ಮೂಲಕ ಸ್ವೀಕರಿಸಿದ್ದಾನೆ ಎಂದು ತಿಳಿದುಬಂದಿದೆ. ಲೋಕಾಯುಕ್ತ ತನಿಖಾಧಿಕಾರಿಯಾದ ಪೊಲೀಸ್ ಇನ್ಸ್‌ಪೆಕ್ಟರ್ ಅರುಣ್ ಕುಮಾರ್ ಮುರುಗುಂಡಿ ನೇತೃತ್ವದಲ್ಲಿ ಈ ದಾಳಿ ನಡೆದಿದ್ದು, ಆರೋಪಿಯನ್ನು ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಳ್ಳಲಾಗಿದೆ. ತನಿಖೆ ಪೂರ್ಣಗೊಂಡ ಬಳಿಕ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಒಂಟೆ ಸಾಗಿಸುತ್ತಿದ್ದವರ ಬಂಧನ

ಭಟ್ಕಳ: ತಾಲೂಕಿನ ಶಿರಾಲಿ ಚೆಕ್‌ಪೋಸ್ಟ್ ಬಳಿ ಅಕ್ರಮ ಒಂಟೆ ಸಾಗಾಟ ವೇಳೆ ದಾಳಿ ನಡೆಸಿದ ಗ್ರಾಮೀಣ ಠಾಣಾ ಪೊಲೀಸರು ವಾಹನ ಸಮೇತ ಒಂಟೆಯನ್ನು ವಶಪಡಿಸಿಕೊಂಡು ಮೂವರ ಮೇಲೆ ಕೇಸ್ ದಾಖಲಿಸಿದ್ದಾರೆ.

ಮಧ್ಯಪ್ರದೇಶ ರಾಜ್ಯದ ಬರ್ವಾನಿ ಜಿಲ್ಲೆಯ ಸುಧಾಮ ನಗರ ನಿವಾಸಿ ಕರಣ ಬಾಬರ ಭೀಮರಾಮ ಬಾಬರ (26), ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಶಿರೋಡ್ ನಿವಾಸಿಗಳಾದ ಸುಹಾಸ್ ಸಂತೋಶ ಸೂರ್ಯವಂಶಿ ಹಾಗೂ ಯಶ ಭಾಗೇಶಗೋಟ ಕಿಂಡೆ(19) ಆರೋಪಿಗಳು.

ಆರೋಪಿಗಳು ಅಂದಾಜು 3.75 ಲಕ್ಷ ಮೌಲ್ಯದ 8 ಒಂಟೆಗಳನ್ನು ಯಾವುದೇ ಪರವಾನಿಗೆ ಇಲ್ಲದೆ ಹಿಂಸಾತ್ಮಕವಾಗಿ ಶಿರಾಲಿಯಿಂದ ಉಳ್ಳಾಲದ ಕಡೆಗೆ ಲಾರಿಯಲ್ಲಿ ಸಾಗಾಟ ಮಾಡುವಾಗ ಗ್ರಾಮೀಣ ಠಾಣಾ ಪೊಲೀಸರು ದಾಳಿ ನಡೆಸಿ ವಶಪಡಿಸಿಕೊಂಡಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಸಿಲಿನ ತಾಪಕ್ಕೆ ಹಣ್ಣಿನ ವ್ಯಾಪಾರಿ ಸಾವು

ಕೊಲ್ಹಾರ: ಬಿಸಿಲಿನ ತಾಪ ಹೆಚ್ಚಳದಿಂದಾಗಿ ಪಟ್ಟಣದ ಸಂತೆ ಮಾರುಕಟ್ಟೆಯ ಹತ್ತಿರ ಹೀಟ್ ಸ್ಟ್ರೋಕ್‌ನಿಂದಾಗಿ ವ್ಯಕ್ತಿಯೋರ್ವ ಮೃತಪಟ್ಟಿರುವ ಘಟನೆ ನಡೆದಿದೆ. ಮೃತರನ್ನು ವಿಜಯಪುರದ ನಿವಾಸಿ ಹಣ್ಣು ವ್ಯಾಪಾರಿ ಅಬ್ದುಲ್‌ರೆಹಮಾನ್ ಮಹಮ್ಮದ್ ಹುಸೇನ್ ಕೋಲ್ಹಾಪುರ (45) ಎಂದು ಗುರುತಿಸಲಾಗಿದೆ. ಬುಧವಾರ ಪಟ್ಟಣದಲ್ಲಿ ಸಂತೆ ಇರುವದರಿಂದ ಸಂತೆಯಲ್ಲಿ ಬೆಳಗ್ಗೆಯಿಂದ ಮಾವಿನಹಣ್ಣು ಮಾರುತ್ತಿದ್ದ ಸಾಯಂಕಾಲ 5 ಗಂಟೆಗೆ ಮೂತ್ರ ವಿಸರ್ಜನೆ ಮಾಡಿ ನೀರು ಕುಡಿದು ಬರುವಾಗ ವ್ಯಕ್ತಿ ಏಕಾಏಕಿ ಕುಸಿದು ಬಿದ್ದಿದ್ದು, ಸ್ಥಳೀಯರು ತಕ್ಷಣ ನೆರವಿಗೆ ಧಾವಿಸಿದರೂ, ಹೀಟ್ ಸ್ಟ್ರೋಕ್‌ನಿಂದಾಗಿ ಅಥವಾ ಹೃದಯಾಘಾತದಿಂದ ಸ್ಥಳದಲ್ಲೇ ಮೃತಪಟ್ಟಿರಬಹುದು ಎಂದು ತಿಳಿದುಬಂದಿದೆ. ಕೊಲ್ಹಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮೀಸಲಾತಿ ಭಿಕ್ಷೆಯಲ್ಲ ಹಕ್ಕು: ವಿ.ಎಸ್.ಉಗ್ರಪ್ಪ



ಬೆಳಗಾವಿ : ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಮೀಸಲಾತಿ ವಿಚಾರದಲ್ಲಿ ಸಮಗ್ರ ಚಿಂತನೆ ಅಗತ್ಯವಿದ್ದು, ಸರ್ಕಾರವು ತಕ್ಷಣ ಸರ್ವಪಕ್ಷ ಸಭೆ ಕರೆದು ಸಾಮಾಜಿಕ ನ್ಯಾಯದ ಕುರಿತು ಗಂಭೀರ ಚರ್ಚೆ ನಡೆಸಬೇಕು ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಹೇಳಿದರು.

ನಗರದಲ್ಲಿ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ ಮೀಸಲಾತಿ ವಿಚಾರದ ಚಿಂತನ ಮಂಥನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೀಸಲಾತಿ ಯಾವುದೋ ಭಿಕ್ಷೆ ಅಲ್ಲ, ಅದು ಸಂವಿಧಾನಬದ್ಧ ಹಕ್ಕು. ಶತಮಾನಗಳ ಸಾಮಾಜಿಕ ಅನ್ಯಾಯವನ್ನು ಸರಿಪಡಿಸಲು ರೂಪುಗೊಂಡ ವ್ಯವಸ್ಥೆಯಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮೀಸಲಾತಿ ಸಂಬಂಧ ಹಲವು ಗೊಂದಲಗಳು, ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಘಟನೆಗಳು ಮತ್ತು ತಜ್ಞರು ಒಂದೇ ವೇದಿಕೆಯಲ್ಲಿ ಸೇರಿ ಸ್ಪಷ್ಟ ನಿಲುವು ತೆಗೆದುಕೊಳ್ಳುವುದು ಅತ್ಯಾವಶ್ಯಕ ಎಂದು ಅವರು ತಿಳಿಸಿದರು.

ಸಾಮಾಜಿಕ ನ್ಯಾಯವನ್ನು ಬಲಪಡಿಸುವ ದಿಕ್ಕಿನಲ್ಲಿ ಸರ್ಕಾರ ಸಮಗ್ರ ನೀತಿಗಳನ್ನು ರೂಪಿಸಬೇಕಾಗಿದ್ದು, ಪರಿಶಿಷ್ಟ ವರ್ಗಗಳ ಹಕ್ಕುಗಳನ್ನು ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದರು. ಸಾಮಾಜಿಕ ಸಮಾನತೆ ಮತ್ತು ಅವಕಾಶಗಳ ಸಮಾನ ಹಂಚಿಕೆ ದೇಶದ ಅಭಿವೃದ್ಧಿಗೆ ಮೂಲಭೂತ ಅಂಶಗಳಾಗಿವೆ ಎಂದು ಉಗ್ರಪ್ಪ ಹೇಳಿದರು.

ಈ ವೇಳೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಹಲವು ಮುಖಂಡರುಗಳು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಜೆಇಇ ಪರೀಕ್ಷೆ: ಅರ್ಜುನ್ ಕಾಲೇಜು ಪ್ರಥಮ

ಧಾರವಾಡ: ರಾಷ್ಟ್ರೀಯ ಪರೀಕ್ಷಾ ಮಂಡಳಿ ನಡೆಸುವ ಜೆಇಇ ದ್ವಿತೀಯ ಆವೃತ್ತಿ ಪರೀಕ್ಷೆಯಲ್ಲಿ ಧಾರವಾಡದ ಅರ್ಜುನ್ ವಿಜ್ಞಾನ ಪದವಿ-ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಅಮೋಘ ಸಾಧನೆಯಿಂದಾಗಿ ಉತ್ತರ ಕರ್ನಾಟಕಕ್ಕೆ ಪ್ರಥಮ ಸ್ಥಾನ ಪಡೆದಿದೆ.

ಶೇ.99.90 ಪ್ರತಿಶತ ಅಂಕ ಪಡೆದ ಅಲ್ಮೋಲ್ಲಭು ಉತ್ತರ ಕರ್ನಾಟಕಕ್ಕೆ ಪ್ರಥಮ ಸ್ಥಾನ ಹಾಗೂ ಅಖಿಲ ಭಾರತ ರ್‍ಯಾಂಕಿಂಗ್‌ನಲ್ಲಿ 1705ನೇ ಸ್ಥಾನ ಪಡೆಯುವ ಮೂಲಕ ಕೀರ್ತಿ ಹೆಚ್ಚಿಸಿದ್ದಾನೆ.


ದಾಜೋಶಿ ಶೇ.99.84 (ಎಐಆರ್2688), ದರ್ಶನ್ ಭಟ್ ಶೇ.99.60 (ಎಐಆರ್ 6468, ಇಡಬ್ಲ್ಯುಎಸ್ 760), ಅವಿನಾಶ ನಾಯ್ಕ ಶೇ.99.56 (ಎಐಆರ್ 7076, ಓಬಿಸಿ 1596) ರ್‍ಯಾಂಕ್ ಪಡೆಯುವುದಕ್ಕೆ ಸಂಸ್ಥೆ ಹೆಮ್ಮೆ ವ್ಯಕ್ತಪಡಿಸಿದೆ.

ಧ್ರುವಂತ ಎಸ್.ಎಂ. ಶೇ.98.52, ವಿನೀತ ಚವ್ಹಾಣ ಶೇ.98.04, ಆಕಾಶ ರಾಥೋಡ್ 97.61, ಪ್ರೀಥಮ್ 96.46, ಕಾರ್ತಿಕ ಭಜಂತ್ರಿ 96.38, ಈಶ್ಯಾನ್ ಶ್ಯಾನಭಾಗ್ ಶೇ.96.08, ನಂದನ ಹೆಗಡೆ ಶೇ.95.39, ರಜತ ಭಟ್ 95.36 ಅಂಕ ಪಡೆದಿದ್ದಾರೆ.

ಸೃಜನಾ ಪಾಟೀಲ 94.62, ಪ್ರಣತಿ ಮೆಣಸುಮನೆ ಶೇ.94.37, ಸಿಂಚನಾ ಭಟ್ ಶೇ.93.92, ಭಾರ್ಗವಿ ಹೆಬ್ಬಾರ್ 93.62, ಪ್ರಗತಿ ನರೋಣಿ ಶೇ.93.40, ಅನನ್ಯ ಪೂಜಾರ್ 93.11, ನಿಹಾಲ್ ಶೇ.92.30, ಸುಶಾಂತ ನಾಯ್ಕ ಶೇ.92.23 ಅಂಕ ಗಳಿಸಿದ್ದಾರೆ.

ಪೂರ್ವಿ ಹೆಗಡೆ ಶೇ.92.04, ಪ್ರತಮ್ ಯಡಳ್ಳಿ ಶೇ.91.70, ಮಾನಸ ದೇಶಪಾಂಡೆ ಶೇ.91.52, ಆದರ್ಶ ಭಟ್ ಶೇ.91.44 ಹಾಗೂ ಅಪೂರ್ವ ಹೆಗಡೆ ಶೇ.90.14, ಸಚಿನ್ ಜೋಶಿ ಶೇ.90.85, ನಿಶಾಂತ ಶೇ.90.62ರಂದು ಅಂಕ ಪಡೆದಿದ್ದಾರೆ.

ಶೇ.99ಕ್ಕಿಂತ ಹೆಚ್ಚು 4 ವಿದ್ಯಾರ್ಥಿಗಳು, ಶೇ.95ಕ್ಕಿಂತ 12 ವಿದ್ಯಾರ್ಥಿಗಳು, ಶೇ.90ಕ್ಕಿಂತ ಹೆಚ್ಚು 28 ವಿದ್ಯಾರ್ಥಿಗಳು, ಶೇ.85ಕ್ಕಿಂತ ಹೆಚ್ಚು 50 ಜನ ವಿದ್ಯಾರ್ಥಿಗಳು ಫಲಿತಾಂಶ ದಾಖಲಿಸುವ ಮೂಲಕ ವಿದ್ಯಾ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಸಾಧಕ ವಿದ್ಯಾರ್ಥಿಗಳಿಗೆ ಸಂಸ್ಥೆ ಪ್ರಾಚಾರ್ಯರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.



ಮರುಳಸಿದ್ದೇಶ್ವರ ಸ್ವಾಮಿ ಶಿಖರ ತೈಲಾಭಿಷೇಕ

ಕೊಟ್ಟೂರು (ವಿಜಯನಗರ ಜಿಲ್ಲೆ): ಪ್ರಸಿದ್ಧ ಪಂಚಪೀಠಗಳಲ್ಲೊಂದಾದ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ಮರುಳಸಿದ್ದೇಶ್ವರ ಸ್ವಾಮಿ ಶಿಖರ ತೈಲಾಭಿಷೇಕ ಬುಧವಾರ ಸಂಜೆ ಸಡಗರ ಸಂಭ್ರಮದಿಂದ ಜರುಗಿತು.

ದಕ್ಷಿಣ ಭಾರತದಲ್ಲಿಯೇ ವಿಶಿಷ್ಟವಾಗಿ ನಡೆಯುವ ಗರ್ಭಗುಡಿಯ ಶಿಖರ ತೈಲಾಭಿಷೇಕವನ್ನು ವೀಕ್ಷಿಸಲು ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಅಸಂಖ್ಯ ಭಕ್ತರು ಆಗಮಿಸಿದ್ದರು.

ಸಂಪ್ರದಾಯದಂತೆ ಕೂಡ್ಲಿಗಿ ತಾಲೂಕಿನ ಜರ್ಮಲಿ ಗ್ರಾಮದ ಪಾಳೆಗಾರರ ವಂಶಸ್ಥರು ತೈಲ ಕುಂಭವನ್ನು ಹೊತ್ತು ಸಕಲ ಮಂಗಳವಾದ್ಯಗಳೊಂದಿಗೆ ಪಾದಯಾತ್ರೆಯ ಮೂಲಕ ಪೀಠದ ದ್ವಾರಬಾಗಿಲಿಗೆ ಬಂದಾಗ ಪೀಠಾಧೀಶರ ನೇತೃತ್ವದಲ್ಲಿ ಅರ್ಚಕ ಬಳಗ ಪಾಳೆಗಾರರನ್ನು ಸ್ವಾಗತಿಸಿ, ತೈಲ ಕುಂಭಕ್ಕೆ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಕುಂಭವನ್ನು ಸ್ವೀಕರಿಸಿದರು. ಪಾಳೇಗಾರರು ತಂದ ಕುಂಭದ ತೈಲವನ್ನು ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿಸಿ ಶಿಖರಕ್ಕೆ ಎರೆಯುತ್ತಿದ್ದಂತೆ ಭಕ್ತರ ಜಯಘೋಷ ಮೊಳಗಿತು. ನಂತರ ಹರಕೆ ಹೊತ್ತ ಭಕ್ತರು ತಂದ ತೈಲವನ್ನು ಶಿಖರಕ್ಕೆ ಎರೆಯುತ್ತಿದ್ದಂತೆ ನೆರದ ಭಕ್ತರು ಬಾಳೆಹಣ್ಣು, ಉತ್ತತ್ತಿ ಹಾಗೂ ದವನ ತೂರಿ ಭಕ್ತಿ ಸಮರ್ಪಿಸಿದರು.

ಬೆಳಗಿನ ಜಾವದಿಂದ ಭಕ್ತರು ಸರತಿ ಸಾಲಿನಲ್ಲಿ ಆಗಮಿಸಿ ಮರುಳಸಿದ್ದೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ ನಂತರ ಪೀಠಾಧೀಶರ ಆಶೀರ್ವಾದ ಪಡೆದರು. ಪೀಠಾಧೀಶರಾದ ಸಿದ್ಧಲಿಂಗ ಶಿವಾಚಾರ್ಯರು, ವಿವಿಧ ಮಠಾಧೀಶರುಗಳು ಹಾಗೂ ಮುಖಂಡರು ಹಾಜರಿದ್ದರು.



ಖಾಲಿ ಕೊಡ ಹಿಡಿದು ಸಚಿವರ ಎದುರು ಪ್ರತಿಭಟನೆ



ಕನಕಗಿರಿ : ತಾಲೂಕಿನ ನವಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬುಧವಾರ ವಿವಿಧ ಕಾಮಗಾರಿಗಳ ಭೂಮಿ ಪೂಜೆ ನೆರವೇರಿಸಿ ತೆರಳುತ್ತಿರುವಾಗ ಸಂಕನಾಳ ಗ್ರಾಮದ ಮಹಿಳೆಯರು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ವಾಹನ ಅಡ್ಡಗಟ್ಟಿ ಖಾಲಿ ಕೊಡ ಹಿಡಿದು ನೀರು ಕೊಡಿ ಎಂದು ಆಗ್ರಹಿಸಿದರು.

ಈ ಗ್ರಾಮದಲ್ಲಿ ನೂರಕ್ಕು ಹೆಚ್ಚು ಮನೆಗಳು ಇವೆ ಅಲವು ಭಾರಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗಿಲ್ಲ, ಗ್ರಾಮೀಣ ಭಾಗದಲ್ಲಿ ತೀವ್ರಗೊಂಡಿರುವ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಅಳಲು ತೊಡಗಿಕೊಂಡರು.

ಗ್ರಾಮಸ್ಥರಾದ ನೀಲಮ್ಮ, ಪಾರ್ವತಿ, ಮಲ್ಲಮ್ಮ, ಕಮಲಾಕ್ಷಿ, ಚಂದ್ರಮ್ಮ, ಅಕ್ಕ ನಾಗಮ್ಮ, ನಾಗರಾಜ ಪಂಪಾಪತಿ ಶಂಕ್ರಪ್ಪ ಬಿರನಗೌಡ ಶರಣಪ್ಪ ಬಸವರಾಜ ಇತರರು ಇದ್ದರು.

13 ಎಕರೆ ಬಾಳೆ, 4 ಎಕರೆ ಪಪ್ಪಾಯಿ ತೋಟ ನೆಲಸಮ

ಕೊಟ್ಟೂರು: ತಾಲೂಕಿನ ಹರಾಳು ಗ್ರಾಮದಲ್ಲಿ ಮಂಗಳವಾರ ಸಂಜೆ ಬೀಸಿದ ಭಾರೀ ಗಾಳಿ, ಮಳೆಗೆ ಬಸವನಗೌಡ ದೇಸಾಯಿ ಎಂಬುವವರ 7 ಎಕರೆ ಹಾಗೂ ನಿರಂಜನಗೌಡ ಕೊಟ್ರುಗೌಡ್ರು ಎಂಬುವವರ 6 ಎಕರೆ ಬಾಳೆ ಹಾಗೂ 4 ಎಕರೆ ಪಪ್ಪಾಯಿ ತೋಟ ಸಂಪೂರ್ಣವಾಗಿ ನೆಲಸಮವಾಗಿದ್ದು, ಬೆಳೆಗಾರರಿಗೆ ಭಾರೀ ನಷ್ಟವಾಗಿದೆ. ಇನ್ನೇನು ಕಟಾವಿಗೆ ಬಂದಿದ್ದ, ಬಾಳೆ ಫಸಲು ಸಂಪೂರ್ಣ ನೆಲಕಚ್ಚಿದ್ದು, ರೈತರಿಂದ ನೋಡಲು ಸಾಧ್ಯವಾಗದಂತಾಗಿದೆ. ಈಗಾಗಲೇ ತೋಟಗಾರಿಕಾ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಬೆಳೆಹಾನಿ ನಷ್ಟಕ್ಕೆ ಪರಿಹಾರ ದೊರಕಿಸಿಕೊಡುವುದಾಗಿ ಭರವಸೆ ನೀಡಿದ್ದಾರೆ.



ಭಾರೀ ಮಳೆಗೆ ಧರೆಗುರುಳಿದ ವಿದ್ಯುತ್ ಕಂಬಗಳು



ಹುನಗುಂದ: ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಕಡೆಗೆ ಮಂಗಳವಾರ ಗುಡುಗು, ಸಿಡಿಲು ಹಾಗೂ ಭಾರೀ ಪ್ರಮಾಣದ ಬಿರುಗಾಳಿ ಸಹಿತ ಒಂದುವರೆ ಗಂಟೆಗೂ ಹೆಚ್ಚು ಕಾಲ ಸುರಿದ ಭಾರೀ ಮಳೆಗೆ ಬೀದಿ ಬದಿ ವ್ಯಾಪಾರಿಗಳ ಗೂಡಂಗಡಿ, ಮರ ಹಾಗೂ ವಿದ್ಯುತ್ ಕಂಬಗಳು ಧರೆಗುಳಿದ ಘಟನೆ ನಡೆದಿದೆ.

ಮಂಗಳವಾರ ಸಾಯಂಕಾಲ 4-30ರ ಸುಮಾರಿಗೆ ಬಿರುಗಾಳಿ ಜೊತೆಗೆ ಗುಡುಗು, ಸಿಡಿಲು ಸಹಿತ ಆರಂಭವಾದ ಮಳೆ ಮಳೆಗಿಂತಲ್ಲೂ ಗಾಳಿ, ಗುಡುಗು, ಸಿಡಿಲಿನ ಪ್ರಮಾಣ ಹೆಚ್ಚಿದ್ದರಿಂದ ಪಟ್ಟಣದ ಜನತೆ ಕೆಲ ಹೊತ್ತು ಗಾಬರಿ ಮತ್ತು ಭಯದ ಸ್ಥಿತಿ ನಿರ್ಮಾಣವಾಗಿತ್ತು.

ಪಟ್ಟಣದ ಕೇಂದ್ರ ಭಾಗವಾದ ಬಸ್ ನಿಲ್ದಾಣದ ಮುಂಭಾಗದಲ್ಲಿ ಬಿರುಗಾಳಿಗೆ ತಗಡಿನ ಶೆಡ್‌ಗಳು ಕಿತ್ತಿ ವಿದ್ಯುತ್ ಕಂಬದ ಮೇಲೆ ಬಿದ್ದು ಅಕ್ಕಪಕ್ಕದ ಎರಡು ವಿದ್ಯುತ್ ಕಂಬಗಳು ಧರೆಗುರಳಿ ವಿದ್ಯುತ್ ಮೇನ್ ಲೈನ್ ವೈರ್‌ಗಳು ಹರಿದು ರಾಯಚೂರ-ಬೆಳಗಾವಿ ರಾಜ್ಯ ಹೆದ್ದಾರಿ ರಸ್ತೆ ಮೇಲೆ ಬಿದಿದ್ದು, ಆ ಜಾಗೆಯಲ್ಲಿ ನಿಲ್ಲಿಸಿದ ಎರಡು ಮೂರು ದ್ವಿಚಕ್ರ ವಾಹನಗಳು ಗಾಳಿಗೆ ಕಿತ್ತಿಕೊಂಡು ಬಂದು ಬಿದ್ದ ಶೆಡ್‌ನ ಕೆಳಭಾಗದಲ್ಲಿ ಸಿಲಿಕಿಕೊಂಡು ಜಖಂಗೊಂಡಿವೆ.

ಪಟ್ಟಣದ ಇನ್ನು ಆರು ಕಡೆಗಳಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರಳಿವೆ ಎಂದು ಹೆಸ್ಕಾಂ ಸಿಬ್ಬಂದಿಗಳು ತಿಳಿಸಿದ್ದಾರೆ. ಭಾರೀ ಗಾಳಿ ಮಳೆಗೆ ಯಾವುದೇ ಪ್ರಾಣಾಪಾಯವಾಗಿಲ್ಲ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನಾಳೆ ಅಹವಾಲು ಸ್ವೀಕೃತಿ ಸಭೆ

ಕುಮಟಾ: ತಾಲೂಕು ಆಡಳಿತ ಸೌಧದಲ್ಲಿರುವ ಸಹಾಯಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ ಉಕ ವತಿಯಿಂದ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕೃತಿ ಸಭೆ ಏ. 24ರಂದು ಆಯೋಜಿಸಲಾಗಿದೆ. ಬೆಳಿಗ್ಗೆ 10 ಗಂಟೆಯಿಂದ ನಡೆಯುವ ಸಭೆಯಲ್ಲಿ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಅವರು ಉಪಸ್ಥಿತರಿದ್ದು, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸುವ ನಾಗರಿಕರಿಗೆ ತಮ್ಮ ಸಮಸ್ಯೆಗಳನ್ನು ನೇರವಾಗಿ ಮಂಡಿಸಲು ಇದು ಉತ್ತಮ ಅವಕಾಶವಾಗಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಹವಾಲುಗಳನ್ನು ಸಲ್ಲಿಸಿ, ಸೂಕ್ತ ಪರಿಹಾರ ಪಡೆದುಕೊಳ್ಳಬೇಕು ಎಂದು ಕುಮಟಾ ತಹಶೀಲ್ದಾರ್ ಶ್ರೀಕೃಷ್ಣ ಕಾಮ್ಕರ್ ಅವರು ತಿಳಿಸಿದ್ದಾರೆ.



ಸಿದ್ದಾಪುರ: ತಾಲೂಕಿನ ಭಾನ್ಕುಳಿಯಲ್ಲಿ ನಡೆಯುತ್ತಿರುವ ಶಂಕರ ಪಂಚಮೀ ಉತ್ಸವದಲ್ಲಿ ಅಡಿಕೆಗೆ ಬಂದಿರುವ ಮಾರಕ ರೋಗ ಪರಿಹಾರಾರ್ಥ ಶ್ರೀ ಮಠದ ಅಡಿಕೆ ತೋಟದಲ್ಲಿ ಆವಹಂತೀ ಹವನವನ್ನು ಮಾಡಲಾಯಿತು. ಸಾನ್ನಿಧ್ಯ ವಹಿಸಿದ್ದ ಶ್ರೀ ರಾಘವೇಶ್ವರ ಭಾರತೀ ಶ್ರೀಗಳು ಪೂರ್ಣಾಹುತಿ ಪೂಜೆಯಲ್ಲಿಯೂ ಪಾಲ್ಗೊಂಡಿದ್ದರು.



ಹಳಿಯಾಳ: ಪೇಟೆ ಬಸವೇಶ್ವರರ ರಥೋತ್ಸವವು ವಿಜೃಂಭಣೆಯಿಂದ ಜರುಗಿತು. ವಿವಿಧ ವೇಷಧಾರಿಗಳು ರಥೋತ್ಸವದ ಮುಂಭಾಗದಲ್ಲಿ ಹೆಜ್ಜೆ ಹಾಕುತ್ತಾ ನೆರೆದಿದ್ದ ಜನಕ್ಕೆ ಭಕ್ತಿಯೊಂದಿಗೆ ಮನರಂಜನಾ ಉತ್ಸಾಹವ ನಡೆಯಿತು.

ಮಹಿಳೆಯ ಮೇಲೆ ಹಲ್ಲೆಗೆ ಯತ್ನ

ದಾಂಡೇಲಿ: ಮಕ್ಕಳು ಆಟ ಆಡುವ ವಿಷಯಕ್ಕೆ ಸಂಬಂಧಪಟ್ಟಂತೆ ಮಕ್ಕಳ ಪಾಲಕರು ಪರಸ್ಪರ ಮಾತಿಗಿಳಿದು, ಪತಿ, ಪತ್ನಿ, ಸಹೋದರ ಸೇರಿದಂತೆ ಒಟ್ಟು ಮೂವರು ನೆರೆ ಮನೆಯ ಮಹಿಳೆಯೋರ್ವರ ಗಂಟಲು ಹಿಡಿದು ತಳ್ಳಾಟ ನಡೆಸಿ ಹಲ್ಲೆ ನಡೆಸಲು ಯತ್ನಿಸಿ ಜೀವ ಬೆದರಿಕೆಯೊಡ್ಡಿದ ಘಟನೆ ಬುಧವಾರ ಸಂಜೆ ನಡೆದಿದೆ ಎಂದು, ಹಲ್ಲೆಗೊಳಗಾದ ಮಹಿಳೆಯನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತರಲಾಗಿದೆ. ಹಳೆ ದಾಂಡೇಲಿಯ ನಿವಾಸಿ ರಂಗಮ್ಮ ವಿಕ್ಟರ್ ಇಮಾನುವೆಲ್ ಎಂಬವರ ಮೇಲೆ ಹಲ್ಲೆಗೆ ಯತ್ನಿಸಿ, ಜೀವ ಬೆದರಿಕೆ ಒಡ್ಡಿದ್ದಾರೆಂದು ಆರೋಪಿಸಲಾಗಿದೆ. ರಂಗಮ್ಮ ವಿಕ್ಟರ್ ಇಮಾನುವೆಲ್ ಇವರ ಮಗಳನ್ನು ಎಂದಿನಂತೆ ನೆರೆ ಮನೆಯ ಮ್ಯಾಥ್ಯೂಸ್ ಅವರ ಮನೆಯ ಮಕ್ಕಳು ಆಟವಾಡಲು ಯಾಕೆ ಕರೆದಿಲ್ಲ ಎಂದು ಪ್ರಶ್ನಿಸಿರುವುದಕ್ಕೆ ಪರಸ್ಪರ ಮಾತಿಗೆ ಮಾತು ಬೆಳೆದಿದೆ. ಮ್ಯಾಥ್ಯೂಸ್ ಮತ್ತು ಅವರ ಪತ್ನಿ ಹಾಗೂ ಸಹೋದರ ಸೇರಿ ಹಲ್ಲೆಗೆ ಮುಂದಾಗಿದ್ದಾರೆ ಎಂದು ಮತ್ತು ಜೀವ ಬೆದರಿಕೆ ಒಡ್ಡಿದ್ದಾರೆಂದು ರಂಗಮ್ಮ ವಿಕ್ಟರ್ ಇಮಾನುವೆಲ್ ಅವರು ಈ ಬಗ್ಗೆ ಮಾಧ್ಯಮಕ್ಕೆ ಮಾಹಿತಿ ನೀಡಿದ್ದಾರೆ. ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ರಂಗಮ್ಮ ವಿಕ್ಟರ್ ಇಮಾನುವೆಲ್ ದಾಖಲಾಗಿದ್ದು, ಸಾರ್ವಜನಿಕ ಆಸ್ಪತ್ರೆಗೆ ನಗರ ಠಾಣೆಯ ಪೊಲೀಸರು ಭೇಟಿ ನೀಡಿ, ಪರಿಶೀಲನೆಯನ್ನು ನಡೆಸಿ ಮುಂದಿನ ಕ್ರಮವನ್ನು ಕೈಗೊಂಡಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60889	71499
ಬಿಳಿಗೋಟು	22109	38299
ಕೆಂಪುಗೋಟು	21879	41899
ಬೆಟ್ಟೆ	40210	50199
ರಾಶಿ	50100	54799
ಚಾಲಿ	44899	48600
ಬಿ.ಕಾಳುಮೆಣಸು	72800	80800



ಸಿದ್ದಾಪುರ: ವೇದವಿದ್ಯಾ, ಸಂಸ್ಕಾರ ಮತ್ತು ಸಂಶೋಧನಾ ಕೇಂದ್ರ ಹಾಗೂ ಶ್ರೀ ಮನ್ನೆಲೆಮಾವುಮಠ ಇವುಗಳ ಸಹಯೋಗದಲ್ಲಿ ವೈದಿಕರು, ಶತಾಯುಷಿಗಳು ಆಗಿದ್ದ ದಿ.ಹೋಬಳಿ ನಾರಾಯಣ ತಿಮ್ಮಣ್ಣ ಭಟ್ಟ ಹರಿಗಾರ ಇವರ ಸ್ಮರಣಾರ್ಥ ಡಾ.ವಿದ್ವಾನ್ ಶಂಕರ ಭಟ್ಟರು ಬಾಲಿಗದ್ದೆ ಇವರಿಗೆ ಶ್ರೀಮನ್ನೆಲೆಮಾವುಮಠದಲ್ಲಿ ಶ್ರೀಶಂಕರ ಜಯಂತಿಯಂದು 'ಆಚಾರ್ಯ ಶಂಕರಶ್ರೀ' ಪ್ರಶಸ್ತಿ ಶ್ರೀ ಮಾಧವಾನಂದ ಭಾರತಿ ಶ್ರೀಗಳು ಪ್ರದಾನ ಮಾಡಿದರು. ಮಠದ ಅಧ್ಯಕ್ಷ ಜಿ.ಎಂ.ಹೆಗಡೆ ಹೆಗ್ನೂರು ವೆಂಕಟರಮಣ ಭಟ್ಟ ಹೆಗ್ಗಾರಬೈಲ್, ನಾರಾಯಣ ಜೋಶಿ, ಗಣಪತಿ ಜೋಶಿ, ಮಠದ ವೈದಿಕ ವಿದ್ವಾಂಸರು ಇದ್ದರು.

ಸಂಗೀತದಿಂದ ವ್ಯಕ್ತಿತ್ವ ನಿರ್ಮಾಣ: ಹೆಗಡೆ

ಹೊನ್ನಾವರ: ಜಾತಿ, ಮತ, ದೇಶ, ಭಾಷೆಗಳ ಬಂಧನಕ್ಕೆ ಸಿಲುಕದೆ .ವಿಶ್ವವಾಣಿಯಾಗಿ ನಿಲ್ಲುವ ಯೋಗ್ಯತೆಯುಳ್ಳದ್ದು ಸಂಗೀತವೊಂದೇ. ಇಂತಹ ಸಂಗೀತವನ್ನು ಉತ್ತಮ ಗುರು ಮುಖೇನ ಕಲಿಯುವುದರಿಂದ ಶ್ರೇಷ್ಠ ವ್ಯಕ್ತಿತ್ವಗಳ ನಿರ್ಮಾಣವಾಗುತ್ತದೆ ಎಂದು ಹಿಂದುಸ್ತಾನಿ ಸಂಗೀತದ ಹಿರಿಯ ಗಾಯಕ ಪಂ.ಪರಮೇಶ್ವರ್ ಹೆಗಡೆ ಕಲಭಾಗ ಹೇಳಿದರು. ಅವರು ಕರಿಕಾನ ಪರಮೇಶ್ವರಿ ಮ್ಯೂಸಿಕ್ ಟ್ರಸ್ಟ್ ಕಲಭಾಗ ಆಶ್ರಯದಲ್ಲಿ ಒಂದು ವಾರಗಳ ಕಾಲ ವಸತಿ ಸಹಿತವಾಗಿ ಕಲಭಾಗದಲ್ಲಿ ನಡೆದ ಸಂಗೀತ-ಸಂಸ್ಕೃತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ರಜೆ ಅವಧಿಯಲ್ಲಿ ಹೊಸ ಸಂಗತಿಗಳನ್ನು ಕಲಿಯಬೇಕು. ಕಾಡುಮೇಡು ಸುತ್ತಿ ಹಳ್ಳಿಯ ಜೀವನವನ್ನು ಅನುಭವಿಸಬೇಕು. ಹಳ್ಳಿ ಭಾಗದಲ್ಲಿ ನಡೆಯುವ ಇಂತಹ ಶಿಬಿರಗಳು ವಿದ್ಯಾರ್ಥಿಗಳ ಬದುಕಿಗೆ ಒಳ್ಳೆಯ ಅಡಿಪಾಯ ಒದಗಿಸುತ್ತದೆ ಎಂದರು. ನಿವೃತ್ತ ಅಧ್ಯಾಪಕ ಎಲ್.ಎನ್. ಶಾಸ್ತ್ರಿ ಗುಡ್ಡೇಬಾಳು ಮಾತನಾಡಿ, ಮುಂದಿನ ದಿನಗಳಲ್ಲಿ ಈ ಶಿಬಿರವು ಇನ್ನಷ್ಟು ವ್ಯವಸ್ಥಿತವಾಗಿ ವ್ಯಾಪಕವಾಗಿ ನಡೆಯಲಿ. ಇದರ ಪ್ರಯೋಜನವನ್ನು ನೂರಾರು ವಿದ್ಯಾರ್ಥಿಗಳು ಪಡೆಯುವಂತಾಗಲಿ ಎಂದರು. ಶಿಬಿರದ ಆಯೋಜಕ ಶ್ರೀಧರ ಹೆಗಡೆ ಕಲಭಾಗ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ನಾಗರಾಜ್ ಶಾಸ್ತ್ರಿ ಬೋಳತಟ್ಟೆ ಕಾರ್ಯಕ್ರಮ ನಿರೂಪಿಸಿದರು. ಶಿಬಿರಾರ್ಥಿಗಳ ಪಾಲಕರಾದ ಮಾನಸಾ ರಾಘವೇಂದ್ರ, ಪ್ರಶಾಂತ್ ಮೂಡಲಮನೆ ಶಿಬಿರದ ಬಗ್ಗೆ ಅನಿಸಿಕೆಗಳನ್ನು ಹಂಚಿಕೊಂಡರು. ಕಲಾವಿದರಾದ ರಾಘವೇಂದ್ರ ಉಪಾಧ್ಯಾಯ, ನಿಹಾರಿಕ ಭಟ್ ಉಪಸ್ಥಿತರಿದ್ದರು. ಶಿಬಿರದಲ್ಲಿ ಸುಮಾರು 30 ಜನ ವಿದ್ಯಾರ್ಥಿಗಳು ಭಾಗವಹಿಸಿ ವಾರಗಳ ಕಾಲ ಅನೇಕ ಹೊಸ ಸಂಗತಿಗಳನ್ನು ಕಲಿತ ಸಂಭ್ರಮಿಸಿದರು.



ಹೊನ್ನಾವರ: ಕರಿಕಾನ ಪರಮೇಶ್ವರಿ ಮ್ಯೂಸಿಕ್ ಟ್ರಸ್ಟ್ ಕಲಭಾಗ ಆಶ್ರಯದಲ್ಲಿ ಒಂದು ವಾರಗಳ ಕಾಲ ವಸತಿ ಸಹಿತವಾಗಿ ಕಲಭಾಗದಲ್ಲಿ ನಡೆದ ಸಂಗೀತ-ಸಂಸ್ಕೃತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಹಿಂದುಸ್ತಾನಿ ಸಂಗೀತದ ಹಿರಿಯ ಗಾಯಕ ಪಂ.ಪರಮೇಶ್ವರ್ ಹೆಗಡೆ ಮತ್ತಿತರರಿದ್ದರು.

ಸೀಮೆ ಎಣ್ಣೆ ದರ ಹೆಚ್ಚಳ ಖಂಡಿಸಿ ಮೀನುಗಾರರ ಪ್ರತಿಭಟನೆ

ಕಾರವಾರ: ನಾಡದೋಣಿ ಮತ್ತು ಸಾಂಪ್ರದಾಯಿಕ ಮೀನುಗಾರರಿಗೆ ನೀಡಲಾಗುತ್ತಿದ್ದ ಸೀಮೆ ಎಣ್ಣೆ (ಕೆರೋಸಿನ್) ದರದಲ್ಲಿ ಭಾರಿ ಏರಿಕೆ ಮಾಡಿರುವದನ್ನು ಖಂಡಿಸಿ ಜಿಲ್ಲಾಧಿಕಾರಿಗಳಿಗೆ ಸಾಂಪ್ರದಾಯಿಕ ಮೀನುಗಾರರು ಮನವಿ ಸಲ್ಲಿಸಿದರು.

ಜಿಲ್ಲಾSಕಾರಿಗಳ ಕಚೇರಿ ಮುಂದೆ ಸೇರಿದ ಸಾಂಪ್ರದಾಯಿಕ ಮೀನುಗಾರರು ಕೆರೋಸಿನ್ ದರ ಏರಿಸಿರುವುದನ್ನು ಖಂಡಿಸಿದರು. ನಾಡದೋಣಿ ಮತ್ತು ಸಾಂಪ್ರದಾಯಿಕ ಮೀನುಗಾರರು ಸಮುದ್ರದಲ್ಲಿ ಸಿಮೀತ ಪ್ರದೇಶದಲ್ಲಿ ದೋಣಿ ಬಲೆಗಳನ್ನು ಬಳಸಿ ಮೀನುಗಾರಿಕೆಯನ್ನು ನಡೆಸುತ್ತಿದ್ದಾರೆ. ಸೀಮೆ ಎಣ್ಣೆ (ಕೆರೋಸಿನ್) ಬಳಸಿಕೊಂಡೇ ನಾವು ಮೀನುಗಾರಿಕೆಯನ್ನು ನಡೆಸುತ್ತ ಬಂದಿದ್ದೇವೆ. ಆಳ ಸಮುದ್ರ ಮೀನುಗಾರಿಕೆ, ಯಂತ್ರಿಕರಣ ಮೀನುಗಾರಿಕೆ ರಾತ್ರಿವೇಳೆ ಮಾಡುವ ಲೈಟ್ ಫಿಶಿಂಗ್ ಮತ್ತು ಬುಲ್ ಟ್ರಾಲ್ ಫಿಶಿಂಗ್ ಮಾಡುವ ದೊಡ್ಡ ಮೀನುಗಾರರಿಗೆ ಡಿಸೇಲ್‌ನ್ನು ಕಡಿಮೆ ದರದಲ್ಲಿ ದೊರೆಯುತ್ತಿದೆ. (ರೂ.78) ಆದರೆ ಸಾಂಪ್ರದಾಯಿಕ ದೋಣಿ ಬಳಸಿ ನಡೆಸುವ ಮೀನುಗಾರರಿಗೆ ಕೆರೋಸಿನ್ ಅತ್ಯವಶ್ಯಕವಾಗಿದ್ದು, ಅದು 35 ರೂ. ಇತ್ತು ನಂತರದಲ್ಲಿ ರೂ. 65ಕ್ಕೆ ಏರಿಸಲಾಯಿತು. ಈಗ ಒಮ್ಮೆಲೆ 117 ರೂ.ಕ್ಕೆ ಏರಿಕೆಯಾಗಿದೆ. ಇದರಿಂದ ಸಣ್ಣ ಪ್ರಮಾಣದಲ್ಲಿ ಮೀನುಗಾರಿಕ ಮಾಡುವ ಸಾಂಪ್ರದಾಯಿಕ ಮೀನುಗಾರರಿಗೆ ತೊಂದರೆಯಾಗಿದೆ.

ಸಣ್ಣ ಸಣ್ಣ ದೋಣಿಗಳು ಮತ್ತು ಬಲೆಯನ್ನು ಬಳಸಿಕೊಂಡು ಮೀನುಗಾರಿಕೆ ಮಾಡುವ ಸಾಂಪ್ರದಾಯಿಕ ಮೀನುಗಾರರ ಜೀವನದ ಮೇಲೆ ದರ ಏರಿಕೆಯು ಬರೆ ಎಳೆದಂತಾಗಿದೆ ಎಂದು ಮೀನುಗಾರರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ವಿಧಾನಪರಿಷತ್ ಸದಸ್ಯ ಹಾಗೂ ಮೀನುಗಾರ ಧುರೀಣ ಗಣಪತಿ ಉಳ್ವೇಕರ ಮಾತನಾಡಿ, ಡಿಸೈಲ್ ಮತ್ತು ಪೆಟ್ರೋಲ್ ದರದಲ್ಲಿ ಪೈಸೆಯಲ್ಲಿ ಹೆಚ್ಚದರೆ ಎಲ್ಲೆಡೆ ಸಾಕಷ್ಟು ಪ್ರತಿಭಟನೆಯು ನಡೆಯುತ್ತಿದೆ. ಆದರೆ ಸಾಂಪ್ರದಾಯಿಕ ಮೀನುಗಾರರು ಬಳಸುವ ಕೆರೋಸಿನ್ ದರ ಸಿಕ್ಕಾಪಟ್ಟೆ ಹೆಚ್ಚಾದರೂ ಕೂಡ ಅವರ ಬಗ್ಗೆ ಯಾವದೇ ಕಾಳಜಿ ಇಲ್ಲದಂತಾಗಿದೆ. 65 ರೂ. ದಿಂದ 117 ರೂ ಏರಿಕೆ ಎಂದರೆ ಯಾವ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು ಮೀನುಗಾರರ ಜೀವನಕ್ಕೆ ಸಮಸ್ಯೆಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಾಂಪ್ರದಾಯಿಕ ಮೀನುಗಾರರ ಸಂಘಟನೆಯ ಪದಾಧಿಕಾರಿಗಳು ಮಾತನಾಡಿ, ಒಂದು ವಾರದಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿರುವ ಕೆರೋಸಿನ್ ದರವನ್ನು ಮೊದಲಿನಂತೆ ಇಳಿಸಬೇಕು. ಇಲ್ಲವಾದಲ್ಲಿ ಧರಣಿ ಸತ್ಯಾಗ್ರಹಕ್ಕೆ ತೀರ್ಮಾನಿಸುವದಾಗಿ ಹೇಳಿದರು.

ಮನವಿ ಸಲ್ಲಿಕೆಯ ವೇಳೆ ಮೀನುಗಾರರಾದ ದೇವರಾಯ ಸೈಲ್, ಶ್ರೀಪಾದ, ಮಹಾದೇವ, ಪ್ರಸನ್ನ, ಪಿ.ಜಿ.ಸೈಲ್ ಇನ್ನಿತರರು ಹಾಜರಿದ್ದರು.



> ಸರ್ಕಾರವು ಸಾಂಪ್ರದಾಯಿಕ ಮೀನುಗಾರರ ಸಮಸ್ಯೆ ಬಗ್ಗೆ ಕಾಳಜಿ ತೋರಿಸಬೇಕು. ಭಾರಿ ಪ್ರಮಾಣದಲ್ಲಿ ಏರಿಕೆಯಾಗಿರುವ ಕೆರೋಸಿನ್ ದರವನ್ನು ಕಡಿಮೆ ಮಾಡುವಂತಾಗಬೇಕು.
> ■ ಗಣಪತಿ ಉಳ್ವೇಕರ, ವಿಧಾನಪರಿಷತ್ ಸದಸ್ಯ, ಮೀನುಗಾರ ಧುರೀಣ

ದೇಶ ಕಟ್ಟುವ ಕೆಲಸವಾಗಲಿ: ಸಂಸದ ಕಾಗೇರಿ

ಶಿರಸಿ: ಸಾವಿರಾರು ವರ್ಷಗಳ ಗುಲಾಮಿತನದ ಪರಿಣಾಮವಾಗಿ ನಮ್ಮ ಜೀವನದ ಮೌಲ್ಯಗಳನ್ನು ನಾವಿನ್ನೂ ಸರಿಯಾಗಿ ಗುರುತಿಸಿಕೊಂಡಿಲ್ಲ, ಬ್ರಿಟಿಷರು ದೇಶ ಬಿಟ್ಟಿದ್ದರೂ ಅವರ ಮಾನಸಿಕತೆ ನಮ್ಮನ್ನು ಬಿಟ್ಟಿಲ್ಲ. 2047ರ ವೇಳೆಗೆ ಭಾರತ ವಿಶ್ವಗುರುವಾಗ ಬೇಕಾದರೆ ನಾವೆಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ನಗರದ ನೆಮ್ಮದಿ ಕುಟೀರದಲ್ಲಿ ಮಂಗಳವಾರ ನಡೆದ ಸ್ಕೊಡ್‌ವೇಸ್ ಸಂಸ್ಥೆಯ ಶಕ್ತಿ ದಿವಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾನವೀಯ ಮೌಲ್ಯಗಳೊಂದಿಗೆ ದೇಶ ಕಟ್ಟುವ ಕೆಲಸ ನಮ್ಮಿಂದಾಗಬೇಕು. ಕ್ಷುಲ್ಲಕ ಆಸೆಗಳಿಗೆ ಮತ ಮಾರಿಕೊಳ್ಳುವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾಗಿದೆ. ಜಗತ್ತಿನಾದ್ಯಂತ ಯುದ್ಧದ ಭೀತಿ ಇದ್ದರೂ ಭಾರತ ಸುರಕ್ಷಿತವಾಗಿದೆ. ದೇಶವನ್ನು ಇನ್ನಷ್ಟು ಪ್ರಬಲಗೊಳಿಸುವ ಚಿಂತನೆಯಲ್ಲಿ ನಾವು ಅಳಿಲು ಸೇವೆ ಮಾಡಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸ್ಕೊಡ್‌ವೇಸ್ ಸಂಸ್ಥೆಯ ಕಾರ್ಯನಿರ್ವಾಹಕ ಡಾ. ವೆಂಕಟೇಶ ನಾಯ್ಕ, ಸಂಸ್ಥೆಯು ದೇಶದ 5 ರಾಜ್ಯಗಳಲ್ಲಿ ಸಾಮಾಜಿಕ, ಆರೋಗ್ಯ ಸೇರಿದಂತೆ 9 ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಸಿಬ್ಬಂದಿಯನ್ನು ಪ್ರೋತ್ಸಾಹಿಸಲು ಪ್ರತಿ ವರ್ಷ ಶಕ್ತಿ ದಿನ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಸಾಮಾಜಿಕ ಕಾರ್ಯಕರ್ತ ಎಸ್. ಜಯರಾಮ ಅವರಿಗೆ 'ಸ್ಕೊಡ್‌ವೇಸ್ ಕರ್ನಾಟಕ ಸೇವಾ ರತ್ನ' ಪ್ರಶಸ್ತಿ ಹಾಗೂ ಯಲ್ಲಾಪುರದ ಡಾ. ನಾರಾಯಣ ಹುಳ್ಸೆ ಅವರಿಗೆ 'ಶರಣ ಬಿರಾದಾರ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಂಎಲ್‌ಸಿ ಶಾಂತಾರಾಮ ಸಿದ್ದಿ, ಮೈಸೂರಿನ ಗ್ರಾಮ್ ಸಂಸ್ಥೆ ನಿರ್ದೇಶಕ ಡಾ. ಬಸವರಾಜು, ಬೆಂಗಳೂರು ಆಶ್ರಯ ಹಸ್ತ ಸಂಸ್ಥೆಯ ವಿಕ್ರಂ ಪಟೇಲ್, ಗುಜರಾತ ದೇಸಾಯಿ ಫೌಂಡೇಶನ್‌ನ ನಿತಿನ್ ಸಿಂಗ್, ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಡಾ. ಎಚ್. ಸಿ. ಬೋರಲಿಂಗಯ್ಯ, ಸರಸ್ವತಿ ಎನ್. ರವಿ ಹಾಗೂ ಕೆ. ಎನ್. ಹೊಸ್ಮನಿ ಉಪಸ್ಥಿತರಿದ್ದರು.



ಜೂ.7ರಿಂದ ರಾಜ್ಯ ಮಟ್ಟದ ಯೋಗ ಸ್ಪರ್ಧೆ


ಯಲ್ಲಾಪುರ: ಯೋಗ ಫೆಡರೇಷನ್ ಆಫ್ ಇಂಡಿಯಾ ಸಹಯೋಗದೊಂದಿಗೆ ಪಟ್ಟಣದ ಈಶ್ವರಿ ವಿಶ್ವವಿದ್ಯಾಲಯದಲ್ಲಿ ಜೂನ್ 6 ಮತ್ತು 7 ರಂದು ರಾಜ್ಯ ಮಟ್ಟದ ಯೋಗ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಯೋಗ ಫೆಡರೇಷನ್ ಅಧ್ಯಕ್ಷ ಅನಿಲ್ ಕರಿ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಯೋಗ ಫೆಡರೇಶನ್‌ರವರ ಸಿಲೆಬಸ್ಸಿನಂತೆ ಬೇರೆ ಬೇರೆ ವಯೋಮಾನದವರಿಗೆ ಸ್ಪರ್ಧೆ ನಡೆಯಲಿದ್ದು, ಕಠಿಣ ಪರಿಶ್ರಮದಿಂದ ಈ ಸಾಧನೆ ಸಾಧ್ಯ. ಆ ಉದ್ದೇಶದಿಂದ ಮತ್ತು ಹೆಚ್ಚಿನ ದಿನಗಳು ಸಿದ್ಧತೆಗೆ ಬೇಕಾಗುವುದೆಂಬ ಕಾರಣಕ್ಕೆ ಮುಂಚಿತವಾಗಿ ಮಾಹಿತಿ ನೀಡಲಾಗುತ್ತಿದೆ. ಯೋಗದ ವಾತಾವರಣ ನಿರ್ಮಾಣ ಮಾಡುವುದು ಹಾಗೂ ಮುಂದೆ ಸರ್ಕಾರಿ ಉದ್ಯೋಗಗಳಲ್ಲಿ ಕೋಟಾ ಪಡೆಯಬಹುದು ಎಂದೂ ತಿಳಿಸುವ ಉದ್ದೇಶ ಹೊಂದಲಾಗಿದೆ.

ಸದೃಢ ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿರುವಾಗಿಂದಲೇ ಯೋಗದ ಮಹತ್ವ ಅರಿವು ಮೂಡಿಸಲು 8 ವರ್ಷ ವಯಸ್ಸಿನಿಂದ 60 ವರ್ಷಕ್ಕೂ ಹೆಚ್ಚಿನ ವಯೋಮಾನದವರಿಗೂ ಸಹ ಸ್ಪರ್ಧೆ ಏರ್ಪಡಿಸಲಾಗಿದೆ. ಜೂ.5ರಿಂದ ರಿಜಿಸ್ಟ್ರೇಷನ್ ಆರಂಭಗೊಳ್ಳುತ್ತದೆ. ಜೂ.6ರಂದು ಬೆಳಗ್ಗೆ 8.30 ರಿಂದಲೇ ಸ್ಪರ್ಧೆ ಆರಂಭಗೊಳ್ಳುವುದು.

ಅಂದಾಜು 600 ಸ್ಪರ್ಧಾಳುಗಳು ಸೇರಿದಂತೆ 750 ಜನ ಭಾಗವಹಿಸಲಿದ್ದಾರೆ. ಊಟ ಹಾಗೂ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆ. 50-60 ವರ್ಷ ಮೇಲ್ಪಟ್ಟು ಎರಡು ವಿಭಾಗಗಳಲ್ಲಿ ಗೌರವ ಸ್ಪರ್ಧೆ ನಡೆಯಲಿದ್ದು, ಇವರಿಗೆ ರಾಷ್ಟ್ರಮಟ್ಟಕ್ಕೆ ಹೋಗಲು ಅವಕಾಶ ಇರುತ್ತದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಆನ್ ಲೈನ್ ನೋಂದಣಿ ಮುಂಚಿತವಾಗಿ ಖಡ್ಡಾಯವಾಗಿ ಮಾಡಿಕೊಳ್ಳಬೇಕಾಗುತ್ತದೆ. ಸ್ಥಳದಲ್ಲಿ ನೋಂದಣಿಗೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅನಿಲ ಕರಿ 9845329306, ಸುಬ್ರಾಯ ಭಟ್ಟ 9482181480, ದಿವಾಕರ ಮರಾಠಿ 94800855532 ಸಂಪರ್ಕಿಸಬಹುದಾಗಿದೆ ಎಂದರು. ತಾಲೂಕು ಸಂಘಟನೆಯ ಅಧ್ಯಕ್ಷ ಎಂ.ಆರ್. ಹೆಗಡೆ ಕುಂಬ್ರಿಗುಡ್ಡೆ, ಕಾರ್ಯಾಧ್ಯಕ ಶಂಕರ ಭಟ್ ತಾರಿಮಕ್ಕಿ, ಯೋಗ ಶಿಕ್ಷಕ ಸುಬ್ರಾಯ ಭಟ್ ಉಪಸ್ಥಿತರಿದ್ದರು.



ಸಂಭ್ರಮದ ದೊಡ್ಡ ಕೆರೆಯ ಕೆರೆ ಬೇಟೆ

ಬನವಾಸಿ: ಸಮೀಪದ ಗುಡ್ನಾಪೂರ ಗ್ರಾಪಂ ಮಧುರವಳ್ಳಿ-ಹಾಡಲಗಿ ಗ್ರಾಮದ ದೊಡ್ಡ ಕೆರೆಯ ಕೆರೆಬೇಟೆಯು ಬುಧವಾರ ಸಂಭ್ರಮದಿಂದ ನಡೆಯಿತು.

ಮಧುರವಳ್ಳಿ ಗ್ರಾಮದ ಶ್ರೀ ಮಾರಿಕಾಂಬಾ ಹಾಗೂ ಹಾಡಲಗಿ ಗ್ರಾಮದ ಆಂಜನೇಯ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ನಡೆಯುವ ಕೆರೆಬೇಟೆಯಲ್ಲಿ ಸುತ್ತಮುತ್ತಲಿನ ತಾಲೂಕು, ಹಳ್ಳಿಗಳಿಂದ ಆಗಮಿಸಿದ ಹಿರಿಯರು, ಯುವಕರು ಬಿದಿರಿನಿಂದ ಮಾಡಿದ ಕುಣಿಗಳನ್ನು ಹಿಡಿದು ಮೀನು ಬೇಟೆಗೆ ಇಳಿದು ಅದೃಷ್ಟ ಪರೀಕ್ಷೆಗೆ ಮುಂದಾದರು. ಸುಮಾರು ಎರಡು-ಮೂರು ಗಂಟೆಗಳ ಕಾಲ ನಡೆದ ಮತ್ಸ್ಯ ಬೇಟೆಯ ಸಡಗರದಲ್ಲಿಕೆಲವರಿಗೆ ಮೀನು ಸಿಕ್ಕರೆ, ಇನ್ನೂ ಕೆಲವರು ಮೀನು ಸಿಗದೇ ನಿರಾಸೆಯಿಂದ ಮರಳಿದರು.

ಸಾವಿರಾರು ಜನರು ರಸ್ತೆಯ ಪಕ್ಕದಲ್ಲಿ ನಿಂತು ಕೆರೆ ಬೇಟೆಯ ದೃಶ್ಯ ನೋಡುತ್ತ ಸಂಭ್ರಮಿಸಿದರು. ಕೆರೆಬೇಟೆಯಿಂದಾಗಿ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಕೆರೆ ಬೇಟೆಯು ಕೇವಲ ಮೀನು ಹಿಡಿಯುವ ಕಾಯಕ ಅಲ್ಲದೆ ಕ್ರೀಡೆಯ ಮನೋರಂಜನೆಯನ್ನು ನೀಡುತ್ತಿರುವುದರಿಂದ ಸುಮಾರು 1ಸಾವಿರಕ್ಕೂ ಅಧಿಕ ಮತ್ಸ್ಯಬೇಟೆಗಾರರು ಸಂಭ್ರಮದಿಂದ ಪಾಲ್ಗೊಂಡಿದ್ದರು. ಒಂದು ಕುಣಿಗೆ 600ರೂ ಶುಲ್ಕವನ್ನು ವಿಧಿಸಲಾಗಿತ್ತು. ಇದರಿಂದ ಬರುವ ಆದಾಯವನ್ನು ಮಧುರವಳ್ಳಿ ಗ್ರಾಮದ ಶ್ರೀ ಮಾರಿಕಾಂಬಾ ಹಾಗೂ ಹಾಡಲಗಿ ಗ್ರಾಮದ ಆಂಜನೇಯ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಉಪಯೋಗಿಸಲಾಗುವುದು ಎಂದು ದೇವಸ್ಥಾನ ಆಡಳಿತ ಮಂಡಳಿಯವರು ತಿಳಿಸಿದರು.

ಕೆರೆಬೇಟೆಯು ಶಾಂತಿಯುತವಾಗಿ ನಡೆದಿದ್ದು, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಬನವಾಸಿ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ಮಾಂತೇಶ ಕುಂಬಾರ, ರವೀಂದ್ರ ಬಿರಾದಾರ ಮಾರ್ಗದರ್ಶನದಲ್ಲಿ ಪೊಲೀಸರಿಂದ ಸೂಕ್ತ ಬಂದೋಬಸ್ತ್ ಆಯೋಜಿಸಲಾಗಿತ್ತು.



- ಒಂದು ಕುಣಿಗೆ 600ರೂ ಶುಲ್ಕ ನಿಗಧಿ
- ಒಂದು ಸಾವಿರಕ್ಕೂ ಅಧಿಕ ಮತ್ಸ್ಯಬೇಟೆಗಾರ ಭಾಗವಹಿಸಿದರು

ಭೂಮಿಯ ರಕ್ಷಣೆ ನಮ್ಮೆಲ್ಲರ ಹೊಣೆ

ಯಲ್ಲಾಪುರ : ಮನುಷ್ಯ ಮತ್ತು ಪ್ರಕೃತಿಯ ನಡುವಿನ ಅವಿನಾಭಾವ ಸಂಬಂಧವಿದೆ ಎಂದು ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಕುಮಾರ್.ಎಸ್.ಹೇಳಿದರು.


ಅವರು ಬುಧವಾರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ವಿಶ್ವ ಭೂ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಅಭಿವೃದ್ಧಿಎಂಬುದು ಎಂದಿಗೂ ವಿನಾಶಕ್ಕೆ ದಾರಿಯಾಗಬಾರದು. ಕೈಗಾರಿಕೀಕರಣ ಮತ್ತು ಪರಿಸರ ಮಾಲಿನ್ಯದ ದುಷ್ಪರಿಣಾಮಗಳ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಅಪರ ಸರ್ಕಾರಿ ವಕೀಲ ಎನ್.ಟಿ. ಗಾಂವ್ಕರ್ ಮಾತನಾಡಿ, ಮಾನವನ ಸ್ವಾರ್ಥದಿಂದ ಇಂದು ಪರಿಸರ ನಾಶವಾಗುತ್ತಿದೆ. ಇಂದಿನ ಯುವಕರು ಈ ಪರಿಸರವನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ಪ್ರಮುಖವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರು. ವಕೀಲ ಆರ್.ಕೆ. ಭಟ್ ಅವರು ವಿಶೇಷ ಉಪನ್ಯಾಸ ನೀಡಿದರು. ಅಧ್ಯಕ್ಷತೆವಹಿಸಿ ಕಾಲೇಜಿನ ಪ್ರಾಂಶುಪಾಲ ಡಾ.ಆರ್. ಡಿ. ಜನಾರ್ದನ್ ಮಾತನಾಡಿ, ಭೂಮಿ ಕೇವಲ ಮನುಷ್ಯನಿಗೆ ಮಾತ್ರ ಸೀಮಿತವಾಗಿಲ್ಲ, ಸಸ್ಯ, ಪ್ರಾಣಿ, ಪಕ್ಷಿ ಹಾಗೂ ಕೀಟ ಸಂಕುಲ ಸೇರಿದಂತೆ ಪ್ರತಿಯೊಂದು ಜೀವಿಗೂ ಈ ಭೂಮಿಯ ಮೇಲೆ ಸಮಾನ ಹಕ್ಕಿದೆ. ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳುವುದು ಅತ್ಯಗತ್ಯ ಎಂದರು. ಸಿವಿಲ್ ನ್ಯಾಯಾಧೀಶೆ ಅನಿತಾ ಕುಮಾರಿ ಎಸ್, ಅರೆಕಾಲಿಕ ಸ್ವಯಂಸೇವಕರಾದ ಸಂಜೀವ್ ಕುಮಾರ ಹೊಸ್ಕೇರಿ, ಸುಧಾಕರ, ಸಂಚಾಲಕ ಡಾ.ಓಂ ಪ್ರಕಾಶ್ ನಾಯ್ಕ, ಸಂಚಾಲಕಿ ಶಾಂತೇರಿ ದಾಮೋದರ ಪೈ ಉಪಸ್ಥಿತರಿದ್ದರು.

ಆಯೇಶಾ ಅಂಜುಮ್ ಪ್ರಾರ್ಥಿಸಿದರು. ವೈಶಾಲಿ ದೇವಳಿ ಸ್ವಾಗತಿಸಿದರು. ದಿವ್ಯ ಗೌಡ ವಂದಿಸಿದರು. ಸಕಿನಾ ಶೇಖ್ ನಿರ್ವಹಿಸಿದರು.



ವಿದ್ಯಾಂಜಲಿ ಪಬ್ಲಿಕ್ ಶಾಲೆ: ಶಿಕ್ಷಾ ಪ್ರಶಸ್ತಿ ಪ್ರದಾನ



ಭಟ್ಕಳ: ಪಟ್ಟಣದ ಪ್ರತಿಷ್ಠಿತ ಐಸಿಎಸ್‌ಇ ಪಠ್ಯಕ್ರಮದ ವಿದ್ಯಾಂಜಲಿ ಶಾಲೆಯು ದಕ್ಷಿಣ ಭಾರತದ ಸುಮಾರು 2000ಕ್ಕೂ ಹೆಚ್ಚು ಲೀಡ್ ಸಂಸ್ಥೆಯ ಸಹಭಾಗಿತ್ವದ ಶಾಲೆಗಳ ವಿನೂತನ ಟೆಕ್‌ಬುಕ್ ಶಿಕ್ಷಣ ವಿಭಾಗದಲ್ಲಿ, ಶಿಕ್ಷಾ ಪ್ರಶಸ್ತಿ-2026 ಲಭಿಸಿದೆ.

ಈ ಪ್ರತಿಷ್ಠಿತ ಪ್ರಶಸ್ತಿ, ಶಿಕ್ಷಣ ವ್ಯವಸ್ಥೆಯಲ್ಲಿ ಶಾಲೆಯ ನವೀನತೆ ಮತ್ತು ಅತ್ಯುತ್ತಮ ಬದ್ಧತೆಯನ್ನು, ಆಧುನಿಕ ತಂತ್ರಜ್ಞಾನ ಆಧಾರಿತ ಪಠ್ಯಕ್ರಮದಜೊತೆಗೆವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಂಪೂರ್ಣ ಶಾಲಾ ಸಮುದಾಯದ ಪರಿಶ್ರಮ ಮತ್ತು ಸಮರ್ಪಣೆಯ ಕೊಡುಗೆಯನ್ನು ಗುರುತಿಸಿ ನೀಡಲಾಗಿದೆ.

ಶಾಲೆಯ ಪ್ರಾಂಶುಪಾಲ ರಾಘವೇಂದ್ರ ಕಾಮತ್ ಹಾಗೂ ಶಾಲೆಯ ಲೀಡ್ ಸಂಯೋಜಕಿ ಗೀತಾ ನಾಯ್ಕ ಅವರು ಈ ಪ್ರಶಸ್ತಿಯನ್ನು ಹೈದ್ರಾಬಾದ್‌ನಲ್ಲಿ ನಡೆದ ಸಮಾರಂಭದಲ್ಲಿ ಸ್ವೀಕರಿಸಿದರು. ವಿದ್ಯಾಂಜಲಿ ಪಬ್ಲಿಕ್ ಶಾಲೆಗೆ ಪ್ರಸ್ತುತ 2026 ಸಾಲಿನಲ್ಲಿ ದೊರೆತ ಎರಡನೇ ರಾಷ್ಟ್ರೀಯ ಮಟ್ಟದ ಗೌರವವಾಗಿದೆ.

ತೋಟಗಾರಿಕಾ ಇಲಾಖೆ: ಅರ್ಜಿ ಆಹ್ವಾನ

ಜೋಯಿಡಾ: 2026-27 ನೇ ಸಾಲಿಗೆ ಜೋಯಿಡಾ ತಾಲೂಕಿನ, ತೋಟಗಾರಿಕೆ ಇಲಾಖೆಯಿಂದ ರೈತರಿಗೆ ಈ ಕೆಳಕಾಣಿಸಿದ ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನಿಸಲಾಗಿದೆ.


ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತರಕಾರಿ ಪ್ರದೇಶ ವಿಸ್ತರಣೆ, ಕಾಳುಮೆಣಸು ಪ್ರದೇಶ ವಿಸ್ತರಣೆ, ದಾಲ್ಚಿನ್ನಿ ಪ್ರದೇಶ ವಿಸ್ತರಣೆ, ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆ, ಕಾಳುಮೆಣಸು ಪುನಶ್ಚೇತನ, ತೋಟಗಾರಿಕೆ ಬೆಳೆಗಳಿಗೆ ಪ್ಲಾಸ್ಟಿಕ್ ಹೊದಿಕೆ, ನೀರು ಸಂಗ್ರಹಣಾ ಘಟಕ, ಪ್ರಾಥಮಿಕ ಸಂರಕ್ಷಣಾ ಘಟಕಗಳಿಗೆ ಸಹಾಯಧನ ನೀಡಲಾಗುವುದು.

ಎಸ್‌ಎಂಎಎಂ ಯೋಜನೆಯಡಿ ತೋಟಗಾರಿಕೆಯಲ್ಲಿಯಂತ್ರೋಪ 'ಕರಣಗಳ ಖರೀದಿಗೆ ಸಹಾಯಧನ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನೀರು ಸಂಗ್ರಹಣಾ ಘಟಕ ನಿರ್ಮಾಣ, ಧರಿತಿ ಅಭಾ ಯೋಜನೆಯಡಿ (ಪಪಂಗಡ ವರ್ಗಕ್ಕೆ ಮಾತ್ರ) ಜೇನು ಪೆಟ್ಟಿಗೆ ಮತ್ತು ಜೇನು ತುಪ್ಪ ತೆಗೆಯುವ ಯಂತ್ರೋಪಕರಣದ ಖರೀದಿಗೆ ಸಹಾಯಧನ.

ರಾಜ್ಯ ವಲಯ ಯೋಜನೆಯಡಿ ಜೇನು ಹುಳು ಸಾಕಾಣಿಕೆ ಮತ್ತು ಜೇನು ಪೆಟ್ಟಿಗೆ ಖರೀದಿಗೆ ಸಹಾಯಧನ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿ ಘಟಕ ಅಳವಡಿಸಲು ಸಹಾಯಧನ ನೀಡಲಾಗುವದು.

ಈ ಯೋಜನೆಗಳಿಗೆ ಎಲ್ಲ ವರ್ಗದ ರೈತರಿಗೆ ಸಹಾಯಧನ ಪಡೆಯಲು ಅವಕಾಶ ಇದ್ದು, ಆಸಕ್ತ ರೈತರು ಜೋಯಿಡಾ ತೋಟಗಾರಿಕೆ ಇಲಾಖೆಗೆ ಅರ್ಜಿ ಸಲ್ಲಿಸಿ ಬಹುದಾಗಿದೆ. ಪ್ರಸಕ್ತ ವರ್ಷದ ಗುರಿಗಳ ಹಂಚಿಕೆ ನಂತರ ಕಾರ್ಯಾದೇಶ ನೀಡಲಾಗುವುದು ಹಾಗೂ ಘಟಕಗಳ ಕಾಮಗಾರಿ ಪೂರ್ಣಗೊಂಡ ನಂತರ ಸಹಾಯಧನ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ತಾಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ ಜೋಯಿಡಾ ಸಂಪರ್ಕಿಸಬಹುದು ಎಂದು ಪ್ರಕಟನೆ ತಿಳಿಸಿದೆ.

ಆಗುಂತುಕರು ಪೊಲೀಸರ ವಶಕ್ಕೆ



ಗೋಕರ್ಣ: ಜಲ ಮಾರ್ಗವಾಗಿ ತದಡಿ ಬಂದರಿಗೆ ಆಗಮಿಸಿ ಗೋಕರ್ಣ ಮತ್ತಿತರ ಕಡೆ ದಾಳಿ ನಡೆಸಲು ಯೋಜಿಸಿದ್ದ ಆಗುಂತಕರನ್ನ ಕರಾವಳಿ ಪೊಲೀಸ್ ಪಡೆಯರು ಬುಧವಾರ ತದಡಿ ಹತ್ತಿರದ ಸಮುದ್ರದಲ್ಲಿ ವಶಕ್ಕೆ ಪಡೆದಿದ್ದಾರೆ.

ಬುಧವಾರದಿಂದ ಆರಂಭವಾದ ಸಾಗರ ಕವಚ ಅಣಕು ಕಾರ್ಯಾಚರಣೆಯಲ್ಲಿ ಸೆರೆಯಾದ ಆಗುಂತುಕರ ವೇಷಧಾರಿಗಳು ಇವರಾಗಿದ್ದಾರೆ. ಪ್ರವಾಸಿ ತಾಣ ಹಾಗೂ ಆಯಕಟ್ಟಿನ ಎಲ್ಲೆಡೆ ಕರಾವಳಿ ಪೊಲೀಸ್ ಹಾಗೂ ಪೊಲೀಸ್ ಇಲಾಖೆ ನಿಗಾ ಇಟ್ಟಿತ್ತು. ಇದೇ ವೇಳೆ ಕಾರವಾರದಿಂದ ಆಗುಂತಕರಾಗಿ ಜಲಮಾರ್ಗದಲ್ಲಿ ಬಂದ ನೌಕಾಪಡೆಯ ಏಳು ಜನರಿದ್ದ ಬೋಟ್‌ನ್ನ ಕರಾವಳಿ ಕಾವಲು ಪೊಲೀಸ್ ಸಮುದ್ರದಲ್ಲಿ ಗಸ್ತಿನಿಲ್ಲಿದ್ದಾಗ ಅನುಮಾನಗೊಂಡ ಹಿಡಿದಿದ್ದು, ನಂತರ ವಶಕ್ಕೆ ಪಡೆದು ತದಡಿ ಬಂದರಿಗೆ ಕರೆ ತಂದು ಮುಂದಿನ ಕ್ರಮ ಜರುಗಿಸಲಾಯಿತು.

ಕಾರ್ಯಾಚರಣೆಯಲ್ಲಿ ಕರಾವಳಿ ಕಾವಲು ಪಡೆಯ ಪಿ.ಐ. ಸಂಪತ್ ಕುಮಾರ, ಪಿಎಸ್‌ಐ ಭರತ ನಾಯಕ, ಹಾಗೂ ಸಿಬ್ಬಂದಿ, ಗೋಕರ್ಣ ಠಾಣೆಯ ಪಿ.ಐ. ಶ್ರೀಧರ ಎಸ್.ಆರ್., ಪಿ.ಎಸ್.ಐ. ಅನಿಲ ಹಾಗೂ ಸಿಬ್ಬಂದಿ ಇದ್ದರು.

ಯಕ್ಷಗಾನ ಕಲೆ ಬೆಳೆಸುವ ಕಾರ್ಯವಾಗಲಿ

ಕುಮಟಾ: ಸಮೃದ್ಧ ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾದ ಯಕ್ಷಗಾನ ಕಲೆಯನ್ನು ಗ್ರಾಮೀಣ ಮಟ್ಟದಲ್ಲಿ ಬೆಳೆಸುವ ಉದ್ದೇಶದಿಂದ 'ಯಕ್ಷ ಕುಟೀರ' ಎಂಬ ಯಕ್ಷಗಾನ ತರಬೇತಿ ಕೇಂದ್ರವು ಮೇಲಿನಕೇರಿ ಹೆಗಡೆ ಗ್ರಾಮದಲ್ಲಿ ಭವ್ಯವಾಗಿ ಉದ್ಘಾಟಿಸಲಾಯಿತು. ಲಕ್ಷ್ಮಣ ಟಿ. ಪಟಗಾರ ಪ್ರಾಸ್ತಾವಿಕವಾಗಿ ಮಾತನಾಡಿ, ಯಕ್ಷಗಾನವು ಕೇವಲ ರಂಗಕಲೆ ಮಾತ್ರವಲ್ಲ, ಅದು ಜೀವನ ಶೈಲಿಯನ್ನು ರೂಪಿಸುವ ಮಹತ್ತರ ಸಾಧನವಾಗಿದೆ. ಈ ಕಲೆಯು ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದರ ಜೊತೆಗೆ ಪುರಾಣ ಜ್ಞಾನ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ರೂಢಿಸುತ್ತದೆ ಎಂದು ಹೇಳಿದರು. ಯಕ್ಷಗಾನ ದಿಗ್ಗಜರಾದ ಮಾಧವ ಪಟಗಾರ ಅವರು ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ಸರಿಯಾದ ತರಬೇತಿ ಇಲ್ಲದೆ ರಂಗ ಪ್ರವೇಶಿಸುವುದು ಕಲಾವಿದರಿಗೆ ಕಷ್ಟಕರ. ಇಂತಹ ತರಬೇತಿ ಕೇಂದ್ರಗಳು ಹೊಸ ಪ್ರತಿಭೆಗಳಿಗೆ ದಾರಿ ತೋರಿಸುವ ದೀಪವಾಗಿವೆ. ಇಂದಿನ ಮಕ್ಕಳಿಗೆ ಇದು ಒಂದು ಸುವರ್ಣಾವಕಾಶವಾಗಿದ್ದು, ಹೆಚ್ಚಿನವರು ಇದರ ಸದುಪಯೋಗ ಪಡೆಯಬೇಕು ಎಂದು ಹಾರೈಸಿದರು. ಯಕ್ಷಗಾನ ತರಬೇತಿದಾರರಾದ ಮಹೇಶ ಭಂಡಾರಿ, ಅಧ್ಯಕ್ಷತೆ ವಹಿಸಿದ್ದ ಉಪನ್ಯಾಸಕ ಪ್ರಮೋದ ಹೆಗಡೆ ಕಡಕೇರಿ ಮಾತನಾಡಿದರು. ಯಕ್ಷಗಾನ ಕಲಾವಿದ ಗಿರೀಶ ಪಟಗಾರ, ವಿಷ್ಣು ಪಟಗಾರ ಹಾಗೂ ಬೊಬ್ಬು ಪಟಗಾರ ಶುಭ ಹಾರೈಸಿದರು. ಚಂಡೆ ಕಲಿಕಾರ್ಥಿ ಮಂಜುನಾಥ ಗುನಗ ಹಳ್ಕಾರ್ ಸೇರಿದಂತೆ ಯೋಗೇಶ್ ಪಟಗಾರ, ಮಂಜುನಾಥ ರಾಮದಾಸ ಪಟಗಾರ ಮತ್ತು ಅನೇಕ ಗ್ರಾಮಸ್ಥರು, ಪಾಲಕರು ಹಾಗೂ ಕಲಿಕಾರ್ಥಿಗಳು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಪೂರ್ವಭಾವಿ ಸಭೆ

ಹಾವೇರಿ: ಜಿಲ್ಲಾಡಳಿತದಿಂದ ಭಗವಾನ್ ಬುದ್ಧ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ಏ.23ರಂದು ಸಂಜೆ ಲ 4 ಗಂಟೆಗೆ ಜಿಲ್ಲಾಕಾರಿಗಳ ಕೋರ್ಟ್‌ಹಾಲ್‌ನಲ್ಲಿ ಅಪರ ಜಿಲ್ಲಾಕಾರಿಗಳ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಭಗೀರಥ ಜಯಂತಿ

ಹಾವೇರಿ : ಭಗೀರಥ ಜಯಂತಿ ಕಾರ್ಯಕ್ರಮ ಏ.23ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಕಾರಿಗಳ ಸಭಾಭವನದಲ್ಲಿ, ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಗುವುದು. ಎಲ್ಲಾ ಜಿಲ್ಲಾ ಮಟ್ಟದ ಅಕಾರಿಗಳು ಹಾಗೂ ಸಿಬ್ಬಂದಿಗಳು, ಸಮಾಜ ಬಾಂಧವರು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ವಿವಿಧ ಕೌಶಲ್ಯಾಧಾರಿತ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ : ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ತರಬೇತಿ ಸಂಸ್ಥೆಯಲ್ಲಿ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ 30 ದಿನಗಳ ಸೋಲಾರ ಟೆಕ್ನಿಷಿಯನ್, ಜೆಸಿಬಿ ಆಪರೇಟರ್, ಇಲೆಕ್ಟ್ರಿಕಲ್ ವೆಹಿಕಲ್ ಸರ್ವಿಸಿಂಗ್, ಕಾರು ಚಾಲನೆ ಮತ್ತು ರೆಫ್ರಿಜರೇಟರ್ ಮತ್ತು ಏರ ಕಂಡಿಷನಿಂಗ್ ಸರ್ವಿಸಿಂಗ್ ತರಬೇತಿ ಆಯೋಜಿಸಿದೆ.

ತರಬೇತಿಯು ಊಟ ಮತ್ತು ವಸತಿಯೊಂದಿಗೆ ಉಚಿತವಾಗಿರುತ್ತದೆ. ಅಭ್ಯರ್ಥಿಗಳು 18 ರಿಂದ 50ವರ್ಷದೊಳಗಿರಬೇಕು. ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಹಾಗೂ ಯುವತಿಯರಿಗೆ ಆದ್ಯತೆ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವ ವಿವರಗಳೊಂದಿಗೆ ಏ.30ರೊಳಗಾಗಿ ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 94834 85489, ಇಲ್ಲಿ ಸಂಪರ್ಕಿಸಲು ಕೋರಲಾಗಿದೆ.



ಹಾವೇರಿ: ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದಿಂದ ಹಾವೇರಿ ಜಿಲ್ಲಾ ಕಾರಾಗೃಹದಲ್ಲಿನ ವಿಚಾರಣಾ ಕೈದಿಗಳಿಗೆ ತಂಬಾಕಿನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ವ್ಯಸನ ಮುಕ್ತ ಚಿಕಿತ್ಸಾ ಸೌಲಭ್ಯಗಳ ಕುರಿತು ಆರೋಗ್ಯ ಶಿಕ್ಷಣ ಕಾರ್ಯಕ್ರಮ ಬುಧವಾರ ಜಿಲ್ಲಾ ಕಾರಾಗೃಹದಲ್ಲಿ ಜರುಗಿತು.

ಆಕಳು, ಕರುವಿನ ಕಳ್ಳತನ

ಹಾವೇರಿ: ದನದ ಕೊಟ್ಟಿಗೆಯಲ್ಲಿ ಕಟ್ಟಿದ್ದ ಆಕಳು ಹಾಗೂ ಕರುವನ್ನು ಕಳುವು ಮಾಡಿರುವ ಘಟನೆ ರಟ್ಟಿಹಳ್ಳಿ ತಾಲೂಕು ಹಳ್ಳೂರು ಗ್ರಾಮದ ಬಳಿ ನಡೆದಿದೆ. ಹಳ್ಳೂರು ಗ್ರಾಮದ ಗೋವಿಂದ ಶಿವಪ್ಪ ವಾಸನದ ಎಂಬುವವರಿಗೆ ಸೇರಿದ ಜಾನುವಾರುಗಳು ಕಳ್ಳತನವಾಗಿವೆ. ಹಳ್ಳೂರ ಗ್ರಾಮದ ಹೊರವಲಯದಲ್ಲಿರುವ ತನ್ನ ಜಮೀನಿನಲ್ಲಿ ಕೊಟ್ಟಿಗೆಯಲ್ಲಿ ಕಟ್ಟಿದ್ದ 60 ಸಾವಿರ ರೂ.ಕಿಮ್ಮತ್ತಿನ ಜವಾರಿ ಆಕಳು, 20 ಸಾವಿರ ರೂ.ಕಿಮ್ಮತ್ತಿನ ಜರ್ಸಿ ಆಕಳು ಕರುವನ್ನು ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ರಟ್ಟೀಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆ ಕಣ್ಮರೆ

ಹಾವೇರಿ: ಧರ್ಮಸ್ಥಳ ದೇವಸ್ಥಾನಕ್ಕೆ ಹೋದ ಮಹಿಳೆಯೊಬ್ಬರು ವಾಪಾಸ್ ಬಾರದೆ ಕಾಣೆಯಾಗಿರುವ ಘಟನೆ ರಟ್ಟೀಹಳ್ಳಿ ತಾಲೂಕು ಗುಡ್ಡದ ಮಾದಾಪುರ ಗ್ರಾಮದಲ್ಲಿ ನಡೆದಿದೆ. ಸುಧಾ ಕೋಂ.ಶಿವರಾಜ ಕಡೂರ ಉರ್ಫ್ ನಾಯಕ (35) ಕಾಣೆಯಾದ ಮಹಿಳೆಯಾಗಿದ್ದಾಳೆ. ಇವರು ಏ.12ರಂದು ಸಂಜೆ 6ಕ್ಕೆ ದೇವಸ್ಥಾನಕ್ಕೆಂದು ಧರ್ಮಸ್ಥಳಕ್ಕೆ ಹೋಗಿದ್ದು, ವಾಪಾಸ್ ಮನೆಗೆ ಬಾರದೆ ಕಾಣೆಯಾಗಿದ್ದಾಳೆ ಎಂದು ಆಕೆಯ ಪತಿ ಶಿವರಾಜ ಕಡೂರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟೀಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬಂಕಾಪೂರ : ಬಂಕಾಪೂರ ಪಟ್ಟಣದ ಅತ್ಯಂತ ಪ್ರಾಚೀನ ದೈವ ಸನ್ನಿಧಿಗಳದ ಶ್ರೀ ಕೇಶವ ದೇವರು ಹಾಗೂ ವೀರನರಸಿಂಹ ದೇವಸ್ಥಾನದ ಪುನಃ ಪ್ರತಿಷ್ಠಾಪನಾ ಕಾರ್ಯವನ್ನು ಉತ್ತರಾದಿಮಠದ ಸತ್ಯಾತ್ಮತೀರ್ಥ ಸ್ವಾಮೀಜಿಗಳು ನೆರವೇರಿಸಿದರು.

ತೆರಿಗೆ ಸಂಗ್ರಹಕ್ಕೆ ಹಿನ್ನಡೆ: ಅಧಿಕಾರಿಗಳಿಗೆ ತರಾಟೆ

ಹಾವೇರಿ: ಹಾವೇರಿನಗರಸಭೆಯಲ್ಲಿನಿರೀಕ್ಷಿತಮಟ್ಟದಲ್ಲಿತೆರಿಗೆಸಂಗ್ರಹವಾಗದಹಿನ್ನಲೆಯಲ್ಲಿ ವಿಧಾನಸಭೆಯ ಉಪಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ ಅವರು ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಸ್ಥಳೀಯ ನಗರಸಭೆಗೆ ಭೇಟಿ ನೀಡಿ ಪೌರಾಯುಕ್ತರು ಸೇರಿದಂತೆ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿದ ಅವರು, ಏಪ್ರಿಲ್ ತಿಂಗಳೊಳಗೆ ಸಂಗ್ರಹವಾಗಬೇಕಿದ್ದ ಟ್ಯಾಕ್ಸ್ ಹಣ ಗಣನೀಯವಾಗಿ ಕಡಿಮೆಯಾಗಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನಗರಸಭೆಯ ಕಾರ್ಯವೈಖರಿಯನ್ನು ಸುಧಾರಿಸಿಕೊಳ್ಳಬೇಕು. ಸಾರ್ವಜನಿಕ ವಿರೋಧಿ ನೀತಿಯನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ. ಯಾರು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕೆಲಸ ಮಾಡುತ್ತಾರೋ ಅವರು ಮಾತ್ರ ಇಲ್ಲಿರಿ, ಉಳಿದವರು ತಕ್ಷಣವೇ ಇಲ್ಲಿಂದ ಹೊರಗೆ ಹೋಗಿ ಎಂದು ಕಟುವಾದ ಶಬ್ದಗಳಲ್ಲಿ ಎಚ್ಚರಿಸಿದರು. ಅಭಿವೃದ್ಧಿಗೆ ಸಹಕಾರ ಅಗತ್ಯ. ಹಾವೇರಿ ನಗರದಲ್ಲಿ ಜನರ ಸಹಕಾರದೊಂದಿಗೆ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ನಗರವನ್ನು ಮಾದರಿಯನ್ನಾಗಿ ಮಾಡಲು ನಾನು ಸಿದ್ಧನಿದ್ದೇನೆ. ಅದಕ್ಕೆ ಪೂರಕವಾಗಿ ಅಧಿಕಾರಿಗಳು ಶ್ರಮವಹಿಸಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ನಗರಸಭೆ ಮಾಜಿ ಸದಸ್ಯ ಆತಾವುಲ್ಲಾ ಖಾಜಿ, ಮುಖಂಡರಾದ ಸಿ.ಎಸ್. ಲಕ್ಷ್ಮೇಶ್ವರಮಠ, ಶಂಕರ್ ಮೆಹರವಾಡೆ, ಮಾಲಿಂಗಯ್ಯ ಹಿರೇಮಠ, ಉಮರ್ ಇನಾಮದಾರ್ ಸೇರಿದಂತೆ ಇತರರು ಇದ್ದರು.



ಹಾವೇರಿ: ಸ್ಥಳೀಯ ನಗರಸಭೆ ಕಚೇರಿಗೆ ವಿಧಾನಸಭೆ ಉಪಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ ಅವರು ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ ಅಭಿಮತ

ಸಮಾನತೆಗೆ ಶಂಕರಾಚಾರ್ಯರ ತತ್ವ ಪ್ರಸ್ತುತ

ಹಾವೇರಿ: ಅಲ್ಪ ವಯಸ್ಸಿನಲ್ಲಿಯೇ ವೇದಾಂತ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿ ಅದ್ವೈತ ತತ್ವವನ್ನು ಜಗತ್ತಿಗೆ ಪರಿಚಯಿಸಿದ ಮಹಾನ್ ದಾರ್ಶನಿಕರು ಜಗದ್ಗುರು ಆದಿ ಶಂಕರಾಚಾರ್ಯರು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ ಹೇಳಿದರು.

ನಗರದ ರಾಮಮಂದಿರದಲ್ಲಿ ಜಿಲ್ಲಾ ಆಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಾವೇರಿ ಜಿಲ್ಲಾ ಬ್ರಾಹ್ಮಣ ಸಮಾಜದ ಆಶ್ರಯದಲ್ಲಿ ಆಯೋಜಿಸಿದ್ದ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಶಂಕರಾಚಾರ್ಯರ ತತ್ವಗಳು ಸಮಾಜದಲ್ಲಿ ಸೌಹಾರ್ದತೆ, ಸಮಾನತೆ ಹಾಗೂ ಧಾರ್ಮಿಕ ಸಹಿಷ್ಣುತೆಯನ್ನು ಬೆಳೆಸುವಲ್ಲಿ ಇಂದಿಗೂ ಪ್ರಸ್ತುತವಾಗಿವೆ. ಅವರ ಸಂದೇಶಗಳು ಸಮಾಜದ ಸಮಾನತೆಗೆ ಆದರ್ಶವಾಗಿವೆ ಎಂದು ಹೇಳಿದರು.

ಚಿಕ್ಕಲಿಂಗದಹಳ್ಳಿ ಸರಕಾರಿ ಪ್ರೌಢಶಾಲೆಯ ಸಹ ಶಿಕ್ಷಕಿ ಡಾ.ಸೀತಾ ಧೀರೇಂದ್ರಾಚಾರ ಕಡಕೋಳ ಅವರು ವಿಶೇಷ ಉಪನ್ಯಾಸ ನೀಡಿ, ಜಗದ್ಗುರು ಶಂಕರಾಚಾರ್ಯರ ವಿಚಾರಧಾರೆಗಳು ಮಾನವಕುಲಕ್ಕೆ ದಾರಿದೀಪವಾಗಿವೆ. ಭಾರತದೆಲ್ಲೆಡೆ ಪಾದಯಾತ್ರೆ ನಡೆಸಿ ತಮ್ಮ ತತ್ವಗಳನ್ನು ಪ್ರಸಾರ ಮಾಡಿದ ಅವರು ದೇಶದ ನಾಲ್ಕು ದಿಕ್ಕುಗಳಲ್ಲಿ ಪೀಠಗಳನ್ನು ಸ್ಥಾಪಿಸಿ, ಸಂಸ್ಕೃತಿ ಹಾಗೂ ಧರ್ಮದ ಏಕತೆಯನ್ನು ಬಲಪಡಿಸಿದರು ಎಂದು ಹೇಳಿದರು.

ಅವರು ರಚಿಸಿದ ಭಜಗೋವಿಂದಂ, ಸೌಂದರ್ಯಲಹರಿ, ವಿವೇಕ ಚೂಡಾಮಣಿ ಸೇರಿದಂತೆ ಅನೇಕ ಕೃತಿಗಳು ಇಂದಿಗೂ ಜನರಿಗೆ ಜ್ಞಾನದ ಮಾರ್ಗದರ್ಶನ ನೀಡುತ್ತಿವೆ. ಶಂಕರಾಚಾರ್ಯರು ಮಹಾನ್ ಚಿಂತಕರಾಗಿದ್ದು, ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ವಿಶ್ವಮಟ್ಟದಲ್ಲಿ ಎತ್ತಿಹಿಡಿದವರು ಎಂದು ಹೇಳಿದರು.ಕಾರ್ಯಕ್ರಮಕ್ಕೂ ಮುನ್ನ ಚಂದ್ರಾಪಟ್ಟಣ ಓಣಿಯ ಶಂಕರಭಾರತಿ ಮಠದಿಂದ ಶ್ರೀರಾಮ ಮಂದಿರದವರೆಗೆ ಶಂಕರಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಬ್ರಾಹ್ಮಣ ಸಮಾಜದ ಅಧ್ಯಕ್ಷ ವಸಂತ ಮೊಕ್ತಾಲಿ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಸುರೇಶ ಕಡಕೋಳ ಸೇರಿದಂತೆ ವಿವಿಧ ಸಮುದಾಯದ ಮುಖಂಡರು ಇತರರು ಉಪಸ್ಥಿತರಿದ್ದರು.



> **ಶಂಕರಾಚಾರ್ಯರ ತತ್ವಗಳು ಜೀವನದಲ್ಲಿ ಶಾಂತಿ, ತಾಳ್ಮೆ ಮತ್ತು ಸದ್ಭಾವನೆ ಬೆಳೆಸಲು ಪೂರಕವಾಗಿವೆ. ಇಂದಿನ ಸಮಾಜದಲ್ಲಿ ಕಂಡುಬರುವ ಅಸಮಾನತೆ, ದ್ವೇಷ ಮತ್ತು ಅಹಿತಕರ ಘಟನೆಗಳನ್ನು ನಿವಾರಿಸಲು ಅವರ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ.**
> ■ ದತ್ತಣ್ಣ
> ಬ್ರಾಹ್ಮಣ ಸಮಾಜದ ಉಪಾಧ್ಯಕ್ಷ

ವಿವಿಧ ಕಾಮಗಾರಿಗೆ ಶಾಸಕ ಭೂಮಿಪೂಜೆ

ಹಾವೇರಿ: ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಹಾವೇರಿ ತಾಲೂಕಿನ ಬಿದರಗಡ್ಡಿ ಗ್ರಾಮದಲ್ಲಿ 4.55 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕರಾದ ಬಸವರಾಜ ಶಿವಣ್ಣನವರ ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಬಿದರಗಡ್ಡಿ ಗ್ರಾಮದ ಹೊಳಿಬಸವೇಶ್ವರ ದೇವಸ್ಥಾನದ ಮಹಾದ್ವಾರ ನಿರ್ಮಾಣಕ್ಕೆ ಮುಖ್ಯಮಂತ್ರಿ ವಿಶೇಷ ಅನುದಾನದಲ್ಲಿ 5ಲಕ್ಷ ರೂ., ಗ್ರಾಮದ ಅಂಜುಮನ್ -ಏ-ಇಸ್ಲಾಂ ಕಮಿಟಿ ಮತ್ತು ಹಜರತ ದಾವಲ ಮಲಿಕ ಹಾಗೂ ರಾಜಾಬಾಕ್ಷರ್ ಕಮಿಟಿ ಅಭಿವೃದ್ಧಿ ಕಾಮಗಾರಿಗೆ ಶಾಸಕರ ಅನುದಾನದಲ್ಲಿ 5ಲಕ್ಷ ರೂ., ಬಿದರಗಡ್ಡಿ ಗ್ರಾಮದ ಅಲ್ಪಸಂಖ್ಯಾತರ ಕಾಲೋನಿಯಲ್ಲಿ ಸಿ.ಸಿ. ರಸ್ತೆ ಮತ್ತು ಸಿ.ಸಿ. ಗಟಾರ ನಿರ್ಮಾಣ ಕಾಮಗಾರಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 10ಲಕ್ಷ ರೂ., ಸಂಗೂರ-ತಿಳವಳ್ಳಿ ರಸ್ತೆಯಿಂದ ಬಿದರಗಡ್ಡಿ ಗ್ರಾಮದ ರಸ್ತೆ ಅಭಿವೃದ್ಧಿಗೆ 3ಕೋಟಿ ರೂ., ಬಿದರಗಡ್ಡಿಯಿಂದ ಎಂ.ಎ. ತಿಮ್ಮಾಪುರ ರಸ್ತೆ ಅಭಿವೃದ್ಧಿಗೆ 50 ಲಕ್ಷ, ಬಿದರಗಡ್ಡಿಯಿಂದ ದಿಡಗೂರು ರಸ್ತೆ ಅಭಿವೃದ್ಧಿಗೆ 50ಲಕ್ಷ, ಬಿದರಗಡ್ಡಿ ಗ್ರಾಮದ ಅಲ್ಪಸಂಖ್ಯಾತರ ಕಾಲೋನಿ (ಪ್ಲಾಟ್‌ನಲ್ಲಿ) ಸಿ.ಸಿ. ಗಟಾರ ನಿರ್ಮಾಣ ಕಾಮಗಾರಿಗೆ 25ಲಕ್ಷ ರೂ., ಬಿದರಗಡ್ಡಿ ಗ್ರಾಮದ ಮೆಹಬೂಬ ಸುಬಾನಿ ದರ್ಗಾ ದುರಸ್ತಿ ಕಾಮಗಾರಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 10ಲಕ್ಷ ರೂ., ಅನುದಾನ ಒದಗಿಸಲಾಗಿದ್ದು, ಸಂಬಂಧಿಸಿದ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಪ್ರಮುಖರಾದ ಸುರೇಶಗೌಡ ಪಾಟೀಲ, ವಿರೇಶ ಮತ್ತಿಹಳ್ಳಿ, ಸುರೇಶ ಮಾಳಗಿ, ಪ್ರಕಾಶಗೌಡ ಪಾಟೀಲ, ಹೇಮನಗೌಡ ಬೇವಿನಮರದ, ಹಾಸೀಮ್ ಚಾಮನಳ್ಳಿ ಇತರರಿದ್ದರು.



ನಾಳೆ ವಿದ್ಯುತ್ ವ್ಯತ್ಯಯ

ಹಾವೇರಿ: ಬಸವನಕಟ್ಟಿ 110 ಕೆ.ವ್ಹಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಏ. 24ರಂದು ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಅಂದು ಬಸವನಕಟ್ಟಿ 110 ಕೆ.ವ್ಹಿ ವಿದ್ಯುತ್ ವಿತರಣಾಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಫೀಡರ್‌ಗಳಲ್ಲಿ ಬೆಳಗ್ಗೆ 10 ರಿಂದ ಮಧ್ಯಾಹ್ನ 03 ಗಂಟೆ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಆದ್ದರಿಂದ ಈ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಬರುವ ಬಸವನಕಟ್ಟಿ, ಸೋಮನಕಟ್ಟಿ, ಮಾಚಾಪುರ, ಬೂದಗಟ್ಟಿ, ಕನವಳ್ಳಿ, ಹನುಮನಹಳ್ಳಿ, ಕಾಟೇನಹಳ್ಳಿ, ಅಗಡಿ, ತಿಮ್ಮೇನಹಳ್ಳಿ, ಮಾಳಾಪುರ, ಗಾಂಪುರ, ಜಂಗಮನಕೊಪ್ಪ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ವಿತರಿಸಿ

ಹಾವೇರಿ: ಹಾವೇರಿ ತಾಲೂಕು ಕೃಷಿ ಪ್ರಧಾನವಾಗಿದ್ದು, ರೈತರಿಗೆ ಗುಣಮಟ್ಟದ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳನ್ನು ನಿಗದಿತ ದರದಲ್ಲಿ ಪೂರೈಸುವುದು ಪ್ರತಿಯೊಬ್ಬ ಮಾರಾಟಗಾರರ ಮತ್ತು ತಾಲೂಕು ಆಡಳಿತದ ಆದ್ಯಕರ್ತವ್ಯವಾಗಿದೆ, ಎಂದು ವಿಧಾನಸಭೆಯ ಉಪಸಭಾಧ್ಯಕ್ಷ ಹಾಗೂ ಶಾಸಕ ರುದ್ರಪ್ಪ ಮಾನಪ್ಪ ಲಮಾಣಿ ಅವರು ಹೇಳಿದರು.

ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೃಷಿ ಪರಿಕರ ಮಾರಾಟಗಾರರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿ,ತಾಲೂಕಿನಲ್ಲಿ ಪ್ರಸ್ತುತ ರಸಗೊಬ್ಬರಗಳ ಯೂರಿಯಾ 1594 ಟನ್, ಡಿಎಪಿ 758 ಟನ್, ಪೊಟ್ಯಾಶ್ 167ಟನ್, ಕಾಂಪ್ಲೆಕ್ಸ್ ರಸಗೊಬ್ಬರ 2394 ಟನ್ ಹೀಗೆ ಒಟ್ಟು ತಾಲ್ಲೂಕಿನಲ್ಲಿ ಪ್ರಸ್ತುತ ಒಟ್ಟು 5079 ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದೆ. ಯಾವುದೇ ಕಾರಣಕ್ಕೂ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅದರಂತೆ ಮಾರಾಟಗಾರರು ರೈತರ ಆಧಾರ್ ಸಂಖ್ಯೆ ಪಡೆದು ಕಡ್ಡಾಯವಾಗಿ ಕಣಖ (ಕಟಜ್ಞಿಠಿ ಟ್ಟ ಖಚ್ಝಿಛಿ)) ಯಂತ್ರದ ಮೂಲಕವೇ ರಸಗೊಬ್ಬರ ಮಾರಾಟ ಮಾಡಬೇಕು. ರಸಗೊಬ್ಬರಗಳನ್ನು ಕೇವಲ ಅಧಿಕೃತ ಸ್ಥಳಗಳಲ್ಲಿ ಮಾತ್ರ ದಾಸ್ತಾನು ಮಾಡಬೇಕು. ಅನಧಿಕೃತ ಜಾಗದಲ್ಲಿ ದಾಸ್ತಾನು ಪತ್ತೆಯಾದಲ್ಲಿ ತಕ್ಷಣವೇ ಜಪ್ತು ಮಾಡಲಾಗುವುದು. ಕಳಪೆ ಬೀಜ ಅಥವಾ ಗೊಬ್ಬರ ಮಾರಾಟ ಮಾಡುವವರ ವಿರುದ್ಧ ಕೃಷಿ ಇಲಾಖೆ ಅಧಿಕಾರಿಗಳು ಕಠಿಣ ಕಾನೂನು ಕ್ರಮ ಜರುಗಿಸಲಿದ್ದಾರೆ. ಮಳಿಗೆಗಳಲ್ಲಿ ದಾಸ್ತಾನು ವಿವರ ಹಾಗೂ ಎಂಆರ್‌ಪಿ (ಗರಿಷ್ಠ ಮಾರಾಟ ದರ) ಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಕಡ್ಡಾಯವಾಗಿ ಪ್ರದರ್ಶಿಸಬೇಕು. ರೈತರಿಗೆ ರಸಗೊಬ್ಬರ ನೀಡಿದ ನಂತರ ಕಡ್ಡಾಯವಾಗಿ ಅಧಿಕೃತ ರಶೀದಿ ನೀಡಬೇಕು ಎಂದು ಸೂಚಿಸಿದರು. ರಸಗೊಬ್ಬರ ಮತ್ತು ಬಿತ್ತನೆ ಬೀಜಗಳು ಅಗತ್ಯ ವಸ್ತುಗಳಾಗಿವೆ. ಇವುಗಳ ವಿತರಣೆಯಲ್ಲಿ ಯಾವುದೇ ಅಕ್ರಮ ಅಥವಾ ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಗೋವಿಂದ ನಾಯಕ, ಸಹಾಯಕ ಕೃಷಿ ನಿರ್ದೇಶಕ ವೀರಭದ್ರಪ್ಪ, ಮುಖಂಡರಾದ ರುದ್ರಪ್ಪ ಹಾದಿಮನಿ ಸೇರಿದಂತೆ ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.




ಶೋಷಿತ ಸಮುದಾಯಕ್ಕೆ ಜನಗಣತಿಯಿಂದ ಅನುಕೂಲ

ಹಾನಗಲ್ಲ: 2026ರಲ್ಲಿ ಜನಗಣತಿ ಪೂರ್ಣಗೊಂಡ ನಂತರ ದೇಶದಲ್ಲಿ ಕ್ಷೇತ್ರ ಪುನರ್ವಿಂಗಡಣೆ ಆದರೆ ಬಿಜೆಪಿಯ ಮೂಲ ಯೋಚನೆ, ಸಿದ್ಧಾಂತಗಳಿಗೆ ಧಕ್ಕೆ ಉಂಟಾಗಲಿದೆ. ಆರ್ಥಿಕವಾಗಿ ಹಿಂದುಳಿದ ಜನರಿಗೆ ಹಾಗೂ ಶೋಷಿತ ಸಮುದಾಯಗಳಿಗೆ ಅನುಕೂಲವಾಗಲಿದೆ ಎನ್ನುವ ಉದ್ದೇಶದಿಂದ ತರಾತುರಿಯಲ್ಲಿ ಮಹಿಳಾ ಮೀಸಲಾತಿ ನೆಪದಲ್ಲಿ ತನ್ನ ಅಜೆಂಡಾ ಕಾರ್ಯರೂಪಕ್ಕೆ ತರಲು ಬಿಜೆಪಿ ಹೊರಟಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ತಮ್ಮ ಜನಸಂಪರ್ಕ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಗಣತಿ ಮತ್ತು ಕ್ಷೇತ್ರ ಪುನರ್ವಿಂಗಡಣೆ ಆದರಷ್ಟಕ್ಕೆ ಅದು ನಡೆಯಲಿ. ಅಲ್ಲಿಯವರೆಗೂ ಕಾಯದೇ ಕೇಂದ್ರ ಸರ್ಕಾರ ತಕ್ಷಣವೇ ಲೋಕಸಭೆಯ ವಿಶೇಷ ಅಧಿವೇಶನ ಕರೆದು ಲೋಕಸಭೆ, ವಿಧಾನಸಭೆಗಳಲ್ಲಿ ಇರುವ ಹಾಲಿ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಶೇ. 33 ರಷ್ಟು ಮಹಿಳಾ ಮೀಸಲಾತಿ ಜಾರಿಗೆ ತರಲಿ. ಇದಕ್ಕೆ ಕಾಂಗ್ರೆಸ್ ಸಂಪೂರ್ಣ ಸಹಕಾರ, ಬೆಂಬಲ ನೀಡಲಿದೆ ಎಂದು ತಿಳಿಸಿದರು.

ಇಡೀ ದೇಶದಲ್ಲಿ ಮಹಿಳೆಯರಿಗೆ ಒಳ್ಳೆಯ ಅವಕಾಶ ನೀಡಿರುವುದು ಕಾಂಗ್ರೆಸ್ ಪಕ್ಷದ ಇಚ್ಛಾಶಕ್ತಿಯಿಂದ ಸಾಧ್ಯವಾಗಿದೆ. ಇದರ ಪರಿಣಾಮವಾಗಿ ಹಾನಗಲ್ ತಾಲೂಕೊಂದರಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ 300 ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳಿದ್ದಾರೆ. ಕಾಂಗ್ರೆಸ್ ಯಾವಾಗಲೂ ಮಹಿಳೆಯರ ಪರ ಎಂದರು.

ತೆರಿಗೆ ಹಂಚಿಕೆಯಲ್ಲಿಯೂ ಕೇಂದ್ರ ಸರ್ಕಾರ ದಕ್ಷಿಣ ರಾಜ್ಯಗಳಿಗೆ ಅನ್ಯಾಯ ತಾರತಮ್ಯ ಮಾಡುತ್ತಿದೆ. ಈಗ ಕ್ಷೇತ್ರ ಪುನರ್ವಿಂಗಡಣೆ ವಿಚಾರದಲ್ಲಿಯೂ ಸಹ ಅದೇ ಹುನ್ನಾರ ನಡೆಸಿರುವುದು ಜಗಜ್ಜಾಹೀರಾಗಿದೆ. ಇದಕ್ಕೆ ನಮ್ಮ ಪಕ್ಷದಿಂದ ಮಹಿಳೆಯರಿಂದಲೇ ಬೀದಿಗಿಳಿದು ಪ್ರತಿಭಟನೆ ನಡೆಸಲು ಮುಂದಾಗುತ್ತಾರೆ. ನಮ್ಮ ಈ ವಿಚಾರವನ್ನು ಪಕ್ಷಾತೀತವಾಗಿ ಎಲ್ಲ ಮಹಿಳೆಯರು ಬೆಂಬಲಿಸಬೇಕು ಎಂದರು. ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಪದಾಧಿಕಾರಿಗಳು, ಮಹಿಳಾ ಜನಪ್ರತಿನಿಧಿಗಳು ಇದ್ದರು.



ಬೆಳೆಹಾನಿ ಪರಿಹಾರ ಒದಗಿಸಲು ಒತ್ತಾಯ

ರಾಣೇಬೆನ್ನೂರ: ತಾಲೂಕಿನಲ್ಲಿ ಒಂದೇ ರಾತ್ರಿ ಗುಡುಗು, ಸಿಡಿಲು ಹಾಗೂ ಬಿರುಗಾಳಿ ಸಮೇತ ಸುರಿದ ಭಾರಿ ಮಳೆಗೆ ತೋಟಗಾರಿಕೆ ಬೆಳೆ, ಭತ್ತ, ರೇಷ್ಮೆ ಮನೆ ಹಾಗೂ ಸಾರ್ವಜನಿಕರ ಆಸ್ತಿಗಳಿಗೆ ಹಾನಿ ಉಂಟಾಗಿದ್ದು, ತಾಲೂಕು ಆಡಳಿತ ಕೂಡಲೇ ಹಾನಿಯಾದ ರೈತರಿಗೆ ಹಾಗೂ ಸಾರ್ವಜನಿಕರಿಗೆ ಸೂಕ್ತ ಪರಿಹಾರ ಕೊಡಬೇಕು ಎಂದು ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಸುರಿದ ಭಾರಿ ಮಳೆಯಿಂದ ಬಾಳೆ, ತೆಂಗು, ಅಡಕೆ ಹಾಗೂ ಭತ್ತದ ಬೆಳೆ ಹಾಳಾಗಿ ಹೋಗಿವೆ. ಇದರ ಜತೆಗೆ ಬಹಳಷ್ಟು ಪ್ರಮಾಣದಲ್ಲಿ ಸೀಡ್ಸ್ ಬೆಳೆ ಹಾಳಾಗಿದೆ. ಇದರಿಂದ ರೈತರು ಆರ್ಥಿಕವಾಗಿ ಬಹಳಷ್ಟು ನಷ್ಟ ಅನುಭವಿಸುವಂತಾಗಿದೆ.

ನಗರದಲ್ಲಿ ಬಹಳಷ್ಟು ಮನೆಗಳಿಗೆ ಮಳೆ ನೀರು ನುಗ್ಗಿ ಜನರು ಅಡುಗೆ ಮಾಡಲು ಇಟ್ಟುಕೊಂಡಿದ್ದ ದಿನಸಿ ಪದಾರ್ಥಗಳು ಸಂಪೂರ್ಣ ನೀರಿನಲ್ಲಿ ಹಾಳಾಗಿ ಹೋಗಿವೆ. ಆದ್ದರಿಂದ ಸಂತ್ರಸ್ತರಿಗೆ ಕೂಡಲೇ 15 ಸಾವಿರ ರೂ.ಅನ್ನು ಆಹಾರ ದಿನಸಿ ಸಾಮಗ್ರಿ ಖರೀದಿಸಲು ಸಹಾಯಧನ ನೀಡಬೇಕು. ಜತೆಗೆ ಬೆಳೆಹಾನಿ ಪ್ರದೇಶಗಳಿಗೆ ತಹಶೀಲ್ದಾರ, ತೋಟಗಾರಿಕೆ, ಕೃಷಿ ಅಧಿಕಾರಿಗಳು ಭೇಟಿ ನೀಡಿ ಬೆಳೆಹಾನಿ ಸಮೀಕ್ಷೆ ನಡೆಸಿ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಇಲ್ಲವಾದರೆ ಮುಂದಿನ ದಿನದಲ್ಲಿ ಬಿಜೆಪಿ ಪಕ್ಷದ ವತಿಯಿಂದ ತಾಲೂಕು ಆಡಳಿತದ ವಿರುದ್ಧ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಡಾ.ನಾಗೇಶ ಗೌಡರ, ಬಸವರಾಜ ದೊಡ್ಡನವರ, ಎಸ್.ಎಸ್. ಬೆಲ್ಲದ, ಗಂಗಾಧರ ಬೂದನೂರ, ಹನುಮಂತರಾಜ ಚನ್ನಗೌಡ್ರ ಮತ್ತಿತರರು ಇದ್ದರು.




ಪುರಸಭೆ ಕಾರ್ಯ ಶ್ಲಾಘನೀಯ

ಬ್ಯಾಡಗಿ: ಪಟ್ಟಣದ ಸಾರ್ವಜನಿಕರಿಗೆ ಕುಡಿಯುವ ನೀರು ಒಳಚರಂಡಿ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಜೊತೆಗೆ ಪಟ್ಟಣ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲುತ್ತಿರುವ ಪುರಸಭೆಯ ಕೆಲಸವು ಹೆಮ್ಮೆಯ ವಿಷಯ ಎಂದು ಮಾಜಿ ಶಾಸಕ ಸುರೇಶ್ ಗೌಡ ಪಾಟೀಲ ಹೇಳಿದರು.

ಪಟ್ಟಣದಲ್ಲಿ ಹಳೆ ಪುರಸಭೆ ಎದುರು ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಐದು ಲಕ್ಷ ವೆಚ್ಚದಲ್ಲಿ ಅಳವಡಿಸಿರುವ ಡಿಜಿಟಲ್ ಬೋರ್ಡ್ ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿ ಕೊಡುವ ಮೂಲಕ ಪಟ್ಟಣದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಪ್ರಥಮ ಪುರಸಭೆ ಬ್ಯಾಡಗಿಯ ಪುರಸಭೆಯಾಗಿದೆ ಎಂದು ಹೇಳಿದರು.

ಪುರಸಭೆ ಮುಖ್ಯ ಅಧಿಕಾರಿ ವಿನಯ್ ಕುಮಾರ್ ಹೊಳೆಪ್ಪಗೊಳ. ಆಶ್ರಯ ಸಮಿತಿ ಅಧ್ಯಕ್ಷ ಅಬ್ದುಲ್ ಮುನ್ನ ಎರೆಸೀಮೆ. ಮುಖಂಡರಾದ ಮಜಿದ್ ಮುಲ್ಲಾ, ರಫೀಕ್ ಮುದುಗಲ, ರಾಮಣ್ಣ ಕೋಡಿಹಳ್ಳಿ, ಮಂಜೂರ ಹಕ್ಕಿಮ್ ಹಾಗೂ ಮಾಲತೇಶ್ ಹಳ್ಳಿ ಸೇರಿದಂತೆ ಪುರಸಭೆಯ ಸಿಬ್ಬಂದಿ ಉಪಸ್ಥಿತರಿದ್ದರು.



ರೈತರಿಗೆ ಕಳಪೆ ಕೃಷಿ ಪರಿಕರ ನೀಡಬೇಡಿ: ಶಾಸಕ ಶಿವಣ್ಣನವರ್

ಬ್ಯಾಡಗಿ: ರೈತನಿಗೆ ಕಳಪೆ ಕೃಷಿ ಪರಿಕರಗಳನ್ನು ನೀಡಿ ಮೋಸ ಮಾಡಬೇಡಿ ಎಂದು ಶಾಸಕರಾದ ಬಸವರಾಜ್ ಶಿವಣ್ಣನವರ್ ಕಿವಿಮಾತು ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕೃಷಿ ಇಲಾಖೆ ಬ್ಯಾಡಗಿ ವತಿಯಿಂದ ಆಯೋಜಿಸಿದ 2026-27ನೇ ಸಾಲಿನ ಮುಂಗಾರು ಹಂಗಾಮಿನ ಸಿದ್ಧತೆ ಹಾಗೂ ಕೃಷಿ ಪರಿಕರ ಮಾರಾಟಗಾರರ ಜಾಗೃತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ರೈತರು ಒಂದೇ ತರಹದ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳಿಗೆ ಮಾರುಹೋಗದೆ ಮಣ್ಣು ಪರೀಕ್ಷೆಯ ಆಧಾರದ ಮೇಲೆ ಪರ್ಯಾಯ ಕೃಷಿ ಪರಿಕರಗಳನ್ನು ಉಪಯೋಗಿಸಿ ಮಣ್ಣಿನ ಫಲವತ್ತತೆ ಕಾಪಾಡಿಕೊಂಡು ಉತ್ತಮ ಇಳುವರಿ ಪಡೆಯುವಂತೆ ರೈತರಿಗೆ ಸಲಹೆ ನೀಡಿದರು.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿ, ಕಳಪೆ ಕೃಷಿ ಪರಿಕರ ಜಾಲಗಳಿಂದ ರೈತ ವರ್ಗಕ್ಕೆ ಬಹಳಷ್ಟು ತೊಂದರೆ ಆಗುತ್ತಿದ್ದು, ರೈತರು ಕೃಷಿಯನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲ, ಅಂತಹ ಮೋಸದ ಜಾಲಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ರಸ ಗೊಬ್ಬರಗಳನ್ನು ಲಿಂಕ್ ಮಾಡದೆ ವಿತರಿಸಲು ಕ್ರಮ ಕೈಗೊಳ್ಳಬೇಕು. ರೈತರಿಗೆ ಪರ್ಯಾಯ ಬೆಳೆಗಳ ಬಗ್ಗೆ ಸರಿಯಾದ ಮಾಹಿತಿ ಹಾಗೂ ಪ್ರೋತ್ಸಾಹ ದೊರೆಯಬೇಕು ಎಂದರು. ಸಹಾಯಕ ಕೃಷಿ ನಿರ್ದೇಶಕ ಗಣೇಶ್ ಕಮ್ಮಾರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಯೂರಿಯಾ ಬಳಕೆಯಿಂದ ಮಾನವನ ಆರೋಗ್ಯ ಮಣ್ಣು ಮತ್ತು ಪರಿಸರದ ಮೇಲೆ ಬೀರುವ ಹಾನಿಕಾರಕ ಪರಿಣಾಮಗಳು ಮತ್ತು ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಸಂಯುಕ್ತ ರಸ ಗೊಬ್ಬರಗಳ ಬಳಕೆ ಕುರಿತು ಕರಪತ್ರ ಬಿಡುಗಡೆ ಮಾಡಲಾಯಿತು. ಕೃಷಿ ಅಧಿಕಾರಿ ನಾಗರಾಜ್ ಬನ್ನಿಹಟ್ಟಿ ಸ್ವಾಗತಿಸಿ ವಂದಿಸಿದರು.

ಉಪ ಕೃಷಿ ನಿರ್ದೇಶಕ ಕರಿಯಲ್ಲಪ್ಪ ಕೊರಚರ, ತಹಶೀಲ್ದಾರ್ ಚಂದ್ರಶೇಖರ್ ನಾಯಕ್, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ದಾನಪ್ಪ ಚೂರಿ, ತಾಲೂಕು ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಜಯಣ್ಣ ಮಲ್ಲಿಗಾರ್, ರೈತ ಸಂಘದ ತಾಲೂಕು ಅಧ್ಯಕ್ಷ ರುದ್ರನಗೌಡ ಕಾಡನಗೌಡ್ರ, ಕೃಷಿಕ ಸಮಾಜದ ಅಧ್ಯಕ್ಷ ಮಂಜುನಾಥ್ ಬೆನಕನಕೊಂಡ, ಉಪಾಧ್ಯಕ್ಷಎನ್.ಟಿ.ಪಾಟೀಲ್‌ಹಾಗೂ ಕೃಷಿಕ ಸಮಾಜದ ಪದಾಧಿಕಾರಿಗಳು ಹಾಗೂ ತಾಲೂಕಿನ ಎಲ್ಲಾ ಕೃಷಿ ಪರಿಕರ ಮಾರಾಟಗಾರರು ಉಪಸ್ಥಿತರಿದ್ದರು.




> **ಸಮತೋಲಿತ ರಸಗೊಬ್ಬರ ಬಳಕೆ ಅವಶ್ಯ**
> ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯ ಹಾಗೂ ಡಿಎಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಡಿ.ಎ.ಪಿ, ಗಂಧಕ ಒದಗಿಸುವ 20:20:0:13 ಹಾಗೂ ಪೊಟ್ಯಾಸಿಯಂ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರಗಳಾದ 10:26:26, 15:15:15, 17:17:17, 19:19:19, 12:32:16 ರಸಗೊಬ್ಬರಗಳನ್ನು ಸಮತೋಲಿತವಾಗಿ ಬಳಸಬಹುದಾಗಿದೆ

ಶಂಕರಾಚಾರ್ಯರ ತತ್ವಾದರ್ಶ ಮೈಗೂಡಿಸಿಕೊಳ್ಳಿ

ಬ್ಯಾಡಗಿ: ಆದಿ ಜಗದ್ಗುರು ಶಂಕರಾಚಾರ್ಯರು ನೀಡಿರುವ ತತ್ವ ಆದರ್ಶಗಳನ್ನು ಆಧ್ಯಾತ್ಮಿಕ ಚಿಂತನೆಯನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಎಸ್.ಆರ್.ಪಾಟೀಲ್ ಹೇಳಿದರು.

ಪಟ್ಟಣದ ತಾಲೂಕ ಆಡಳಿತ ವತಿಯಿಂದ ತಹಶೀಲ್ದಾರ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಶಂಕರಾಚಾರ್ಯರ ಜಯಂತಿಯಲ್ಲಿ ಅವರು ಮಾತನಾಡಿದರು.

ಶಂಕರಾಚಾರ್ಯರು ದೇಶದಲ್ಲಿನ ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿದ್ದರಿಂದ ಉತ್ತರ ಭಾರತದ ಜನರು ಸಹ ಇವರನ್ನು ಗುರುಗಳನ್ನಾಗಿ ಸ್ವೀಕರಿಸಿದ್ದಾರೆ, ಸಮಾಜದ ಮೌಢ್ಯತೆಗಳನ್ನು ತೊಡೆದು ಹಾಕಿ ತತ್ವ ಜ್ಞಾನದತ್ತ ಜನರಿಗೆ ಮಾರ್ಗದರ್ಶನ ನೀಡಿದ್ದಾರೆ ಎಂದರು. ಗುರುಗಳಾದ ವೈದ್ಯ ಅವರು ಮಾತನಾಡಿ, ಶಂಕರಾಚಾರ್ಯರು ಕೇವಲ ಆಚಾರ ಅಷ್ಟೇ ಅಲ್ಲದೆ ಮಹಾನ್ ವಿದ್ವಾಂಸರು ಕವಿಗಳು ಹಾಗೂ ಸಂಗೀತಕಾರರು ಆಗಿದ್ದರು ಆತ್ಮ ಮತ್ತು ಪರಮಾತ್ಮ ಒಂದೇ ಎಂಬ ಅದ್ವೈತ ತತ್ವದ ಮೂಲಕ ಭೇದ ಭಾವಗಳನ್ನು ಮೀರಿದ ಆಧ್ಯಾತ್ಮಿಕ ಅರಿವು ಮೂಡಿಸಿದವರು ಶಂಕರಾಚಾರ್ಯರು ಎಂದರು. ಮುಖಂಡರಾದ ಶಂಕರಗೌಡ ಪಾಟೀಲ್, ಸಮಾಜದ ಹಿರಿಯರಾದ ಎಸ್.ಆರ್. ಕುಲಕರ್ಣಿ, ಉಮೇಶ್ ರೆಟ್ಟಿಹಳ್ಳಿ, ವಿನಾಯಕ್ ಹುದ್ದಾರ್, ಗಾಯತ್ರಿ ರಾಯ್ಕರ್, ರಾಧಾಬಾಯಿ ಕುಲಕರ್ಣಿ, ಪ್ರತಿಭಾ ರಟ್ಟಿಹಳ್ಳಿ, ಪುಷ್ಪ ಪಾಟೀಲ, ಹೇಮಾ ಜೋಯಿಸ್, ಪುಜಾ ಕುಲಕರ್ಣಿ, ಕಲ್ಪನಾ ಕುಲಕರ್ಣಿ ಹಾಗೂ ಅನೇಕ ಸಮಾಜದವರು ಸಿಬ್ಬಂದಿ ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದಿನಿಂದ ವಿದ್ಯುತ್ ನಿಲುಗಡೆ

ಬೆಳಗಾವಿ: ಏ.23ರಿಂದ 15 ದಿನಗಳವರೆಗೆ ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಹುವಿಸಕಂನಿ ವತಿಯಿಂದ ಹೊಸದಾಗಿ 11ಕೆ.ವ್ಹಿ. ಮಾರ್ಗವನ್ನು ನಿರ್ಮಿಸುತ್ತಿರುವುದರಿಂದ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ. ಬೀಡಿ ಉಪಕೇಂದ್ರದಿಂದ ಸರಬರಾಜು ಆಗುವ ಬೀಡಿ, ರಾಮಾಪೂರ, ಸುರಪೂರ, ಗೋಲಿಹಳ್ಳಿ, ಭುರುಣಕಿ, ಕರಿಕಟ್ಟಿ, ಗಸ್ತೋಳ್ಳಿದಡ್ಡಿ, ಗಸ್ತೊಳ್ಳಿ, ಹೊಸೆಟ್ಟಿ, ಶಿವಾಜಿ ನಗರ, ಹಾಲಜುಂಜವಾಡ, ಚನ್ನಕ್ಕೇಬೈಲ, ಸುರಪುರ ಕೆರವಾಡ, ಕಲ್ಮೇಶ್ವರ ನಗರ, ಹಾಗೂ ಕಕ್ಕೇರಿ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ ಸೆಟ್‌ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂಬ ಕಾರ್ಯನಿರ್ವಾಹಕ ಇಂಜಿನೀಯರರು(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ, ಪ್ರಕಟನೆಯಲ್ಲಿ ತಿಳಿಸಿದ್ದಾರೆ.

1.56 ಕೋಟಿ ರೂ. ನಿವ್ವಳ ಲಾಭ: ಸಂಜಯ ಅಡಕೆ

ಚಿಕ್ಕೋಡಿ: ಪಟ್ಟಣದ ಸಿದ್ಧಿ ವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ 1.56 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಸಂಜಯ ಅಡಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



5786 ಸದಸ್ಯರನ್ನು ಹೊಂದಿದ ಸಂಘವು ವಿವಿಧ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿ ಆರ್ಥಿಕವಾಗಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದು ಹೆಮ್ಮೆಯ ಸಂಗತಿಯಾಗಿದೆ. ಸಂಘವು 61.14 ಲಕ್ಷ ರೂ. ಶೇರ್ ಬಂಡವಾಳ ಹೊಂದಿದ್ದು, ಸಂಸ್ಥೆಯು 5.88 ಕೋಟಿ ರೂ. ಕಾಯ್ದಿಟ್ಟ ಹಾಗೂ ಇತರೆ ನಿಧಿ ಹೊಂದಿದೆ. 150 ಕೋಟಿ ರೂ. ಠೇವಣಿ ಹೊಂದಿದ್ದು, 116 ಕೋಟಿ ರೂ.ಸಾಲ ವಿತರಣೆ ಮಾಡಿದೆ. ಹೂಡಿಕೆ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರಿದ್ದು, 36 ಕೋಟಿ ರೂ.ಹೂಡಿಕೆ ಮಾಡಿದೆ. 156 ಕೋಟಿ ರೂ. ಕಾರ್ಯನಿರ್ವಹಣಾ ಬಂಡವಾಳ ಹೊಂದಿದ್ದು, ಪ್ರಸಕ್ತ ವರ್ಷ 1.56 ಕೋಟಿ ರೂ.ಲಾಭ ಗಳಿಸಿದೆ ಎಂದು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: ಸನ್ 2026-2027ನೇ ಶೈಕ್ಷಣಿಕ ವರ್ಷಕ್ಕೆ ಯುದ್ಧ ಸಂತ್ರಸ್ಥರು ಮತ್ತು ಮಾಜಿ ಸೈನಿಕರ ಮಕ್ಕಳಿಗೆ ನಗರದ ರೈಲು ನಿಲ್ದಾಣದ ಎದುರಿಗಿರುವ ಮಿಲಿಟರಿ ಬಾಲಕರ ವಸತಿ ನಿಲಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಬೆಳಗಾವಿ ನಗರದ ಯಾವುದೇ ಶೈಕ್ಷಣಿಕ ಸಂಸ್ಥೆಗಳಲ್ಲಿ 5ನೇ ತರಗತಿಯಿಂದ ಪಿಯುಸಿ, ಡಿಪ್ಲೋಮಾ ಹಾಗೂ ಐಟಿಐದಲ್ಲಿ ವ್ಯಾಸಾಂಗಕ್ಕಾಗಿ ಪ್ರವೇಶವನ್ನು ಪಡೆದಿರಬೇಕು. ನಿಲಯದಲ್ಲಿ ಉಪಹಾರ, ಊಟ ಹಾಗೂ ವಸತಿ ಉಚಿತವಾಗಿರುತ್ತದೆ.ಆಸಕ್ತ ಮಾಜಿ ಸೈನಿಕರು ಮತ್ತು ಯುದ್ಧ ಸಂತ್ರಸ್ಥರು ತಮ್ಮ ಮಕ್ಕಳ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿ ನಮೂನೆಯನ್ನು ಬೆಳಗಾವಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರ ಕಾರ್ಯಾಲಯದಿಂದ ಉಚಿತವಾಗಿ ಪಡೆಯಬಹುದಾಗಿದೆ. ಏಪ್ರಿಲ್ 25 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರ ಕಾರ್ಯಾಲಯಕ್ಕೆ ವೈಯಕ್ತಿಕವಾಗಿ ಭೇಟಿ ನೀಡಿ ಅಥವಾ ನಿಲಯದ ಅಧೀಕ್ಷಕರ ಮೋಬೈಲ್ ಸಂಖ್ಯೆ 9449880818 ಯನ್ನು ಸಂಪರ್ಕಿಸಬಹುದು ಎಂದು ಬೆಳಗಾವಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಮಹಾಂತೇಶ ವಿ. ತಲ್ಲೂರ



ಯರಗಟ್ಟಿ: ಪಟ್ಟಣದ ಉಪ್ಪಿನ ಓಣಿ ನಿವಾಸಿ ಲಿಂಗಾಯತ ಸಮಾಜದ ಮಹಾಂತೇಶ ವಿ. ತಲ್ಲೂರ(55) ಬುಧವಾರ ನಿಧರಾದರು, ಮೃತರಿಗೆ ಪುತ್ರ, ಪುತ್ರಿ ಸೇರಿ ಅಪಾರ ಬಂಧು ಬಳಗ ಇದ್ದಾರೆ.

ಶಿವಾನಂದ ಕರ್ಜಗೀಮಠ



ಯರಗಟ್ಟಿ: ಪಟ್ಟಣದ ನಿವಾಸಿ ವೀರಶೈವ ಲಿಂಗಾಯತ ಜಂಗಮ ಸಮಾಜದ ಶಿವಾನಂದ ಈರಯ್ಯ ಕರ್ಜಗೀಮಠ (62)ಬುಧವಾರ ನಿಧನಾರದರು. ಮೃತರಿಗೆ ಪತ್ನಿ, ಮೂವರು ಪುತ್ರರು ಸೇರಿ ಅಪಾರ ಬಂಧು ಬಳಗ ಇದ್ದಾರೆ.



ಯಮಕನಮರಡಿ: ಸ್ಥಳೀಯ ಯುವಿ ಸಂಘದ ಸಂಯುಕ್ತ ಆಶ್ರಯದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಆಚರಿಸಲಾಯಿತು. ಬಸವೇಶ್ವರರ ಭಾವಚಿತ್ರಕ್ಕೆ ಪ್ರಾಥಮಿಕ ಶಾಲೆಯ ಪ್ರಧಾನ ಗುರುಗಳು ಪೂಜೆ ಸಲ್ಲಿಸಿದರು. ಯು. ಎಂ. ಅಂಬಿ, ಎ.ಬಿ. ಅವಲಕ್ಕಿ, ಪಿ.ಎಲ್. ಪೂಜಾರ, ಎ.ಎಸ್. ಕಾಂಬಳೆ ಇನ್ನುಳಿದ ಶಿಕ್ಷಕರು ಪಾಲಕರು ವಿದ್ಯಾರ್ಥಿಗಳು ಹಾಜರಿದ್ದರು.

ಸಮಾನತೆಯ ಸಂದೇಶ ಸಾರಿದ ಬಸವಣ್ಣ

ಬೆಳಗಾವಿ: 12ನೇ ಶತಮಾನದ ವಿಶ್ವಗುರು ಬಸವಣ್ಣನವರು ಸಮಾನತೆ, ಕಾಯಕ ನಿಷ್ಠೆ, ಮತ್ತು ಸಹೋದರತೆಯನ್ನು ಸಾರಿದ ಮಹಾನ್ ಚೇತನ. ಅವರು ಅನುಭವ ಮಂಟಪದ ಮೂಲಕ ಸರ್ವರಿಗೂ ಸಮಾನ ಅವಕಾಶ, ಅಂತರ್ಜಾತಿ ವಿವಾಹ, ಮಹಿಳಾ ಸಬಲೀಕರಣ, ಮತ್ತು ಕಾಯಕವೇ ಕೈಲಾಸ ಎಂಬ ತತ್ವ ಸಾರಿದವರು ಎಂದು ಬಿಜೆಪಿ ಮುಖಂಡ, ಎಚ್ .ಡಿ.ಕುಮಾರಸ್ವಾಮಿ ಬಡಾವಣೆಯ ರಹವಾಸಿ ಸಂಘದ ಅಧ್ಯಕ್ಷರಾದ ರುದ್ರಣ್ಣ ಚಂದರಗಿ ಅವರು ಹೇಳಿದರು.

ನಗರದ ಎಚ್.ಡಿ.ಕುಮಾರಸ್ವಾಮಿ ಬಡಾವಣೆಯ ರಹವಾಸಿ ಸಂಘದಿಂದ ಶಿವ ಮತ್ತು ಬಸವಣ್ಣನವರ ಜಯಂತಿ ಪ್ರಯುಕ್ತ , ಛತ್ರಪತಿ ಶಿವಾಜಿ ಮಹಾರಾಜರ ಹಾಗೂ ವಿಶ್ವಗುರು ಬಸವಣ್ಣನವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಧೈರ್ಯ, ಶೌರ್ಯ ಹಾಗೂ ಧೀಮಂತ ವ್ಯಕ್ತಿತ್ವಕ್ಕೆ ಹೆಸರುವಾಸಿಯಾಗಿದ್ದ ಛತ್ರಪತಿ ಶಿವಾಜಿ ಅವರ ಆಡಳಿತ ಕೌಶಲ್ಯಗಳು ಅವರ ದೂರದೃಷ್ಟಿಯ ನಾಯಕತ್ವಕ್ಕೆ ಸಾಕ್ಷಿಯಾಗಿದೆ. ಆದರ್ಶ ಮೈಗೂಡಿಸಿಕೊಂಡು ಸಮಾಜ ಕಟ್ಟುವ ಕೆಲಸ ಮಾಡಬೇಕು ನಾವೆಲ್ಲರೂ ಒಂದೇ ಎನ್ನುವ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಈ ವೇಳೆ ಮಲ್ಲಿಕಾರ್ಜುನ ರೊಟ್ಟಿ, ಶಿವಪುತ್ರ ಗಂಗಾಪುರ, ವೀರಪಾಕ್ಷಿ ನಿರಲಗಿಮಠ ಮಹಾದೇವ ಹೊಂಗಲ, ಲಕ್ಷ್ಮಣ ಅಕ್ಕನವರ, ಮಹಾದೇವ ಭೀಮನಾ ಯಕ, ಶಿವಪುತ್ರ ಪಟಕಳ, ವಿರುಪಾಕ್ಷಿ ನಿರಲಗಿಮಠ, ಶೋಭಾ ಹೊಸಮಠ, ಸುಧಾ ರೊಟ್ಟಿ ಮತ್ತು ಮಹಿಳಾ ಮಂಡಳ ಸದಸ್ಯರು ಇದ್ದರು.



ಬೆಳಗಾವಿ: ನಗರದ ಎಚ್.ಡಿ.ಕುಮಾರಸ್ವಾಮಿ ಬಡಾವಣೆಯ ರಹವಾಸಿ ಸಂಘದಿಂದ ಶಿವ ಮತ್ತು ಬಸವಣ್ಣನವರ ಜಯಂತಿ ಪ್ರಯುಕ್ತ , ಛತ್ರಪತಿ ಶಿವಾಜಿ ಮಹಾರಾಜರ ಹಾಗೂ ವಿಶ್ವಗುರು ಬಸವಣ್ಣನವರ ಭಾವಚಿತ್ರಗಳಿಗೆ ಬಿಜೆಪಿ ಮುಖಂಡ, ಎಚ್ .ಡಿ.ಕುಮಾರಸ್ವಾಮಿ ಬಡಾವಣೆಯ ರಹವಾಸಿ ಸಂಘದ ಅಧ್ಯಕ್ಷರಾದ ರುದ್ರಣ್ಣ ಚಂದರಗಿ ಅವರು ಪುಷ್ಪನಮನ ಸಲ್ಲಿಸಿದರು. ಮಲ್ಲಿಕಾರ್ಜುನ ರೊಟ್ಟಿ, ಶಿವಪುತ್ರ ಗಂಗಾಪುರ, ವೀರಪಾಕ್ಷಿ ನಿರಲಗಿಮಠ ಮಹಾದೇವ ಹೊಂಗಲ, ಮತ್ತಿತರರು ಇದ್ದರು.

ಬಿಸಿಲಿನ ತಾಪಕ್ಕೆ ವಾಹನ ಸವಾರರು ಹೈರಾಣ | ಸಾರ್ವಜನಿಕರ ಆಗ್ರಹ

ಹಸಿರು ಪರದೆಯ ನೆರಳಿನ ವ್ಯವಸ್ಥೆ ಕಲಿಸಿ

ಬಾಳಗೌಡ ಪಾಟೀಲ

ಬೆಳಗಾವಿ: ಕುಂದಾನಗರಿಯಲ್ಲಿ ಬೇಸಿಗೆಯ ಬಿಸಿಲಿನ ತಾಪ ಹೆಚ್ಚುತ್ತಿದ್ದು, ನಗರದ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಕರು ಹಾಗೂ ಬೈಕ್ ಸವಾರರಿಗೆ ನಿತ್ಯವೂ ಬಿಸಿಲಿನ ಝಳಕ್ಕೆ ತೊಂದರೆ ಉಂಟಾಗುತ್ತಿದೆ.

ಗಡಿ ಜಿಲ್ಲೆಯಲ್ಲಿ ಈಗಾಗಲೇ 36 ಡಿಗ್ರಿ ಉಷ್ಣಾಂಶವಿದ್ದು, ರಸ್ತೆಯಲ್ಲಿ ಓಡಾಡಲಾಗದ ಹಾಗೂ ಸುಡು ಬಿಸಿಲಲ್ಲಿ ಸಿಗ್ನಲ್‌ನಲ್ಲಿ ನಿಲ್ಲೋದು ಅಂದರೆ ಮೈಮೇಲೆ ಬೆಂಕಿ ಕೆಂಡ ಸುರಿದುಕೊಂಡಂತಾ ಅನುಭವಾಗುತ್ತಿದೆ. ಹೀಗಾಗಿ ನಗರದ ಪ್ರಮುಖ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಗದಗ, ವಿಜಯಪುರ ಹಾಗೂ ಬಳ್ಳಾರಿಯಲ್ಲಿ ಟ್ರಾಫಿಕ್‌ನ ಸ್ಥಳಗಳಲ್ಲಿ ಹಸಿರು ಪರದೆ ನಿರ್ಮಿಸಿದಂತೆ ಗಡಿ ಜಿಲ್ಲೆ ಬೆಳಗಾವಿಯಲ್ಲಿಯೂ ಹಸಿರು ಪರದೆಯ ನೆರಳಿನ ವ್ಯವಸ್ಥೆ ಕಲ್ಪಿಸಬೇಕೆಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ಮಧ್ಯಾಹ್ನದ ಹೊತ್ತಿಗೆ ಕಾದ ಹಂಚಿನಂತಾದ ರಸ್ತೆಗಳು: ಜಿಲ್ಲೆಯ ಬಹುತೇಕ ಭಾಗ ಚಳಿ ಮತ್ತು ಆಹ್ಲಾದಕರ ವಾತಾವರಣ ಹೊಂದಿರುತ್ತದೆ. ಆದರೆ, ಈ ಬಾರಿ ಬಿಸಿಲಿನ ಪ್ರಖರತೆ ಹೆಚ್ಚಾಗಿದೆ. ಮಧ್ಯಾಹ್ನದ ಹೊತ್ತಿಗಂತೂ ನೆತ್ತಿಯ ಮೇಲೆ ಕೆಂಡ ಸುರಿದಂತಹ ಅನುಭವ, ರಸ್ತೆಗಳು ಕಾದ ಹಂಚಿನಂತಾಗುತ್ತಿವೆ. ಪಾದಚಾರಿಗಳು, ದ್ವಿಚಕ್ರ ವಾಹನ ಸವಾರರು ಬಸವಳಿಯುವಂತಾಗಿದೆ. ಬಿಸಿಲಿನ ತಾಪಕ್ಕೆ ಬಳಲುವ ಜನ ಚೇತರಿಕೆಗಾಗಿ ತಂಪು ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ಎಳನೀರು, ಲಿಂಬು ಶರಬತ್ ಮೊದಲಾಗಿ ತಂಪು ಪಾನೀಯಗಳ ಬೇಡಿಕೆ ಹೆಚ್ಚಾಗಿದೆ.

ಬಿಸಿಲಿನ ತಾಪ ಏರಿಕೆ: ಜಿಲ್ಲೆಯಲ್ಲಿ ಕಳೆದ ವರ್ಷಕ್ಕಿಂತಲೂ ಈ ವರ್ಷ ಬೇಸಿಗೆಯ ಬಿಸಿಲು ಹೆಚ್ಚಾಗಿದೆ. ಬಿಸಿಲಿನ ತಾಪಮಾನಕ್ಕೆ ವಾಹನ ಸವಾರರು ಪಡುವ ಪಾಡು ಅಷ್ಟಿಷ್ಟಲ್ಲ. ಅದರಲ್ಲಂತು ದ್ವಿಚಕ್ರ ವಾಹನ ಸವಾರರು ಅನುಭವಿಸುವ ವೇದನೆ ಹೇಳ ತೀರದಾಗಿದೆ. ಬೈಕ್‌ನಲ್ಲಿ ಹೋಗುವಾಗ ಮುಖಕ್ಕೆ ಹೊಡೆಯುವ ಬಿಸಿ ಗಾಳಿ, ತಲೆ ಮೇಲೆ ಸುಡುವ ಬಿಸಿಲು, ಹೆಲ್ಮೆಟ್ ಹಾಕಿಕೊಂಡರೆ ಬೆವರಿಗೆ ಕೂದಲಿನ ವಾಸನೆ, ತುರಿಕೆ ಹೇಳ ತೀರದು. ಅಷ್ಟೇ ಅಲ್ಲ ಸಿಗ್ನಲ್‌ಗಳಲ್ಲಿ ನಿಂತಾಗ ಬಿಸಿಲಿಗೆ ಕುಸಿದು ಬೀಳುವಷ್ಟು ದೇಹ ನಿತ್ರಾಣವಾಗುತ್ತೆ. ಇದನ್ನು ತಪ್ಪಿಸಲು, ಪ್ರಯಾಣಿಕರ ಅನುಕೂಲಕ್ಕಾಗಿ ಬೆಳಗಾವಿ ಟ್ರಾಫಿಕ್ ಪೊಲೀಸರು ಹೆಚ್ಚು ಟ್ರಾಫಿಕ್‌ನಿಂದ ಕೂಡಿರುವ ಸ್ಥಳಗಳಲ್ಲಿ ಹಸಿರು ಮ್ಯಾಟ್‌ನಿಂದ ಛತ್ತ ನಿರ್ಮಿಸಲು ಮುಂದಾಗಬೇಕು ಎಂದು ವಾಹನ ಸವಾರರು ಒತ್ತಾಯಿಸಿದ್ದಾರೆ.



> ಇತ್ತೀಚಿನ ದಿನಗಳ ಬಿಸಿಲಿನ ತಾಪಮಾನ ಹೆಚ್ಚಾಗುತಿದೆ, ಈ ಬಿಸಿಲಿನ ಝಳಕ್ಕೆ ಹೊರಗಡೆ ಹೋಗುವುದಕ್ಕೆ ಯಾಗುತ್ತಿಲ್ಲ, ಮಹಿಳೆಯರು ಕೆಲಸಗಳಿಗೆ ಹೋಗಲು ಆಗುತ್ತಿಲ್ಲ, ಪುಟ್ಟ ಮಕ್ಕಳು ಹಿರಿಯ ವಯಸ್ಕರಿಗೆ ಸಾಕಷ್ಟು ತೊಂದರೆ ಯಾಗುತ್ತಿದೆ. ಮನೆ ಬಿಟ್ಟು ಹೊಗಡೆ ಹೋಗುವುದಕ್ಕೂ ಭಯ ಪಡಬೇಕಾಗಿದೆ. ಮಹಿಳೆಯರು ಬೈಕ್‌ಗಳನ್ನು ಓಡಿಸಬೇಕಾದರೆ ಸಾಕಷ್ಟು ತೊಂದರೆಯಾಗುತ್ತಿದೆ.
>
> ■ ಶಿವಲೀಲಾ ದಂಡಿನ. ಬೆಳಗಾವಿ ನಿವಾಸಿ.

> ಬಿಸಿಲಿನಲ್ಲಿ ಬೈಕ್ ಮೇಲೆ ಓಡಾಡುವುದಕ್ಕೆ ಕಷ್ಟ ಯಾಗುತ್ತಿದೆ. ಗದಗ, ಬಳ್ಳಾರಿ ವಿಜಯಪುರ ಗಳಲ್ಲಿ ಟ್ರಾಫಿಕ್ ಸಿಗ್ನಲ್‌ನಲ್ಲಿಗಳಲ್ಲಿ ಸಿಗ್ನಲ್‌ನಲ್ಲಿ ಯಾವ ರೀತಿ ಹಸಿರು ಪರದೆ ಹಾಕಿದರೆ ಸಿಗ್ನಲ್ ಬಿಡುವರೆಗೆಯೊದರು ಸ್ವಲ್ಪ ಮಟ್ಟಿಗೆ ವಿಶ್ರಾಂತಿಗೆ ನೆರಳಿನ ವ್ಯವಸ್ಥೆಯನ್ನು ಟ್ರಾಫಿಕ್ ಪೊಲೀಸರು ಅಲ್ಲಲ್ಲಿ ಸಿಗ್ನಲ್‌ಗಳಲ್ಲಿ ನೆರಳಿನ ವ್ಯವಸ್ಥೆ ಕಲ್ಪಿಸಲು ಮುಂದಾದರೆ ಜನತೆಗೆ ಅನಕೂಲವಾಗಲಿದೆ.
>
> ■ ಸಿದ್ದಪ್ಪಾ ಬೈಕ್ ಸವಾರರು, ಬೆಳಗಾವಿ.

ಕಾಂಗ್ರೆಸ್ ವಿರುದ್ಧ ಜೆಡಿಎಸ್ ಬೃಹತ್ ಪ್ರತಿಭಟನೆ

ಬೆಳಗಾವಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿಯ ಮಹಿಳೆಯರಿಗೆ ಲೋಕಸಭೆ, ರಾಜ್ಯಸಭೆ ಸದಸ್ಯರ ಶೇ. 33ರಷ್ಟು ಮೀಸಲು ನೀಡಲು ವಿಧೇಯಕ ಲೋಕಸಭೆಯಲ್ಲಿ ಸರ್ಕಾರ ಮಂಡಿಸಿದ ಬಿಲ್ ಪ್ರತಿ ಪಕ್ಷಗಳ ವಿರೋಧದಿಂದ 2/3 ರಷ್ಟು ಬಹುಮತ ಕಳೆದುಕೊಂಡು ಮಹಿಳಾ ಮೀಸಲಾತಿಗೆ ಸೋಲಾಯಿತು ಈ ಮೀಸಲಾತಿಯನ್ನು ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ವಿರುದ್ಧ ಜೆಡಿಎಸ್ ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಬುಧವಾರ ನಗರದ ಚನ್ನಮ್ಮ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ಪ್ರತಿಭಟನಾ ರ್‍ಯಾಲಿ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರವು ಮಹಿಳೆಯರಿಗೆ ಸಿಗಬೇಕಾದ ಹಕ್ಕು ನೀಡಲು ನಿರ್ಧರಿಸಿತು, ಆದರೆ, ಪ್ರತಿ ಪಕ್ಷ ಕಾಂಗ್ರೆಸ್ ವಿರೋಧಿಸಿರುವುದರಿಂದ ವಿಧೇಯಕದ ಸೋಲಿಗೆ ಕಾರಣವಾಗಿದೆ. ಈ ವಿಧೇಯಕದ ಸೋಲನ್ನು ವಿಜಯೋತ್ಸವವನ್ನಾಗಿ ಆಚರಿಸುವ ವಿರೋಧ ಪಕ್ಷಗಳ ನೀತಿಯನ್ನು ಎನ್ ಡಿಎ ಮೈತ್ರಿಕೂಟ ಗಂಭೀರವಾಗಿ ಖಂಡಿಸುತ್ತದೆ ಎಂದು ಪ್ರತಿಭಟನೆಯಲ್ಲಿ ಕಾಂಗ್ರೆಸ್ ವಿರುದ್ಧ ಆಕ್ರೋಶ ಹೋರ ಹಾಕಿದರು.

ಕಾಂಗ್ರೆಸ್ ಮೊದಲಿನಿಂದಲೂ ಮಹಿಳೆಯರನ್ನು ವಿರೋಧಿಸಿಕೊಂಡು ಬರುತ್ತಿದೆ. ಮಹಿಳೆಯ ಸಬಲೀಕರಣಕ್ಕೆ ಸದಾ ವಿರೋಧಿ ನಿಲುವು ತೋರುತ್ತಿರುವ ಕಾಂಗ್ರೆಸ್ ಪಕ್ಷ ಮತ್ತು ವಿರೋಧ ಪಕ್ಷಗಳ ಧೋರಣೆಯ ವಿರುದ್ಧ ಖಂಡನೆಯನ್ನು ವ್ಯಕ್ತಪಡಿಸಲು ರಾಜ್ಯಾದ್ಯಂತ ಜೆಡಿಎಸ್ ಪ್ರತಿಭಟನೆಯನ್ನು ಮಾಡಿತಿದೆ ಎಂದು ಜಿಲ್ಲಾ ಅಧ್ಯಕ್ಷ ಶಂಕರ ಮಾಡಲಗಿ ಆಕ್ರೋಶವನ್ನು ಹೋರ ಹಾಕಿದರು.

ಬರುವ ದಿನಗಳಲ್ಲಿ ಮಹಿಳಾ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಮಹಿಳೆಯರು ತಕ್ಕ ಪಾಠ ಕಲಿಸಲೊದ್ದಾರೆ ಎಂದು ಪ್ರತಿಭಟನೆಯ ಮೂಲಕ ಮಹಿಳಾ ವಿರೋಧಿ ಗಾಂಧಿ ಕುಟುಂಬಕ್ಕೆ ಎಚ್ಚರಿಕೆಯನ್ನು ನೀಡಿದರು.

ಈ ವೇಳೆ ಜೆಡಿಎಸ್ ಜಿಲ್ಲಾ ಅಧ್ಯಕ್ಷ ಶಂಕರ ಮಾಡಲಗಿ, ಯುವ ಜನತಾ ಧಳ ಅಧ್ಯಕ್ಷ ಸನೀಲ್ ವೇರನೇಕರ್, ತಾಲೂಕು ಅಧ್ಯಕ್ಷ ರಾಜು ರೊಟ್ಟಿ, ಯುವ ಘಟಕ ಅಧ್ಯಕ್ಷ ಬಿಎನ್ ಪಾಟೀಲ, ರಾಮು ರಜಪೂತ್, ಬಸವರಾಜ್ ಸೇರಿದಂತೆ ಹಲವು ಕಾರ್ಯಕರ್ತರು ಫಾಲ್ಗೊಂಡಿದ್ದರು.



ವಿಶ್ವ ಸೃಜನಶೀಲತೆ, ನಾವೀನ್ಯತೆ ದಿನ ಆಚರಣೆ

ಬೆಳಗಾವಿ: ನಗರದ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ (ಸ್ವಾಯತ್ತ) ಮಹಾವಿದ್ಯಾಲಯದ ಐಐಸಿ ವತಿಯಿಂದ ವಿಶ್ವ ಸೃಜನಶೀಲತೆ ಮತ್ತು ನಾವೀನ್ಯತೆ ದಿನ ಸಂದರ್ಭದಲ್ಲಿ ಸರ್ ಸಿ.ವಿ. ರಾಮನ್ ಸಭಾಂಗಣದಲ್ಲಿ ತಜ್ಞರ ಭಾಷಣವನ್ನು ಯಶಸ್ವಿಯಾಗಿ ಆಯೋಜಿಸಿತು.

ಸೂರತ್ನ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಜೆ.ಎಸ್. ಭಟ್ ಅವರ ಒಳನೋಟವುಳ್ಳ ಭಾಷಣವು ಕಾರ್ಯಕ್ರಮದ ಪ್ರಮುಖ ಅಂಶವಾಗಿತ್ತು. ಅವರು ತಮ್ಮ ಭಾಷಣದಲ್ಲಿ, ಆಧುನಿಕ ಸಮಾಜವನ್ನು ರೂಪಿಸುವಲ್ಲಿ ಸೃಜನಶೀಲತೆ ಮತ್ತು ನಾವೀನ್ಯತೆಯ ಪಾತ್ರವನ್ನು ಒತ್ತಿ ಹೇಳಿದರು.

ದಿನನಿತ್ಯದ ಎಲೆಕ್ಟ್ರಾನಿಕ್ ಗ್ಯಾಜೆಟ್ಗಳು ಮತ್ತು ಪ್ರಯಾಣಿಕ ವಾಹನಗಳ ವಿಕಸನ ಮತ್ತು ಪ್ರಭಾವದ ಕುರಿತು ಅವರು ವಿವರಿಸಿದರು. ನಿರಂತರ ತಾಂತ್ರಿಕ ನಾವೀನ್ಯತೆಗಳು ಮಾನವಕುಲಕ್ಕೆ ಅವುಗಳ ದಕ್ಷತೆ, ಉಪಯುಕ್ತತೆ ಮತ್ತು ಪ್ರವೇಶಸಾಧ್ಯತೆಯನ್ನು ಹೇಗೆ ಗಮನಾರ್ಹವಾಗಿ ಹೆಚ್ಚಿಸಿವೆ ಎಂಬುದನ್ನು ಎತ್ತಿ ತೋರಿಸಿದರು.

ಸ್ಮಾರ್ಟ್ ಸಾಧನಗಳು, ಯಾಂತ್ರೀಕೃತಗೊಂಡ ಮತ್ತು ಬುದ್ಧಿವಂತ ವ್ಯವಸ್ಥೆಗಳು ದೈನಂದಿನ ಜೀವನವನ್ನು ಹೇಗೆ ಪರಿವರ್ತಿಸುತ್ತಿವೆ, ತಂತ್ರಜ್ಞಾನವನ್ನು ಹೆಚ್ಚು ಬಳಕೆದಾರ ಸ್ನೇಹಿ ಮತ್ತು ಸುಸ್ಥಿರವಾಗಿಸುತ್ತಿವೆ ಎಂದು ಡಾ. ಭಟ್ ಚರ್ಚಿಸಿದರು. ನೈಜ ಜಗತ್ತಿನ ಸವಾಲುಗಳನ್ನು ಎದುರಿಸುವಲ್ಲಿ ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ಅಂತರಶಿಸ್ತೀಯ ಚಿಂತನೆ ಮತ್ತು ನಾವೀನ್ಯತೆಯ ಮಹತ್ವವನ್ನು ತಿಳಿಸಿದರು.

ಕಾರ್ಯಕ್ರಮವು ಸೋನಾಲಿಯವರ ಪ್ರಾರ್ಥನೆ ಗೀತೆಯೊಂದಿಗೆ ಪ್ರಾರಂಭವಾಯಿತು. ಬಳಿಕ ಪ್ರಾಂಶುಪಾಲರಾದ ಡಾ. ಜೆ.ಎಸ್. ಕವಳೇಕರ ಅವರು ಸ್ವಾಗತ ಭಾಷಣ ಮಾಡಿದರು. ಐಐಸಿಯ ಸಂಚಾಲಕರಾದ ಡಾ. ಪ್ರವೀಣ ದೇವಾಂಗದ ಅವರು ಸಂಪನ್ಮೂಲ ವ್ಯಕ್ತಿಯನ್ನು ಪರಿಚಯಿಸಿದರು. ಪಿ.ಎಸ್. ಮೆಳವಂಕಿ ಅವರು ಕಾರ್ಯಕ್ರಮ ನಿರೂಪಿಸಿದರು.

ಈ ಕಾರ್ಯಕ್ರಮವು ಅಧ್ಯಾಪಕ ಸದಸ್ಯರು ಮತ್ತು ವಿದ್ಯಾರ್ಥಿಗಳಿಂದ ಉತ್ಸಾಹಭರಿತ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು, ಇದು ನಾವೀನ್ಯತೆ ಮತ್ತು ಸೃಜನಶೀಲತೆಯ ಅರ್ಥಪೂರ್ಣ ಆಚರಣೆಯಾಗಿದೆ.



10 ವರ್ಷಗಳಿಗಿಂತ ಹೆಚ್ಚು ನಿರ್ದೇಶಕರಾಗಿ ಸೇವೆ ಸಲ್ಲಿಸುವ ಅವಕಾಶ ಇಲ್ಲ: ಗಡಾದ

ಬೆಳಗಾವಿ: ರಿಸರ್ವ್ ಬ್ಯಾಂಕಿನ ನಿಯಂತ್ರಣದಲ್ಲಿ ಬರುವ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಸೇರಿದಂತೆ ರಾಜ್ಯದಲ್ಲಿರುವ ಪ್ರತಿಯೊಂದು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಗಳಲ್ಲಿ ಮತ್ತು ನಗರ ಸಹಕಾರಿ ಬ್ಯಾಂಕ್‌ಗಳಲ್ಲಿ (ಅರ್ಬನ್ ಬ್ಯಾಂಕ್) ನಿರ್ದೇಶಕರಾಗಿ 10 ವರ್ಷಗಳಿಗಿಂತ ಹೆಚ್ಚು ಕಾಲ ನಿರ್ದೇಶಕರಾಗಿ ಸೇವೆ ಸಲ್ಲಿಸುವ ಅವಕಾಶ ಇಲ್ಲ ಎಂದು ಸಾಮಾಜಿಕ ಹೋರಾಟಗಾರ ಭೀಮಪ್ಪ ಗಡಾದ ಹೇಳಿದರು.



ಭಾರತೀಯ ರಿಸರ್ವ್ ಬ್ಯಾಂಕ್ ತಿದ್ದುಪಡಿ ನಿರ್ದೇಶನಗಳು 2026ರ ಪ್ರಕಾರ ಕೂಡಲೇ ನಿರ್ದೇಶಕರ ಸ್ಥಾನದಿಂದ ಅನರ್ಹಗೊಳಿಸುವಂತೆ ಮುಖ್ಯಮಂತ್ರಿಗಳಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಸಹಕಾರ ಮತ್ತು ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ವಿನಂತಿಸಲಾಗಿದೆ ಎಂದರು.

ರಿಸರ್ವ್ ಬ್ಯಾಂಕಿನ ತಿದ್ದುಪಡಿ ನಿರ್ದೇಶನದ ಪ್ರಕಾರ ನಗರ ಸಹಕಾರಿ ಬ್ಯಾಂಕುಗಳ (ಯು.ಸಿ.ಬಿ.) ನಿರ್ದೇಶಕರುಗಳ ಗರಿಷ್ಠ ನಿರಂತರ ಅಧಿಕಾರ ಅವಧಿಯನ್ನು 08 ವರ್ಷಗಳಿಂದ 10 ವರ್ಷಗಳ ಅವಧಿಯವರೆಗೆ ಹೆಚ್ಚಿಸಲು ತಿದ್ದುಪಡಿ ಮಾಡಲಾಗಿದೆ.

ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಾತ್ರವಲ್ಲದೇ ರಾಜ್ಯದ ಇತರ ಡಿಸಿಸಿ ಬ್ಯಾಂಕ್ ಗಳಿಗೂ ಮತ್ತು ನಗರ ಸಹಕಾರಿ ಬ್ಯಾಂಕ್ ಗಳಿಗೂ ಕೂಡಾ ರಿಸರ್ವ್ ಬ್ಯಾಂಕಿನ ತಿದ್ದುಪಡಿ ನಿರ್ದೇಶನವು ಅನ್ವಯವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ಮತ್ತು ರಿಸರ್ವ್ ಬ್ಯಾಂಕ್ ಈ ಕುರಿತು ನಿರ್ದೇಶನ ನೀಡಿರುವುದು ತಮಗೆ ಗೊತ್ತಿದ್ದರೂ ಕೂಡ ಈ ನಿರ್ದೇಶನದ ನಂತರದ ಅವಧಿಯಲ್ಲಿ ನಡೆದ ಚುನಾವಣೆಗಳಲ್ಲಿ ಸ್ಪರ್ಧೆಗೆ ಅನರ್ಹರಾಗುವ ಅಭ್ಯರ್ಥಿಗಳಿಗೆ ಸ್ಪರ್ಧಿಸಲು ಅವಕಾಶ ನೀಡಿರುವ ಪ್ರತಿಯೊಂದು ಬ್ಯಾಂಕ್ ಗಳ ಚುನಾವಣಾಧಿಕಾರಿಗಳ ಮೇಲೆ ಮತ್ತು ಪ್ರಮುಖವಾಗಿ ರಾಜಕೀಯ ಒತ್ತಡದಿಂದ ಇದನ್ನು ಜಾರಿಗೆಗೊಳಿಸಲು ಹಿಂದೇಟು ಹಾಕುತ್ತಿರುವ ಸಹಕಾರಿ ಇಲಾಖೆಯ ಹಿರಿಯ ಅಧಿಕಾರಿಗಳ ಮೇಲೂ ಸಹ ಕಾನೂನು ರೀತಿ ಕ್ರಮ ಕೈಗೊಳ್ಳಲು ಪತ್ರದಲ್ಲಿ ಒತ್ತಾಯಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಂಬೇಡ್ಕರ್ ಭವನ ಕಟ್ಟಡ ಉದ್ಘಾಟನೆ

ರಾಯಬಾಗ: ಮತಕ್ಷೇತ್ರದಲ್ಲಿ ಎಲ್ಲ ವರ್ಗದ ಸಮಾಜದವರಿಗೆ ಸಮುದಾಯ ಭವನ ನಿರ್ಮಿಸಿ ಕೊಡಲಾಗುತ್ತಿದ್ದು, ಅವುಗಳನ್ನು ಸ್ವಚ್ಛತೆಯಿಂದ ಕಾಪಾಡಿಕೊಂಡು, ಸಭೆ, ಸಮಾರಂಭ, ಮದುವೆ ಕಾರ್ಯಗಳಿಗೆ ಬಳಸಿಕೊಳ್ಳುವಂತೆ ಶಾಸಕ ಡಿ.ಎಂ.ಐಹೊಳೆ ಹೇಳಿದರು.

ಬುಧವಾರ ತಾಲೂಕಿನ ಚಿಂಚಲಿ ಪಟ್ಟಣದ ಅಂಬೇಡ್ಕರ ನಗರದಲ್ಲಿ ಜಿ.ಪಂ. ಇಲಾಖೆಯಿಂದ ನಿರ್ಮಿಸಿರುವ ನೂತನ ಅಂಬೇಡ್ಕರ್ ಭವನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರರವರು ಭಾರತೀಯರಿಗೆ ಸಮಾನತೆ, ಸ್ವಾತಂತ್ರ್ಯ, ಶಿಕ್ಷಣ ಹಕ್ಕು ನೀಡಿದ್ದಾರೆ. ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಸಂಸ್ಕಾರ ನೀಡಿ ಅವರನ್ನು ಸಮಾಜದಲ್ಲಿ ಉತ್ತಮ ನಾಗರಿಕರನ್ನಾಗಿ ಬೆಳೆಸೋಣ ಎಂದರು.

ಜಿಪಂ ಎಇ ಎಸ್.ಎಸ್.ಹೊಸಮನಿ, ಮಹಾವೀರ ಹಾರೂಗೇರಿ, ಸಂಜು ಮೈಶಾಳೆ, ಮಲ್ಲು ಕಮತೆ, ಸುಭಾಸ ಕೋರೆ, ಮಹಾವೀರ ಕೆಂಗರೆ, ಸದಾಶಿವ ಯಡ್ರಾಂವೆ, ರಮೇಶ ಹಾರೂಗೇರಿ ಹಾಗೂ ದಲಿತ ಮುಖಂಡರು ಇದ್ದರು.



ಆಕ್ಷೇಪಣೆಗೆ ಆಹ್ವಾನ

ಬೆಳಗಾವಿ: ಕರ್ನಾಟಕ ಪಂಚಾಯತ್ ರಾಜ್ ಸೀಮಾ ಆಯೋಗವು ಬೆಳಗಾವಿ ಜಿಲ್ಲೆಯ 15 ತಾಲೂಕಿನ ಗ್ರಾಪಂ ಸದಸ್ಯರ ಸ್ಥಾನಗಳನ್ನು ನಿಗದಿಪಡಿಸಿರುವ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ವೆಬ್‌ಸೈಟ್ https://rdpr.karnataka.gov.in/rdc/public ನಲ್ಲಿ ಮತ್ತು ಏ.18 ಕರ್ನಾಟಕ ವಿಶೇಷ ರಾಜ್ಯ ಪತ್ರದ ವಿಳಾಸ https://erajyapatra.kamataka.gov.in ದಲ್ಲಿ ಪ್ರಕಟಿಸಿರುತ್ತಾರೆ. ಈ ಕುರಿತು ಸಾರ್ವಜನಿಕ ಅಭಿಪ್ರಾಯ, ಆಕ್ಷೇಪಣೆಗಳನ್ನು ಏ.24ರೊಳಗಾಗಿ ಸಲ್ಲಿಸಬಹುದಾಗಿದೆ. ಆಕ್ಷೇಪಣೆಗಳನ್ನು ಆಯೋಗದ ವೆಬ್‌ಸೈಟ್ ಮೂಲಕ ಅಥವಾ ಖುದ್ದಾಗಿ, ಅಂಚೆಯ ಮೂಲಕ ಕರ್ನಾಟಕ ಪಂಚಾಯತ್ ರಾಜ್ ಇಲಾಖೆ, ಗೇಟ್ ನಂ.2, 2ನೇ ಮಹಡಿ, ಕೊಠಡಿ ಸಂಖ್ಯೆ 229 ಮತ್ತು 230 ಬಹುಮಹಡಿಗಳ ಕಟ್ಟಡ ಬೆಂಗಳೂರಿನಲ್ಲಿ ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಸವಣ್ಣನವರು ಸಮಾಜ ಸುಧಾರಕರು: ಪ್ರದೀಪ ನಾಯಿಕ

ಮುಗಳಖೋಡ: ಸರ್ವ ಜನಾಂಗ ಮತ್ತು ಲಿಂಗಸಮಾನತೆಯ ದಾರಿಯಲ್ಲಿ ಸಮಾಜದ ಒಳಿತಿಗಾಗಿ ತನ್ನ ಕಾಯಕದ ಜೊತೆಗೆ ಹಲವು ಕ್ರಾಂತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಬಸವಣ್ಣನವರು. ಅನುಭವ ಮಂಟಪ ಸ್ಥಾಪನೆ, ಪ್ರಭುದೇವ, ಭಕ್ತರ ಭಕ್ತಿ, ನಯ, ವಿನಯ ಸಂಸ್ಕೃತಿಯ ಜೊತೆಗೆ ಲಿಂಗಪೂಜೆಯ ಮಹತ್ವ ಜಗಕ್ಕೆ ಸಾರಿ ಸಮಾಜ ಸುಧಾರಣೆಗೆ ಪ್ರೇರಣೆಯಾದವರು ಬಸವಣ್ಣನವರು ಎಂದು ವಾಣಿಜ್ಯ ವಿಭಾಗದ ಮುಖ್ಯಸ್ಥ ಪ್ರದೀಪ ನಾಯಿಕ ಹೇಳಿದರು.

ಅವರು ಪಟ್ಟಣದ ಚವಿವ ಸಂಘದ ಡಾ.ಸಿ.ಬಿ.ಕುಲಿಗೋಡ ಪದವಿ ಮಹಾವಿದ್ಯಾಲದಲ್ಲಿ ಬುಧವಾರ ಆಯೋಜಿಸಿದ ಬಸವಣ್ಣನವರ ಜಯಂತ್ಯುತ್ಸವ ಹಾಗೂ ವಿವಿಧ ಕಾರ್ಯಕ್ರಮಗಳ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಅಧ್ಯಕ್ಷಸ್ಥಾನವಹಿಸಿದಪ್ರಾಚಾರ್ಯ ಪಿ.ಸಿ.ಕಂಬಾರ ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.



ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಸಂಗಮೇಶ ಹಿರೇಮಠ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಲಿಂಗ ಪೂಜೆ ಕಾರ್ಯಕ್ರಮ ನಡೆಸಿಕೊಟ್ಟು ವಿದ್ಯಾರ್ಥಿಗಳಿಗೆ ವಿಭೂತಿಯ ಮಹಿಮೆಯನ್ನು ಕುರಿತು ತಿಳಿಸಿದರು.

ವಿದ್ಯಾರ್ಥಿ- ವಿದ್ಯಾರ್ಥಿನಿಯರೆಲ್ಲರು ಹಣೆಗೆ ವಿಭೂತಿ ಧರಿಸಿಕೊಂಡು ಲಿಂಗಪೂಜೆಯಲ್ಲಿ ತೊಡಗಿದ್ದು ಬಹಳ ವಿಶೇಷವಾಗಿತ್ತು. ಹಲವಾರು ವಿದ್ಯಾರ್ಥಿಗಳು ಭಾಷಣ, ಗಾಯನ ಹಾಗೂ ವಚನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ವಿದ್ಯಾರ್ಥಿನಿ ಆಶ್ವಿನಿ ಹಳ್ಳೂರ ನಿರೂಪಿಸಿ ವಂದಿಸಿದರು.

ಈ ಸಂದರ್ಭದಲ್ಲಿ ಶ್ರೀ.ಚವಿವ ಸಂಘದ ವ್ಯವಸ್ಥಾಪಕ ಶ್ರೀಮಂತ ಆಳಂದ, ಶ್ರೀಶೈಲ ಕುಲಿಗೋಡ, ಪ್ರಾಧ್ಯಾಪಕರಾದ ಡಾ.ಪಿ.ಬಿ.ಕೊರವಿ, ಆರ್.ಎಸ್.ಶೇಗುಣಸಿ, ಬಿ.ಎಸ್. ಸವಸುದ್ದಿ, ಕುಮಾರಿ ಆರ್.ಎಂ. ಖೇತಗೌಡರ, ಆಶ್ವಿನಿ ಹಳ್ಳೂರ, ಕಚೇರಿ ಅಧೀಕ್ಷಕ ಹುಸೇನ್ ಯಲಿಗಾರ, ಸಹಾಯಕ ಸಂಗಣ್ಣಾ ತೇಲಿ ಸೇರಿದಂತೆ ವಿದ್ಯಾರ್ಥಿಗಳ ಪ್ರಧಾನ ಕಾರ್ಯದರ್ಶಿಗಳು, ವಿದ್ಯಾರ್ಥಿ ಪ್ರತಿನಿಧಿಗಳು ಹಾಗೂ ವಿದ್ಯಾರ್ಥಿಗಳು ಇದ್ದರು.

> ಶರಣ ಶರಣೆಯರು ಅನುಭವ ಮಂಟಪದಲ್ಲಿ ಜಾತಿ ಧರ್ಮ, ಲಿಂಗ ಹಾಗೂ ಅಂದಿನ ಆಗು ಹೋಗುವ ಕುರಿತು ಚರ್ಚಿಸಿದಂತೆ ಇವತ್ತು ನಮ್ಮ ಕಾಲೇಜಿನಲ್ಲಿ ಅಂತಹ ಹೋಲಿಕೆಯ ಕಾರ್ಯಕ್ರಮ ಆಯೋಜಿಸಿದ್ದು ವಿಶೇಷವಾಗಿತ್ತು. ಶೈಕ್ಷಣಿಕ ಕ್ಷೇತ್ರದಲ್ಲಿ ಧಾರ್ಮಿಕ ಸೇರಿದಂತೆ ಸಮಾಜ ಸುಧಾರಕರ ಜಯಂತಿ ಮತ್ತು ಅವರ ವಿಚಾರಗಳನ್ನು ಕುರಿತು ಕಾರ್ಯಕ್ರಮಗಳನ್ನು ಆಯೋಜಿಸುವುದು ಅವಶ್ಯ
>
> ■ ಡಾ.ಪಿ.ಬಿ.ಕೊರವಿ. ಪ್ರಾಧ್ಯಾಪಕ. ಕನ್ನಡ ವಿಭಾಗ

ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಬಸವತತ್ವ ಪರಿಹಾರ: ಯಾದವ್

ಮಾಂಜರಿ: ಬಸವಣ್ಣನವರ ಆದರ್ಶಗಳನ್ನು ಇಂದು ಭಾರತ ದೇಶವು ಅನುಸರಿಸಿದರೆ ಜಗತ್ತಿನಲ್ಲಿಯೇ ಶ್ರೇಷ್ಠ ದೇಶ ವಾಗುತ್ತದೆ ಎಂದು ಮಾಂಜರಿ ಗ್ರಾಪಂನ ಮಾಜಿ ಸದಸ್ಯ ಹಾಗೂ ಯುವ ಮುಖಂಡ ಶೀತಲ್ ಯಾದವ್ ಹೇಳಿದರು.

ಅವರು ಸೋಮವಾರರಂದು ಗ್ರಾಮದ ಶ್ರೀ ಕಾಡಸಿದ್ಧೇಶ್ವರ ಸಂಸ್ಥಾನ ಮಠದಲ್ಲಿ ಸಮಸ್ತ ಲಿಂಗಾಯತ ಸಮಾಜ ವತಿಯಿಂದ ಹಾಗೂ ಗ್ರಾಮಸ್ಥರ ವತಿಯಿಂದ ಆಯೋಜಿಸಲಾದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವರ್ಗ, ವರ್ಣ, ಜಾತಿ, ಲಿಂಗಭೇದವಿಲ್ಲದ ಸಮ ಸಮಾಜದ ಪರಿಕಲ್ಪನೆಯನ್ನು ಬಸವಣ್ಣ 12ನೇ ಶತಮಾನದಲ್ಲಿ ಹೇಳಿ ಇವನಾರವ ಇವನಾರವ ಎಂದ ನಿಸದೇ ಎಲ್ಲರು ನಮ್ಮವರು ಎಂಬ ಉದಾತ್ತ ಚಿಂತನೆ, ಕಾಯಕ-ದಾಸೋಹತತ್ವದಲ್ಲಿ ವೈಜ್ಞಾನಿಕ ನೆಲೆಗಳನ್ನು ನಾವು ಕಾಣಬಹುದಾಗಿದೆ. ಇಂದಿನ ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಬಸವತತ್ವ ಪರಿಹಾರವಾಗಿದೆ. ಯುದ್ಧ, ಅಸಮತೋಲನ ಸಮಾಜ ಮತ್ತು ವಿಶ್ವದ ಅಶಾಂತಿಗೆ ಇರುವ ತೊಂದರೆಗಳನ್ನು ನಿವಾರಿಸಲು ಸಾಧ್ಯವಾಗಿದೆ. ಇಂದು ಸಮಾಜದಲ್ಲಿ ನಡೆಯುತ್ತಿರುವ ಶೋಷಣೆ ಗಳನ್ನು ತಪ್ಪಿಸಲು ಬಸವಣ್ಣ ವೈಚಾರಿಕ, ವೈಜ್ಞಾನಿಕದಾರ್ಶನಿಕತೆಯನ್ನು ನಮ್ಮ ಬದುಕಿನಲ್ಲಿ ಅನು ಸರಿಸಿಕೊಳ್ಳಬೇಕು. ಆಮೂಲಕ ಆತ್ಮಶೋಧನೆಯನ್ನು, ಅಂತ ರಂಗ, ಬಹಿರಂಗ, ಶುದ್ಧತೆಯನ್ನು ಮಾಡಿಕೊಳ್ಳ ಬೇಕು. ಕೃತಕಬುದ್ಧಿಮತ್ತೆ ಕೂಡಬಸವಣ್ಣನ ತತ್ವಗಳನ್ನು ಅನುಸರಿಸಿದೆ ಎಂದರು.



ಜಯಂತಿಗಳಿಗೆ ಸೀಮಿತ ಗೊಳಿಸಬಾರದು. ಬಸವಣ್ಣನವರ ವಚನಗಳಲ್ಲಿ ವೈಚಾರಿಕ ಪ್ರಜ್ಞೆ ವಿಷಯ ಕುರಿತು ರಾವಸಾಹೇಬ್ ಕೋಟಿವಾಲೆ ಮಾತನಾಡಿದ , ಶರಣರ ತತ್ವಗಳನ್ನು ವಚನಗಳನ್ನು ಹೇಳುವುದಷ್ಟೇ ಅಲ್ಲ, ಅವುಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ವಚನಗಳು ಸಾಹಿತ್ಯದ ಸಾರವಷ್ಟೇ ಅಲ್ಲ, ಇವು ಹೃದಯ ಬಡಿತವು ಹೌದು. ಬದುಕಿನಲ್ಲಿ ವಿವೇಕ, ಪ್ರೇರಕಶಕ್ತಿ, ಸತ್ ಪಥಗಳನ್ನು ಸೃಜಿಸಿಕೊಳ್ಳಲು ಬಸವಣ್ಣ ಮತ್ತು ಶಿವಶರಣರ ತತ್ವಗಳು ಪೂರಕವಾಗಿದೆ. ಜಡ ಸಮಾಜವನ್ನು ಚಲನಶೀಲ, ಸಮಾಜವಾಗಿ ನಿರ್ಮಾಣ ಮಾಡಲು ಪಣತೊಟ್ಟವರು ಬಸವಣ್ಣ. ಬದುಕಿನ ಧೀಶಕ್ತಿಯಾಗಿ ಅವರ ವಚನಗಳು, ವೈಚಾರಿಕ ಚಿಂತನೆಗಳನ್ನು, ವೈಜ್ಞಾನಿಕ ನೆಲೆಗಟ್ಟನ್ನು ಹೊಂದಿದೆ ಎಂದು ಹಲವು ವಚನಗಳ ಮೂಲಕ ವಿಶ್ಲೇಷಿಸಿದರು.

ಕಾರ್ಯಕ್ರಮಕ್ಕೆ ಮಹಾಂತೇಶ್ ಪಾಟೀಲ, ವಿಜಯ್ ಘಾಟಿಗೆ, ಸಂಜಯ್ ಕೋಕನೆ, ನಿತಿನ್ ಜಾದವ್, ಮಹಾಂತೇಶ ಪಾಟೀಲ, ಚಂದ್ರಕಾಂತ್ ಮಿರ್ಜೆ, ಯುವರಾಜ ಘಟಿಗೆ, ಕಪಿಲ್ ಬಿಲವಡೆ, ವಿಶಾಲ್ ಪಾಟೀಲ, ಶಶಿಕಾಂತ್ ಮಿರ್ಜೆ ಹಾಗೂ ಸಮಾಜದ ಮುಖಂಡರು ಹಾಜರಿದ್ದರು

ಮಹಾಂತೇಶ್ ಕುಮಾರಮಠ ಸ್ವಾಗತಿಸಿ ನಿರೂಪಿಸಿ ವಂದಿಸಿದರು.

ಕಿರುಸುದ್ದಿ

ಮಹೇಶ ಬೆಲ್ಲದಗೆ ಗೌರವ ಡಾಕ್ಟರೇಟ್

ಕಬ್ಬೂರ: ಪಟ್ಟಣದ ಬೆಂಗಳೂರ ಉದ್ಯಮಿ, ಶಿಕ್ಷಣಪ್ರೇಮಿ ಮಹೇಶ ಬೆಲ್ಲದರವರಿಗೆ ಕರ್ನಾಟಕ ಸರ್ಕಾರದ ಬಾಗಲಕೋಟೆ ವಿಶ್ವವಿದ್ಯಾಲಯದಿಂದ ಅತ್ಯುನ್ನತ ಗೌರವ ಡಾಕ್ಟರೇಟ್ ಪ್ರಶಸ್ತಿಗೆ ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.



ಬಾಗಲಕೋಟೆ ವಿಶ್ವವಿದ್ಯಾಲಯವು ಏ.24ರಂದು ಜಮಖಂಡಿಯಲ್ಲಿ ಆಯೋಜಿಸಿದ ಘಟಿಕೋತ್ಸವದಲ್ಲಿ ರಾಜ್ಯಪಾಲರಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಮಹೇಶ ಬೆಲ್ಲದ ಅವರು ಸ್ವೀಕರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಉಪಸ್ಥಿತಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಡಾ.ಭೀಮರಾಯ ಎ.ಮೇತ್ರಿ, ಕುಲಪತಿ ಆನಂದ್ ಶರದ್ ದೇಶಪಾಂಡೆ, ಕುಲಸಚಿವ ಸೋಮಲಿಂಗ ಗೋಪಾಲ ಗೆಣ್ಣೂರ, ಲತಾ ಕೆ.ಪಿ., ಡಾ. ಚಿದಾನಂದ ಯು ಧವಳೇಶ್ವರ ಉಪಸ್ಥಿತರಿರುವರು.

ನೂರಾರು ಶಾಲೆಗಳನ್ನು ದತ್ತು ಪಡೆದು ಗ್ರಾಮೀಣ ಮತ್ತು ಆರ್ಥಿಕವಾಗಿ ದುರ್ಬಲ ಹಿನ್ನೆಲೆಯ ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನದ ಸ್ಪರ್ಶ ನೀಡುವ ಮೂಲಕ ಜ್ಞಾನ ಬಂಡಾರ ಒದಗಿಸಿದ ಉತ್ಕೃಷ್ಟತೆ ಸಾಧನೆಗಾಗಿ ಶಿಕ್ಷಣ ಕ್ಷೇತ್ರದಿಂದ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಂಭ್ರಮದ ಬಸವೇಶ್ವರ ಜಯಂತ್ಯುತ್ಸವ



ಕಕಮರಿ: ಸಾಂಸ್ಕೃತಿಕ ನಾಯಕ ಬಸವಣ್ಣನವರ 893ನೇ ಜನ್ಮದಿನವನ್ನು ಸಡಗರದಿಂದ ಆಚರಿಸಲಾಯಿತು. ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಜೋಡೆತ್ತುಗಳ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ಅಮ್ಮಾಜೇಶ್ವರಿ ದೇವಸ್ಥಾನ ಅಧ್ಯಕ್ಷ ಅಪ್ಪುಗೌಡ ಪಾಟೀಲ, ಸಿದ್ರಾಮಪ್ಪ ಬಿಳ್ಳೂರ, ಲಾಯಣ್ಣ ದಾಶ್ಯಾಳ, ರಾಜೇಂದ್ರ ವಾಲಿ, ಈರಪ್ಪ ಬಸರಗಿ, ಸಂಗಪ್ಪ ಬಸರಗಿ. ಈರಣ್ಣ ಕನ್ನಾಳ, ಮಹಾಂತೇಶ ಕನ್ನಾಳ, ಕಲ್ಮೇಶ ಹೊನವಾಡ, ಲಾಯಪಗಪ ಮ್ಯಾಗೂರ, ಸುಮೀತ್ ಈರಗೌಡ, ಬಸವರಾಜ ಬಾಳಿಕಾಯಿ, ಶ್ರೀಧರ ಹೊನವಾಡ, ಇತರರಿದ್ದರು.

ಭಕ್ತಿ ಪರಾಕಾಷ್ಠೆಗೆ ಸಾಕ್ಷಿಯಾದ ಅಜ್ಜನ ಜಾತ್ರೆ



ಹಲ್ಯಾಳ: ಗ್ರಾಮದ ಸದಾಶಿವ ಮುತ್ಯನ ಜಾತ್ರೆಯು ಮೂರು ದಿನಗಳ ಕಾಲ ಬಹಳ ವಿಜೃಂಭಣೆಯಿಂದ ನಡೆಯಿತು.

ಸದಾಶಿವ ಅಜ್ಜನವರನ್ನ ಭಕ್ತಿಯಿಂದ ಪೂಜಿಸಿದ ಯಾವುದೇ ವ್ಯಕ್ತಿಯು ಶ್ರೀಮಂತಿಕೆಯಿಂದ ಇದ್ದಾನೆ, ಅಜ್ಜನ ಪವಾಡ ಎಂದರೆ ಮೋಸ,ವಂಚನೆ ಮಾಡುವವರಿಗೆ ಅಜ್ಜ ತಕ್ಕ ಪಾಠ ಕಲಿಸಿಸುತ್ತಾನೆ ಎಂಬುದು ಸ್ಥಳೀಯರ ನಂಬುಗೆ ಆಗಿದೆ.

ಗ್ರಾಮಸ್ಥರು ಎಲ್ಲರೂ ಸೇರಿ ಅಜ್ಜನ ರಥವನ್ನು ಸಂಭ್ರಮದಿಂದ ಎಳೆಯುತ್ತ ಮುಂದೆ ಸಾಗಿದರು. ಮಾನವ ಕುಲಕ್ಕೆ ಮುಕ್ತಿ ದೊರೆಯಬೇಕಾದರೆ ಅಜ್ಜನನ್ನು ಭಕ್ತಿಯಿಂದ ಪೂಜಿಸುತ್ತಾ ಕಾಯಕದಲ್ಲಿ ನಿರತನಾದರೆ ನಮಗೆ ಮುಕ್ತಿ ಪ್ರಾಪ್ತವಾಗುತ್ತದೆ ಎಂದು ಪಪ್ಪನ ಸನದಿ ಹೇಳಿದರು ಈ ವೇಳೆ ದೀಪಕ್ ಮುರಗುಂಡಿ,ಶಾಮ ಪೂಜಾರಿ, ಕಾಸು ತಕ್ಕತ್ತರಾವ, ಧರೆಪ್ಪಾ ಬನಸೋಡೆ, ಕಿರಣ ನಾಯಿಕ, ಧರೆಪ್ಪ ನಾಯಿಕ, ವಿಠ್ಠಲ ಕಾಂಬಳೆ,ಮತ್ತು ಗ್ರಾಮಸ್ಥರಿದ್ದರು.



ಚನ್ನಮ್ಮ ಕಿತ್ತೂರ: ಸಮೀಪದ ಹಿರೇಮುನವಳ್ಳಿ ಗ್ರಾಮದ ಶ್ರೀ ಶಾಂಡಿಲೇಶ್ವರ ಮಠದ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಧರ್ಮ ಧ್ವಜಾರೋಹಣ ಹಾಗೂ ವಿಶೇಷ ಮಹಾ ಪೂಜೆ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀಮಠದ ಪೀಠಾಧ್ಯಕ್ಷ ಶಂಭುಲಿಂಗ ಶಿವಾಚಾರ್ಯ ಸ್ವಾಮೀಜಿ, ಬಿಜೆಪಿ ಮುಖಂಡ ಸುಂದರ ಕುಲಕರ್ಣಿ, ನ್ಯಾಯವಾದಿ ಆರ್.ಜಿ. ಹಿರೇಮಠ, ರುದ್ರಗೌಡ ಪಾಟೀಲ, ಸಿರಿಯಾಳ ಪೂಜಾರ, ಶಿವಪ್ಪ ಅಳವಣಿ, ರುದ್ರಪ್ಪ ಅಕ್ಕಿ ಹಾಗೂ ಇತರರು ಇದ್ದರು.

ವಿವಿಧ ಕಾಮಗಾರಿಗೆ ಸಚಿವ ಜಾರಕಿಹೊಳಿ ಚಾಲನೆ

ಯಮಕನಮರಡಿ: ಯಮಕನಮರಡಿ ಮತ ಕ್ಷೇತ್ರದ ಮುಚ್ಚಂಡಿ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮಿ ಮತ್ತು ಶ್ರೀ ಮಾರಗಾಯಿ ದೇವಿಯ ಜಾತ್ರೆಯ ಸಂದರ್ಭದಲ್ಲಿ ಸುಮಾರು 1.30 ಕೋಟಿ ರೂ. ವೆಚ್ಚದ ರಸ್ತೆ ಡಾಂಬರೀಕರಣ, ಚರಂಡಿ ನಿರ್ಮಾಣ, 18 ಲಕ್ಷ ರೂ. ವೆಚ್ಚದ ಮರಾಠಿ ಪ್ರಾಥಮಿಕ ಶಾಲಾ ಸುಧಾರಣೆ ಹಾಗೂ 25 ಲಕ್ಷ ರೂ. ವೆಚ್ಚದ ಶ್ರೀ ಕಲ್ಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳಿಗೆ ಸಚಿವ ಸತೀಶ ಜಾರಕಿಹೊಳಿ ಚಾಲನೆ ನೀಡಿದರು.

ಅದೇ ರೀತಿ ಅಷ್ಟೆ ಗ್ರಾಮದಲ್ಲಿಯೂ ಅಭಿವೃದ್ಧಿಯ ಪರ್ವ ಮುಂದುವರಿದಿದ್ದು, ಒಟ್ಟು 1.71 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಸಿಸಿ ರಸ್ತೆಗಳು, ಚರಂಡಿ ವ್ಯವಸ್ಥೆ, ರಸ್ತೆ ಡಾಂಬರೀಕರಣ ಸೇರಿದಂತೆ ಅಂದಾಜು 38 ಲಕ್ಷ ರೂ. ವೆಚ್ಚದಲ್ಲಿ ಕನ್ನಡ ಮತ್ತು ಮರಾಠಿ ಶಾಲಾ ಕಟ್ಟಡಗಳು ಹಾಗೂ ಅಂದಾಜು 25 ಲಕ್ಷ ರೂ. ವೆಚ್ಚದಲ್ಲಿ ಶ್ರೀ ಕಲ್ಮೇಶ್ವರ ದೇವಸ್ಥಾನದ ಕಟ್ಟಡದ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿದರು. ಗ್ರಾಮೀಣ ಭಾಗದ ಮೂಲಸೌಕರ್ಯಗಳನ್ನು ಬಲಪಡಿಸುವ ಮೂಲಕ ಜನರ ಜೀವನಮಟ್ಟವನ್ನು ಸುಧಾರಿಸಲು ಈ ಯೋಜನೆಗಳು ಪೂರಕವಾಗಿದ್ದು, ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಇರುವ ನಮ್ಮ ಬದ್ಧತೆಯನ್ನು ಈ ಕಾರ್ಯಕ್ರಮಗಳು ಸಾಬೀತುಪಡಿಸಿವೆ.



ಯಮಕನಮರಡಿ: ಯಮಕನಮರಡಿ ಮತ ಕ್ಷೇತ್ರದ ಮುಚ್ಚಂಡಿ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮಿ ಮತ್ತು ಶ್ರೀ ಮಾರಗಾಯಿ ದೇವಿಯ ಜಾತ್ರೆಯ ಸಂದರ್ಭದಲ್ಲಿ ಸುಮಾರು 1.30 ಕೋಟಿ ರೂ. ವೆಚ್ಚದ ರಸ್ತೆ ಡಾಂಬರೀಕರಣ, ಚರಂಡಿ ನಿರ್ಮಾಣ, 18 ಲಕ್ಷ ರೂ. ವೆಚ್ಚದ ಮರಾಠಿ ಪ್ರಾಥಮಿಕ ಶಾಲಾ ಸುಧಾರಣೆ ಹಾಗೂ 25 ಲಕ್ಷ ರೂ. ವೆಚ್ಚದ ಶ್ರೀ ಕಲ್ಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳಿಗೆ ಸಚಿವ ಸತೀಶ ಜಾರಕಿಹೊಳಿ ಚಾಲನೆ ನೀಡಿದರು.

ಲೀಜ್ ಮುಗಿದ ಆಸ್ತಿಗಳಿಂದ ಪಾಲಿಕೆಗೆ ಕೋಟ್ಯಾಂತರ ರೂ. ನಷ್ಟ

ಬೆಳಗಾವಿ : ಇಲ್ಲಿನ ಮಹಾನಗರ ಪಾಲಿಕೆಯ ಆಸ್ತಿಗಳ ಲೀಜ್ ಅವಧಿ ಮುಗಿದು ಹಲವು ವರ್ಷಗಳೇ ಆದರೂ ಅವುಗಳನ್ನು ನಾವು ಪಾಲಿಕೆಯ ವಶಕ್ಕೆ ಪಡೆದಿಲ್ಲ, ಇದರಿಂದ ಪಾಲಿಕೆಗೆ ಹತ್ತಾರು ಕೋಟಿ ಹಣ ನಷ್ಟ ಆಗುತ್ತಿದೆ, ಸುಮಾರು 78 ಆಸ್ತಿಗಳು ಲೀಜಿನಲ್ಲಿ ಇದ್ದಿದ್ದು, ನ್ಯಾಯಾಲಯದ ಪ್ರಕರಣದ ಆಸ್ತಿಗಳನ್ನು ಹೊರತು ಪಡಿಸಿ ಉಳಿದವುಗಳನ್ನು ಪಾಲಿಕೆಯ ವಶಕ್ಕೆ ಪಡೆಯಿರಿ, ಇತ್ತ ಸರಿಯಾದ ಬಾಡಿಗೆಯೂ ಇಲ್ಲಾ, ಅತ್ತ ಆಸ್ತಿಯೂ ಇಲ್ಲಾ, ಎಂದು ನಗರ ಸೇವಕ ರವಿ ದೋತ್ರೆ, ಪಾಲಿಕೆಯ ಅಧಿಕಾರಿಗಳ ವಿರುದ್ಧ ಆಸಮಾಧಾನ ಹೊರ ಹಾಕಿದರು.

> ಪಾಲಿಕೆಯ ಲೆಕ್ಕಗಳ ಸ್ಥಾಯಿ ಸಮಿತಿ ಸಭೆ | ರವಿ ದೋತ್ರೆ ಹೇಳಿಕೆ



ಬುಧವಾರ ಪಾಲಿಕೆಯಲ್ಲಿ ಸ್ಥಾಯಿ ಸಮಿತಿ ಸಭಾಭವನದಲ್ಲಿ ನಡೆದ ಪಾಲಿಕೆಯ ಲೆಕ್ಕಗಳ ಸ್ಥಾಯಿ ಸಮಿತಿ ಸಭೆಯಲ್ಲಿ ಮಾತನಾಡಿದ, ರವಿ ದೋತ್ರೆ ಅವರು, ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿಯಿಂದ ಪಾಲಿಕೆಗೆ ಕೋಟ್ಯಾಂತರ ಆದಾಯ ನಷ್ಟಯಾಗುತ್ತಿದೆ. ಪಾಲಿಕೆಯ ಲೀಜ್ ಆಸ್ತಿಗಳು ಬೇರೆಯವರ ಪಾಲಾಗಿವೆ, ಆದಷ್ಟು ಬೇಗ ಅವುಗಳನ್ನು ಪಾಲಿಕೆ ವಶಕ್ಕೆ ಪಡೆದುಕೊಳ್ಳಬೇಕು, ಪಡೆದುಕೊಳ್ಳುವವರೆಗೆ ಅಂತಹ ಆಸ್ತಿಗಳಿಗೆ ವಿದ್ಯುತ್, ನೀರು ಪೂರೈಕೆಯನ್ನು ನಿಲ್ಲಿಸಬೇಕು ಎಂದು ಸಭೆಯಲ್ಲಿ ನಿರ್ಣಯ ಸಭೆಯ ಅಧ್ಯಕ್ಷ ಬ್ರಹ್ಮಾನಂದ ಮೀರಜಕರ ಅವರು ನಿರ್ಣಯ ಅಂಗಿಕರಿಸಿದರು.

ಪಾಲಿಕೆಯ ಬಡತನ ನಿರ್ಮೂಲನ ಕೇಂದ್ರದಿಂದ ಯಾರೇ ಸಹಾಯಧನ ಪಡೆಯಲು ಬಯಸಿದ್ದಲ್ಲಿ ಅವರು ತಮಗೆ ಸಂಬಂಧಪಟ್ಟ ನಿಗಮಗಳಿಂದ ಹಾಗೂ ಕೈಗಾರಿಕಾ ಕೇಂದ್ರದಿಂದ ಈ ಹಿಂದೆ ನಾವು ಯಾವುದೇ ಸಹಾಯದನ ಪಡೆದಿಲ್ಲ ಎಂದು ಎನ್ಓಸಿ ಪ್ರಮಾಣಪತ್ರ ಕಡ್ಡಾಯವಾಗಿ ತರಬೇಕು ಎಂದು ಸಭೆಯಲ್ಲಿ ತಿರ್ಮಾಣಿಸಲಾಯಿತು.

ಭೂಬಾಡಿಗೆಯನ್ನು ಈ ಹಿಂದೆ ಇರುವ ಗುತ್ತಿಗೆದಾರನಿಗೆ ಶೇಕಡಾ ಹತ್ತರಷ್ಟು ಹೆಚ್ಚಿಸಿ ಕೊಟ್ಟಿದ್ದೀರಿ, ಅಂತಹ ಕೊಡುವ ಆದೇಶ ಎಲ್ಲಿದೆ? ಬೇರೆ ಟೆಂಡರ್ ಕರೆಯಬೇಕಿತ್ತು ಆದರೆ ಇನ್ನು ವರೆಗೆ ಟೆಂಡರ್ ಕರೆದಿಲ್ಲ ಎಂದು ಅಧಿಕಾರಿಗಳ ಚಿರುದ್ಧ ನಗರ ಸೇವಕರು ಅಸಮಾಧಾನವನ್ನು ಹೊರ ಹಾಕಿದರು.

ಇದೇವೇಳೆಸಮಿತಿಯಮತ್ತೊಬ್ಬಸದಸ್ಯಮಾತನಾಡಿ, ಪಾಲಿಕೆಯಲ್ಲಿ ಕೆಲಸ ಮಾಡುವ ಡಿ ದರ್ಜೆಯ ಗುತ್ತಿಗೆ ನೌಕರರ ವೇತನ ಇನ್ನೂ ಆಗಿಲ್ಲ ಏಕೆ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅಧಿಕಾರಿಗಳು, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ಡಿ ಗ್ರೂಪ್ ಸಿಬ್ಬಂದಿಗಳ ಸರಿಯಾದ ಹಾಜರಿ, ಪಿಎಫ್, ಇಎಸ್ಐ ಕಟ್ಟಿರುವ ಮಾಹಿತಿ, ಅವರಿಗೆ ಜಮೆ ಆದ ವೇತನದ ಮಾಹಿತಿ ಸರಿಯಾಗಿ ನೀಡಬೇಕು, ಗುತ್ತಿಗೆದಾರ ಸಿಬ್ಬಂದಿಗಳ ಬಗ್ಗೆ ಸರಿಯಾದ ಮಾಹಿತಿ ನೀಡದೇ ಇರುವಾಗ ಹೇಗೆ ವೇತನ ಬಿಡುಗಡೆ ಮಾಡಬೇಕು, ಮುಂದಿನ ತಿಂಗಳಿನಿಂದ ಸರಿಯಾದ ಮಾಹಿತಿ ನೀಡಲು ಹೇಳಿ, ಗುತ್ತಿಗೆದಾರ ಮೊದಲು ಸಿಬ್ಬಂದಿಗಳಿಗೆ ವೇತನ ನೀಡಬೇಕು, ಆದರ ಸಂಪೂರ್ಣ ಮಾಹಿತಿ ನಮಗೆ ನೀಡಬೇಕು ನಂತರ ನಮ್ಮಿಂದ ಬಿಲ್ ಮಾಡಿಸಿಕೊಳ್ಳಬೇಕು ಎಂದರು.

ಈ ವೇಳೆ ಪಾಲಿಕಯ ಅಧಿಕಾರಿಗಳು ಹಾಗೂ ಪಾಲಿಕೆಯ ನಗರ ಸೇವಕರು ಸೇರಿದಂತೆ ಇತರರು ಇದ್ದರು.

ಸಮ ಸಮಾಜದ ಹರಿಕಾರ ಬಸವಣ್ಣ

ಹಾರೂಗೇರಿ: ವ್ಯಕ್ತಿತ್ವ ವಿಕಸನಕ್ಕಾಗಿಯೇ ಅಂದು ವಚನ ಚಳುವಳಿ ನಡೆಯಿತು. ಸಮತಾ ನಾಯಕ, ಕರ್ನಾಟಕ ಸಾಂಸ್ಕೃತಿಕ ನಾಯಕ ಬಸವಣ್ಣವರು ಹಾಕಿಕೊಟ್ಟ ವಚನ ತತ್ವದ ಮಾರ್ಗದಲ್ಲಿ ಅನೇಕ ಶರಣರು ವಚನಗಳನ್ನು ಧರ್ಮಪ್ರಚಾರಕ್ಕೆ ಪ್ರಚುರಪಡಿಸಿದರು.ಅಲ್ಲದೆ ಅನುಭವ ಮಂಟಪದಲ್ಲಿ ಅನುಭಾವಿಸಿದ ವಚನಗಳನ್ನು ತಾಳೆ ಗರಿಗಳ ಮೇಲೆ ಬರೆದು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ಮಾಡಿ ವ್ಯಕ್ತಿತ್ವ ವಿಕಸನ ಮಾಡಿದ ಕೀರ್ತಿ ಲಿಂಗಾಯತ ಧರ್ಮಕ್ಕೆ ಹಾಗೂ ವಚನಗಳಿಗೆ ಸಲ್ಲುತ್ತದೆ ಎಂದು ವಿಜಯಪುರದ ಔಷಧ ವಿಜ್ಞಾನ ತಜ್ಞ, ನಿವೃತ್ತ ಪ್ರಾಚಾರ್ಯ ಡಾ. ಜೆ.ಎಸ್. ಪಾಟೀಲ ಹೇಳಿದರು.

ಸ್ಥಳೀಯ ಶಿಕ್ಷಣ ಪ್ರಸಾರಕ ಮಂಡಳದ ಎಸ್‌ಪಿಎಂ ಶಿಕ್ಷಣ ಮಹಾವಿದ್ಯಾಲಯ ಹಾಗೂ ಜಾಗತಿಕ ಲಿಂಗಾಯತ ಮಹಾಸಭಾ ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಇವುಗಳ ಸಹಸಂಗಮದಲ್ಲಿ ನಡೆದ ವಚನಕಾರರು ಮತ್ತು ವ್ಯಕ್ತಿತ್ವ ವಿಕಸನ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಾಗತಿಕ ಲಿಂಗಾಯತ ಮಹಾಸಭಾ ಚಿಕ್ಕೋಡಿಯ ಅಧ್ಯಕ್ಷ ಡಾ.ಚಂದ್ರಶೇಖರ ಗುಡಸಿ ಮಾತನಾಡಿ, ವ್ಯಕ್ತಿತ್ವದಲ್ಲಿ ನೈತಿಕತೆಯನ್ನ ಇಟ್ಟುಕೊಂಡು ಬದುಕಿದ್ದೆಯಾದರೆ ಅದುವೇ ಉದಾತ್ತ ಜೀವನ. ಇದನ್ನೇ ಅಂದು ಶರಣರು ವಚನಗಳ ಮೂಲಕ ಕಲಿಸಿದರು. ಆ ವಚನಗಳು ಇಂದು ಆಚರಣೆಗೆ ಬರಬೇಕು ಹಾಗೂ ವಚನಗಳು ವಿಶ್ವವಾಗಲಿ, ಬಸವಣ್ಣ ಗುರುವಾಗಲಿ ಎಂದು ಅನೇಕ ವಿಚಾರಗಳನ್ನು ಮಂಡಿಸಿದರು.

ಈ ಸಂದರ್ಭದಲ್ಲಿ ಹಿರಿಯರಾದ ಬಸನಗೌಡ ಆಸಂಗಿ, ಪ್ರಾಚಾರ್ಯ ಡಾ.ಎಲ್.ಎಸ್. ಧರ್ಮಟ್ಟಿ, ಲಿಂಗಾಯತ ಮಹಾಸಭಾ ಕಾರ್ಯದರ್ಶಿ ಬಸವರಾಜ ಮಂಟೂರ, ಹಣಮಂತ ಯಲಶೆಟ್ಟಿ, ಎನ್.ಬಿ. ಪಡೆದಾರ, ಶ್ರೀಶೈಲ ಪೂಜೇರಿ, ಮಾರುತಿ ಪಡೆದಾರ, ನಾಗರಾಜ ಗುಡಸಿ ಹಾಗೂ ಉಪನ್ಯಾಸಕ, ಸಿಬ್ಬಂದಿ ವರ್ಗದವರು, ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ರವಿ ಕಡಪಟ್ಟಿ ಸ್ವಾಗತಿಸಿದರು. ಕು.ಚೈತ್ರಾ ಪತ್ತಾರ ಸ್ವಾಗತ ಗೀತೆ ಪ್ರಸ್ತುತ ಪಡಿಸಿದರು. ಕು.ಪ್ರೀತಿ ಕುಳ್ಳೊಳ್ಳಿ ನಿರೂಪಿಸಿದರು. ಕು.ಸವಿತಾ ಸವದತ್ತಿ ವಂದಿಸಿದರು.



ಏ.25ರಂದು ಪಂಚಾಚಾರ್ಯ ಯುಗಮಾನೋತ್ಸವ

ಗೋಕಾಕ: ನಗರದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಕಾರ್ಯಕ್ರಮವನ್ನು ಏ.25ರಂದು ಹಮ್ಮಿಕೊಳ್ಳಲಾಗಿದೆ ಎಂದು ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪ್ರಕಾಶ್ ಕಂಬಿ ಹೇಳಿದರು.


ಬುಧವಾರದಂದು ನಗರದ ಶ್ರೀ ವಿಠ್ಠಲ ರುಕ್ಮಿಣಿ ಸಭಾಂಗಣದಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರ ಮಾತನಾಡಿದರು.

ಬೆಳಗ್ಗೆ 8.30ರಿಂದ 10.30ಗಂಟೆಯ ವರೆಗೆ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಶ್ರೀ ವಿಠ್ಠಲ ರುಕ್ಮಿಣಿ ಸಭಾಂಗಣದ ವರೆಗೆ ಶ್ರೀಮದ್ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯಭಗವತ್ಪಾದಮಹಾಸ್ವಾಮಿಗಳು, ಶ್ರೀ ಕಾಶೀ ಮಹಾಪೀಠ, ವಾರಾಣಸಿ ಇವರ ಸಾರೋಟೋತ್ಸವ, ಮಹಿಳೆಯರ ಕುಭಮೇಳ, ವಿವಿಧಕಲಾತಂಡಗಳೊಂದಿಗೆ ಭವ್ಯ ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 10.30ಕ್ಕೆ ಶ್ರೀವಿಠಲ್ ರುಕ್ಮಿಣಿ ಸಭಾಂಗಣದಲ್ಲಿ ಧರ್ಮಸಭೆ ನಡೆಯಲಿದೆ.

ಶ್ರೀಮದ್ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು. ಕಾರ್ಯಕ್ರಮದಲ್ಲಿ ಶ್ರೀ ಚಂದ್ರಶೇಖರ್ ಶಿವಾಚಾರ್ಯ ಮಹಾಸ್ವಾಮಿಗಳು, ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು, ಶ್ರೀ ರಾಚೋಟೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಮ.ಘ.ಚ ಡಾ.ಪವಾಡೇಶ್ವರ ಮಹಾಸ್ವಾಮಿಗಳು, ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಶ್ರೀ ರಾಜಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ರೇವಣಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸಮ್ಮುಖ ವಹಿಸಲಿದ್ದಾರೆ.

ಅತಿಥಿಗಳಾಗಿ ಗೋಕಾಕ ಶಾಸಕ ರಮೇಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ, ಜಮಖಂಡಿ ಶಾಸಕ ಜಗದೀಶ್ ಗುಡಗುಂಟಿ, ಕಾಂಗ್ರೆಸ್ ಮುಖಂಡ ಅಶೋಕ್ ಪೂಜಾರಿ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಲಿದ್ದಾರೆ. ಸದರಿ ಕಾರ್ಯಕ್ರಮದಲ್ಲಿ ಗೋಕಾಕ ಹಾಗೂ ಮೂಡಲಗಿ ತಾಲೂಕಿನ ಸರ್ವ ಸಮಾಜದ ಭಾಂಧವರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕಂಬಿ ಅವರು ವಿನಂತಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ರವೀಂದ್ರ ಹಿರೇಮಠ, ಸಂಗಮೇಶ ಗುಡದೂರಕಲ್ಮಠ, ಪಂಚಾಕ್ಷರಿ ಹೊಸಟ್ಟಿ, ಈರಣ್ಣ ಹಿರೇಮಠ, ಸೋಮಶೇಖರ್ ಹಿರೇಮಠ, ವಿರೇಂದ್ರ ಹಿರೇಮಠ ಉಪಸ್ಥಿತರಿದ್ದರು.



ಪಂಪ್ ಹೌಸ್ ಕಟ್ಟಡ ನಿರ್ಮಾಣಕ್ಕೆ ಶಾಸಕ ಪಾಟೀಲ ಭೂಮಿಪೂಜೆ

ಚನ್ನಮ್ಮನ ಕಿತ್ತೂರು: ಏತ ನೀರಾವರಿ ಯೋಜನೆಯ ಮೂಲಕ ಕಿತ್ತೂರಿನ ರಣಗಟ್ಟಿ ಕೆರೆಗೆ ನೀರು ತುಂಬಿಸುವ ಪಂಪ್ ಹೌಸ್ ಕಟ್ಟಡ ನಿರ್ಮಾಣಕ್ಕೆ 2 ಕೋಟಿ ರೂ. ವೆಚ್ಚದ ಕಾಮಗಾರಿಗೆ ಶಾಸಕ ಬಾಬಾಸಾಹೇಬ ಪಾಟೀಲ ಇವರು ಭೂಮಿಪೂಜೆ ನರವೇರಿಸಿದರು.

ಬಸ್ ನಿಲ್ದಾಣದ ಎದುರಿಗಿರುವ ತುಂಬಗೇರಿಯ ಒತ್ತುವರಿ ಕಾಲುವೆಯ ಪಕ್ಕಕ್ಕೆ ಇರುವ ಪಟ್ಟಣ ಪಂಚಾಯತ ನಿವೇಶನದಲ್ಲಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿ ತುಂಬಗೇರಿಯಿಂದ ಕಾಲುವೆಯ ಮೂಲಕ ಉತ್ತಮವಾದ ನೀರನ್ನು ಪಂಪ ಹೌಸನಲ್ಲಿ ಶೇಖರಿಸಿ ಅಲ್ಲಿಂದ ಪೈಪ್‌ಲೈನ್ ಮೂಲಕ ರಣಗಟ್ಟಿ ಕೆರೆಯನ್ನು ತುಂಬಿಸುವ ಯೋಜನೆ ಇದಾಗಿದ್ದು, ಈ ಕಾಮಗಾರಿಯನ್ನು ಮಳೆಗಾಲ ಪ್ರಾರಂಭವಾಗುವದರೊಳಗಾಗಿ ಬೇಗನೆ ಪೂರ್ಣಗೊಳಿಸಬೇಕು ಮತ್ತು ಗುಣಮಟ್ಟದ್ದಾಗಿ ನಿರ್ಮಿಸಬೇಕೆಂದು ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಮತ್ತು ತುಂಬಗೇರಿಯಿಂದ ಒತ್ತುವರಿ ನೀರು ಸರಾಗವಾಗಿ ಹೋಗುವಂತೆ ಸುಸಜ್ಜಿತವಾದ ಕಾಲುವೆಯನ್ನು ನಿರ್ಮಿಸಿಕೊಳ್ಳಬೇಕೆಂದು ಸಣ್ಣ ನಿರಾವರಿ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.



ಪಟ್ಟಣ ಪಂಚಾಯತ ಅಧ್ಯಕ್ಷ ಜೈಸಿದ್ದರಾಮ ಮಾರಿಹಾಳ, ಸಣ್ಣ ನೀರಾವರಿ ಇಲಾಖೆಯ ಅಭಿಯಂತರ ಎಂ.ಆರ್. ಪಾಟೀಲ, ಮುಖಂಡರಾದ ಅಷ್ಪಾಕ್ ಹವಾಲ್ದಾರ್, ಕೃಷ್ಣಾ ಬಾಳೇಕುಂದರಗಿ, ಬಸವರಾಜ ಸಂಗೊಳ್ಳಿ, ಬಿಷ್ಟಪ್ಪ ಶಿಂದೆ, ಪ್ರವೀಣ ಜಕ್ಕನಗೌಡರ, ಮಂಜುನಾಥ ದೊಡ್ಡನ್ನವರ, ಮಂಜುನಾಥ ಗಂಗಪ್ಪನವರ ಸೇರಿದಂತೆ ಪಟ್ಟ ಪಂಚಾಯತ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮಲಿಕವಾಡ-ದತ್ತವಾಡ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪರಿಶೀಲನೆ

ಚಿಕ್ಕೋಡಿ: ತಾಲೂಕಿನ ಮಲಿಕವಾಡ ಗ್ರಾಮದ ಬಳಿಯಲ್ಲಿ ದೂಧಗಂಗಾ ನದಿಗೆ 4 ಕೋಟಿ ರೂ. ಮೊತ್ತದಲ್ಲಿ ನಿರ್ಮಿಸಲಾಗುತ್ತಿರುವ ಮಲಿಕವಾಡ-ದತ್ತವಾಡ ಬ್ರಿಡ್ಜ್ ಕಮ್ ಬ್ಯಾರೇಜ್ ಕಾಮಗಾರಿಯನ್ನು ಅಧಿಕಾರಿಗಳೊಂದಿಗೆ ಬುಧವಾರ ಶಾಸಕ ಗಣೇಶ ಹುಕ್ಕೇರಿ ಭೇಟಿ ಪರಿಶೀಲಿಸಿದರು.



ಈ ಸಂದರ್ಭದಲ್ಲಿ ಶಾಸಕ ಗಣೇಶ ಹುಕ್ಕೇರಿ ಮಾತನಾಡಿ, ಕಳೆದ ಹಲವು ದಶಕಗಳಿಂದ ಇಲ್ಲಿನ ಜನರ ಬಹುದಿನದ ಬೇಡಿಕೆಯಾಗಿದ್ದ ಮಲಿಕವಾಡ-ದತ್ತವಾಡ ಬ್ರಿಡ್ಜ್ ಕಮ್ ಬ್ಯಾರೇಜ್ ಕಾಮಗಾರಿಯನ್ನು ಶರವೇಗದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹಾಗೂ ತನ್ನ ಪ್ರಯತ್ನದಿಂದ ಇದಕ್ಕೆ ಹಣ ಮಂಜೂರು ಮಾಡಿಸಿಕೊಂಡು ಬರಲಾಗಿದೆ. ಬ್ಯಾರೇಜ್ ಮತ್ತು ಬ್ರಿಡ್ಜ್ ನಿರ್ಮಾಣದಿಂದ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ನಡುವೆ ಸುಗಮ ಸಂಚಾರ ಹಾಗೂ ದೂಧಗಂಗಾ ನದಿ ತೀರದ ರೈತರಿಗೆ ನೀರಾವರಿಗೆ ಅನುಕೂಲವಾಗಲಿದೆ'' ಎಂದರು.

ಇದೇ ಸಂದರ್ಭದಲ್ಲಿ ಮಹಾರಾಷ್ಟ್ರದ ಕಾಳಮ್ಮವಾಡಿ ಜಲಾಶಯದಿಂದ 800 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ. ಇದರಿಂದ ಬೇಸಿಗೆ ಕಾಲದಲ್ಲಿ ಜನ ಜಾನುವಾರುಗಳಿಗೆ ನದಿ ನೀರು ಆಸರೆಯಾಗಲಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಮುಖಂಡರಾದ ಬಾಳಾಸಾಹೇಬ ಪಾಟೀಲ, ಸಂಭಾಜಿ ಪಾಟೀಲ, ಉಮೇಶ ಮಠಪತಿ, ಅಣ್ಣಾಸಾಹೇಬ ಇಂಗಳೆ, ಅಜೀತ ಥೋಮರೆ, ಅವಿನಾಶ ಖೋತ, ಅಪ್ಪಾ ನಾಯಿಕ, ಬಾಳು ದೇಸಾಯಿ, ಮನೋಹರ ಕುಡಚಿ, ರಾಜು ಅಂಕಲೆ, ವಿಜಯ ಪಾಟೀಲ, ವಿಶ್ವನಾಥ ಪಾಟೀಲ ಇತರರು ಇದ್ದರು.

ದೇವಸ್ಥಾನ ಉದ್ಘಾಟನೆ: ಮೂರ್ತಿ ಪ್ರತಿಷ್ಠಾಪನೆ



ಚಿಕ್ಕೋಡಿ: ಪಟ್ಟಣದ ಅಂಬಾಭವಾನಿ ಗಲ್ಲಿಯಲ್ಲಿ ನೂತನವಾಗಿ ನಿರ್ಮಿಸಿದ ಅಂಬಾಭವಾನಿ ದೇವಸ್ಥಾನದ ಮೂರ್ತಿ ಪ್ರತಿಷ್ಠಾಪನೆ ಹಾಗೂ ಉದ್ಘಾಟನೆಯು ಮಂಗಳವಾರ ನಿಡಸೋಸಿಯ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠದ ಪಂಚಮಶಿವಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನೆರವೇರಿತು.

ಮೂರ್ತಿಪ್ರತಿಷ್ಠಾಪನೆ, ಮೆರವಣಿಗೆ, ಘನ ಹೋಮ, ಕಳಶ ಪ್ರತಿಷ್ಠಾಪನೆ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಾಲ್ಕು ದಿನಗಳ ಕಾಲ ಅದ್ದೂರಿಯಾಗಿ ನೆರವೇರಿದವು. ಸಹಸ್ರಾರು ಜನರು ಕಾರ್ಯಕ್ರಮದಲ್ಲಿ ಭಾಗಿಯಾಗಿ ಮೆರಗು ತಂದರು.

ಚಿಕ್ಕೋಡಿಯ ಚರಮೂರ್ತಿಮಠದ ಸಂಪಾದನಾ ಸ್ವಾಮೀಜಿ, ಚಿಂಚಣಿಯ ಅಲ್ಲಮಪ್ರಭು ಸಿದ್ಧಸಂಸ್ಥಾನ ಮಠದ ಶಿವಪ್ರಸಾದ ದೇವರು, ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ, ಪುರಸಭೆ ಮಾಜಿ ಅಧ್ಯಕ್ಷ ಜಗದೀಶ ಕವಟಗಿಮಠ ಮುಂತಾದವರು ಇದ್ದರು.

ಬಸವಣ್ಣರ ತತ್ವಾದರ್ಶ ಪಾಲಿಸಿ: ಶ್ರೀಗಳು

ರಾಯಬಾಗ: ಬಸವಣ್ಣನವರು ಜಾತಿ ಭೇದ, ಅಂಧ ಶ್ರದ್ಧೆಗಳನ್ನು ತೊರೆದು, ಸಮಾನತೆ ಮತ್ತು ಮಾನವೀಯತೆಯ ಆಧಾರದ ಮೇಲೆ ಸಮಾಜ ಮುನ್ನಡೆಯಬೇಕು.'ಕಾಯಕವೇ ಕೈಲಾಸ' ಎಂಬ ಬಸವಣ್ಣನವರ ಸಂದೇಶವನ್ನು ಯುವಪೀಳಿಗೆ ಅನುಸರಿಸುವ ಮೂಲಕ ಅವರ ಆದರ್ಶಗಳನ್ನು ಪಾಲಿಸಿ ಉತ್ತಮ ಸಮಾಜದ ನಿರ್ಮಾತೃಗಳಾಗಬೇಕು ಎಂದು ನಂದಿಕುರಳಿಯ ಪಂಚಲಿಂಗೇಶ್ವರ ಮಠದ ಶ್ರೀ ವೀರಭದ್ರ ಸ್ವಾಮೀಜಿ ಹೇಳಿದರು. ತಾಲೂಕಿನ ಬಾವನಸೌಂದತ್ತಿ ಗ್ರಾಮದಲ್ಲಿ ಬಸವ ವೃತ್ತದಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಆಶೀರ್ವಚನ ನೀಡಿದರು. ನಂತರ ಮಹಾದೇವ ಮಂದಿರದಲ್ಲಿ ಮಹಿಳೆಯರಿಂದ ತೊಟ್ಟಿಲು ಪೂಜೆಹಾಗೂ ಶಿವಭಜನೆ ಕಾರ್ಯಕ್ರಮ ಜರಗಿತು. ಸಾಯಂಕಾಲ ಸಾವಿರಾರು ಸಂಖ್ಯೆಯ ಮಹಿಳೆಯರಿಂದ ಕುಂಭಮೇಳ ಹಾಗೂ ವಾದ್ಯ ಮೇಳದೊಂದಿಗೆ ಬಸವ ಭಾವಚಿತ್ರದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಿಂದ ಅದ್ದೂರಿಯಾಗಿ ನಡೆಯಿತು. ರಾತ್ರಿ ಸಾವಿರಾರು ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು. ಮುಖಂಡರಾದ ಧೂಳಗೌಡ ಪಾಟೀಲ, ಸತ್ಯಪ್ಪಾ ಭೀಷ್ಮೆ, ಕಾಕಾಸಾಹೇಬ ತಡಾಕೆ, ಚಿದಾನಂದ ಮಂಗಸೂಳಿ, ಪ್ರಕಾಶ ಭೀಷ್ಮೆ, ಶ್ರೀಶೈಲ ಡೊಂಗರೆ, ದಯಾನಂದ ಹಿರೇಮಠ ಸೇರಿದಂತೆ ಶಿವಭಜನೆ ತಂಡದವರು ಹಾಗೂ ಅನೇಕ ಶರಣ ಶರಣೆಯರು ಉಪಸ್ಥಿತರಿದ್ದರು.



ಜಗಜ್ಯೋತಿ ಬಸವೇಶ್ವರ ಮೂರ್ತಿಗೆ ಪೂಜೆ



ನೇಸರಗಿ: ಸಮೀಪದ ಮತ್ತಿಕೊಪ್ಪ ಗ್ರಾಮದಲ್ಲಿ ವಿಶ್ವಗುರು ಜಗಜ್ಯೋತಿ ಶ್ರೀ ಬಸವೇಶ್ವರ ನೂತನ ಮೂರ್ತಿ ಪ್ರತಿಷ್ಠಾಪನೆಯಲ್ಲಿ ಮಾಜಿ ಶಾಸಕ ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಮಹಾಂತೇಶ ದೊಡ್ಡಗೌಡರ ವಿಶೇಷ ಪೂಜೆ ಸಲ್ಲಿಸಿ ನೂತನ ಬಸವ ಮೂರ್ತಿಗೆ ಮಾಲಾರ್ಪಣೆ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಸೋಮಪ್ಪ ತಕ್ಕುನ್ನವರ, ಪಿಕೆಪಿಎಸ್ ಅಧ್ಯಕ್ಷ ಮಹಾಂತೇಶ ಮೋಹರೆ, ಉಪಾಧ್ಯಕ್ಷ ಅಡಿವಪ್ಪ ಹೊಸಮನಿ, ಸುರೇಶ ಖೋದಾನಪುರ, ಶಶಿಕಾಂತ ಪಾಟೀಲ, ಬಸವಣ್ಣೆಪ್ಪ ಶಿಂತ್ರಿ, ಸೋಮಪ್ಪ ದೇಯಣ್ಣವರ, ಸೋಮಪ್ಪ ಶೇಗುಣಸಿ ಗ್ರಾಮದ ಮುಖಂಡರು, ಗ್ರಾಮಸ್ಥರು, ಬಸವ ಅನುಯಾಯಿಗಳು ಭಾಗವಹಿಸಿದ್ದರು.

ನಾಡಿಗೆ ಬಸವಣ್ಣನವರ ಕೊಡುಗೆ ಅಪಾರ

ಯರಗಟ್ಟಿ: ಬಸವಣ್ಣನವರು ಜಗತ್ತಿಗೆ ವಿಶ್ವಗುರುವಾಗಿ ಬಂದಂತ ಮಹಾನ ವ್ಯಕ್ತಿ ಹಲವು ವಚನಗಳ ಮೂಲಕ ದೇಶಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಇಂದಿನ ಯುವ ಸಮೂಹ ಬಸವಣ್ಣನವರ ತತ್ವ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಉದ್ಯಮಿ ರಾಜು ಶೇಟ್ಟಿ ಹೇಳಿದರು.

ಪಟ್ಟಣದ ನಿರ್ಮಲ ಕೋಚಿಂಗ್ ಕ್ಲಾಸನಲ್ಲಿ ಸೋಮವಾರ ಶ್ರೀ ಜಗಜ್ಯೋತಿ ಬಸವ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಬಸವೇಶ್ವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.ನಿರ್ಮಲ ಕೋಚಿಂಗ್ ಕ್ಲಾಸನ ಅಧ್ಯಕ್ಷ ಬಸನಗೌಡ ಅಣ್ಣಿಗೇರಿ ಮಾತನಾಡಿ, ವಿಶ್ವಗುರು ಬಸವಣ್ಣನವರು ಸಮಾನತೆಯ ಹರಿಕಾರರು ಅವರ ಸಂದೇಶ ಇಂದಿಗೂ ಲೋಕಮಾನ್ಯ ವೆನಿಸಿದೆ ಪ್ರಸ್ತುತ ಯುದ್ಧ ಹಾಗೂ ಜಾತಿಗಳ ಸಂಘರ್ಷದಲ್ಲಿ ಬದುಕುತ್ತಿರುವ ನಮಗೆ ಬಸವಣ್ಣನವರ ವಿಚಾರಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವೆನಿಸಿದೆ ಎಂದರು. ವೇದ ಮೂರ್ತಿ ಸಾಗರ ಶರ್ಮಾಶಾಸ್ತ್ರಿ, ವೀರಶೈವ ಲಿಂಗಾಯತ ಯುವ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಈರಣ್ಣಾ ಹೂಲ್ಲೂರ, ಶಿಕ್ಷಕ ಮನೋರಂಜನ ಜಗಮುಯ್ಯನವರ, ಶಿವು ಇಗಳೆ, ಶರೆಗಾರ, ಅಂಜುಮ್, ವಿಜಯಲಕ್ಷ್ಮೀ ಹಡಪದ, ಭುವನೇಶ್ವರಿ ಹಡಪದ, ಮುಖಂಡ ಸಿದ್ದನಗೌಡ ಪಾಟೀಲ, ರಾಜು ಜಮಾದಾರ, ಅಭಿ ಪತ್ತಾರ, ಮಲ್ಲಿಕಾರ್ಜುನ ಹಳದಿ, ಮಾರುತಿ ಕದಂ ಹಾಗೂ ವಿದ್ಯಾರ್ಥಿಗಳು ಇದ್ದರು.



ಕಿರುಸುದ್ದಿ

ಇಂದಿನಿಂದ ಶತಮಾನೋತ್ಸವ ಸಂಭ್ರಮ

• ಲೋಕಾಪುರ: ಸಮೀಪದ ಕಿಲ್ಲಾ ಹೊಸಕೋಟಿ ಗ್ರಾಮದ ವಿಠ್ಠಲ ಮಂದಿರ ಆವರಣದಲ್ಲಿ ಏ.23ರಿಂದ ಏ.29ರ ವರೆಗೆ ಶತಮಾನೋತ್ಸವ ಸಂಭ್ರಮ-2026 ನಿಮಿತ್ತ ಸಂತ ಜ್ಞಾನೇಶ್ವರ ಮಹಾರಾಜರ ಮತ್ತು ತುಕಾರಾಮ ಮಹಾರಾಜರ ಬೆಳ್ಳಿ ಮೂರ್ತಿ ಸ್ಥಾಪನೆ ಹಾಗೂ ಸಾಮೂಹಿಕ ಜ್ಞಾನೇಶ್ವರಿ ಪಾರಾಯಣ ಕಾರ್ಯಕ್ರಮಗಳು ಜರುಗಲಿವೆ. ಏ.23ರಂದು ಗುರುವಾರ ಬೆಳಗ್ಗೆ 8 ಕ್ಕೆ ಜ್ಯೋತಿಸ್ಥಾಪನ, ಬ್ರಹ್ಮ ಚೈತನ್ಯ ಸದ್ಗುರು ಕೃಷ್ಣಸ್ವಾಮಿ ಹುಬ್ಬಳ್ಳಿವಾಲೆ ಲಾತುರ ಶಿವುಂದರಕರ ಮತ್ತು ಚೈತನ್ಯ ಸದ್ಗುರು ಶರದ್ ಸ್ವಾಮಿ ಹುಬ್ಬಳ್ಳಿವಾಲೆ ಲಾತುರ ಮಹಾರಾಜ ಪಂಢರಪೂರ, ಬ್ರಹ್ಮ ಚೈತನ್ಯ ಸದ್ಗುರು ತಾತಾಸಾಹೇಬ ಮಹಾರಾಜ ವಾಸ್ಕರ ಪಂಢರಪೂರ ಗುರುಗಳ ಕೃಪಾಶೀರ್ವಾದದಿಂದ ಚೈತನ್ಯ ಹುಬ್ಬಳ್ಳಿವಾಲೆ ಶರದ್ ಸ್ವಾಮಿ ಶಿವುಂದರ ಇವರ ನೇತೃತ್ವದಲ್ಲಿ ಸಕಲ ಕಾರ್ಯಕ್ರಮಗಳು ಜರುಗುವವು. ಏ.27ರಂದು 5ಕ್ಕೆ ಹುಬ್ಬಳ್ಳಿವಾಲೆ ಶರದ್ ಸ್ವಾಮಿ ಶಿವುಂದರಕರ ಪಂಢರಪೂರ ಅವರಿಂದ ಪ್ರವಚನ ನಡೆಯಲಿದೆ. ಏ.28ರಂದು ಸಂಜೆ 6ಕ್ಕೆ ತೊಂಡಿಕಟ್ಟಿ ಗ್ರಾಮದ ವೆಂಕಟೇಶ್ವರ ಮಹಾರಾಜರು ಇವರಿಂದ ಪ್ರವಚನ ನಡೆಯಲಿದೆ. ಏ.29ರಂದು ಬೆಳಗ್ಗೆ ಕಾಕಡಾರತಿ, ಜ್ಞಾನೇಶ್ವರಿ ಪಾರಾಯಣ ಮಂಗಲ, ದಿಂಡಿ ನಗರ ಪ್ರದಕ್ಷಿಣ, ಕಾಲಾಪ್ರಸಾದ, ಮಹಾಪ್ರಸಾದ ಜರುಗಲಿದೆ. **ಪ್ರತಿ ನಿತ್ಯ ಕಾರ್ಯಕ್ರಮ:** ಶತಮಾನೋತ್ಸವ ಸಂಭ್ರಮ-2026 ನಿಮಿತ್ತ ಪ್ರತಿ ನಿತ್ಯ ಕಾಕಡಾರತಿ, ಜ್ಞಾನೇಶ್ವರಿ ಪಾರಾಯಣ, ಪ್ರವಚನ ನಾಮಜಪ ಹರಿಪಾಠ, ಭಜನೆ, ಕೀರ್ತನೆ ಕಾರ್ಯಕ್ರಮಗಳು ಜರಗುವವು ಎಂದು ಪಾಂಡುರಂಗ ದೇವಸ್ಥಾನ ಟ್ರಸ್ಟ್ ಕಮೀಟಿ ತಿಳಿಸಿದೆ.

ಲಕ್ಷ್ಮೀ ನರಸಿಂಹ ಭವನ ಉದ್ಘಾಟನೆ

• ಗಲಗಲಿ: ಇಲ್ಲಿಯ ಪ್ರಸಿದ್ಧ ನರಸಿಂಹ ದೇವಸ್ಥಾನದ ಪಕ್ಕದಲ್ಲಿ ನೂತನವಾಗಿ ನಿರ್ಮಿಸಿದ ಭವ್ಯವಾದ ಲಕ್ಷ್ಮೀ ನರಸಿಂಹ ಭವನದ ಉದ್ಘಾಟನಾ ಕಾರ್ಯಕ್ರಮ ವೈಭವದಿಂದ ನಡೆಯಿತು. ಬೆಳಗ್ಗೆ ಲಕ್ಷ್ಮೀ ನರಸಿಂಹ ದೇವರಿಗೆ ಪಂಚಾಮೃತ ಅಭಿಷೇಕ ಹಾಗೂ ವಿಶೇಷ ಅಲಂಕಾರ ಮಾಡಲಾಗಿತ್ತು. ವಾಸ್ತು ಶಾಂತಿ ಹೋಮ ಮುಂತಾದ ಕಾರ್ಯಗಳು ಅಧ್ಯಾಪಕ ಆಚಾರ್ಯರಿಂದ ನಡೆದವು. ಲಕ್ಷ್ಮೀನರಸಿಂಹ ದೇವರ ನೈವೇದ್ಯ ಭಕ್ತರಿಗೆತೀರ್ಥ ಪ್ರಸಾದ ವಿತರಣೆ ಜರುಗಿತು. ಲಕ್ಷ್ಮೀ ನರಸಿಂಹ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಯದು ನಂದನಾಚಾರ್ಯ ಗಲಗಲಿ, ಪ್ರಧಾನ ಕಾರ್ಯದರ್ಶಿ ಶ್ರೀಶ ಗಲಗಲಿ ಹಾಗೂ ಟ್ರಸ್ಟ್ ಕಮಿಟಿ ಸದಸ್ಯರು ಮತ್ತು ವಿಪ್ರ ಸಮಾಜದ ಹಿರಿಯರು ಪಾಲ್ಗೊಂಡಿದ್ದರು.

ಸಂಭ್ರಮದ ಮಹಾರಥೋತ್ಸವ



• ಗುಳೇದಗುಡ್ಡ: ಸಮೀಪದ ತೆಗ್ಗಿ ಗ್ರಾಮದಲ್ಲಿ ಮೂರು ವರ್ಷಕ್ಕೊಮ್ಮೆ ನಡೆಯುವ ಗ್ರಾಮದೇವತೆಗಳಾದ ದ್ಯಾಮವ್ವಮ್ಮ ಮತ್ತು ದುರ್ಗವ್ವಮ್ಮರ ಜಾತ್ರೆ ಬುಧವಾರ ಸಂಭ್ರಮ ಸಡಗರದಿಂದ ನಡೆಯಿತು. ಬೆಳಗ್ಗೆ ರಥದ ಕಳಸ ಹಾಗೂ ಹಗ್ಗದ ಮೆರವಣಿಗೆ ಗ್ರಾಮದಲ್ಲಿ ನಡೆಯಿತು. ಬಳಿಕ ಮಧ್ಯಾಹ್ನ 12 ಗಂಟೆಗೆ ಗ್ರಾಮದೇವತೆಗಳನ್ನು ರಥದಲ್ಲಿ ಕೂರಿಸಿ, ವಿವಿಧ ವಾದ್ಯಮೇಳಗಳೊಂದಿಗೆ ಭಕ್ತರ ಹರ್ಷೋದ್ಗಾರಗಳ ನಡುವೆ ರಥೋತ್ಸವ ನಡೆಯಿತು. ತೆಗ್ಗಿ, ರಾಘಾಪೂರು, ತಿಮ್ಮಸಾಗರ, ಕೆಲವಡಿ, ನಿಂಗಾಪೂರ, ತೋಗಣಸಿ, ಹಂಸನೂರು, ಹಿರೇಬೂದಿಹಾಳ, ರೈಲ್ವೆ ಸ್ಟೇಶನ್ ಗ್ರಾಮಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಹಾಗೂ ಗೋವಾ ರಾಜ್ಯ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಕಾರ್ಮಿಕರ ಸಂಘಕ್ಕೆ ಜಾಗ ನೀಡಲು ಮನವಿ

• ಇಳಕಲ್: ತಾಲೂಕಿ ಬಲಕುಂದಿ ಗ್ರಾಪಂ ವ್ಯಾಪ್ತಿಯಲ್ಲಿ ಲಭ್ಯವಿರುವ ಜಮೀನು ಸರ್ವೆ ನಂಬರ್ 4ರಲ್ಲಿ 30/40 ಜಾಗವನ್ನು ಇಳಕಲ್ ತಾಲೂಕು ಕಟ್ಟಡ ಮತ್ತು ಇತರೆ ಕಾರ್ಮಿಕರ ಹಾಗೂ ಅಸಂಘಟಿತ ಕಾರ್ಮಿಕರ ಸಂಘಕ್ಕೆ ಜಾಗ ನೀಡಬೇಕೆಂದು ಇಳಕಲ್ ಹಾಗೂ ಹುನಗುಂದ ತಾಲೂಕಿನ ಕರ್ನಾಟಕ ರಕ್ಷಣಾ ವೇದಿಕೆ ಹೋರಾಟ ನಡೆಸಿ ಅಧ್ಯಕ್ಷ ಅಶೋಕ ಪೂಜಾರಿ ಮನವಿ ಮಾಡಿದರು. ಕರವೇ ಇಳಕಲ್ ತಾಲೂಕ ಅಧ್ಯಕ್ಷ ಅಶೋಕ ಪೂಜಾರಿ, ಹುನಗುಂದ ತಾಲೂಕು ಅಧ್ಯಕ್ಷ ರೋಹಿತ ಬಾರಕೇರ, ಮಹಿಳಾ ಅಧ್ಯಕ್ಷೆ ಶೋಭಾ ಆರಕೇರ, ಬಲಕುಂದಿ ಗ್ರಾಮದ ಅಧ್ಯಕ್ಷ ಬಲನಗೌಡ ಗೌಡರ, ಮೌನೇಶ ಬಡಿಗೇರ, ಕಾರ್ಮಿಕ ಘಟಕದ ಅಧ್ಯಕ್ಷ ಹಾಗೂ ಕುಮಾರ ಹಿರೇಮಠ ಬಲಕುಂದಿ ಘಟಕ ಉಪಾಧ್ಯಕ್ಷ, ಕರವೇ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಇಳಕಲ: ಮಾಹೇಶ್ವರಿ ಸಮಾಜದಿಂದ ಜಗದ್ಗುರು ರಾಮಾನುಜಾಚಾರ್ಯರ 1009ನೇ ಜಯಂತಿ ಉತ್ಸವ ಆಚರಿಸಲಾಯಿತು. ಹತ್ತು ದಿನ ಸ್ತೋತ್ರಪಾಠ ಅರ್ಚನೆ ಆರತಿ ಹಾಗೂ ಪ್ರಸಾದ ವಿತರಣೆ ಆಯೋಜಿಸಲಾಗಿತ್ತು. ವಿಶೇಷ ಪೂಜೆ ಪುರಸ್ಕಾರ ನಡೆಯಿತು. ಸಮಾಜದ ಹಿರಿಯರಾದ ಘನಶಾಮ ದರಕ, ಜುಗಲಕಿಶೋರ ದರಕ, ವೇಣುಗೋಪಾಲ ದರಕ, ಪುರುಷೋತ್ತಮ ದರಕ, ರಮೇಶ ದರಕ, ಡಾ.ಪವನ ದರಕ, ಭರತ ದರಕ, ರಮಾಕಾಂತ ದರಕ, ಶ್ಯಾಮಸುಂದರ ಡಾ.ಮನೋಹರ ಕರವಾ, ವಸಂತ ಆಸಾವಾ ಅಭಿಷೇಕ ದರಕ, ನವನೀತ ದರಕ ಗೋವರ್ಧನ ದರಕ ಹಾಗೂ ಸಮಾಜದ ಮಹಿಳೆಯರು ಉಪಸ್ಥಿತರಿದ್ದರು.

ನಾಳೆ ದಾಸಿಮಯ್ಯ ಮೂರ್ತಿ ಉದ್ಘಾಟನೆ

• ಕಮತಗಿ: ಪಟ್ಟಣದಲ್ಲಿನ ಪಾರ್ವತಿ-ಪರಮೇಶ್ವರ ಸಾಂಸ್ಕೃತಿಕ ಭವನ ಆವರಣದಲ್ಲಿ ಹಟಗಾರ ಸಮಾಜದ ವತಿಯಿಂದ ದೇವರ ದಾಸಿಮಯ್ಯ ಮೂರ್ತಿ ಪ್ರತಿಷ್ಠಾಪನೆ ಹಾಗೂ ಮಹಾದ್ವಾರ ಉದ್ಘಾಟನಾ ಸಮಾರಂಭ ಏ.23, 24ರಂದು ನಡೆಯಲಿದೆ. ಸಂಜೆ 4 ಗಂಟೆಗೆ ಸುಮಂಗಲೆಯರಿಂದ ಕಳಸಾರತಿಯೊಂದಿಗೆ ಹಾಗೂ ಕುಂಭಮೇಳದೊಂದಿಗೆ ದೇವರದಾಸಿಮಯ್ಯನವರ ಮೂರ್ತಿಯು ಹೊಳೆ ಹುಚ್ಚೇಶ್ವರ ಮಠದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಜರಗುವುದು. ಏ.24ರಂದು ಬೆಳಗ್ಗೆ 6 ಗಂಟೆಗೆ ದೇವರದಾಸಿಮಯ್ಯನವರ ಮೂರ್ತಿ ಪ್ರತಿಷ್ಠಾಪನೆ ನಡೆಯಲಿದೆ. ಕಮತಗಿ ಹೊಳೆ ಹುಚ್ಚೇಶ್ವರ ಸ್ವಾಮೀಜಿ ಮಹಾದ್ವಾರ ಉದ್ಘಾಟಿಸಲಿದ್ದು, ಗುಳೇದಗುಡ್ಡ ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಸ್ವಾಮಿಜಿ ಮೂರ್ತಿ ಪ್ರತಿಷ್ಠಾಪನೆ ಮಾಡುವರು. ಗುಳೇದಗುಡ್ಡ ಅಮರೇಶ್ವರಮಠದ ನೀಲಕಂಠ ಶಿವಾಚಾರ್ಯ ಸ್ವಾಮೀಜಿ ದೇವರ ದಾಸಿಮಯ್ಯನವರ ವಚನಗಳ ಪುಸ್ತಕ ಬಿಡುಗಡೆಗೊಳಿಸುವರು. ನಂತರ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಕಮತಗಿ ಹಿರೇಮಠದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ, ಮಾತೋಶ್ರೀ ಬಸವಣ್ಣೆಮ್ಮ ತಾಯಿ ಬಸರಕೋಡ ಭಾಗವಹಿಸುವರು. ಹಟಗಾರ ಸಮಾಜದ ಅಧ್ಯಕ್ಷ ಎಂ.ಎಸ್. ಚೌಡಾಪೂರ ಅಧ್ಯಕ್ಷತೆ ವಹಿಸುವರು. ಉಪನ್ಯಾಸಕರಾಗಿ ಸಾಹಿತಿ ಹಾಗೂ ಕೆಪಿಟಿಸಿಎಲ್ ಎಂಜಿನಿಯರ್ ಅಲ್ಲಮಪ್ರಭು ಅಂಬಿ, ಸಾಹಿತಿ ಮಹಾದೇವ ಬಸರಕೋಡ ಭಾಗವಹಿಸುವರು. ದಾನಿಗಳಿಗೆ ಸಮಾಜದ ವತಿಯಿಂದ ಸನ್ಮಾನಿಸಿ ಗೌರವಿಸಲಾಗುವುದು. ನಂತರ ರವೀಂದ್ರ ಸೊರಗಾವಿ ಅವರಿಂದ ಸಂಗೀತ ಕಾರ್ಯಕ್ರಮ ಜರಗುವುದು ಎಂದು ಅಧ್ಯಕ್ಷರು ಹಟಗಾರ ಸಮಾಜ ಕಮತಗಿ ಮಹಾರುದ್ರಪ್ಪ ಚೌಡಾಪೂರ ತಿಳಿಸಿದ್ದಾರೆ.



ಕಮತಗಿ: ಪಟ್ಟಣದಲ್ಲಿನ ಪಾರ್ವತಿ-ಪರಮೇಶ್ವರ ಸಾಂಸ್ಕೃತಿಕ ಭವನ ಆವರಣದಲ್ಲಿ ಏ.23, 24ರಂದು ನಡೆಯಲಿರುವ ಹಟಗಾರ ಸಮಾಜದ ವತಿಯಿಂದ ದೇವರ ದಾಸಿಮಯ್ಯ ಮೂರ್ತಿ ಪ್ರತಿಷ್ಠಾಪನೆ ಹಾಗೂ ಮಹಾದ್ವಾರ ಉದ್ಘಾಟನಾ ಸಮಾರಂಭದ ಪೋಸ್ಟರ್ ಬಿಡುಗಡೆ ಮಾಡಿದರು. ಮುರುಗೇಶ ಕಡ್ಲಿಮಟ್ಟಿ, ರಮೇಶ ಜಮಖಂಡಿ, ಕಮಲಪ್ಪ ಕಡ್ಲಿಮಟ್ಟಿ, ಹುಚ್ಚಪ್ಪ ಸಿಂಹಾಸನ, ಗಂಗಾಧರ ಕ್ಯಾದಿಗೇರಿ, ಸಮಾಜದ ಗುರುಹಿರಿಯರು ಪಾಲ್ಗೊಂಡಿದ್ದರು.

ಇಂದಿನಿಂದ ಕಾಲುಬಾಯಿ ಲಸಿಕಾ ಅಭಿಯಾನ | ಜಿಲ್ಲಾಧಿಕಾರಿ ಸಲಹೆ

ಅಭಿಯಾನದ ಸದುಪಯೋಗ ಪಡೆಯಿರಿ

• ಬಾಗಲಕೋಟೆ: ಜಿಲ್ಲೆಯ ಜಾನುವಾರುಗಳಿಗೆ ಏ.23ರಿಂದ ಮೇ 22ರ ವರೆಗೆ 9ನೇ ಸುತ್ತಿನ ಜಾನುವಾರುಗಳ ಕಾಲುಬಾಯಿ ರೋಗಕ್ಕೆ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ನಡೆದ 9ನೇ ಸುತ್ತಿನ ಜಾನುವಾರುಗಳ ಕಾಲುಬಾಯಿ ರೋಗದ ಲಸಿಕಾ ಕಾರ್ಯಕ್ರಮದ ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿಯ ಪೂರ್ವಭಾವಿ ಸಿದ್ಧತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಲಸಿಕಾ ಕಾರ್ಯಕ್ರಮದ ಜೊತೆಗೆ ಜಾನುವಾರುಗಳಿಗೆ ಚರ್ಮಗಂಟು ರೋಗದ ಲಸಿಕೆ ಮತ್ತು ನಾಯಿಗಳಿಗೆ ರೇಬಿಸ್ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಲು ತಿಳಿಸಿದರು.

ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಎಸ್.ಎಚ್.



ಕರಡಿಗುಡ್ಡ, ಲಸಿಕಾ ಕಾರ್ಯಕ್ರಮದ ಸಿದ್ದತೆ ಕುರಿತು ವಿವರಣೆ ನೀಡಿದರು. ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಪ್ರತಿ 6 ತಿಂಗಳಿಗೊಮ್ಮೆ ಕಾಲು ಬಾಯಿ ರೋಗದ ಲಸಿಕೆ ಹಾಕಿಸಿಕೊಳ್ಳುವುದು ಕಡ್ಡಾಯವಾಗಿದೆ. ಜಾನುವಾರುಗಳಿಗೆ ಈ ರೋಗ ಬಂದ ನಂತರ ರೈತರಿಗೆ ಆರ್ಥಿಕ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಲಸಿಕೆ ಹಾಕಿಸಿ ರೋಗ ನಿಯಂತ್ರಿಸಲು ಮತ್ತು ಕಾಲು ಬಾಯಿ ರೋಗ ಮುಕ್ತ ಜಿಲ್ಲೆ ಹಾಗೂ ರಾಜ್ಯವನ್ನಾಗಿ ಮಾಡಲು ಇದೊಂದು ಉತ್ತಮ ಮಾರ್ಗ ಎಂದು ತಿಳಿಸಿದರು.

20ನೇ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 15,28,158 ಜಾನುವಾರುಗಳಿದ್ದು, ಸದ್ಯ 11750 ಡೋಜ್ ಲಸಿಕೆ ಲಭ್ಯವಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 3938 ಬ್ಲಾಕ್‌ಗಳನ್ನು ಮಾಡಲಾಗಿದೆ. ಇಲಾಖೆಯ ಹಾಗೂ ಇಲಾಖೇತರ ಸೇರಿ ಒಟ್ಟು 524 ಸಿಬ್ಬಂದಿ ಕಾರ್ಯ ನಿರ್ವಹಿಸಲಿದ್ದಾರೆ. ಲಸಿಕೆದಾರರು ಮನೆ ಬಾಗಿಲಿಗೆ ಭೇಟಿ ನೀಡಿ, ಜಾನುವಾರುಗಳಿಗೆ ಲಸಿಕೆ ಹಾಕಲಿದ್ದಾರೆ. ರೈತರು ಲಸಿಕಾ ಸಿಬ್ಬಂದಿಗೆ ಸಹಕರಿಸಿ, ತಪ್ಪದೇ ಜಾನುವಾರುಗಳಿಗೆ ಲಸಿಕೆ ಹಾಕಿಸಬೇಕೆಂದು ತಿಳಿಸಿದರು.

ಕಾಲುಬಾಯಿ ರೋಗದ ಲಸಿಕಾ ಕಾರ್ಯಕ್ರಮದ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಯಿತು. ಕೆ.ಎಂ.ಎಫ್‌ನ ಅಧಿಕಾರಿಗಳು, ಜಿಲ್ಲಾ ನಿರ್ವಹಣಾ ಸಮಿತಿ ಸದಸ್ಯ ಅಧಿಕಾರಿಗಳು ಹಾಗೂ ಆಯಾ ತಾಲೂಕಿನ ಮುಖ್ಯ ಪಶುವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಹೆಣ್ಣುಕುಲದ ಆದಿಶಕ್ತಿ ಹೇಮರೆಡ್ಡಿ ಮಲ್ಲಮ್ಮ

• ಬೀಳಗಿ: ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಾತಿ ಮೀರಿದ ಸಾಧ್ವಿ, ಹೆಣ್ಣುಕುಲದ ಆದಿಶಕ್ತಿ. ಆದರ್ಶ ಸೊಸೆ, ಆದರ್ಶ ಮಡದಿ ಹೇಗಿರಬೇಕು ಎಂಬುದನ್ನು ಶತಮಾನಗಳ ಹಿಂದೆಯೇ ನಿರೂಪಿಸಿದ ಮನುಕುಲದ ಮಾದರಿ ಮಹಿಳಾ ಸಾಧ್ವಿ ಎಂದು ಮಾಜಿ ಸಚಿವ ಎಸ್.ಆರ್.ಪಾಟೀಲ ಹೇಳಿದರು.

ತಾಲೂಕಿನ ತುಮ್ಮರಮಟ್ಟಿ ಗ್ರಾಮದಲ್ಲಿ ಬುಧವಾರ ಹೇಮರಡ್ಡಿ ಮಲ್ಲಮ್ಮ ಸೇವಾ ಸಮಿತಿ ಹಾಗೂ ಗ್ರಾಮದ ಹಿರಿಯರ ಸಂಯುಕ್ತ ಆಶ್ರಯದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ದೇವಸ್ಥಾನ ಲೋಕಾರ್ಪಣೆ ಹಾಗೂ ಸಮುದಾಯ ಭವನದ ಅಡಿಗಲ್ಲ ಸಮಾರಂಭದ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಮಲ್ಲಿಕಾರ್ಜುನನನ್ನು ಆರಾಧ್ಯ ದೈವರಾಗಿಪೂಜಿಸುತ್ತಾ, ಲೋಕಲ್ಯಾಣಕ್ಕಾಗಿ ಹಲವಾರು ಪವಾಡಗಳನ್ನು ಮಾಡಿ ಮಹಿಳಾ ಕುಲಕ್ಕೆ ಒಂದು ಆದರ್ಶವಾದವಳು ಎಂದರು.

ಸ್ವಾಮಿ ವಿವೇಕನಂದ ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಂ.ಎನ್.ಪಾಟೀಲ ಮಾತನಾಡಿ, ಗ್ರಾಮದ ಹಿರಿಯರು ಕೂಡಿಕೊಂಡು ಬಂದು ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ಕಟ್ಟಲು ಮುಂದಾಗಿದ್ದೇವೆ ಎಂದು ಹೇಳಿದಾಗ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ಯಾವುದೇ ಅಡತಡೆ ಇಲ್ಲದೇ ದೇವಸ್ಥಾನ ನಿರ್ಮಾಣವಾಗಲಿದೆ. ದೇವಸ್ಥಾನ ನಿರ್ಮಾಣಕ್ಕೆ ಭೂ ದಾನ ಹಾಗೂ ಮೂರ್ತಿ ದಾನ ಮಾಡಿದ ಉಮಾದೇವಿ ಶಿವನಗೌಡ ಪಾಟೀಲ ಹಾಗೂ ದಿ.ಬಸನಗೌಡ ನಾಗನಗೌಡ ಪಾಟೀಲ ಕುಟುಂಬದವರ ಕಾರ್ಯ ಶ್ಲಾಘನೀಯ ಎಂದರು.

ಹರಿಹರ ರಡ್ಡಿ ಗುರುಪೀಠದ ವೇಮನಾನಂದ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿ, ಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನಿಂದ ವೇಮನರು ಪ್ರಚಲಿತವಾಗಿ ಹೊರಹೊಮ್ಮಿದರು. ಶಿವಭಕ್ತೆ ಹೇಮರಡ್ಡಿ ಮಲ್ಲಮ್ಮ ಬಂದು ಇಲ್ಲಿ ನೆಲಸಿದ್ದು ಸಾಕ್ಷಾತ ದೇವರು ಬಂದು ಅನುಗ್ರಹ ಈ ತುಮ್ಮರಮಟ್ಟಿ ಗ್ರಾಮದಲ್ಲಿ ಇದೆ ಅನ್ನುವದನ್ನು ತೋರಿಸಿಕೊಟ್ಟಿದೆ. ಇದಕ್ಕೆ ಆ ದೇವಸ್ಥಾನವೇ ಸಾಕ್ಷಿ ಎಂದರು.

ಗಿರಿಸಾಗರದ ರುದ್ರಮುನಿ ಸ್ವಾಮಿಗಳು, ಕುಂದರಗಿಯ ವೀರಸಂಗಮೇಶ್ವರ ಸ್ವಾಮೀಜಿ, ಉಮಾದೇವಿ ಎಸ್.ಪಾಟೀಲ, ಬೀಳಗಿ ಶುಗರ್ಸ್ ನಿರ್ದೇಶಕ ಸುರೇಶಗೌಡ ಪಾಟೀಲ, ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಎನ್.ನಾಗನಗೌಡರ, ಡಾ.ಚಂದ್ರಶೇಖರ ಚನ್ನಪ್ಪನವರ ಇದ್ದರು.



ಮತ ಎಣಿಕೆ: ಪ್ರತಿಬಂಧಕಾಜ್ಞೆ ಜಾರಿ

• ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಸಂಬಂಧಿಸಿದಂತೆ ಮೇ 4ರಂದು ಮತ ಎಣಿಕೆ ಜರುಗಲಿದ್ದು, ಸಾರ್ವಜನಿಕ ಶಾಂತತೆ ಹಾಗೂ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮೇ 4 ರಂದು ಬೆಳಗ್ಗೆ 6ರಿಂದ ಮೇ 5ರ ಬೆಳಗ್ಗೆ 6 ವರೆಗೆ ಉಪ ಚುನಾವಣೆ ಮತಕ್ಷೇತ್ರದಾದ್ಯಂತ ಪ್ರತಿಬಂಧಕಾಜ್ಞೆ ಜಾರಿ ಮಾಡಿ ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ದಂಡಾಧಿಕಾರಿ ಸಂಗಪ್ಪ ಆದೇಶ ಹೊರಡಿಸಿದ್ದಾರೆ. ಮತ ಎಣಿಕೆ ಕೇಂದ್ರವಾದ ತೋಟಗಾರಿಕೆ ವಿವಿಯ ಸಂಪೂರ್ಣ ಆವರಣವು ನಿರ್ಬಂಧಿತ ಪ್ರದೇಶವಾಗಿರುತ್ತದೆ. ಶಸ್ತ್ರ, ಬಡಿಗೆ, ಬರ್ಚಿ, ಖಡ್ಗ, ಗಧೆ, ಬಂದೂಕು, ಚೂರಿ, ಲಾಠಿ, ದೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನುಂಟು ಮಾಡಬಹುದಾದ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗುವದನ್ನು, ಅವುಗಳೊಂದಿಗೆ ತಿರುಗಾಡುವದನ್ನು ಪ್ರತಿಬಂಧಿಸಲಾಗಿದೆ. ಮತ ಎಣಿಕೆ ನಡೆಯುವ ಪ್ರದೇಶದ 200 ಮೀಟ್ ವ್ಯಾಪ್ತಿಯಲ್ಲಿ ಬರುವ ಝುರಾಕ್ಸ ಅಂಗಡಿ, ಬುಕ್ ಸ್ಟಾಲ್, ಸೈಬರ್ ಕೆಫೆಗಳನ್ನು ನಿರ್ಬಂಧಿಸಲಾಗಿದೆ. ಯಾವುದೇ ವ್ಯಕ್ತಿ ಸಾರ್ವಜನಿಕರಾಗಲಿ ಮೇಲೆ ವಿವರಿಸಿದ ಮಾರಕಾಸ್ತ್ರಗಳು, ಸ್ಫೋಟಕಗಳು, ವಿನಾಶಕಾರಿ ವಸ್ತುಗಳು ಹಾಗೂ ಇತರ ಆಕ್ಷೇಪಾರ್ಹ ವಸ್ತುಗಳನ್ನು ಹೊಂದಿದ್ದು, ಕಂಡು ಬಂದಲ್ಲಿ ಕೂಡಲೇ ಅವುಗಳನ್ನು ವಶಪಡಿಸಿಕೊಳ್ಳಲು ಯಾವುದೇ ಪೊಲೀಸ್ ಅಧಿಕಾರಿಗಳಿಗೆ ಅಧಿಕಾರಿ ಇರುತ್ತದೆ. ಮಾರಕಾಸ್ತ್ರಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದು, ಅಲ್ಲದೇ ಸಂಬಂಧಿಸಿದ ವ್ಯಕ್ತಿಗಳ ಮೇಲೆ ಕಾನೂನು ರಿಚಿತಚಿ ಕ್ರಮ ಜರುಗಿಸಲಾಗುವುದು. ಈ ಆದೇಶ ಮತ ಎಣಿಕೆ ಅಧಿಕಾರಿ, ಸಿಬ್ಬಂದಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ಹಾಗೂ ಚುನಾವಣಾ ಕಾರ್ಯನಿರತ ಅಧಿಕಾರಿ, ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲವೆಂದು ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ಮೂರ್ತಿ ಪ್ರತಿಷ್ಠಾಪನೆ, ಲಕ್ಷ ದೀಪೋತ್ಸವ

• ಮಹಾಲಿಂಗಪುರ: ಪಟ್ಟಣದ ಯಲ್ಲಮ್ಮ ದೇವಿ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಕಳಸಾರೋಹಣ ಮತ್ತು ಮಲ್ಯಮ್ಮದೇವಿ ದೇವಸ್ಥಾನದಲ್ಲಿ ಮೂರ್ತಿ ಪ್ರತಿಷ್ಠಾಪನೆ ನಿಮಿತ್ತ ಲಕ್ಷ ದೀಪೋತ್ಸವ ಕಾರ್ಯಕ್ರಮ ಏ.23ರಂದು ಗುರುವಾರ ಹಾಗೂ ಏ.24ರಂದು ಶುಕ್ರವಾರ ನಡೆಯಲಿವೆ.

ಏ.23ರಂದು ಗುರುವಾರ ಬೆಳಗ್ಗೆ 8 ಗಂಟೆಗೆ ಎಪಿಎಂಸಿ ಗಣಪತಿ ದೇವಸ್ಥಾನದಿಂದ ಆರಂಭಗೊಳ್ಳುವ ಕುಂಬ ಮೇಳಕ್ಕೆ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಶ್ರೀಗಳು ಚಾಲನೆ ನೀಡುವರು. ಕುಂಭಮೇಳದೊಂದಿಗೆ ಯಲ್ಲಮ್ಮದೇವಿ ಕಳಸ ಮತ್ತು ಮಲ್ಲಮ್ಮದೇವಿ ಮೂರ್ತಿಯ ಭವ್ಯ ಮೆರವಣಿಗೆಯಲ್ಲಿ ಸಾಗಿ ದೇವಸ್ಥಾನ ತಲುಪಲಿವೆ. ಅಂದು ಸಂಜೆ 7 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಲಕ್ಷ ದೀಪೋತ್ಸವ ಜರುಗುವದು.ನಂತರ ಸಂಗೀತ ಕಾರ್ಯಕ್ರಮ ಮತ್ತು ಮಹಾಪ್ರಸಾದ ಜರುಗುವುದು.

ಏ.24ರಂದು ಶುಕ್ರವಾರ ಬೆಳಗ್ಗೆ 9 ಗಂಟೆಗೆ ಮುತ್ತೈದೆಯರಿಗೆ ಉಡಿ ತುಂಬುವದು, 9.45ಕ್ಕೆ ಮಹಾತ್ಮರಿಂದ ಮಲ್ಲಮ್ಮದೇವಿ ಮೂರ್ತಿ ಪ್ರತಿಷ್ಠಾಪನೆ ಯಲ್ಲಮ್ಮದೇವಿ ದೇವಸ್ಥಾನದ ಕಳಸಾರೋಹಣ, 10 ಗಂಟೆಗೆ ಧರ್ಮ ಸಭೆ ನಂತರ ಮಹಾಪ್ರಸಾದ ಜರುಗುವುದು.

ಮರೆಗುದ್ದಿಯ ಡಾ.ನಿರುಪಾಧೀಶ್ವರ ಶ್ರೀಗಳು, ಸ್ಥಳೀಯ ಸಹಜಾನಂದ ಶ್ರೀಗಳು, ಚಿಮ್ಮಡದ ಪ್ರಭು ಸ್ವಾಮಿಗಳು, ರಬಕವಿಯ ಗುರುಸಿದ್ದೇಶ್ವರ ಶ್ರೀಗಳು, ರನ್ನಬೆಳಗಲಿಯ ಸಿದ್ರಾಮಯ್ಯ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಸಿದ್ದು ಸವದಿ, ವಿಪ ಸದಸ್ಯೆ ಉಮಾಶ್ರೀ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಆಗಮಿಸುವರು.ಯಲ್ಲಮ್ಮ ದೇವಸ್ಥಾನ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹಾಗೂ ಸದ್ಭಕ್ತರ ಸಭೆಯಲ್ಲಿ ಕಾರ್ಯಕ್ರಮಗಳ ಪ್ರಚಾರ ಸಾಮಗ್ರಿ ಬಿಡುಗಡೆಗೊಳಿಸಲಾಯಿತು. ಈ ವೇಳೆ ಮಾತನಾಡಿದ ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಕಾರ್ಯಕ್ರಮದ ಯಶಸ್ಸಿಗೆ ತನು ಮನ ಧನದ ಸಹಾಯ ಮಾಡಬೇಕು. ಸಾಮೂಹಿಕ ಜವಾಬ್ದಾರಿಯಿಂದ ಕಾರ್ಯಕ್ರಮ ಆಚರಿಸಿ ಯಶಸ್ವಿಗೊಳಿಸೋಣ ಎಂದರು.ಡಾ.ಬಿ.ಡಿ.ಸೋರಗಾಂವಿ ಮಾತನಾಡಿ, ಅಂದು ಐದುನೂರು ಮಹಿಳೆಯರ ಕುಂಭಮೇಳ ಜರುಗಲಿದ್ದು, ಮಹಿಳೆಯರು ಹಸಿರು ಸೀರೆ ಉಟ್ಟು ಕುಂಭಮೇಳದಲ್ಲಿ ಭಾಗವಹಿಸಬೇಕು. ಭಕ್ತರಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಸಲಹೆ ನೀಡಿದರು. ಶ್ರೀಶೈಲಗೌಡ ಪಾಟೀಲ ಮಾತನಾಡಿದರು. ಗಣ್ಯರಾದ ರವಿಗೌಡ ಪಾಟೀಲ, ಅಲ್ಲಪ್ಪ ಗುಂಜಿಗಾಂವಿ, ಎಂ.ಎಸ್. ಮುಗಳಖೋಡ, ಈರಪ್ಪ ಚುನಮುರಿ, ಹಣಮಂತ ಬಡಿಗೇರ,ಈಶ್ವರಮುರಗೋಡ ಮುಂತಾದವರು ಭಾಗಿಯಾಗಿದ್ದರು.



ಬಸವಣ್ಣನ ವಿಚಾರಗಳು ಸಮಸಮಾಜ ನಿರ್ಮಾಣಕ್ಕೆ ದಿಕ್ಸೂಚಿ

• ಲೋಕಾಪುರ: ಬಸವಣ್ಣನವರ ವಿಚಾರಧಾರೆಗಳು ಕೇವಲ ಭಕ್ತಿಯ ನುಡಿಗಳಾಗದೆ, ಸಮಸಮಾಜದ ನಿರ್ಮಾಣಕ್ಕೆ ದಿಕ್ಸೂಚಿಯಾಗಿವೆ. ಮತ್ತು ಇಂದಿನ ಸಂಘರ್ಷಮಯ ಜಗತ್ತಿಗೆ ಶಾಂತಿಯ ಮಾರ್ಗ ತೋರಿಸುತ್ತವೆ ಎಂದು ಗಣಿ ಉದ್ಯಮಿ ಎಸ್.ಎನ್.ಹಿರೇಮಠ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಸವ ಜಯಂತಿ ಪ್ರಯುಕ್ತ ಹಮ್ಮಿಕೊಂಡ ಬಸವಣ್ಣನವರ ಮೂರ್ತಿಗೆ ವಿಶೇಷ ಸಲ್ಲಿಸಿ ಮಾತನಾಡಿದ ಅವರು, 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ವಚನಗಳು ಸಂಕೀಣ ಸಮಾಜಕ್ಕೂ ಪ್ರಸ್ತುತ. ಮಾನವೀಯ ಮೌಲ್ಯ ಎತ್ತಿಹಿಡಿಯುವ, ಮನುಷ್ಯ ಪ್ರೀತಿ ಸಾರುವ ಜೀವನದ ದಾರಿದೀಪಗಳಾಗಿವೆ ಎಂದರು.



ಸಮಾಜದ ಹಿರಿಯ ಮುಖಂಡ ವಿ.ಎಂ.ತೆಗ್ಗಿ ಮಾತನಾಡಿ, ಮಾನವೀಯ ಮೌಲ್ಯ ಮತ್ತು ಮನುಷ್ಯ ಸಂಬಂಧ ಬೆಸೆಯುವ ಶರಣರ ವಚನಗಳು ಇಂದಿಗೂ ಪ್ರಸ್ತುತವಾಗಿವೆ. ಬಸವ ತತ್ವದ ಸಿದ್ದಾಂತವೇ ಮನುಷ್ಯ ಪ್ರೀತಿಯಾಗಿದ್ದು, ಶಾಂತಿ, ನೆಮ್ಮದಿಯ ಪರಿಹಾರಕ್ಕೆ ಬಸವಣ್ಣನವರ ವಚನಗಳೇ ಬಹು ದೊಡ್ಡ ಪರಿಹಾರವಾಗಿವೆ ಎಂದರು.

ಬಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಶಿವಾನಂದ ಉದಪುಡಿ ಮಾತನಾಡಿ, ಸಮಾಜದ ಅಂಕು ಡೊಂಕುಗಳನ್ನು ತಿದ್ದಲು ವಚನ ಸಾಹಿತ್ಯದ ಮೂಲಕ ಸಾಮಾಜಿಕ ಓರೆ ಕೋರೆಗಳನ್ನು ತಿದ್ದುತ್ತಾ, ಬಸವಣ್ಣನವರ ಆಲೋಚನೆಗಳು ಚಿಂತನೆಗಳು, ಇಂದಿಗೂ ಕೂಡ ಪ್ರಸ್ತುತ ವಿಶ್ವಮಾನ್ಯ ಪಡೆದ ಸಂತ ಇಂದು ಧರ್ಮಕ್ಕೆ ಸೀಮಿತವಾಗಿ ಕೆಲವರ ಆಸ್ತಿ ಆಗಿ ಉಳಿದಿರೋದು ದುರ್ದೈವ ಸಂಗತಿ ಎಂದರು.

ಬಸವಪ್ರಭು ಕಾತರಕಿ, ಷಣ್ಮುಖಪ್ಪ ಕೋಲ್ಹಾರ, ಸದಾಶಿವ ಉದಪುಡಿ, ರವಿ ಬೋಳಿಶೆಟ್ಟಿ, ಮಲ್ಲಪ್ಪ ಅಂಗಡಿ, ಶಾಂತೇಶ ಬೋಳಿಶೆಟ್ಟಿ, ಈರಣ್ಣಾ ನಿಜಗುಳಿ, ಈಶ್ವರ ಹವಳಖೋಡ, ಪ್ರಕಾಶ ಚುಳಕಿ, ಆನಂದ ಹವಳಖೋಡ, ಸದಾಶಿವ ನಾಪ್ತಿ, ಅರುಣ ನರಗುಂದ, ಮುತ್ತಣ್ಣ ಚೌಧರಿ, ಭೀಮಶಿ ಅವರಾದಿ ವಿನೋಧ ಘೋರ್ಪಡೆ, ವಿರುಪಾಕ್ಷಪ್ಪ ಮುದಕವಿ, ಅಡಿವೆಪ್ಪ ಕೃಷ್ಣಗೌಡರ, ಭೀಮಶಿ ನಾವಲಗಿ, ಚನ್ನಪ್ರಬು ಮುದ್ನೂರ, ಪ್ರಬು ಬೋಳಿಶೆಟ್ಟಿ, ನಿಲೇಶ ಬನ್ನೂರ, ಚನ್ನಯ್ಯ ಗಣಾಚಾರಿ, ಬಸವರಾಜ ಕುಂದರಗಿ, ಶಿವಾನಂದ ಹವಳಖೋಡ, ಅನೀಲ ಬೋಳಿಶೆಟ್ಟಿ, ರವಿ ಚೌಧರಿ, ಚನ್ನಬಸು ಹುಬ್ಬಳ್ಳಿ ಸಮಾಜದ ಮುಖಂಡರು ಇದ್ದರು.

ಸಿಂಚನಾ ಹೊನ್ನಳ್ಳಿಗೆ ಸನ್ಮಾನ



• ಬೀಳಗಿ: ತಾಲೂಕಿನ ಕುಂದರಗಿ ಗ್ರಾಮದ ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಮಾತೋಶ್ರೀ ಬಸಲಿಂಗಮ್ಮ ಎನ್.ಖೋತ ಸಿಬಿಎಸ್‌ಇ ಶಾಲೆಯ 2025-2026ನೇ 10ನೇ ತರಗತಿ ವಿದ್ಯಾರ್ಥಿನಿ ಸಿಂಚನಾ ಶ್ರೀಕಾಂತ ಹೊನ್ನಳ್ಳಿ ಶೇ.95 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದ ಪ್ರಯುಕ್ತ ವಿದ್ಯಾ ಸಂಸ್ಥೆಯ ಚೇರಮನ್ ಮತ್ತು ಸಿಬ್ಬಂದಿ ವಿದ್ಯಾರ್ಥಿನಿಯ ಮನೆಗೆ ತೆರಳಿ ಸನ್ಮಾನಿಸಿ ಗೌರವಿಸಿದರು.

ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಚೇರ್ಮನ್ ಬಸವರಾಜ ಖೋತ ಅವರು ವಿದ್ಯಾರ್ಥಿನಿಯನ್ನು ಸನ್ಮಾನಿಸಿ ಮಾತನಾಡಿ, ಶಾಲೆಯಲ್ಲಿ ಶಿಕ್ಷಕರು ಹೇಳಿದ ಪಾಠವನ್ನು ಶ್ರದ್ಧೆಯಿಂದ ಆಲಿಸಿದ್ದಲ್ಲದೇ, ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನುಗ್ಗಿದ್ದರಿಂದ ಮತ್ತು ಮನೆಯಲ್ಲಿ ಪಾಲಕರ ಸಹಕಾರದಿಂದ ಸಿಂಚನಾ ಹೊನ್ನಳ್ಳಿ ಶಾಲೆಗೆ ಪ್ರಥಮ ಸ್ಥಾನ ಪಡೆಯಲು ಸಾಧ್ಯವಾಗಿದ್ದು, ತಮ್ಮ ಮುಂದಿನ ಶೈಕ್ಷಣಿಕ ಬದುಕು ಇನ್ನಷ್ಟು ಉಜ್ವಲಗೊಳ್ಳಲೆಂದು ವಿದ್ಯಾರ್ಥಿನಿಗೆ ಶುಭ ಹಾರೈಸಿದರು.

ಪ್ರಾಚಾರ್ಯ ರಾಜೇಂದ್ರ ಕಟಕದೊಂಡ, ರಾಮಲಿಂಗೇಶ್ವರ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ಸಂಗಪ್ಪ ಕೆರಕಲಮಟ್ಟಿ, ಕಾತರಕಿ ಸರಕಾರಿ ಪ್ರೌಢ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಹಂಪಣ್ಣ ಅಂಗಡಿ, ಶ್ರೀಕಾಂತ ಹೊನ್ನಳ್ಳಿ, ಶಿಕ್ಷಕರಾದ ಎಚ್.ಟಿ.ಬಿಸನಾಳ, ಮುತ್ತು ಗಾಣಗೇರ, ಪಡಿಯಪ್ಪ ಸಣ್ಣೆಲಿ, ನಾಗರತ್ನಾ ಸಿ, ಪ್ರೇಮಾ ಬಾಚಕ, ಶೈಲಾ ಮಂಟೂರ, ಮಾಲಾ ಭಜಂತ್ರಿ, ನಂದಿನಿ, ಶಿಲ್ಪಾ ಎಂ., ಸಿದ್ದು ಚರಂತಿಮಠ ಮತ್ತಿತರಿದ್ದರು.

ಬಿಜೆಪಿ ದ್ವಂದ್ವ ನೀತಿ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

• ಬಾಗಲಕೋಟೆ: ಮಹಿಳಾ ಮೀಸಲಾತಿ ವಿಷಯದಲ್ಲಿ ಬಿಜೆಪಿ ಸರ್ಕಾರದ ದ್ವಂದ್ವ ನೀತಿ ಖಂಡಿಸಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಘಟಕದಿಂದ ಪ್ರತಿಭಟನೆ ನಡೆಸಲಾಯಿತು. ನಗರದ ಬಸವೇಶ್ವರ ವೃತ್ತದಲ್ಲಿ ಸೇರಿದ ಮಹಿಳಾ ಕಾಂಗ್ರೆಸ್ ಘಟಕದವರು ಮಹಿಳಾ ಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಕೇಂದ್ರ ಬಿಜೆಪಿ ಸರ್ಕಾರ ಅಪಪ್ರಚಾರ ನಡೆಸುತ್ತಿರುವುದನ್ನು ಖಂಡಿಸಿ ಬಿಜೆಪಿ ವಿರುದ್ಧ ಆಕ್ರೋಶ ಹೊರ ಹಾಕಿದರು.

ಈ ವೇಳೆ ಮಾತನಾಡಿದ ಮಹಿಳಾ ಕಾಂಗ್ರೆಸ್ ಘಟಕದ ಜಿಲ್ಲಾಧ್ಯಕ್ಷೆ ಸುಮಿತ್ರಾ ಗುಳಬಾಳ, ಮಹಿಳಾ ಮೀಸಲಾತಿ ವಿಷಯದಲ್ಲಿ ದೇಶದ ಮಹಿಳೆಯರನ್ನು ದಾರಿ ತಪ್ಪಿಸುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರದ ದ್ವಂದ್ವ ನೀತಿ ಖಂಡಿಸಿದರು.

2023ರಲ್ಲಿ ಮಹಿಳಾ ಮೀಸಲಾತಿ ಬಿಲ್ ಲೋಕಸಭೆಯಲ್ಲಿ ಪಾಸಾಗಿದ್ದರೂ ಕಳೆದ 3 ವರ್ಷಗಳಿಂದ ಮಹಿಳಾ ಮೀಸಲಾತಿ ಜಾರಿಗೆ ತರುವಲ್ಲಿ ವಿಫಲವಾದ ಬಿಜೆಪಿ ಸರ್ಕಾರ, ಇದೀಗ ಚುನಾವಣಾ ಲಾಭಕ್ಕಾಗಿ ಮಹಿಳೆಯರಿಗೆ ಸುಳ್ಳು ಭರವಸೆ ನೀಡುತ್ತಿದೆ ಆರೋಪಿಸಿದರು.



ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ನಾಗರಾಜ ಹದ್ಲಿ ಮಾತನಾಡಿ, ಮಹಿಳೆಯರ ಸಬಲೀಕರಣದ ಹೆಸರಿನಲ್ಲಿ ಬಿಜೆಪಿ ಕೇವಲ ಜಾಹೀರಾತು ರಾಜಕಾರಣ ಮಾಡುತ್ತಿದೆ. ನಿಜವಾದ ಮೀಸಲಾತಿ ಜಾರಿಗೆ ಸ್ಪಷ್ಟ ಸಮಯಸೀಮೆ ನೀಡಲು ಸರ್ಕಾರ ಮುಂದಾಗಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಶೇ.50ರಷ್ಟು ಮಹಿಳಾ ಮೀಸಲಾತಿ ಜಾರಿಗೆ ತಂದಿರುವುದು ಕಾಂಗ್ರೆಸ್ ಸರ್ಕಾರ ಎಂದರು.

ಬ್ಲಾಕ್ ಅಧ್ಯಕ್ಷ ಎಸ್.ಎನ್. ರಾಂಪೂರ, ಮಹಿಳಾ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷೆ ರೇಣುಕಾ ನ್ಯಾಮಗೌಡ, ಜಿಪಂ ಮಾಜಿ ಸದಸ್ಯೆ ಹನಮವ್ವ ಕರೋಳ್ಳಿ, ಮಂಜುಳಾ ಭೂಸಾರೇ, ಮುಮತಾಜ ಸುತಾರ, ಸುಧಾ ಪಾಟೀಲ, ಗಂಗೂಬಾಯಿ ಚವ್ಹಾಣ, ಗುಣವಂತಿ ನಿಡೋಣಿ, ಮಾಬೂಬಿ ತುರೇದ, ಜೈಬುನಿ ಇಲಕಲ್ಲ, ಮಾಬೂಬಿ ಬೈರತಿಗಾರ, ಅಡಿವೆಪ್ಪ ಚಂದಾವರಿ, ಸುಭಾಷ ಬದಾಮಿ, ಮಲ್ಲು ಒಡಗೇರಿ, ಧರ್ಮಣ್ಣ ಚಲವಾದಿ ಭಾಗವಹಿಸಿದ್ದರು.

ಶಿಕ್ಷಕ ಶ್ರೀಕಾಂತಗೆ ಸನ್ಮಾನ

• ಕಲಾದಗಿ: ಗ್ರಾಮದ ಹಣ್ಣು ಬೆಳೆಗಾರರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಶ್ರೀಕಾಂತ ಕೆರಕಲಮಟ್ಟಿ ಅವರು ಎಚ್‌ಎಲ್‌ಒ ಆ್ಯಪ್ ಮೂಲಕ ಕಟ್ಟಡಗಳ ಕಾರ್ಯ ಹಾಗೂ ಗಣತಿ ಕಾರ್ಯವನ್ನು ನಾಲ್ಕು ದಿನಗಳಲ್ಲಿ ಮುಗಿಸುವ ಮೂಲಕ ಬಾಗಲಕೋಟೆ ತಾಲೂಕಿನಲ್ಲಿ ಪ್ರಥಮವಾಗಿ ಮುಗಿಸಿದ ಮೊದಲ ಶಿಕ್ಷಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕಲಾದಗಿಯ ಬ್ಲಾಕ 22ರಲ್ಲಿ 133 ಮನೆಗಳ ಜನಗಣತಿಯನ್ನು ಏ.17ರಿಂದ ಆರಂಬಿಸಿದ್ದ ಶಿಕ್ಷಕ ಶ್ರೀಕಾಂತ ಕೆರಕಲಮಟ್ಟಿ ಅವರು ಏ.20ರಂದು ಮುಕ್ತಾಯಗೊಳಿಸಿದ್ದರು. ಹಾಗೂ ಕಲಾದಗಿ ವಲಯದಲ್ಲಿ ಪ್ರಥಮವಾಗಿ ಮುಗಿಸಿರುವ ಹಣ್ಣು ಬೆಳೆಗಾರರ ಪ್ರಾಥಮಿಕ ಶಾಲೆಯ ಇನ್ನೋರ್ವ ಶಿಕ್ಷಕ ಲಕ್ಷ್ಮಣ ಅಂಕಲಗಿ ಅವರು ಬ್ಲಾಕ 21ರಲ್ಲಿ 238 ಮನೆಗಳನ್ನು ಮುಗಿಸಿದ ಹಿನ್ನೆಲೆ ಬಾಗಲಕೋಟೆ ತಾಲೂಕಾಡಳಿತದ ವತಿಯಿಂದ ಬುಧವಾರ ತಾಲೂಕ ಆಡಳಿತದ ಪರವಾಗಿ ಗ್ರಾಮದ ಉಪತಹಶೀಲ್ದಾರ್ ಆರ್.ಆರ್.ಕುಲಕರ್ಣಿ ಅವರು ಗೌರವಿಸಿ ಸನ್ಮಾನಿಸಿದರು.

ಜನಗಣತಿ ಮೇಲ್ವಿಚಾರಕ ಎಸ್.ಎಸ್.ಪಾಟೀಲ, ಹಣ್ಣು ಬೆಳೆಗಾರರ ಸಂಸ್ಥೆಯ ಕಾರ್ಯದರ್ಶಿ ವಿ.ಜಿ.ದೇಶಪಾಂಡೆ, ಶಾಲೆಯ ಅಧ್ಯಕ್ಷ ಕೆ.ಟಿ.ಪಾಟೀಲ, ಆರ.ಪಿ.ಜೋಶಿ ಸೇರಿದಂತೆ ಶಾಲಾ ಶಿಕ್ಷಕ ಬಳಗ ಇದ್ದರು.



ಕಾಕ್ಲಿಯರ್ ಇಂಪ್ಲಾಂಟ್ ಚಿಕಿತ್ಸೆಗೆ 8.25 ರೂ. ಲಕ್ಷ ನೆರವು

ಬಾಲಕಿಯ ಬಾಳಿಗೆ ಬೆಳಕಾದ ಸಚಿವ ತಿಮ್ಮಾಪುರ

• ಮುಧೋಳ: ಶ್ರವಣದೋಷದಿಂದ ಬಳಲುತ್ತಿದ್ದ ಬಾಲಕಿಯೊಬ್ಬಳ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರು ಸಿಎಸ್‌ಆರ್ ನಿಧಿಯಿಂದ 8.25 ಲಕ್ಷ ಆರ್ಥಿಕ ನೆರವು ಒದಗಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಗ್ರಾಮದ ಬಾಲಕಿ ಶ್ರದ್ಧಾ ದುಪ್ಪದ ಅವರಿಗೆ ಶಸ್ತ್ರಚಿಕಿತ್ಸೆಯ ತುರ್ತು ಅಗತ್ಯವಿತ್ತು. ಚಿಕಿತ್ಸೆಯ ಭಾರಿ ವೆಚ್ಚ ಭರಿಸಲಾಗದ ಕುಟುಂಬದ ಆರ್ಥಿಕ ಸ್ಥಿತಿಯನ್ನು ಅರಿತ ಸಚಿವರು, ಸುಮಾರು ಮೂರು ತಿಂಗಳ ಹಿಂದೆಯೇ ನೆರವಿನ ಹಸ್ತ ಚಾಚಿದ್ದರು. ಸಚಿವರ ಈ ಆರ್ಥಿಕ ನೆರವಿನಿಂದಾಗಿ ಇದೀಗ ಶ್ರದ್ಧಾ ಅವರ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಬಾಲಕಿಯು ವೇಗವಾಗಿ ಚೇತರಿಸಿಕೊಳ್ಳುತ್ತಿದ್ದಾಳೆ.



ಸಚಿವರನ್ನು ಖುದ್ದಾಗಿ ಭೇಟಿಯಾದ ಶ್ರದ್ಧಾಳ ಕುಟುಂಬಸ್ಥರು, ಸಕಾಲದಲ್ಲಿ ಸ್ಪಂದಿಸಿದ ಸಚಿವರಿಗೆ ಭಾವುಕರಾಗಿ ಕೃತಜ್ಞತೆ ಹಾಗೂ ಧನ್ಯವಾದಗಳನ್ನು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸ್ಥಳೀಯ ಮುಖಂಡರು, ಸಚಿವರು ಕೇವಲ ರಾಜಕಾರಣಿಯಾಗಿರದೆ, ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಮಾನವತಾವಾದಿಯಾಗಿದ್ದಾರೆ. ಬಡ ಕುಟುಂಬದ ಮಗುವಿನ ಶಸ್ತ್ರಚಿಕಿತ್ಸೆಗೆ ಇಷ್ಟು ದೊಡ್ಡ ಮೊತ್ತದ ಹಣ ಒದಗಿಸಿರುವುದು ಅತ್ಯಂತ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಕಿವಡಿ, ಪ್ರಮುಖರಾದ ಕೆ.ಎನ್.ಪರಡ್ಡಿ, ಹನಮಂತ ತಿಮ್ಮಾಪೂರ, ಹೊಳಬಸು ದಂಡಿನ ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಸಂಕಲ್ಪ ಶೋಭಾಯಾತ್ರೆ ಇಂದು: ಯತ್ನಾಳ

ವಿಜಯಪುರ: ಸಾವಿರ ವರ್ಷದ ಪುರಾತನ ಸೋಮನಾಥ ಜ್ಯೋತಿರ್ಲಿಂಗ ಯಾತ್ರಾ, ಸಂಕಲ್ಪ ಹಾಗೂ ಸತ್ಸಂಗ ನಿಮಿತ್ತ ನಗರದ ಸಿದ್ಧೇಶ್ವರ ಸಂಸ್ಥೆ, ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ ಏ.23ರಂದು ಸಂಜೆ 5.30ಕ್ಕೆ ಗಾಂಧಿ ಚೌಕ್‌ದಿಂದ ಸಿದ್ದೇಶ್ವರ ದೇವಸ್ಥಾನ ವರೆಗೆ ಬೃಹತ್ ಶೋಭಾಯಾತ್ರೆ ನಡೆಯಲಿದ್ದು, ಸಮಸ್ತ ಹಿಂದೂ ಕುಲಬಾಂಧವರು ಭಾಗವಹಿಸಿ ಶೋಭೆ ತರಲು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿನಂತಿಸಿದ್ದಾರೆ. ಸೋಮನಾಥ ದೇವಾಲಯವು ಶಿವನ 12 ಪವಿತ್ರ ಜ್ಯೋತಿರ್ಲಿಂಗಗಳಲ್ಲಿ ಮೊದಲನೆದಾಗಿ ಅತ್ಯಂತ ಮಹತ್ವ ಪಡೆದಿದೆ. ಇದು ಸನಾತನ ಧರ್ಮದ ಶ್ರದ್ಧಾ ಕೇಂದ್ರ, ಅಚಲ ನಂಬಿಕೆ ಮತ್ತು ಜೀರ್ಣೋದ್ಧಾರದ ಸಂಕೇತವಾಗಿದೆ. ಅನೇಕ ಬಾರಿ ಆಕ್ರಮಣಕಾರರಿಂದ ಧ್ವಂಸಗೊಂಡರೂ ಮತ್ತೆ ಮತ್ತೆ ಪುನರ್ನಿರ್ಮಾಣಗೊಂಡು ಹಿಂದೂ ಸಂಸ್ಕೃತಿಯ ಸಾಹಸ ಮತ್ತು ಪುನರುತ್ಥಾನವನ್ನು ಸಾರುವ ಪುರಾತನ ದೇವಾಲಯವಾಗಿದೆ. ಈ ವಿಶೇಷ ಮಹತ್ವ ಪಡೆದ ಪುರಾತನ ಸೋಮನಾಥ ದೇವರ ಜ್ಯೋತಿರ್ಲಿಂಗ ಯಾತ್ರಾ, ಸಂಕಲ್ಪ ಹಾಗೂ ಸತ್ಸಂಗ ನಮ್ಮ ನಗರದಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯ. ಆದ್ದರಿಂದ ಸಂಜೆ 5.30ಕ್ಕೆ ಗಾಂಧಿ ಚೌಕ್‌ದಿಂದ ಆರಂಭಗೊಂಡು ಸಿದ್ಧೇಶ್ವರ ದೇವಸ್ಥಾನ ವರೆಗೆ ನಡೆಯುವ ಈ ಶೋಭಾಯಾತ್ರೆಯಲ್ಲಿ ಹಿಂದೂ ಕುಲಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶೋಭೆ ತರಲು ಹಾಗೂ ಸೋಮನಾಥ ದೇವರ ದರ್ಶನ ಪಡೆದುಕೊಂಡು ಪುನೀತರಾಗಲು ಅವರು ಕೋರಿದ್ದಾರೆ.

ಶಾಂಭವಿಗೆ ಪಿಎಚ್‌ಡಿ

ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಸಂಶೋಧನಾ ವಿದ್ಯಾರ್ಥಿನಿ ಶಾಂಭವಿ ಅವರಿಗೆ ಪಿಎಚ್‌ಡಿ ಪದವಿ ನೀಡಿದೆ. ಶಾಂಭವಿ ಅವರು ಸಲ್ಲಿಸಿದ ರೀಡಿಂಗ್ ಕಲ್ಚರ್ ಇನ್ ಇಂಟರ್ನೆಟ್ ಎರ್: ಯಾನ್ ಅನಾಲಿಟಿಕಲ್ ಸ್ಟಡಿ ಆಫ್ ಅಂಡರ್ ಗ್ರಾಜುಯೆಟ್ ಸ್ಟೂಡೆಂಟ್ಸ್ ಆಫ್ ವಿಜಯಪುರ ಸಿಟಿ



ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಶಾಂಭವಿ ಅವರು ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ಪ್ರೊಫೆಸರ್ ಶಾಂತಾದೇವಿ ಟಿ. ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪಡೆದಿರುವ ಅವರಿಗೆ ಕುಲಪತಿ ಪ್ರೊ.ವಿಜಯ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್. ಲಕ್ಕಣ್ಣವರ್ ಅಭಿನಂದಿಸಿದ್ದಾರೆ.

ಭುವನೇಶ್ವರಿಗೆ ಪಿಎಚ್‌ಡಿ

ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಸಂಶೋಧನಾ ವಿದ್ಯಾರ್ಥಿನಿ ಭುವನೇಶ್ವರಿ ಪಾಟೀಲ ಅವರಿಗೆ ಪಿಎಚ್‌ಡಿ ಪದವಿ ನೀಡಿದೆ. ಭುವನೇಶ್ವರಿ ಪಾಟೀಲ ಅವರು ಸಲ್ಲಿಸಿದ್ದ ರಿಸರ್ಚ್ ಪ್ರಾಡಕ್ಟಿವಿಟೀ ಆಫ್ ವೆಬ್ ಟೆಕ್ನಾಲಜೀಸ್ ಇನ್ ಲೈಬ್ರರಿ ಅಂಡ್ ಇನಾರ್ಮೇಶನ್ ಸೈನ್ಸ್ ಲಿಟರೇಚರ್ (2001–2020): ಅ ಸೈಂಟೋಮೆಟ್ರಿಕ್ ಅನಲೈಸಿಸ್ ಮಹಾಪ್ರಬಂಧಕೆ ಪಿಎಚ್‌ಡಿ ಪದವಿ ನೀಡಿದೆ. ಭುವನೇಶ್ವರಿ ಪಾಟೀಲ ಅವರು



ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ಪ್ರೊ.ಗವಿಸಿದ್ದಪ್ಪ ಆನಂದಳ್ಳಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಕುಲಪತಿ ಪ್ರೊ.ವಿಜಯ ಕೋರಿಶೆಟ್ಟಿ ಅವರು ಅಭಿನಂದಿಸಿದ್ದಾರೆ.

ಮೋಹನ ಕಟ್ಟಿಮನಿ ನೇಮಕ

ವಿಜಯಪುರ: ನಗರದ ಮೋಹನ ಕಟ್ಟಿಮನಿ ಅವರನ್ನು ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ ಬೆಳಗಾವಿ ವಿಭಾಗೀಯ ಸಂಯೋಜಕರನ್ನಾಗಿ ನೇಮಕ ಮಾಡಲಾಗಿದೆ. ಮೋಹನ ಕಟ್ಟಿಮನಿ ದಲಿತ ಸಾಹಿತ್ಯ, ಶರಣ ಸಾಹಿತ್ಯ, ಸಾಂಸ್ಕೃತಿಕ ಚಿಂತನೆ ಹಾಗೂ ಸಾಮಾಜಿಕ ಸೇವೆಯಲ್ಲಿ ಸಕ್ರಿಯವಾಗಿ,



ಉತ್ತಮ ಸಂಘಟಕರಾಗಿ ಸೇವೆ ಸಲ್ಲಿಸಿದ ಹಿನ್ನೆಲೆ ದಲಿತ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಅರ್ಜುನ ಗೊಳಸಂಗಿ ನೇಮಕ ಮಾಡಿ ಈ ಆದೇಶ ಹೊರಡಿಸಿದ್ದಾರೆ.

ವಚನ ನೃತ್ಯ ರೂಪಕ

ಬಸವನಬಾಗೇವಾಡಿ: ಸ್ಥಳೀಯ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತ್ಯುತ್ಸವದ ನಿಮಿತ್ತ ಸೋಮವಾರ ಸಂಜೆ ಬೆಂಗಳೂರು ನವ್ಯ ನಾಟ್ಯ ಸಂಘ ಅವರು ನಡೆಸಿಕೊಟ್ಟ ಅಲ್ಲಮಪ್ರಭುವಿನ ವಚನ ನೃತ್ಯ ರೂಪಕ ಗಮನ ಸೆಳೆಯಿತು. ರಾತ್ರಿ ಅಲಂಕೃತ



ಬಸವೇಶ್ವರರ ಪಲ್ಲಕ್ಕಿ ಹಾಗೂ ಭಾವಚಿತ್ರ, ಸಕಲ ಮಂಗಲ ವಾದ್ಯ ವೈಭವಗಳೊಂದಿಗೆ ಜರುಗಿತು. ಸ್ಥಳೀಯ ವಿರಕ್ತಮಠದ ಸಿದ್ಧಲಿಂಗ ಸೇರಿದಂತೆ ಬಸವ ಭಕ್ತರು ಇದ್ದರು.



ವಿಜಯಪುರ: ನಗರದ ಎಸ್‌ಎಸ್ ಹೈಸ್ಕೂಲ್ ಆವರಣದಲ್ಲಿ ಬಿಎಲ್‌ಡಿಇ ಸಂಸ್ಥೆಯ ಬಂಗಾರಮ್ಮ ಸಜ್ಜನ ಮಹಿಳಾ ಪದವಿ ಮಹಾವಿದ್ಯಾಲಯ ಐಕ್ಯೂಎಸಿ ಹಾಗೂ ಕ್ರೀಡಾ ವಿಭಾಗದವತಿಯಿಂದ ಹಮ್ಮಿಕೊಂಡ ಕ್ರೀಡಾಕೂಟವನ್ನು ಬಿಎಲ್‌ಡಿಇ ಸಂಸ್ಥೆಯ ಕ್ರೀಡಾ ನಿರ್ದೇಶಕ ಪ್ರೊ.ಎಸ್.ಎಸ್. ಕೋರಿ ಉದ್ಘಾಟಿಸಿದರು. ಸಂಚಾಲಕಿ ಡಾ.ಸವಿತಾ ಅಣ್ಣೆಪ್ಪನವರ, ಐಕ್ಯೂಎಸಿ ಸಂಯೋಜನಾಧಿಕಾರಿ ಡಾ.ಭಕ್ತಿ ಮಹೇಂದ್ರಕರ್, ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎ.ಟಿ.ಶ್ರೀನಿವಾಸ, ಪ್ರೊ.ರಶ್ಮಿ ಪಾಟೀಲ, ಪ್ರೊ.ದೀಪಾ ಲಗಳಿ, ಪ್ರೊ.ಪ್ರಭು ಗುಂಜಟ್ಟಿ ಇದ್ದರು.

ಕ್ರೀಡಾ ಮನೋಭಾವ ಮುಖ್ಯ: ಕೋರಿ

ವಿಜಯಪುರ: ಕ್ರೀಡೆಯು ವ್ಯಕ್ತಿಯ ದೈಹಿಕ, ಮಾನಸಿಕ ಆತ್ಮವಿಶ್ವಾಸ ಬೆಳೆಸುವ ಅತ್ಯುತ್ತಮ ಸಾಧನವಾಗಿದ್ದು, ಸೋಲು-ಗೆಲುವನ್ನು ಲೆಕ್ಕಿಸದೆ ಕ್ರೀಡೆಯಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕು ಎಂದು ಬಿಎಲ್‌ಡಿಇ ಸಂಸ್ಥೆಯ ಕ್ರೀಡಾ ನಿರ್ದೇಶಕ ಪ್ರೊ.ಎಸ್.ಎಸ್. ಕೋರಿ ಹೇಳಿದರು. ನಗರದ ಎಸ್‌ಎಸ್ ಹೈಸ್ಕೂಲ್ ಆವರಣದಲ್ಲಿ ಬಿಎಲ್‌ಡಿಇ ಸಂಸ್ಥೆಯ ಬಂಗಾರಮ್ಮ ಸಜ್ಜನ ಮಹಿಳಾ ಪದವಿ ಮಹಾವಿದ್ಯಾಲಯ ಐಕ್ಯೂಎಸಿ ಹಾಗೂ ಕ್ರೀಡಾ ವಿಭಾಗದವತಿಯಿಂದ ಹಮ್ಮಿಕೊಂಡ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಿಯಮಿತ ಕ್ರೀಡೆ ಹಾಗೂ ವ್ಯಾಯಾಮದಿಂದ ಉತ್ತಮ ಆರೋಗ್ಯ ಹೊಂದಲು ಸಾಧ್ಯವಾಗುತ್ತದೆ ಎಂದರು. ಪ್ರಾಚಾರ್ಯ ಡಾ.ವೈ.ತಮ್ಮಣ್ಣ ಮಾತನಾಡಿ, ಕ್ರೀಡೆಗಳು ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಅವು ದೇಹದ ಆರೋಗ್ಯ ಕಾಪಾಡುವುದಷ್ಟೇ ಅಲ್ಲದೆ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಶಿಸ್ತು, ಸಹಕಾರ, ಸಹನಶೀಲತೆ, ನಾಯಕತ್ವ ಮನೋಭಾವ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದರು. ವಿದ್ಯಾರ್ಥಿಗಳು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಸಂಚಾಲಕಿ ಡಾ.ಸವಿತಾ ಅಣ್ಣೆಪ್ಪನವರ, ಐಕ್ಯೂಎಸಿ ಸಂಯೋಜನಾಧಿಕಾರಿ ಡಾ.ಭಕ್ತಿ ಮಹೇಂದ್ರಕರ್, ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎ.ಟಿ.ಶ್ರೀನಿವಾಸ, ಪ್ರೊ.ರಶ್ಮಿ ಪಾಟೀಲ, ಪ್ರೊ.ದೀಪಾ ಲಗಳಿ, ಪ್ರೊ.ಪ್ರಭು ಗುಂಜಟ್ಟಿ, ಪ್ರೊ.ಮಂಜುನಾಥ ಮ್ಯಾಗೇರಿ, ಪ್ರೊ.ಚಂದ್ರಕಲಾ ದೊಡಮನಿ, ಪ್ರೊ.ಸೌಮ್ಯ ಶೆಟ್ಟರ ಇದ್ದರು.



ಚಡಚಣ: ಸುಕ್ಷೇತ್ರ ಹೊರ್ತಿ ರೇವಣಸಿದ್ಧೇಶ್ವರ ದೇವಸ್ಥಾನಕ್ಕೆ ಕರ್ನಾಟಕದ ರಾಜ್ಯಪಾಲ ಥಾವರ್ಚಂದ್ ಗೆಹ್ಲೋತ್ ಅವರು ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಅಣ್ಣಪ್ಪ ಸಾವಕಾರ ಖೈನೂರ ಹಾಗೂ ಇಂಡಿ ಡಿವೈಎಸ್ಪಿ ಸದಾಶಿವ ಕಟ್ಟಿಮನಿ ಸೇರಿದಂತೆ ದೇವಸ್ಥಾನದ ಆಡಳಿತ ಮಂಡಳಿ ಇದ್ದರು.

ಟಾಸ್ಕ್‌ಫೋರ್ಸ್ ಸಭೆ | ಶಾಸಕ ಯಶವಂತರಾಯಗೌಡ ಸೂಚನೆ

ಜಲಧಾರೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಇಂಡಿ: ಇಂಡಿ ನಗರ ಸೇರಿದಂತೆ ತಾಲೂಕಿನ ಗ್ರಾಮೀಣ ಭಾಗದಲ್ಲಿ ಯಾವುದೇ ರೀತಿ ಕುಡಿಯುವ ನೀರಿನ ತೊಂದರೆಯಾಗದಂತೆ ಮುಂಜಾಗ್ರತ ಕ್ರಮ ಕೈಗೊಳ್ಳಬೇಕು. ತ್ವರಿತವಾಗಿ ಜಲಧಾರೆ ಕಾಮಗಾರಿ ಮುಗಿಸಿದಲ್ಲಿ ಇಂಡಿ ನಗರಕ್ಕೂ ಹಾಗೂ ಮತಕ್ಷೇತ್ರದ ಎಲ್ಲ ಗ್ರಾಮಗಳಿಗೆ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರಗಲಿದೆ. ಆದ್ದರಿಂದ ತ್ವರಿತವಾಗಿ ಕಾಮಗಾರಿ ಮುಗಿಸಲು ಅಧಿಕಾರಿಗಳು ಮತುವರ್ಜಿ ವಹಿಸಬೇಕು ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಅವರು ಬುಧವಾರ ನಗರದ ತಾಲೂಕು ಪಂಚಾಯತಿ ಸಭಾಭವನದಲ್ಲಿ ಹಮ್ಮಿಕೊಂಡ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೇ ತಿಂಗಳಿಗಾಗುವಷ್ಟು ನೀರನ್ನು ಸಂಗ್ರಹಿಸಿದ್ದಲ್ಲಿ ಯಾವುದೇ ಸಮಸ್ಯೆಯಾಗದು. ಅಧಿಕಾರಿಗಳು ಆಯಾ ಕೆರೆಗಳಲ್ಲಿ ನೀರಿನ ಸಂಗ್ರಹದ ಬಗ್ಗೆ ಹೆಚ್ಚಿನ ನೀಗಾವಹಿಸಿದ್ದಲ್ಲಿ ಯಾವುದೇ ರೀತಿ ಕುಡಿಯುವ ನೀರಿನ ತೊಂದರೆಯಾಗದು. ಭೀಮಾನದಿಯ ಧೂಳಖೇಡ ಬ್ಯಾರೇಜ್ ಹತ್ತಿರ ನೀರಿನ ಪ್ರಮಾಣ ಕಡಿಮೆಯಾಗಿತ್ತು. ಇದರಿಂದ ನಗರದ ಜನತೆಗೆ ಕುಡಿಯುವ ನೀರಿನ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಮಹಾರಾಷ್ಟ್ರದ ಸರ್ಕಾರದ ಜೊತೆ ಸಂಪರ್ಕ ಸಾಧಿಸಿ ಉಜನಿ ಜಲಾಶಯದಿಂದ ನೀರು ಹರಿಸಲಾಗಿತ್ತು ಎಂದರು.

ನಗರ ಸೇರಿದಂತೆ ಇತರ ಗ್ರಾಮಗಳಿಗೆ ಸರಬರಾಜು ಆಗುವ ಕುಡಿಯುವ ನೀರಿನ ಮೂಲಗಳ ಬಗ್ಗೆ ಹೆಚ್ಚಿನ ನಿಗಾವಹಿಸಿ. ತಾಲೂಕಿನ 32 ಗ್ರಾಮಗಳಿಗೆ ಹಂಜಗಿ ಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಆದ್ದರಿಂದ ಜನ ಜಾನುವಾರುಗಳಿಗೆ ಯಾವುದೇ ರೀತಿ ಕುಡಿಯುವ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅಡವಿ ವಸತಿ ಪ್ರದೇಶದಲ್ಲಿ ಮಾತ್ರ ನೀರಿ ತೊಂದರೆಯಾಗುವ ಸಾಧ್ಯತೆ ಇದೆ. ಜನ ಜಾನುವಾರುಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು.

ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಶೀಲ್ದಾರ್ ಬಿ.ಎಸ್. ಕಡಕಬಾವಿ, ತಾಪಂ ಇಒ ಡಾ.ಭೀಮಾಶಂಕರ ಕನ್ನೂರ, ಯುಕೆಪಿ ಅಧಿಕಾರಿ ಮನೋಜಕುಮಾರ ಗಡಬಳ್ಳಿ, ಪಿಡಬ್ಲುಡಿ ಅಧಿಕಾರಿ ದಯಾನಂದ ಮಠ, ತೋಟಗಾರಿಕೆ ತೋಟಗಾರಿಕೆ ಅಧಿಕಾರಿ ಎಸ್.ಎಚ್.ಪಾಟೀಲ, ಕೃಷಿ ಅಧಿಕಾರಿ ಮಹಾದೇವಪ್ಪ ಏವೂರ, ಪೌರಾಯುಕ್ತ ಶಿವಾನಂದ ಪೂಜಾರಿ, ಕ್ಷೇತ್ರ ಶಿಕ್ಷಣಾಧಿಕಾರಿ ಸಯಿದಾ ಅನೀಸ ಮುಜಾವರ, ಸಂಜಯ ಖಡಗೇಕರ, ಸಿಪಿಐ ಸುನೀಲ ಪಾಟೀಲ, ತಾಪಂ ಯೋಜನಾಧಿಕಾರಿ ನಂದೀಪ ರಾಠೋಡ, ಜಿಪಂ ಪಿಆರ್‌ಇ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಶಿವಾಜಿ ಬನಸೋಡೆ, ಆರ್. ಎಸ್.ಬಂಡಿ, ಎಂಐ ಎಇಇ ಸಂದೀಪ ಕೂಡ್ಲೂರ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.



> ಅಧಿಕಾರಿಗಳು ನೀರನ್ನು ಹಿತಮಿತವಾಗಿ ಬಳಕೆ ಮಾಡಿದಲ್ಲಿ ಯಾವುದೇ ತೊಂದರೆಯಾಗದು. ಆದ್ದರಿಂದ ತಾಲೂಕು ಆಡಳಿತಾಧಿಕಾರಿಗಳು ಹಾಗೂ ಪ್ರತಿಯೊಬ್ಬ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು.
>
> ■ ಯಶವಂತರಾಯಗೌಡ ಪಾಟೀಲ, ಶಾಸಕರು

> ಕುಡಿಯುವ ಇಂಡಿ ಹಾಗೂ ಚಡಚಣ ಭಾಗದ ಕೊನೆವರೆಗೆ ಕಾಲುವೆ ನೀರು ಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಕೆರೆಗಳ ನೀರಿನ ಲಭ್ಯತೆ ಬಗ್ಗೆ ಮಾಹಿತಿ ನೀಡಬೇಕು. ಯಾವುದೇ ರೀತಿ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕು.
>
> ■ ಡಾ:ಆನಂದ ಕೆ., ಜಿಲ್ಲಾಧಿಕಾರಿ

ರಸ್ತೆ ಕಾಮಗಾರಿ ವಿಳಂಬ ಖಂಡಿಸಿ ಮನವಿ

ವಿಜಯಪುರ: ಸರಾಫ್ ಬಜಾರ್‌ನಲ್ಲಿ ರಸ್ತೆ ಕಾಮಗಾರಿ ವಿಳಂಬದಿಂದಾಗಿ ಸಾರ್ವಜನಿಕರಿಗೆ ಸಂಚಾರದಲ್ಲಿ ಸಾಕಷ್ಟು ತೊಂದರೆ ಉಂಟಾಗುತ್ತಿದ್ದು, ಕೂಡಲೇ ಸಂಚಾರವ್ಯವಸ್ಥೆ ಸುಗಮಗೊಳಿಸಲು ಆಗ್ರಹಿಸಿ ಬಿಜೆಪಿ ನಗರ ಮಂಡಳ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಬಿಜೆಪಿ ನಗರ ಮಂಡಳ ಅಧ್ಯಕ್ಷ ಸಂದೀಪ ಪಾಟೀಲ ಮಾತನಾಡಿ, ಸರಾಫ್ ಬಜಾರ್ ರಸ್ತೆ ಕಾಮಗಾರಿ ಅತ್ಯಂತ ಆಮೆಗತಿಯಲ್ಲಿ ನಡೆದಿದೆ. ಹೃದಯಭಾಗವಾಗಿರುವ ಸರಾಫ್ ಬಜಾರ್ ಅನೇಕ ಮಾರ್ಗಗಳಿಗೆ ಸಂಪರ್ಕ ಸೇತುವೆಯೂ ಹೌದು, ಹೀಗಾಗಿ ದಿನನಿತ್ಯ ಸಾವಿರಾರು ವಾಹನಗಳ ಸಂಚಾರ ನಿತ್ಯ ಇದ್ದೆ ಇರುತ್ತದೆ. ಆದರೆ ರಸ್ತೆ ಕಾಮಗಾರಿಯಿಂದ ವಾಹನ ಸಂಚಾರವಂತೂ ಹೈರಾಣದ ಮೀತಿಮೀರಿದೆ ಎಂದರು.

ನಗರದ ಹೃದಯ ಭಾಗವಾದ ಸರಾಫ್ ಬಜಾರ್‌ನಲ್ಲಿ ರಸ್ತೆ ಕಾಮಗಾರಿ ಕೈಗೊಂಡಿದ್ದು, ಇದರ ಪರ್ಯಾಯ ಮಾರ್ಗವಾಗಿ ಮಿಲನ್ ರಸ್ತೆಯ ಮೂಲಕ ವಾಹನ ಸಂಚಾರಕ್ಕೆ, ವ್ಯವಸ್ಥೆ ಮಾಡಲಾಗಿದೆ. ಆದರೆ ಮಿಲನ್ ಹೋಟೆಲ್‌ನಿಂದ ಜಿಣಗಾರಗಲ್ಲಿ ಹನುಮಾನ್ ಮಂದಿರದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ದ್ವಿಚಕ್ರ ವಾಹನಗಳ ಪಾರ್ಕಿಂಗ್ ಇದೆ, ಅಲ್ಲಿರುವ ವ್ಯಾಪಾರಸ್ಥರು ತಮ್ಮ ತಮ್ಮ ಮಳಿಗೆಗಳ ಮುಂಭಾಗದಲ್ಲಿ ರಸ್ತೆಯ ಮೇಲೆ ತಮ್ಮ ಮಳಿಗೆಗಳಲ್ಲಿನ ವಸ್ತುಗಳನ್ನು ಕಬ್ಬಿಣದ ಸ್ಟ್ಯಾಂಡ್ ಇಡುತ್ತಿದ್ದು, ಇದರಿಂದ ಆ ರಸ್ತೆಯಲ್ಲಿ ಅತೀಯಾದ ವಾಹನ ದಟ್ಟಣೆ ಎದುರಾಗುತ್ತಿದೆ. ಹಾಗಾಗಿ ತಾತ್ಕಾಲಿಕವಾಗಿ ಅಲ್ಲಿಯ ಪಾರ್ಕಿಂಗ್ ವ್ಯವಸ್ಥೆ ನಿರ್ಬಂಧಗೊಳಿಸಿ, ಪಾರ್ಕಿಂಗ್‌ಗೆ ಸೂಕ್ತ ಸ್ಥಳ ನಿಗದಿಪಡಿಸಬೇಕು, ವ್ಯಾಪಾರಸ್ಥರಿಗೆ ತಮ್ಮ ವಸ್ತುಗಳನ್ನು ರಸ್ತೆಯ ಮೇಲೆ ಇಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು.

ಭೀಮಾಶಂಕರ ಹದನೂರ, ವಿಜಯ ಜೋಶಿ, ಚಿನ್ನು ಚಿನಗುಂಡಿ, ವಿನಾಯಕ ದಹಿಂಡಿ, ರಾಜೇಶ ತಾವಸೆ, ರಾಜೇಂದ್ರ ವಾಲಿ, ಶ್ರೀಕಾಂತ ಶಿಂಧೆ, ಗಣೇಶ ಉಪ್ಪಾರ, ವಿಕಾಸ ಪದಕಿ, ಆನಂದ ಮುಚ್ಚಂಡಿ, ಭರತ್ ಕೋಳಿ, ಭರತ್ ಕುಲಕರ್ಣಿ, ವಿವೇಕ ತಾವರಗೇರಿ, ಸಂಪತ್ ಕೋವಳ್ಳಿ, ಬಸವರಾಜ ಹಳ್ಳಿ, ಸಂತೋಷ ಪತ್ತಾರ, ಅನಿಲ್ ಉಪ್ಪಾರ, ಸಿದ್ದು ಮಲ್ಲಿಕಾರ್ಜುನಮಠ, ಸಂಗಮೇಶ ಉಕ್ಕಲಿ, ಗೇಸುದರಾಜ ಇನಾಮದಾರ, ಜಗದೀಶ ಮನಗೂಳಿ, ಮಯೂರ ಮೊರಗಾಂವ್ಕರ್, ಭಾರತಿ ಬುಯಾರ್, ಬಸಮ್ಮ ಗುಜ್ಜರ್, ಶ್ರೀದೇವಿ ಅವದಿ, ಶಾಂತಾ ಯಳಮೇಲಿ ಇದ್ದರು.



ಪ್ರತಿ ಕೆಲಸದಲ್ಲಿ ಪ್ರಯತ್ನವಿರಲಿ: ಮೂರ್ತಿ

ಬಸವನಬಾಗೇವಾಡಿ: ದೇವರನ್ನು ಪ್ರೀತಿಸಬೇಕು ಅಂದಾಗ ಮಾತ್ರ ಆತ ನಮಗೆ ಒಲಿಯುತ್ತಾನೆ. ಯಾವುದೇ ಕೆಲಸ ಕಾರ್ಯ ಮಾಡಬೇಕಾದರೆ ಭಕ್ತಿ ಬೇಕು, ಬರೆ ಭಕ್ತಿ ಇದ್ದರೆ ಸಾಲದು ಅದಕ್ಕೆ ಪ್ರಯತ್ನ ಬೇಕು ಆದಾಗ ಮಾತ್ರ ಕಾರ್ಯ ಶುದ್ಧಿಯಾಗಲೂ ಸಾಧ್ಯ ಎಂದು ಮಂಡ್ಯದ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕ ಡಾ.ಟಿ. ಎನ್.ವಾಸುದೇವ ಮೂರ್ತಿ ಹೇಳಿದರು.

ಸ್ಥಳೀಯ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತ್ಯುತ್ಸವದ ನಿಮಿತ್ತ ಸೋಮವಾರ ಸಂಜೆ ನಡೆದ ವಚನ ಚಿಂತನೆ ಸಮಾರಂಭದಲ್ಲಿ ಬಸವೇಶ್ವರರ ದೃಷ್ಟಿಕೋನದಲ್ಲಿ ಶರಣ ಹಾಗೂ ಐಕ್ಯಸ್ಥಳ ಕುರಿತು ಉಪನ್ಯಾಸ ನೀಡಿ ಮಾತನಾಡಿದ ಅವರು, ಎಲ್ಲ ಧರ್ಮದಲ್ಲಿ ಐಕ್ಯಸ್ಥಳಕ್ಕೆ ಬೇರೆ ಬೇರೆಯಾಗಿ ಹೇಳಬಹುದು, ಆದರೆ ಪತಂಜಲಿ ಯೋಗದಲ್ಲಿ ಶವಾಸನ, ಸಮಾಧಿ ಎಂದು ಕರೆಯಲಾಗಿದೆ, ಶರಣರ ವಚನಗಳಲ್ಲಿ ಬಹಳಷ್ಟು ಅಂಶಗಳಿವೆ, ವಚನಕಾರರು ಸುಮ್ಮನೆ ಹಾಡಿದರು, ಶರಣ ದರ್ಶನ ಎನ್ನುವುದು ಒಬ್ಬ ವ್ಯಕ್ತಿಗೆ ಅಲ್ಲ, ಅದು ಎಲ್ಲ ಶರಣರಿಗೆ ಅನ್ವಯಿಸುತ್ತದೆ ಎಂದು ಹೇಳಿದರು.

ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ಹಲವಾರು ಕ್ರಾಂತಿ ಮಾಡಿದ್ದರು. ಇವರು ಬರೆದ ವಚನಗಳು ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕೊಟ್ಟಿದ್ದಾರೆ, ಇವರ ಸಪ್ತಸೂತ್ರ ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ಸ್ಥಳೀಯ ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ ಬಸವಣ್ಣನವರು ಶರೀರವನ್ನು ಲಿಂಗವನ್ನಾಗಿ ಮಾಡಿದ್ದರು. ಸಾಮಾಜಿಕ ಕ್ರಾಂತಿ ಜೊತೆಗೆ ಅಂತರಂಗದ ಕ್ರಾಂತಿಯೂ ಆಯಿತು. ಇದ್ದರಿಂದ ಶರೀರದಲ್ಲಿ ಬದಲಾವಣೆ ತಂದರು, ಮಹಾರಾಷ್ಟ್ರದ ಮಂಗಳವೇಡೆ ಬಸವಣ್ಣನವರ ಮೊದಲ ಕರ್ಮಭೂಮಿ ಇದು ಕೂಡಾ ಧಾರ್ಮಿಕ ಕ್ಷೇತ್ರ ಎಂದು ಹೇಳಿದರು.

ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಗುರುನಾಥ ದಡ್ಡಿ, ಬೆಂಗಳೂರಿನ ಜೀ ಕನ್ನಡ ಸರಿಗಮಪ ಖ್ಯಾತ ಕಲಾವಿದ ಶ್ರೀರಾಮ ಕಾಸರ ಹಾಗೂ ಸಂಗಡಿಗರಿಂದ ನಡೆದ ವಚನ ಸಂಗೀತ ಜನರ ಮನ ಸೂರಗೊಂಡಿತು. ಶಿಕ್ಷಕ ಬಸವರಾಜ ಹಂಚಲಿ(ಕಣಕಾಲ) ಸ್ವಾಗತಿಸಿದರು, ಎಸ್. ಎಂ.ಬಿಷ್ಟಗೊಂಡ, ಸುಭಾಸ ಹಡಪದ ನಿರೂಪಿಸಿ, ವಂದಿಸಿದರು.



ಕಾಯಕದ ಮಹತ್ವ ಸಾರಿದ ಮಹಾನ್ ಬಸವಣ್ಣನವರು: ವಾಲೀಕಾರ

ಸಿಂದಗಿ: ಬಸವಣ್ಣನವರು ಸಮಾನತೆ, ಸತ್ಯ ಮತ್ತು ಕಾಯಕದ ಮಹತ್ವ ಸಾರಿದ ಮಹಾನ್ ವ್ಯಕ್ತಿ. ಅವರ ಉಪದೇಶಗಳು ಇಂದಿನ ಸಮಾಜಕ್ಕೂ ಬಹಳ ಉಪಯುಕ್ತವಾಗಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಹೇಳಿದರು.

ನಗರದ ತಾಲೂಕು ಪಂಚಾಯತ ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ವತಿಯಿಂದ ಹಮ್ಮಿಕೊಂಡ 893ನೇ ಬಸವ ಜಯಂತಿ ನಿಮಿತ್ತ ವಿಶ್ವಗುರು ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಬಸವಣ್ಣನವರು 12ನೇ ಶತಮಾನದ ಮಹಾನ್ ಸಮಾಜ ಸುಧಾರಕ. ದಾರ್ಶನಿಕ ಹಾಗೂ ಕವಿ. ಅವರು ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಸ್ಥಾನ ಹೊಂದಿದ್ದಾರೆ. ಮಹಿಳೆಯರಿಗೂ ಸಮಾನತೆ ತಂದುಕೊಟ್ಟ ಭಾರತದ ಸಾಂಸ್ಕೃತಿಕ ನಾಯಕ. ಬಸವಣ್ಣನವರ ಪ್ರತಿವಚನಗಳು ವೈಜ್ಞಾನಿಕ ದೃಷ್ಟಿಕೋನದಿಂದ ಕೂಡಿದೆ. ಅವರ ಆಶೆಯದಂತೆ ನಾವೆಲ್ಲರೂ ನಡೆದುಕೊಂಡರೇ ಸುಂದರ ಸಮಾಜ ನಿರ್ಮಾಣವಾಗುತ್ತದೆ ಎಂದರು.

ತಾಲೂಕಾಧ್ಯಕ್ಷ ವೈ.ಸಿ.ಮಯೂರ ಮಾತನಾಡಿ, ಬಸವಣ್ಣನವರು ಭಾತೃತ್ವದ ತತ್ವದಡಿ ಸಮ ಸಮಾಜ ನಿರ್ಮಾಣ ಮಾಡಿ ಜಗತ್ತಿನ ಪ್ರಥಮ ಸಂಸತ್ತು ಅನುಭವ ಮಂಟಪ ಕಟ್ಟಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ ಎಂದರು.



ಸಾಹಿತಿ, ಶಿಕ್ಷಕ ಎಂ.ಆರ್.ಡೋಣಿ, ಶಿವಕುಮಾರ ಶಿವಸಿಂಪಿಗೇರ್, ಎಸ್. ಎಂ.ಚಿಗರಿ, ಜಗದೇವಿ ಬಿರಾದಾರ, ಶೈಲಜಾ ಸ್ಥಾವರಮಠ ಮಾತನಾಡಿದರು. ದೇವರಹಿಪ್ಪರಗಿ ಕಸಾಪ ಅಧ್ಯಕ್ಷ ಸಿದ್ದು ಮೇಲಿನಮನಿ, ಸಾಹಿತಿ ಶಿಕ್ಷಕ ಎಸ್. ಎಸ್.ಸಾತಿಹಾಳ, ವರ್ಷಾ ಪಾಟೀಲ, ಶಾಂತಪ್ಪ ರಾಣಾಗೋಳ, ಅನುಸೂಯಾ ಪಾರಗೊಂಡ, ರಾಜಶೇಖರ ನರಗೋದಿ, ಶಿಕ್ಷಕಿ ಶೈನಾಬಿ ಮಸಳಿ, ಕಾವೇರಿ ಡೋಣೂರ, ಅಂಬರೀಶ ಚೌಗಲೆ, ರೇವಣಸಿದ್ದ ತಳವಾರ, ನೀಲಕಂಠ ಹೊಸಮನಿ, ಪ್ರತಿಭಾ ಚಳ್ಳಗಿ,ಶೈಲಜಾ ಸ್ಥಾವರಮಠ, ಶೋಭಾ ಚಿಗರಿ, ಜ್ಞಾನೇಶ ಗುರವ ಸೇರಿದಂತೆ ಸಾಹಿತ್ಯ ಆಸಕ್ತರು ಹಾಗೂ ಕನ್ನಡಾಭಿಮಾನಗಳು ಇದ್ದರು. ಕಸಾಪ ಗೌರವ ಕಾರ್ಯದರ್ಶಿ ಆನಂದ ಶಾಬಾದಿ ನಿರೂಪಿಸಿದರು.

ಡೋಣಿ ನದಿ ಹೂಳು ಎತ್ತಿ ಶಾಶ್ವತ ಪರಿಹಾರ ನೀಡಲು ಆಗ್ರಹ

ವಿಜಯಪುರ: ಜಿಲ್ಲೆ ಪಂಚ ನದಿಗಳ ಜಿಲ್ಲೆ ಎಂದು ಖ್ಯಾತಿಯಾಗಿದೆ. ಆದರೆ ಪ್ರತಿ ಎರಡ್ಮೂರು ವರ್ಷಕ್ಕೆ ಒಣ ಬರ, ಹಸಿಬರ ತಪ್ಪಿದ್ದಲ್ಲ, ಇದರಿಂದ ಈ ಭಾಗದ ರೈತರು ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಕೂಡಲೇ ಡೋಣಿ ನದಿ ಹೂಳು ಎತ್ತಿ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಹೇಳಿದರು.

ಈ ಕುರಿತು ಡೋಣಿ ನದಿ ಹೂಳು ತೆಗೆಯುವ ಸ್ಥಳಕ್ಕೆ ಭೇಟಿ ನೀಡಿ ಅವರು ಮಾತನಾಡಿ, ಮಹಾರಾಷ್ಟ್ರದಿಂದ ಇತ್ತ ಕರ್ನಾಟಕದ ಮಾರ್ಗವಾಗಿ ಆಂಧ್ರಕ್ಕೆ ಸೇರುವಂತಹ ದೋಣಿಯು ಸುಮಾರು 215 ಕಿಮೀ ಉದ್ದ ಇದ್ದು, ಇದರಲ್ಲಿ ಸಾಕಷ್ಟು ಹೂಳು ತುಂಬಿ, ಮಳೆಗಾಲದಲ್ಲಿ ಡೋಣಿ ತುಂಬಿ ಹರಿಯುವಾಗ ಆ ಹೊಳಿನಿಂದ ನೀರು ಡೋಣಿ ನೀರು ಅಕ್ಕಪಕ್ಕದ ಜಮೀನುಗಳಿಗೆ ನುಗ್ಗಿ ತನ್ನ ರುದ್ರಾವತಾರದೊಂದಿಗೆ ಸಾಕಷ್ಟು ನಷ್ಟ ಉಂಟು ಮಾಡುತ್ತದೆ. ಇದಕ್ಕಾಗಿ ಹಲವು ವರ್ಷಗಳಿಂದ ಈ ಡೋಣಿ ಅಕ್ಕಪಕ್ಕದ ರೈತರು, ರೈತ ಸಂಘದವರು ಹಾಗೂ ರೈತಪರ ಚಿಂತಕರು ಜಿಲ್ಲಾಧಿಕಾರಿಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿಗಳನ್ನು ಸಲ್ಲಿಸಿದರು ಇದಕ್ಕೆ ಒಂದು ಶಾಶ್ವತ ಪರಿಹಾರ ಸಿಕ್ಕಿಲ್ಲ. ಈ ಕೂಡಲೇ ಕರ್ನಾಟಕದಲ್ಲಿ ಹಾದು ಹೋಗುವಂತಹ ಡೋಣಿಯ ಸಂಪೂರ್ಣ ಆಳತೆಯನ್ನು ಮಾಡಿ, ಅಲ್ಲಿರುವಂಥ ಹೂಳನ್ನ ತೆಗೆದು ಅಕ್ಕಪಕ್ಕದಲ್ಲಿ ಕಲ್ಲಿನ ತಡೆಗೋಡೆ ಮಾಡಿ, ದೊಡ್ಡ ದೊಡ್ಡ ಮರಗಳನ್ನು ಹಚ್ಚುವುದರ ಮೂಲಕ ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು, ಇದಕ್ಕಾಗಿ ವಿಜಯಪುರದ ಜಿಲ್ಲಾಧಿಕಾರಿ ಡಾ.ಕೆ.ಆನಂದ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ರಾಜ್ಯ ಸರ್ಕಾರಕ್ಕೆ ಒಂದು ಪ್ರಸ್ತಾವನೆ ಸಲ್ಲಿಸಿ, ಅದಕ್ಕೆ ಬೇಕಾಗುವಂತ ಅನುದಾನ ಮಂಜೂರು ಮಾಡಿಸಬೇಕು ಎಂದು ಒತ್ತಾಯಿಸಿದರು. ರೈತಮುಖಂಡ ಮಲ್ಲಿಕಾರ್ಜುನ ಬಟಗಿ, ಅಭಿಷೇಕ ಹೂಗಾರ ಇದ್ದರು.



ಉದ್ಯೋಗಾವಕಾಶವಕ್ಕೆ ತಯಾರಿ ಅವಶ್ಯ



ಮುದ್ದೇಬಿಹಾಳ: ನಗರದ ಶಾಹ ಸೋಗಮಲ್ ಪೀರಾಜಿ ಒಸ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಾಣಿಜ್ಯ ವಿಭಾಗದ ವತಿಯಿಂದ ಬುಧವಾರ ವಾಣಿಜ್ಯ ಪದವಿ ನಂತರದ ಉದ್ಯೋಗಾವಕಾಶಗಳು ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಯಶಸ್ವಿಯಾಗಿ ನಡೆಯಿತು.

ಎಂಜಿವಿಸಿ ಪದವಿ ಕಾಲೇಜು ವಾಣಿಜ್ಯ ಉಪನ್ಯಾಸಕ ಶ್ರೀಶೈಲ ಹಟ್ಟಿ ಅವರು, ವಿದ್ಯಾರ್ಥಿಗಳಿಗೆ ವಾಣಿಜ್ಯ ಪದವಿ ನಂತರ ಲಭ್ಯವಿರುವ ವಿವಿಧ ಉದ್ಯೋಗಾವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಬ್ಯಾಂಕಿಂಗ್ ವ್ಯವಹಾರ ನಿರ್ವಹಣೆ ಹಾಗೂ ಷೇರು ಮಾರುಕಟ್ಟೆಯ ಅವಕಾಶಗಳನ್ನು ವಿವರಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ವಿವರವಾಗಿ ತಿಳಿಸಿದರು. ನಂತರ ನಡೆದ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಉತ್ತರವನ್ನು ನೀಡಿದರು.

ಪ್ರಾಂಶುಪಾಲ ಡಾ.ಬ್.ಎ.ಕಟಗೂರು ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಭವಿಷ್ಯತ್ತಿನಲ್ಲಿ ತಮ್ಮ ವೃತ್ತಿ ಜೀವನವನ್ನು ಸರಿಯಾದ ದಿಕ್ಕಿನಲ್ಲಿ ಯೋಜಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಪಿ.ಎಂ.ದೇವಿ, ಪ್ರೊ ಧನಶ್ರೀ, ಶಾಂತ ಬ್ಯಾಲ್ಯಾಳ, ಅರ್ಜುನ ಲಮಾಣಿ, ಪ್ರೊ.ಜ್ಯೋತಿ, ಸೋಮೇಶ್ವರ ರೊಟ್ಟಿ ಉಪಸ್ಥಿತರಿದ್ದರು.

ಲೈಫ್ ಜಾಕೆಟ್, ಕಿಟ್ ವಿತರಣೆ

ವಿಜಯಪುರ: ಬಬಲೇಶ್ವರ ಮತಕ್ಷೇತ್ರದ ನಾನಾ ಫಲಾನುಭವಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಮೀನುಗಾರಿಕೆ ಉಚಿತ ಕಿಟ್ ಮತ್ತು ಲೈಫ್ ಜಾಕೆಟ್ ವಿತರಿಸಿದರು.

ರಾಜ್ಯ ವಲಯ ಮತ್ತು ಜಿಲ್ಲಾ ಪಂಚಾಯತಿ ಯೋಜನೆಯಡಿ ಒಟ್ಟು 61 ಜನ ಫಲಾನುಭವಿಗಳು ಆಯ್ಕೆಯಾಗಿದ್ದು, ಅವರಲ್ಲಿ 11 ಫಲಾನುಭವಿಗಳಿಗೆ ಸಚಿವರು ಸಾಂಕೇತಿಕವಾಗಿ ಕಿಟ್ ಮತ್ತು ಲೈಫ್ ಜಾಕೇಟ್ ವಿತರಿಸಿದರು.

ಈ ಯೋಜನೆಯಡಿ ಬಬಲೇಶ್ವರ ತಾಲೂಕಿನ ಕೃಷ್ಣಾ ನದಿಯಲ್ಲಿ ಮೀನುಗಾರಿಕೆ ನಡೆಸುವ ಜೈನಾಪುರ, ಬಬಲಾದ, ದೇವರಗೆಣ್ಣೂರು, ಬೆಳ್ಳುಬ್ಬಿ, ಕಣಬೂರು, ಸುತಗುಂಡಿ, ತಿಕೋಟಾ ತಾಲೂಕಿನ ಕೆರೆಯಲ್ಲಿ ಮೀನುಗಾರಿಕೆ ನಡೆಸುವ ಬರಟಗಿ, ಅರಕೇರಿ, ಮಖಣಾಪುರ ಗ್ರಾಮದ ಮೀನುಗಾರರಿಗೆ ಕಿಟ್ ವಿತರಿಸಲಾಯಿತು.

ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಎಂ.ಎಚ್.ಭಾಂಗಿ, ಸಹಾಯಕ ನಿರ್ದೇಶಕ ಶ್ರೀಶೈಲ ಗಂಗನಳ್ಳಿ, ಡೋಮನಾಳ ಮೀನುಗಾರಿಕೆ ಸಹಕಾರಿ ಸಂಘದ ಅಧ್ಯಕ್ಷ ಶ್ರೀರಾಮಸಿಂಗ್ ರಾಠೋಡ ಇತರರು ಇದ್ದರು.



ಅಗ್ನಿ ಸುರಕ್ಷಿತ ಸಮಾಪನ ಸಮಾರಂಭ

ಕೊಲ್ಹಾರ: ಅಗ್ನಿ ತಡೆಗೆ ಸಮೂಹ ಜವಾಬ್ದಾರಿಯ ಮಹತ್ವ ಅತಿ ಅವಶ್ಯಕ. ಶಾಲೆಗಳು ಮತ್ತು ಆಸ್ಪತ್ರೆಗಳಂತಹ ಸಂವೇದನಾಶೀಲ ಸಂಸ್ಥೆಗಳಲ್ಲಿ ಸುರಕ್ಷತೆ ಖಚಿತಪಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದು ಮಧು ಎಸ್. ಹೇಳಿದರು.



ಕೂಡಗಿ ಎನ್ಟಿಪಿಸಿಯ ಹಮ್ಮಿಕೊಂಡಿದ್ದ ಅಗ್ನಿ ಸುರಕ್ಷಿತ ಸಮಾಪನ ಸಮಾರಂಭದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಅಗ್ನಿ ಸುರಕ್ಷತೆ ಬಗ್ಗೆ ಅರಿವು ಹೆಚ್ಚಿಸಲು, ನಿಯಮಿತ ತರಬೇತಿ ಹಾಗೂ ನಿರಂತರ ಸಿದ್ಧತೆ ಅಗತ್ಯವೆಂದರು.

ಸಿಐಎಸ್‌ಎಫ್ ಫೈರ್ ವಿಂಗ್ ವತಿಯಿಂದ ಲೈವ್ ಫೈರ್ ಡೆಮೋನ್ಸ್ಟ್ರೇಷನ್ ನಡೆಸಲಾಗಿದ್ದು, ಪರಿಣಾಮಕಾರಿ ಅಗ್ನಿಶಾಮಕ ತಂತ್ರಗಳು, ಆಧುನಿಕ ಅಗ್ನಿಶಾಮಕ ಉಪಕರಣಗಳ ಬಳಕೆ ಹಾಗೂ ತುರ್ತು ಪರಿಸ್ಥಿತಿಗಳಲ್ಲಿ ತ್ವರಿತ ಪ್ರತಿಕ್ರಿಯೆ ಕ್ರಮಗಳನ್ನು ಪ್ರದರ್ಶಿಸಲಾಯಿತು. ಫೈರ್ ಸರ್ವಿಸ್ ವಾರದ ಅಂಗವಾಗಿ ಎನ್‌ಟಿಪಿಸಿ ಕುಡಗಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳು, ಮಾಕ್ ಡ್ರಿಲ್‌ಗಳು, ಸ್ಪರ್ಧೆಗಳು ಹಾಗೂ ಸಮುದಾಯ ಸಂಪರ್ಕ ಚಟುವಟಿಕೆಗಳನ್ನು ಆಯೋಜಿಸಲಾಯಿತು. ಉತ್ತಮ ಸಾಧನೆ ಹಾಗೂ ಸಕ್ರಿಯ ಭಾಗವಹಿಸುವಿಕೆಗಾಗಿ ವಿವಿಧ ಸ್ಪರ್ಧೆಗಳ ವಿಜೇತರಿಗೆ ಮುಖ್ಯ ಅತಿಥಿಗಳಿಂದ ಬಹುಮಾನ ವಿತರಿಸಲಾಯಿತು. ವಿಕಾಸ್, ಕಾಳಿ ಚರಣ್ ಸೇರಿದಂತೆ ಎನ್‌ಟಿಪಿಸಿ ಹಿರಿಯ ಅಧಿಕಾರಿಗಳು, ಸಿಐಎಸ್‌ಎಫ್ ಸಿಬ್ಬಂದಿ, ನೌಕರರು, ಗುತ್ತಿಗೆದಾರರು ಹಾಗೂ ಇತರ ಹಿತಾಸಕ್ತರು ಭಾಗವಹಿಸಿದ್ದರು.

ದತ್ತಾತ್ರೇಯ ಮೂರ್ತಿ ಪ್ರತಿಷ್ಠಾಪನೆ ಇಂದು

ನಾಲತವಾಡ: ಸಮೀಪದ ನಾಗರಬೆಟ್ಟ ಎಕ್ಸ್‌ಪರ್ಟ್ ಪಿಯು ಕಾಲೇಜಿನಲ್ಲಿ ಗುರು ದತ್ತಾತ್ರೇಯ ಮೂರ್ತಿ ಪ್ರತಿಷ್ಠಾಪನೆ ಸಮಾರಂಭ ಏ.23ರಂದು ಗುರುವಾರ ನಡೆಯಲಿದ್ದು, ಮಾಗಣಗೇರಿ ಬ್ರಹನ್ಮಠದ ತಪೋರತ್ನ ಡಾ.ವಿಶ್ವಾರಾಧ್ಯ ಶ್ರೀಗಳು, ಭಾವೈಕ್ಯತಾ ಸಂಸ್ಥಾನ ಹಿರೇಮಠ ಕುಂಟೋಜಿ, ಡಾ.ಗುರುಚನ್ನವೀರ ಶ್ರೀಗಳು, ಕಂಠಿಮಠದ ತಪೋಭಾಸ್ಕರ ಚನ್ನಮಲ್ಲಿಕಾರ್ಜುನ ಶ್ರೀಗಳು. ಸಿದ್ದಪ್ಪಜ್ಜನ ನಿರಂತರ ದಾಸೋಹ ಮಠ ಸಿದ್ದನಕೊಳ್ಳ ಮುದನೂರು ಡಾ.ಶಿವಕುಮಾರ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು. ಬಿ.ಜಿ.ಮಠ ಆಕ್ಸಫರ್ಡ್ ಸಮೂಹ ಶಿಕ್ಷಣ ಸಂಸ್ಥೆ ನಾಗರಬೆಟ್ಟ ಅಧ್ಯಕ್ಷ ಬಸವಪ್ರಭು ಹಿರೇಮಠ(ಕವಡಿಮಟ್ಟಿ) ದೇವಿ, ಪ್ರಜ್ವಲ್ ಮಠ (ಆಡಳಿತಾಧಿಕಾರಿ), ಸಿದ್ದಯ್ಯ ಮಠ (ಕಾರ್ಯದರ್ಶಿ), ಎಸ್‌ಡಿಕೆ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಶಾಲೆ ಸಿಬ್ಬಂದಿ, ಆಕ್ಸಫರ್ಡ್ ಮಲ್ಸ್ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಶಾಲೆ, ಎಕ್ಸಪರ್ಟ್ ಪಿಯು ಕಾಲೇಜಿನ ಸಿಬ್ಬಂದಿ ತಿಳಿಸಿದ್ದಾರೆ.

ಅವಿರೋಧ ಆಯ್ಕೆ

ಇಂಡಿ: ನಗರದ ಹಡಪದ ಅಪ್ಪಣ್ಣವರ ವಿವಿಧ ಉದ್ದೇಶಗಳ ಸಹಕಾರಿ ಸಂಘದ ನೂತನ ಆಡಳಿತ ಮಂಡಳಿಯ 9 ಜನ ನಿರ್ದೇಶಕ ಸ್ಥಾನಗಳಿಗೆ ಏ.26ರಂದು ಚುನಾವಣೆ ಜರುಗಬೇಕಾಗಿತ್ತು. ಆದರೆ ತಲಾ ಒಂದೊಂದು ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಎಲ್ಲ 9 ಜನ ನೂತನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ ಸದ್ದಲಗಿ ಘೋಷಣೆ ಮಾಡಿದ್ದಾರೆ. ನೂತನ ನಿರ್ದೇಶಕರಾಗಿ ಅಶೋಕ ಹಡಪದ, ಸಂತೋಷ ಗವಳಿ, ಧೂಳಪ್ಪ ನಾವಿ, ಶಿವಾನಂದ ನಾವಿ, ಸಿದ್ದು ನಾವಿ, ಬಸವರಾಜ ನಾವಿ, ನಟರಾಜ ಗವಳಿ, ಶಕುಂತಲಾ ನಾವಿ, ನಾನು ರಾಠೋಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದ್ದಾರೆ. ಕಾರ್ಯದರ್ಶಿ ಸಿದರಾಯ ಹಪ್ಪಾಗಿರಿ ಇತರರು ಇದ್ದರು.

ಕಿರುಸುದ್ದಿ

ಪಿಕಳಿಹಾಳ ಗ್ರಾಮಕ್ಕೆ ಜಿಪಂ ಸಿಇಒ ಈಶ್ವರ ಭೇಟಿ

ರಾಯಚೂರು: ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ನಾಗಲಾಪೂರು ಗ್ರಾಪಂ ವ್ಯಾಪ್ತಿಯ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆ ಶಿಲಾಯುಗದ ಸ್ಥಳಕ್ಕೆ ಜಿಪಂ ಸಿಇಒ ಈಶ್ವರಕುಮಾರ ಕಾಂದೂ ಭೇಟಿ ನೀಡಿ ಪರಿವೀಕ್ಷಣೆ ಮಾಡಿದರು.

ನಾಗಲಾಪುರ ಗ್ರಾಮ ಪಂಚಾಯತಿ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆಯ ಶಿಲಾಯುಗದ ಬಗ್ಗೆ ಪುರಾತತ್ವ ಸಂಶೋಧನೆ ನಡೆಸಿರುವ ಬ್ರಿಟಿಷ್ ಪುರಾತತ್ವ ಶಾಸ್ತ್ರಜ್ಞರು 1960ನೇ ಇಸವಿಯಲ್ಲಿ ಉತ್ಖನನ ನಡೆಸಿದರು. ಇದು ಉತ್ಖನನದಿಂದ ಶಿಲಾಯುಗದ ಅನೇಕ ಕುರುಹುಗಳು ಪತ್ತೆಯಾಗಿವೆ. ಐತಿಹಾಸಿಕ ಮಹತ್ವ ಈ ಪ್ರದೇಶವು ಹಿಂದಿನ ಮಾನವ ವಸಹಾತುಗಳ ಇತಿಹಾಸಕ್ಕೆ ಸಾಕ್ಷಿಯಾಗಿವೆ ಎಂದರು.ಭೂದೃಶ್ಯ ಮತ್ತು ಬಂಡೆ ಆಶ್ರಯಗಳು ಇತ್ತೀಚಿನವರೆಗೂ ಪುರಾತತ್ವ ಶಾಸ್ತ್ರಜ್ಞ ಸಂಶೋಧನೆಗಳು ಹೆಚ್ಚಿನ ಅಧ್ಯಯನಕ್ಕೆ ಓತ್ತು ನೀಡಿವೆ. ಆದ್ದರಿಂದ ಹಳೆಯ ಶಿಲಾಯುಗದ ಕುರುಹುಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಸಂರಕ್ಷಿಸಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದರು.

ಈ ವೇಳೆ ಲಿಂಗಸುಗೂರು ತಾ.ಪಂ ಇಓ ಉಮೇಶ, ಗ್ರಾಮೀಣ ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ವೆಂಕಟೇಶ ದೇಸಾಯಿ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕ ಪಂಪನಗೌಡ, ಪಿಡಿಒ ಬಸವರಾಜ, ಕಾರ್ಯದರ್ಶಿ ಚನ್ನಬಸವ ಸೇರಿದಂತೆ ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು ಹಾಗೂ ಗ್ರಾಮ ಪಂಚಾಯತ್ ಸಿಬ್ಬಂದಿಗಳು ಇದ್ದರು.

ಮ್ಯಾಗೇರಿ ಮನೆಗೆ ಶಾಸಕ ರೆಡ್ಡಿ ಭೇಟಿ



ಮುನಿರಾಬಾದ್: ಗಂಗಾವತಿ ವಿಧಾನ ಸಭಾ ಕ್ಷೇತ್ರದ ಜಬ್ಬಲಗುಡ್ಡ ಗ್ರಾಮದಲ್ಲಿ ಕಳೆದ ಮೂರು ದಿನಗಳ ಹಿಂದೆ ಸಿಡಿಲಿಗೆ ಮೃತಪಟ್ಟ ರೈತ ಕರಿಯಪ್ಪ ಮ್ಯಾದನೇರಿ ನಿವಾಸಕ್ಕೆ ಜನಪ್ರಿಯ ಶಾಸಕ ಗಾಲಿ ಜನಾರ್ಧನ್ ರೆಡ್ಡಿ ಸಾಹೇಬರು ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ವೈಯಕ್ತಿಕ ಧನಸಹಾಯ ಮಾಡಿ ಆದಷ್ಟು ಸರ್ಕಾರದಿಂದ ಪರಿಹಾರ ಒದಿಗಿಸುವದಕ್ಕೆ ಒತ್ತಾಯಿಸುವದಾಗಿ ಭರವಸೆ ನೀಡಿದರು. ಮಾಜಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಸಿಂಗನಾಳ, ಗ್ರಾಮೀಣ ಮಂಡಲ ಅಧ್ಯಕ್ಷ ಡಿ.ಕೆ. ಆಗೋಲಿ, ಮುಖಂಡರಾದ ಮನೋಹರಗೌಡ ಹೇರೂರು, ವೆಂಕಟೇಶ ಈಳಿಗೇರ ಇಂದ್ರಪ್ಪ ಸುಣಗಾರ, ಯಂಕಪ್ಪ ಕಾರಟಗಿ, ಹುಲುಗಪ್ಪ ಪೂಜಾರ್, ವೆಂಕಟೇಶ ಈಳಿಗೇರ, ಲಕ್ಷ್ಮಣ ಸುಣಗಾರ, ನಾಗಪ್ಪ ಬೋವಿ, ವೆಂಕಟೇಶ ಗಾಡಿಬಾಯಿ, ಹನುಮನ ಗೌಡ, ಸಿದ್ದಪ್ಪ ಕಬ್ಬೇರ್ ಸೇರಿದಂತೆ ಅನೇಕ ಗಣ್ಯರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಸಾವಿನ ತನಿಖೆ ನಡೆಸಲು ಒತ್ತಾಯ



ಕುಷ್ಟಗಿ: ತಾಲೂಕಿನ ಹಿರೇತಮ್ಮಿನಾಳ ಗ್ರಾಮದಲ್ಲಿ ನನ್ನ ಪತಿ ಗ್ಯಾನಪ್ಪನ ಸಾವಿನ ತನಿಖೆ ನಡೆಸಬೇಕು ಎಂದು ಭೀಮವ್ವ ಕುರಿ ಆರೋಪಿಸಿದ್ದಾರೆ.

ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಫೆ.21ರಂದು ಗ್ಯಾನಪ್ಪನ ಕೊಲೆಗೈದು, ಮುಚ್ಚಿ ಹಾಕಿದ್ದಾರೆ. ಮೃತ ದೇಹ ಸಿಗಬಾರದೆಂದು ಇಂಗುಗುಂಡಿಯಲ್ಲಿ ಹೂತಿದ್ದಾರೆ.

ಗ್ರಾಮದ ಜಾತ್ರೆಯಲ್ಲಿ ನನ್ನ ಪತಿಗೆ ಮಧ್ಯ ಸೇವನೆ ಮಾಡಿಸಿ ಕೊಲೆಗೈದಿದ್ದಾರೆ. ಈವರಗೆ ಯಾವುದೇ ರೀತಿಯಲ್ಲಿ ಕೊಲೆಗೈದವರ ಬಗ್ಗೆ ಸುಳಿವು ದೊರೆತಿಲ್ಲ, ನನ್ನ ಪತಿ ಸಾವಿನ ಅನುಮಾನ ಆಸ್ಪದ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಕೂಡಲೇ ಸೂಕ್ತವಾಗಿ ತನಿಖೆ ನಡೆಸಿ ನ್ಯಾಯ ಕೊಡಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಕೊಪ್ಪಳದಲ್ಲಿ ಉಗ್ರವಾದ ಹೋರಾಟ ಮಾಡುವುದಾಗಿ ಆಗ್ರಹಿಸಿದ್ದಾರೆ.

ಈ ವೇಳೆ ಕುಟುಂಬದವರಾದ ಸಿದ್ರಾಮಪ್ಪ ಜರಗಡ್ಡಿ, ಅಮರಪ್ಪ ಡ್ಯಾಗಿ, ದೇವಮ್ಮ ಶಂಕ್ರಪ್ಪ ಜರಗಡ್ಡಿ ವಿರುಪಣ್ಣ ಯಮನಪ್ಪ ಕುರಿ ಇನ್ನಿತರರು ಇದ್ದರು.



ರಾಯಚೂರು: ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ನಾಗಲಾಪೂರು ಗ್ರಾಪಂ ವ್ಯಾಪ್ತಿಯ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆ ಶಿಲಾಯುಗದ ಸ್ಥಳಕ್ಕೆ ಜಿಪಂ ಸಿಇಒ ಈಶ್ವರಕುಮಾರ ಕಾಂದೂ ಭೇಟಿ ನೀಡಿ ಪರಿವೀಕ್ಷಣೆ ಮಾಡಿದರು.

ಬಿಜೆಪಿ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಕೊಪ್ಪಳ: ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಪುನರ್ ವಿಂಗಡಣೆ ವಿಚಾರಗಳನ್ನು ಕೇಂದ್ರ ಸರಕಾರ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ ಎಂದು ಆಗ್ರಹಿಸಿ ಮಹಿಳಾ ಕಾಂಗ್ರೆಸ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟಿಸಿದರು.

ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಜ್ಯೋತಿ ಎಂ. ಗೊಂಡಬಾಳ ಮಾತನಾಡಿ, ಮಹಿಳಾ ಮೀಸಲಾತಿ ಕಾನೂನು ಜಾರಿ ಮಾಡುವ ಪ್ರಾಮಾಣಿಕ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದ್ದರೆ, ಕ್ಷೇತ್ರ ಪುನರ್ ವಿಂಗಡಣೆ ವಿಷಯ ಜೋಡಿಸುವ ಅಗತ್ಯವಿರಲಿಲ್ಲ. ಶೇ. 33ರಷ್ಟು ಮೀಸಲಾತಿ ನೀಡುವ ಮಾತು ಕೇವಲ ರಾಜಕೀಯ ಗಿಮಿಕ್. ಕಳೆದ 2023ರಲ್ಲಿ ಇಂಡಿ ಮೈತ್ರಿಕೂಟದ ಎಲ್ಲ ಪಕ್ಷಗಳು ಮಹಿಳಾ ಮೀಸಲಾತಿಗೆ ಒಪ್ಪಿಗೆ ಸೂಚಿಸಿದ್ದರೂ, ಅದನ್ನು ಜಾರಿಗೆ ತರದೆ ಕ್ಷೇತ್ರ ಪುನರ್ ವಿಂಗಡಣೆ ಮುಂದಿಟ್ಟಿರುವುದು ಬಿಜೆಪಿಯ ರಾಜಕೀಯ ಷಡ್ಯಂತ್ರ ಎಂದು ದೂರಿದರು. ಮಹಿಳಾ ಕಾಂಗ್ರೆಸ್‌ನ ಕಾರಟಗಿ ಬ್ಲಾಕ್ ಅಧ್ಯಕ್ಷೆ ಸೌಮ್ಯ ಕಂದಗಲ್, ಜಿಲ್ಲಾ ಉಪಾಧ್ಯಕ್ಷೆ ಯಶೋಧ ಮರಡಿ, ದೀಪಾ ರಾಠೋಡ, ಬ್ಲಾಕ್ ಅಧ್ಯಕ್ಷೆ ಅಂಬಿಕಾ ವಳಕಲದಿನ್ನಿ, ಶಕುಂತಲಮ್ಮ, ಜಿಲ್ಲಾ ಗ್ಯಾರಂಟಿ ಪ್ರಾಧಿಕಾರ ಉಪಾಧ್ಯಕ್ಷ ಅರಳಿ ನಾಗರಾಜ, ಶರಣಪ್ಪ ಪರಕಿ, ಪುರಸಭೆ ಅಧ್ಯಕ್ಷ ಮಂಜುನಾಥ ಮೇಗೂರ, ಬ್ಲಾಕ್ ಅಧ್ಯಕ್ಷ ಶರಣೇಗೌಡ ಮಾಲೀ ಪಾಟೀಲ್, ಸುನಂದ ಚನ್ನಬಸಪ್ಪ, ಅಯ್ಯಪ್ಪ ಉಪ್ಪಾರ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ದೊಡ್ಡಬಸವ ಬೂದಿ, ಇದ್ದರು.



ಕೊಪ್ಪಳ: ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಪುನರ್ ವಿಂಗಡಣೆ ವಿಚಾರಗಳನ್ನು ಕೇಂದ್ರ ಸರಕಾರ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ ಎಂದು ಆಗ್ರಹಿಸಿ ಮಹಿಳಾ ಕಾಂಗ್ರೆಸ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟಿಸಿದರು.

ಹುಲಿಗೆಮ್ಮ ದೇವಿ ದೇವಸ್ಥಾನದ ಜಾತ್ರಾ ಮಹೋತ್ಸವ | ಅಧಿಕಾರಿಗಳಿಗೆ ಡಿಸಿ ಸೂಚನೆ

ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ

ಕೊಪ್ಪಳ: ಜಿಲ್ಲೆ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಹುಲಿಗಿ ಗ್ರಾಮದ ಶ್ರೀಹುಲಿಗೆಮ್ಮ ದೇವಿ ದೇವಸ್ಥಾನದ 2026ರ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.



ಮೇ 10ರಿಂದ ಮೇ 14ರವರೆಗೆ ಜಾತ್ರೆಗೆ ಆಗಮಿಸುವ ಭಕ್ತರಿಗೆ ಸೂಕ್ತ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮಹಾರಥೋತ್ಸವದ ನಂತರ ಒಂದು ತಿಂಗಳ ಕಾಲ ನಡೆಯುವ ಜಾತ್ರೆಗೆ ದೇವಸ್ಥಾನದಿಂದ 4 ಟ್ಯಾಂಕರ್‌ಗಳು, ಬಾಡಿಗೆ ರೂಪದಲ್ಲಿ 40, ಒಟ್ಟು 40 ಟ್ಯಾಂಕರ್‌ಗಳ ಮುಖಾಂತರ ಹೆಚ್ಚಿನ ನೀರಿನ ಸೌಲಭ್ಯ ಒದಗಿಸಲು ಅನುಕೂಲವಾಗುವಂತೆ ಮುಖ್ಯ ಜನಸಂದಣಿ ಇರುವ ಪ್ರದೇಶದಲ್ಲಿ ಸಿಸ್ಟನ್‌ಗಳನ್ನು ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಇತ್ತೀಚೆಗೆ ನಡೆದ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಅಲ್ಲದೇ ಬಾಡಿಗೆ ರೂಪದಲ್ಲಿ ಬ್ಯಾರಲ್‌ಗಳ ವ್ಯವಸ್ಥೆ ಮಾಡಿಕೊಂಡು, ವಾಹನ ನಿಲುಗಡೆ ಪ್ರದೇಶಗಳಲ್ಲಿ, ಶಿವಪುರ ರಸ್ತೆ, ಗವಿಮಠದ ಹತ್ತಿರ, ಹಳೇ ಮತ್ತು ಹೊಸ ತುಂಗಭದ್ರಾ ಪ್ರೌಢಶಾಲೆ ಮೈದಾನ, ಪ್ರಾಥಮಿಕ ಶಾಲೆ ಮೈದಾನ, ಕೋರಮಂಡಲ್ ಇಂಟರ್‌ನ್ಯಾಶನಲ್ ಫರ್ಟಿಲೈಸರ್ ಫ್ಯಾಕ್ಟರಿ ಮೈದಾನ, ನಂದಿ ವೃತ್ತ, ಹೊಸ ಅಂಬೇಡ್ಕರ್ ಕಾಲೋನಿ ಮುಂದೆ, ರೈಲ್ವೆ ಗೇಟ್ ಹತ್ತಿರ, ರೈಲ್ವೇ ಸ್ಟೇಷನ್ ಸರ್ಕಲ್ ಹತ್ತಿರ ಹಾಗೂ ಸತ್ಯನಾರಾಯಣ ದೊನ್ನಿ ಬಿಲ್ಡಿಂಗ್ ಹತ್ತಿರ, ದೇವಸ್ಥಾನದ ಮತ್ತು ದೇವರ ದರ್ಶನಕ್ಕೆ ಕ್ಯೂಲೈನ್‌ನಲ್ಲಿ ಹೋಗುವ ಭಕ್ತರಿಗೆ ಆವಶ್ಯಕತೆಗನುಗುಣವಾಗಿ ಟ್ಯಾಂಕರ್‌ಗಳನ್ನು ನಿಯೋಜಿಸಿಕೊಂಡು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸಹ ನಿರ್ಣಯಿಸಲಾಗಿದ್ದು, ನೀರಿನ ಪೈಪ್ ಲೈನ್ ಲೀಕೇಜ್ ಆಗದಂತೆ ನಿರ್ವಹಣೆ ಮಾಡಲು ನಾನ್-ಪೋರ್ಟೆಬಲ್ ನೀರು ಬಂದಲ್ಲಿ ಅದನ್ನು ಭಕ್ತರ ಬಳಕೆಗೆ ನೀಡಬಾರದು. ನೀರಿನ ಗುಣಮಟ್ಟವನ್ನು ಪ್ರತಿನಿತ್ಯ ಪರೀಕ್ಷಿಸಿ ಶುದ್ಧ ನೀರು ಮಾತ್ರ ಭಕ್ತರಿಗೆ ಬಳಕೆ ಮಾಡಲು ಹಾಗೂ ಕಲುಷಿತ ನೀರಿನಿಂದ ಯಾವುದೇ ರೀತಿಯ ಇನ್‌ಫೆಕ್ಷನ್ ಆಗದಂತೆ ಹ್ಯಾಲೋಜನ್ ಮಾತ್ರೆ ನೀರಿನಲ್ಲಿ ಬಳಸಲು ಹಾಗೂ ಇದರ ಬಗ್ಗೆ ಪ್ರಮಾಣ ಪತ್ರ

> ನೀರಿನ ಅರವಟ್ಟಿಗೆಗಳ ವ್ಯವಸ್ಥೆಗಾಗಿ ಸಿಬ್ಬಂದಿಗಳನ್ನು ನಿಯೋಜನೆ ಮಾಡಿಕೊಂಡು, ದೇವಸ್ಥಾನದಿಂದ ಭಕ್ತರಿಗೆ ಅನುಕೂಲವಾಗುವ ಕಡೆಗಳಲ್ಲಿ ವ್ಯವಸ್ಥಿತವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.
> ■ ಸುರೇಶ್ ಇಟ್ನಾಳ್, ಡಿಸಿ

ಒದಗಿಸಲು ಹುಲಿಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳಬೇಕು ಎಂದರು.

ಒಟ್ಟಾರೆ ಹುಲಿಗಿ ಗ್ರಾಮದ ಹುಲಿಗೆಮ್ಮ ದೇವಿ ದೇವಸ್ಥಾನದ 2026ರ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಯಾವುದೇ ರೀತಿಯ ಕುಡಿಯುವ ನೀರಿನ ಸಮಸ್ಯೆಗಳಾಗದಂತೆ ನೋಂಡಿಕೊಳ್ಳಬೇಕು. ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು, ಹುಲಿಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ.



ಯಲಬುರ್ಗಾ: ಸರಕಾರಿ ಆಯುರ್ವೇದ ಆಸ್ಪತ್ರೆ ವತಿಯಿಂದ ಪಟ್ಟಣದ ಮೊಗ್ಗಿ ಬಸವೇಶ್ವರ ಮಹಾರಥೋತ್ಸವ ಅಂಗವಾಗಿ ಉಚಿತ ತಪಾಸಣೆ, ಆಯುರ್ವೇದ ಹಾಗೂ ಹೋಮಿಯೋಪತಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಯಿತು. ಡಾ.ವಿವೇಕ ವಾಗುಲೆ, ಡಾ.ಶಿಲ್ಪಾ ಬಾಚಲಾಪುರ, ಡಾ. ಪುಷ್ಪಾ, ಈರಣ್ಣ ಅಂಗಡಿ ಫಾರ್ಮಸಿಸ್ಟ, ರುಕಿಯಾ, ಶಿವಾನಂದ, ರೇಣುಕಾ ಇದ್ದರು.

ಮಹಿಳೆಯರ ಹಕ್ಕು ಕಸಿದ ಕಾಂಗ್ರೆಸ್: ಬಾಲರಾಜ್



ಕಲಬುರಗಿ: ಮಹಿಳಾ ಮೀಸಲಾತಿ ವಿಧೇಯಕದ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ನಡೆ ಖಂಡಿಸಿ ನಗರದಲ್ಲಿ ಜೆಡಿಎಸ್ ಪಕ್ಷ ಜಿಲ್ಲಾ ಮಹಿಳಾ ಘಟಕದ ವತಿಯಿಂದ ಕಲಬುರಗಿ ನಗರದ ಸರ್ಧಾರ ವಲ್ಲಾಬಾಯಿ ಪಟೇಲ್ ವೃತ್ತದಿಂದ ಜಿಲ್ಲಾಧಿಕಾರಿಗಳ ವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಜೆಡಿಎಸ್ ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ ಪ್ರತಿಭಟನೆ ಉದ್ದೇಶಿಸಿ ಮಾತನಾಡಿ, 1996ರಿಂದ 2026 ಕರಾಳ ಇತಿಹಾಸ ಮರುಕಳಿಸಿದೆ. 3ದಶಕಗಳ ನಂತರವೂ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಮನಸ್ಥಿತಿ ಬದಲಾಗಿಲ್ಲ ಎನ್ನುವುದಕ್ಕೆ ಮೊನ್ನೆ ಲೋಕಸಭೆ ಮತ್ತೊಮ್ಮೆ ಸಾಕ್ಷಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿ ಅವರು,ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರಕಾರದ ಸಮಯದಲ್ಲೂ ಲೋಕಸಭೆಯಲ್ಲಿ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿತ್ತು ಎಂದರು.

ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲು ಐತಿಹಾಸಿಕ ಅನ್ಯಾಯ ಸರಿಪಡಿಸಲು ಪ್ರಧಾನಿ ನರೇಂದ್ರ ಮೋದಿ ದಿಟ್ಟಹೆಜ್ಜೆ ಇರಿಸಿದ್ದರು. ಪುನಾ ಅದೇ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ಸೇರಿ ಪ್ರಧಾನಿ ಪ್ರಯತ್ನಕ್ಕೆ ತಡೆಯೊಡ್ಡಿವೆ ಎಂದು ಕಿಡಿಕಾರಿದರು.

ಜಿಲ್ಲಾ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಮಹೇಶ್ವರಿ ವಾಲಿ ಮಾತನಾಡಿ, ರಾಜಕೀಯ ಮೀಸಲಾತಿ ಲಭಿಸುವ ಹಿನ್ನೆಲೆ ನಾವು ಸಂಭ್ರಮಾಚರಣೆಗೆ ಸಿದ್ಧತೆ ಮಾಡಿಕೊಂಡಿದ್ದೆವು.ಆದು ಈಗ ಆಕ್ರೋಶವಾಗಿ ಪರಿವರ್ತನೆಗೊಂಡಿದೆ. ಇದು ಕೇವಲ ಮಸೂದೆ ವಿಫಲತೆ ಅಲ್ಲ, ಮಹಿಳೆಯರ ಹಕ್ಕನ್ನು ನಿರ್ಲಕ್ಷ್ಯ ಮಾಡುವ ಕಾಂಗ್ರೆಸ್‌ನ್ನು ಜನ ಕ್ಷಮಿಸುವುದಿಲ್ಲ ಎಂದರು.

ಪ್ರತಿಭಟನೆಯಲ್ಲಿ ಬಸವರಾಜ ಬೀರಬಿಟ್ಟೆ ಶಂಕರಗೌಡ ಪಾಟೀಲ, ಮಲ್ಲಿಕಾರ್ಜುನ ಸಂಗಣಿ, ಮಹಾಂತಪ್ಪ ಮದರಿ, ವಿಠ್ಠಲ್ ಜಾಧವ, ರವಿಶಂಕರ್ ರೆಡ್ಡಿ, ಮಂಜುಗೌಡ ಪಾಟೀಲ, ರಿಜವಾನ್ ಅಹೆಮದ್, ಪ್ರವೀಣ ಜಾಧವ, ರಾಜೇ ಪಟೇಲ, ಕಿರಣ್ ಪಾಟೀಲ, ಶಿವಲಿಂಗಪ್ಪ ಪಾಟೀಲ, ಅನ್ವರ್ ಪಟೇಲ, ಸಾಬೀರ್ ಗನಿ, ನಗಯ್ಯ ಸ್ವಾಮಿ, ನಾಗಣ್ಣ ವಾರದ ಶ್ರೀಧರ್, ಮಹೇಶ್ವರಿ ವಾಲಿ, ಅನುರಾಧ, ಮಹನಂದ ಪಡಶೆಟ್ಟಿ ಚಂದ್ರಕಲಾ, ಪದ್ಮಿನಿ, ಫತ್ರುಬಿ, ವಿಜಯಶ್ರೀ, ಮಹಾದೇವಿ, ಗೀತಾ, ಸಂಗೀತಾ, ಭಾಗ್ಯಶ್ರೀ,ಮಮತಾ, ಬಬಿತಾ,ಮಲ್ಲಮ್ಮ, ಪ್ರಭಾವತಿ, ನೀಲಮ್ಮ, ಪೂರ್ಣಿಮಾ, ಪ್ರೇಮಾ ಇತರರು ಉಪಸ್ಥಿತರಿದ್ದರು.

ಮೇ 16, 17ರಂದು ಕನಕಗಿರಿ ಉತ್ಸವ

ಕನಕಗಿರಿ: ಕನಕಾಚಲಪತಿ ಜಾತ್ರೆ ಮತ್ತು ಉತ್ಸವ ಎರಡು ಏಕಕಾಲಕ್ಕೆ ನಡೆದಲ್ಲಿ ಜಾತ್ರೆಗೆ ಸೇರುವ ಜನತೆಗೆ ಉತ್ಸವ ನೋಡಲು ಅನುಕೂಲವಾಗಲಿದೆ ಎಂದು ಯೋಜಿಸಿ ಮತ್ತು ಉತ್ಸವಕ್ಕೆ ಬರುವ ಜನತೆ ಜಾತ್ರೆಯನ್ನು ಸಹ ನೋಡಬೇಕು ಎಂದು ಆಶಿಸಿ ಜಾತ್ರೆ ಸಂದರ್ಭದಲ್ಲಿ ಉತ್ಸವ ನಿಗದಿಗೆ ಯೋಜಿಸಲಾಗಿತ್ತು ಎಂದು ತಿಳಿಸಿದರು. ಸಾರ್ವಜನಿಕರ ಸಲಹೆಯಂತೆ ಮೇ 9 ಮತ್ತು 10ರ ಬದಲಾಗಿ ಮೇ 16 ಮತ್ತು ಮೇ 17 ರಂದು ಉತ್ಸವ ಮಾಡಲಾಗುವುದು ಎಂದು ವಾರಿ ಸಚಿವ ಶಿವರಾಜ ಎಸ್.ತಂಗಡಗಿ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ಎಸ್.ತಂಗಡಗಿ ಅಧ್ಯಕ್ಷತೆಯಲ್ಲಿ ಕನಕಗಿರಿ ಉತ್ಸವ-2026 ಆಚರಣೆ ಕುರಿತು ಕನಕಗಿರಿ ಪಟ್ಟಣದ ಕನಕಾಚಲಪತಿ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಈ ಬಾರಿಯ ಉತ್ಸವದಲ್ಲಿ

ಬೆಳಗ್ಗೆಯಿಂದ ಸಂಜೆವರೆಗೆ ಎರಡು ದಿನ ಹೆಲಿಕ್ಯಾಪ್ಟರ್ ರೈಡ್ ವ್ಯವಸ್ಥೆ ಮಾಡಲಾಗುವುದು. ಕಳೆದ ಬಾರಿಗಿಂತ ಈ ಬಾರಿ ಅದ್ದೂರಿ ಉತ್ಸವ ಆಯೋಜನೆ ಮಾಡಲಾಗುವುದು. ಮೇ 14 ಮತ್ತು ಮೇ 15ರಂದು ಕ್ರೀಡಾಕೂಟ ನಡೆಯಲಿವೆ ಎಂದರು.

ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಮಾತನಾಡಿ, ಉತ್ಸವಕ್ಕಾಗಿ 6 ಕೋಟಿ ರೂ. ಅನುದಾನ ನಿಗದಿಯಾಗಿದೆ. 18 ಸಮಿತಿ ರಚಿಸಿದ್ದು, ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳುವುದಾಗಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್.ಅರಸಿದ್ದಿ, ಪಪಂ ಅಧ್ಯಕ್ಷ ತನುಶ್ರೀ ರಾಮಚಂದ್ರ, ಉಪಾಧ್ಯಕ್ಷ ಕಂಠೀರಾವ್, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಡಿವೈಎಸ್ಪಿ ನ್ಯಾಮಗೌಡರ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಸಹಸ್ರಾರು ಭಕ್ತರ ಮಧ್ಯೆ ಸಂಭ್ರಮದ ವೀರಭದ್ರೇಶ್ವರ ರಥೋತ್ಸವ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಿಡಗುಂದಾ ಗ್ರಾಮದಲ್ಲಿ ಸಹಸ್ರಾರು ಭಕ್ತರ ವೀರಭದ್ರೇಶ್ವರ ಮಹಾರಾಜ ಕೀ ಜೈ ಜೈ ಘೋಷಣೆ ಮಧ್ಯೆ ವೀರಭದ್ರೇಶ್ವರರ ಭವ್ಯ ರಥೋತ್ಸವ ಅದ್ದೂರಿಯಾಗಿ ನೆರವೇರಿತು. ಜಾತ್ರೆ ನಿಮಿತ್ತ 15 ದಿನದಿಂದ ಹಲವು ಧಾರ್ಮಿಕ ಕಾರ್ಯಕ್ರಮ ಸೇರಿ ಪಲ್ಲಕ್ಕಿ ಮೆರವಣಿಗೆ, ಉಚ್ಚಾಯಿ ಮೆರವಣಿಗೆ ನಡೆದವು. ದೇವಸ್ಥಾನದಿಂದ ಮೆರವಣಿಗೆ ಮೂಲಕ ರಥದ ಕಳಸ ತರಲಾಯಿತು. ತಳವಾರ ಮನೆಯಿಂದ ಕುಂಭ ಹಾಗೂ ಕುಂಬಾರರ ಮನೆಯಿಂದ ದಿವಟಿಗೆಗೆ ಎಣ್ಣೆ ತರಲಾಯಿತು. ಉಮೇಶ್ವರ ಮಹಾಶ್ರೀಗಳ ಹಾಗೂ ಗ್ರಾಮದ ಪ್ರಮುಖರು ಅದ್ದೂರಿ ರಥೋತ್ಸವಕ್ಕೆ ಚಾಲನೆ ನೀಡಿದರು.



ಚೊಚ್ಚಲ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ

ಯಲಬುರ್ಗಾ: ಪ್ರತಿ ವರ್ಷ ನಮ್ಮ ಇನ್ನರ್ ವ್ಹೀಲ್ ಕ್ಲಬ್ ವತಿಯಿಂದ ಮುತ್ತೈದೆಯರಿಗೆ ಉಡಿ ತುಂಬುವ ಜತೆಗೆ ಚೊಚ್ಚಲ ಗರ್ಭಿಣಿಯರಿಗೆ ಸಿಮಂತ ಕಾರ್ಯ ಮಾಡುವುದಕ್ಕೆ ಜಾತ್ರಾ ಸಮಿತಿ ಹೆಚ್ಚು ಸಹಾಯ ಕಲ್ಪಿಸಿಕೊಡುತ್ತಿದ್ದಾರೆ. ಎಂದು ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಚನ್ನಮ್ಮ ಪಾಟೀಲ ಹೇಳಿದರು.

ಪಟ್ಟಣದ ಶ್ರೀಮೊಗ್ಗಿ ಬಸವೇಶ್ವರ ಜಾತ್ರಾಮಹೋತ್ಸವ ಇನ್ನರ್ ವ್ಹೀಲ್ ಕ್ಲಬ್ ಸಹಯೋಗದಲ್ಲಿ ನಡೆದ ಮುತ್ತೈದೆಯರಿಗೆ ಉಡಿ ತುಂಬುವ ಹಾಗೂ ಚೊಚ್ಚಲ ಗರ್ಭಿಣಿಯರಿಗೆ ಸಿಮಂತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಮಹಿಳೆಯರು ಸೇರಿಕೊಂಡು ಯಾರಿಂದಲೂ ದೇಣಿಗೆ ಪಡೆಯದೆ ನಮ್ಮ ಸ್ವಂತು ಖರ್ಚಿನಲ್ಲಿ ಇಂತಹ ಅನೇಕ ಕಾರ್ಯಕ್ರಮ ಮಾಡುತ್ತಿದ್ದೇವೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಎಂದರು.

ಪತ್ರಕರ್ತರ ಸಂಘದ ಅಧ್ಯಕ್ಷ ಶಿವಮೂರ್ತಿ ಇಟಗಿ ಮಾತನಾಡಿ, ಗರ್ಭಿಣಿ ಮಹಿಳೆಯರು ಮಿತವ್ಯಯ ಆಹಾರ ಸೇವಿಸುವುದರಿಂದ ಮಕ್ಕಳ ಸದೃಢ ಬೆಳವಣಿಗೆಗೆ ಹೆಚ್ಚು ಸಹಕಾರಿಯಾಗಲಿದೆ.ಮಕ್ಕಳಿಗೆ ಸಂಸ್ಕಾರ ಕಲಿಸುವ ಪರಿಪಾಠವನ್ನು ತಾಯಂದಿರು ರೂಢಿಸಿಕೊಳ್ಳಬೇಕು. ಈ ಕ್ಲಬ್‌ನ ವಿಶಿಷ್ಟ ಪದ್ಧತಿ ಏನೆಂದರೆ ಒಂದು ವರ್ಷಕ್ಕೆ ಮಾತ್ರ ಅಧ್ಯಕ್ಷರಾಗಿರುತ್ತಾರೆ. ಮುಂದಿನ ವರ್ಷಕ್ಕೆ ಮತ್ತೆ ಬೇರೆ ಮಹಿಳೆ ಅಧ್ಯಕ್ಷರಾಗುತ್ತಿರುವುದು ಸಂಘದ ಬೆಳವಣಿಗೆ,ಪಾರದರ್ಶಕತೆಗೆ ಇನ್ನರ್ ಕ್ಲಬ್ ಸಾಕ್ಷಿಯಾಗಿದೆ ಎಂದು ಹೇಳಿದರು.



ಈ ವೇಳೆಯಲ್ಲಿ 20ಕ್ಕೂ ಹೆಚ್ಚು ಮುತ್ತೈದೆಯರಿಗೆ ಉಡಿ ತುಂಬುವ ಹಾಗೂ ಚೊಚ್ಚಲ ಗರ್ಭಿಣಿಯರಿಗೆ ಸಿಮಂತ ಕಾರ್ಯಕ್ರಮ ನಡೆಯಿತು.

ಅತಿಥಿಗಳಾಗಿ ಕ್ಲಬ್‌ನ ಪದಾಧಿಕಾರಿ ಮಂಜುಳಾ ಎಸ್.ಶಿವನಗೌಡ್ರ, ಜಾತ್ರಾ ಸಮಿತಿ ಅಧ್ಯಕ್ಷ ಮಂಜುನಾಥ ಅಧಿಕಾರಿ ಹಾಗೂ ಪಪಂ ಮಾಜಿ ಅಧ್ಯಕ್ಷ ಸುರೇಶಗೌಡ ಶಿವನಗೌಡ್ರ, ಸವಿತಾ ಮುರಡಿಮಠ, ಸುನೀತಾ ಪತಂಗರಾಯ,ಲಲಿತಾ ಕಲ್ಯಾಣಿ,ನಿರ್ಮಲಾ ಗೋಣಿ,ಶಾರದಾ ಕೊಣ್ಣೂರ,ಉಮಾ ಹೊಸ್ಮನಿ,ಗೀತಾ ಓಜನಹಳ್ಳಿ,ನಾಗರತ್ನ ನೂಲ್ವಿ, ಗಂಗಮ್ಮ ಉಮಚಗೇರಿ, ಉಮಾ ಬೇವಿನಮಟ್ಟಿ ಹಾಗೂ ಕೆ.ಎನ್.ಮುಳಗುಂದ ಮತ್ತಿತರರು ಇದ್ದರು.

ಭೂಮಿ ಸಂರಕ್ಷಣೆ ನಮ್ಮೆಲ್ಲರ ಹೊಣೆ: ರಂಗಸ್ವಾಮಿ

ಕುಕನೂರು: ಭೂಮಿ ಸಂರಕ್ಷಣೆ ನಮ್ಮೆಲ್ಲೇರ ಹೊಣೆ ಎಂದ ಹಿರಿಯ ಪ್ರಧಾನ ಸಿವಿಲ್ ನ್ಯಾಯಾಧೀಶರು ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷ ರಂಗಸ್ವಾಮಿ ಜೆ ಹೇಳಿದರು.

ತಾಲೂಕಿನ ಗ್ರಾಮದ ಮೋಚಿ ಸಮುದಾಯ ಭವನದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ನ್ಯಾಯವಾದಿಗಳ ಸಂಘ ತಾಪಂ, ಗ್ರಾಪಂ, ಕಂದಾಯ ಇಲಾಖೆ ಸಂಯುಕ್ತದಲ್ಲಿ ಭೂ ದಿನವನ್ನು ಆಚರಣೆಯಲ್ಲಿ ಮಾತನಾಡಿ, ಭೂಮಿ ಇಲ್ಲದಿಂದ್ದರೆ ನಾವು ಬದುಕಲು ಸಾಧ್ಯವಿಲ್ಲ ಪರಿಸರ ರಕ್ಷಣಾ ಮಾಡಿದಾಗ ಮಾತ್ರ ಭೂಮಿ ಉಳಿಯುತ್ತದೆ ಇಲ್ಲದಿದ್ದರೆ ಭೂಮಿ ಜೊತೆಗೆ ನಮ್ಮನ್ನು ನಾವು ರಕ್ಷಣೆ ಮಾಡುವುದು ಕಷ್ಟವಾಗುವುದು ಭೂಮಿ ತನ್ನ ಸತ್ವ ಕಳೆದುಕೊಳ್ಳುತ್ತಿದೆ. ರಕ್ಷಣೆ ಮಾಡಲು ಮುಂದಾಗೋಣ. ತಾವೆಲ್ಲರೂ ಭೂಮಿಯನ್ನ ರಕ್ಷಣೆ ಮಾಡಿ ಪರಿಸರವನ್ನ ರಕ್ಷಿಸಬೇಕು.



ನಮ್ಮ ಬೆಳೆಗಳಿಗೆ ರಾಸಾಯನಿಕ ಗೊಬ್ಬರ ಬಳಸದೆ ಸಾವಯವ ಕೃಷಿ ಅಳವಡಿಸಿಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನ ಕುಕನೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ ಬಿರಾದರ ಪಾಟೀಲ ವಹಿಸಿದ್ದರು. ಅಪರ ಸರಕಾರಿ ವಕೀಲ ಮಲ್ಲನಗೌಡ ಎಸ್.ಪಾಟೀಲ, ಜಂಟಿ ಕಾರ್ಯದರ್ಶಿ ಹಸನಸಾಬ್ ನದಾಫ್, ಗ್ರಾಮ ಪಂಚಾಯತಿ ಪಿಡಿಒ ನೀಲಮ್ಮ, ಉಪ ತಹಶೀಲ್ದಾರ್ ಬಸವರಾಜ ಮಂಗಳೂರು, ನ್ಯಾಯಾಲಯದ ಸಿಬ್ಬಂದಿಗಳಾದ ರಾಘವೇಂದ್ರ, ಕೋಳಿಹಾಳ, ವಿನಾಯಕ ಹಾಜರಿದ್ದರು.

ಅಪರ ಸರಕಾರಿ ವಕೀಲ ಮಲ್ಲನಗೌಡ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ ಎಸ್.ಎಸ್. ಹೊಂಬಳ ಮಾತನಾಡಿದರು. ಪಿ.ಡಿ.ಓ ನೀಲಮ್ಮ ಚಳಗೇರಿ ಕಾರ್ಯಕ್ರಮ ನಿರ್ವಹಿಸಿದರು.

ಶಂಕರಾಚಾರ್ಯರ ಕೊಡುಗೆ ಅಪಾರ

ರಾಯಚೂರು: ಶಂಕರಾಚಾರ್ಯರು ಸನಾತನ ಧರ್ಮ ರಕ್ಷಣೆಗಾಗಿ ಮಾಡಿದ ಮಹಾನ್ ಕಾರ್ಯ ಇಂದಿಗೂ ಶಾಶ್ವತವಾಗಿದೆಎಂದು ರಾಯಚೂರು ನಗರಕ್ಷೇತ್ರದ ಶಾಸಕ ಡಾ.ಶಿವರಾಜ ಪಾಟೀಲ ಹೇಳಿದರು. ನಗರದ ಗಾಜಗಾರಪೇಟೆಯ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಜಿಲ್ಲಾಡಳಿ, ಜಿಲ್ಲಾ ಪಂಚಾಯತಿ, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶಂಕರಾಚಾರ್ಯರ ಜಯಂತಿಯಲ್ಲಿ ಮಾತನಾಡಿದರು.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರಿನ ಧಾರ್ಮಿಕ ಉಪನ್ಯಾಸಕ ಹಾಗೂ ಪುರೋಹಿತ ಸುಪ್ರತೀಕ ಭಟ್ ಉಪನ್ಯಾಸ ನೀಡಿದರು. ಈ ವೇಳೆ ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ಪರಶುರಾಮ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಪ್ರಾಣೇಶ ಕುಲಕರ್ಣಿ, ಮಹಾನಗರ ಪಾಲಿಕೆಯ ಕಚೇರಿ ವ್ಯವಸ್ಥಾಪಕ ರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯವಸ್ಥಾಪಕ, ಶೈಲಜಾ ಕುಲಕರ್ಣಿ, ಕನ್ನಡ, ಸಂಸ್ಕೃತಿ ಇಲಾಖೆ ದ್ರಾಕ್ಷಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಹ ಕಾರ್ಯದರ್ಶಿ ದಂಡಪ್ಪ ಬಿರಾದಾರ, ಸಮಾಜದ ಮುಖಂಡರಾದ ಹನುಮಂತ ರಾವ್, ಕರಪ್ಪಮೂರ್ತಿ ಹೆಬಸೂರು, ಈಶ್ವರ ಹೆಗ್ಗಡೆ, ಶಿವಪ್ರಸಾದ್, ವಸಂತ ರಾವ್, ರಮೇಶ ಕುಲಕರ್ಣಿ, ಜಗನ್ನಾಥ ದೇಸಾಯಿ, ಶಾರದಾ ಮಹಿಳಾ ಮಂಡಳಿ, ಮಹಿಳಾ ಮಂಡಳಿಯ ಸದಸ್ಯರು ಇತರರಿದ್ದರು.



ವಿಶ್ವಕರ್ಮ ಜನಾಂಗ ಅಭಿವೃದ್ಧಿ ಹೊಂದಲಿ



ಕನಕಗಿರಿ: ಸೃಷ್ಟಿಕರ್ತ ವಿಶ್ವಕರ್ಮ ಜನಾಂಗ ಹೆಚ್ಚು ಅಭಿವೃದ್ಧಿ ಹೊಂದಲಿ ಎಂದು ಸಚಿವ ಶಿವರಾಜ ಎಸ್.ತಂಗಡಗಿ ಹೇಳಿದರು.

ಪಟ್ಟಣದ ಜಗದ್ಗುರು ಮೌನೇಶ್ವರ ಮಠದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಯೋಜನೆ ಅಡಿ 25 ಲಕ್ಷ ರೂ. ಅನುದಾನದಲ್ಲಿ ಮೌನೇಶ್ವರ ಸೇವಾ ಸಮಿತಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಶ್ರಮ ಜೀವಿಗಳಲ್ಲಿ ಒಂದಾದ ವಿಶ್ವಕರ್ಮ ಜನಾಂಗ ಒಂದಾಗಿದ್ದು, ಅವರ ಅಭಿವೃದ್ಧಿಗೆ ನನ್ನ ಶ್ರೇಯಸ್ಸು ಯಾವಾಗಲೂ ಇರುತ್ತದೆ ಎಂದರು.

ನಾಗಮೂರ್ತಿ ಸ್ವಾಮಿ, ಬ್ರಹ್ಮಯ್ಯ ಸ್ವಾಮಿ, ದಿವಾಕರ ಸ್ವಾಮಿ, ನರಸಿಂಹ ಆಚಾರಿ ಲೇಬಗಿರಿಮಠ ಇವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸಮಾಜ ಕಲ್ಯಾಣ ಇಲಾಖೆ ವತಿಯಿಂದ 5 ಕೋಟಿ 56 ಲಕ್ಷ ರೂಪಾಯಿ ವೆಚ್ಚದಲ್ಲಿ ಕನಕಗಿರಿ ಪಟ್ಟಣದ ಕಿತ್ತೂರ್ ರಾಣಿ ಚೆನ್ನಮ್ಮ ವೃತ್ತ ಹತ್ತಿರ ಡಾ.ಅಂಬೇಡ್ಕರ್ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯದ ಕಟ್ಟಡ ಕಾಮಗಾರಿಗೆ ಚಾಲನೆ ನೀಡಿದರು. ತಹಸಿಲ್ದಾರ್ ವಿಶ್ವನಾಥ್ ಮುರುಡಿ, ತಾ.ಪಂ.ಅಧಿಕಾರಿ ಕೆ ರಾಜಶೇಖರ, ಪ.ಪಂ.ಅಧ್ಯಕ್ಷ ತನುಶ್ರೀ ಉಪಾಧ್ಯಕ್ಷ ಕಂಠಿ ರಂಗ ಪ್ರಮುಖ ಕೆ.ಗಂಗಾಧರ ಸ್ವಾಮಿ, ವೀರೇಶ ಸಮಗಂಡಿ, ರಮೇಶ ನಾಯಕ, ಸಿದ್ದಪ್ಪ ನಿರಲೂಟಿ, ಬಸಂತಗೌಡ, ರವಿ ಪಾಟೀಲ, ವಿಶ್ವಕರ್ಮ ಸಮಾಜದ ಮುಖಂಡರು ಮತ್ತಿತರರಿದ್ದರು.

ಕಿರುಸುದ್ದಿ

ಸರ್ಕಾರಿ ಜಮೀನು ಒತ್ತುವರಿ ವಿರುದ್ಧ ಜಿಲ್ಲಾಡಳಿತ ಸಮರ



ಬಳ್ಳಾರಿ: ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡವರ ವಿರುದ್ಧ ಜಿಲ್ಲಾಡಳಿತ ಕಠಿಣ ಕ್ರಮಕ್ಕೆ ಮುಂದಾಗಿದ್ದು, ಬುಧವಾರ ಅಂದ್ರಾಳ್ ಬೈಪಾಸ್ ರಸ್ತೆ ಸಮೀಪ ಕಾರ್ಯಾಚರಣೆ ನಡೆಸಿತು. ಅಂದ್ರಾಳ್ ಗ್ರಾಮದ ಸರ್ವೇ ನಂಬರ್ 1ರಲ್ಲಿ ಸುಮಾರು 3 ಎಕರೆಗೂ ಹೆಚ್ಚು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಳ್ಳಲಾಗಿತ್ತು. ಇಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಸಿಮೆಂಟ್ ಕಟ್ಟಡ, ಇತರ ನಿರ್ಮಾಣಗಳನ್ನು ಜಿಲ್ಲಾಡಳಿತವು ಜೆಸಿಬಿಯಿಂದ ತೆರವುಗೊಳಿಸಿದೆ. ಈ ವೇಳೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಎನ್. ಮಾತನಾಡಿ, ಜಿಲ್ಲಾಡಳಿತದ ಈ ಕ್ರಮವು ಸರ್ಕಾರಿ ಆಸ್ತಿ ರಕ್ಷಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆ ಇಟ್ಟಿದೆ. ಒತ್ತುವರಿಗೆ ಯಾರು ಪ್ರಚೋದನೆ ನೀಡುತ್ತಿದ್ದರೂ ಅವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದರು. ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದರೆ ವರ ವಿರುದ್ಧ ಕ್ರಮ ಕೈಗೊಳ್ಳುವುದು ಎಂದು ಎಚ್ಚರಿಸಿದರು. ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಡಿಡಿಎಲ್ಆರ್ ಪ್ರಮೋದ್ ಸೇರಿದಂತೆ ಬಳ್ಳಾರಿ ತಾಲ್ಲೂಕು ತಹಸೀಲ್ದಾರ ಕಚೇರಿಯ ಅಧಿಕಾರಿಗಳು, ಸಿಬ್ಬಂದಿಗಳುಇತರರು ಇದ್ದರು.

ದೇವಸ್ಥಾನ ಉದ್ಘಾಟನಾ

ಗಾದಿಗನೂರು: ಹೊಸಪೇಟೆ ತಾಲೂಕು ಗಾದಿಗನೂರು ಗ್ರಾಮದಲ್ಲಿ ನೂತನವಾಗಿ ಕಟ್ಟಿರುವ ಅಣ್ಣಪ್ಪ ಸ್ವಾಮಿ ದೇವಸ್ಥಾನ ಉದ್ಘಾಟನಾ ಮತ್ತು ಮೂರ್ತಿ ಪ್ರಾಣ ಪ್ರತಿಷ್ಠಾಪನೆ ವಿಜೃಂಭಣೆಯಿಂದ ಜರುಗಿತು. ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಜರುಗಿದವು. ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ಹಾಗೂ ಊರಿನ



ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತನು ಮನ ಧನ ಸೇವೆ ಸಲ್ಲಿಸಿದರು. ಕಾರ್ಯಕ್ರಮಕ್ಕೆ ಅನೇಕ ಗಣ್ಯವ್ಯಕ್ತಿಗಳು ಆಗಮಿಸಿದ್ದರು. ಉದ್ಘಾಟನೆ ನಂತರ ಬಂದಿರುವಂತ ಭಕ್ತಾದಿಗಳಿಗೆ ಪ್ರಸಾದ ಸೇವೆ ನಡೆಯಿತು. ಊರಿನ ಮುಖಂಡರು ಸಜ್ಜನರು ಗಣ್ಯ ವ್ಯಕ್ತಿಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದಕ್ಕೆ ಅಣ್ಣಪ್ಪ ಸ್ವಾಮಿ ಸೇವಾ ಸಮಿತಿ ಧನ್ಯವಾದಗಳು ತಿಳಿಸಿದರು.

ಅಕ್ರಮ ಪಡಿತರ ಅಕ್ಕಿ ಸಾಗಾಟ: ಆಹಾರ ನಿರೀಕ್ಷರ ದಾಳಿ



ಕುರುಗೋಡು: ತಾಲೂಕಿನ ಸಮೀಪದ ನೆಲ್ಲುಡಿ ಗ್ರಾಪಂ ಕೊಟ್ಟಾಲ್ ಗ್ರಾಮದ ತುಂಗಭದ್ರಾ ಕೆಳ ಮಟ್ಟದ ವಿತರಣೆ ದೊಡ್ಡ ಕಾಲುವೆ ಅಕ್ರಮ ಪಡಿತರ ಅಕ್ಕಿ ಸಾಗಣೆ ವಶ ಪ್ರಕರಣ ವಶಪಡಿಸಿ ಕೊಳ್ಳಲಾಗದೆ. ಈ ಘಟನೆ ಕುರುಗೋಡು ಪೊಲೀಸ್ ಠಾಣಾ ಸರಹದ್ದಿನ 132 ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಬರುವ ನೆಲ್ಲುಡಿ ಗ್ರಾಪಂ ವ್ಯಾಪ್ತಿ ಕೊಟಾಲ್ ಗ್ರಾಮದ ದೊಡ್ಡ ಕಾಲುವೆ ಬಳಿ ಅಕ್ರಮವಾಗಿ ಲಾರಿಯಲ್ಲಿ ಪಡಿತರ ಅಕ್ಕಿ ಸಾಗಣೆ ಮಾಡುತ್ತಿದ್ದಾಗ, ಈ ವೇಳೆಯಲ್ಲಿ ಶೇಕ್ಷಾವಲಿ ಆದೋನಿ, ಆಂಧ್ರಾಪ್ರದೇಶ ವಿನೋದ್ ಮಾನ್ವಿ, ರಾಯಚೂರು ಜಿಲ್ಲೆ ಹಾಲದಾಳ್ ವೀರಭದ್ರ, ಮಾನ್ವಿ, ರಾಯಚೂರು ಜಿಲ್ಲೆ ಅಕ್ರಮವಾಗಿ ಪಡಿತರ ಅಕ್ಕಿ ಸಾಗಣೆ ಮಾಡುತ್ತಿದ್ದಾಗ, ಅಕ್ರಮವಾಗಿ ಪಡಿತರ ಅಕ್ಕಿ ಸಾಗಣೆ ಮಾಡುತ್ತಿದ್ದಾಗ ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ತಾಲೂಕಿನ ಜಿಲ್ಲೆಯ ಕುರುಗೋಡು ಪಟ್ಟಣ ಪೊಲೀಸ್ ಠಾಣೆಯ ಪಿ.ಎಸ್.ಐ ಸುಪ್ರೀತ್.ವಿರುಪಾಕ್ಷ ವಿಜಯಕುಮಾರ, ರಾಜಶೇಖರ, ಅಂಜಿನಿ ಹಾಗೂ ಬಿ.ವಿರೂಪಾಕ್ಷಗೌಡ, ಆಹಾರ ನೀರಿಕ್ಷಕರುರವರುಗಳು ಜಂಟಿಯಾಗಿ ದಾಳಿ ಮಾಡಿ. ರೂ 87300 ಮೌಲ್ಯದ, 17.460 ಟನ್ ಪಡಿತರ ಅಕ್ಕಿ, ಒಂದು ಇಚರ್ ಕಂಪನಿಯ ಮಿನಿ ಲಾರಿ ಜಪ್ತುಪಡಿಸಿಕೊಳ್ಳಲಾಗಿದೆ. 3 ಜನ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಕುರುಗೋಡು ಪೊಲೀಸ್ ಠಾಣೆಯಲ್ಲಿ ಅಪರಾಧ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಬಳ್ಳಾರಿ: ಆಂಧ್ರ ಪ್ರದೇಶದ ಅನಂತಪುರ ಮತ್ತು ಕರ್ನೂಲ್ ಜಿಲ್ಲೆಗಳ ಗಡಿನಾಡ ಕನ್ನಡ ಶಾಲಾ ಶಿಕ್ಷಕರ ಸಂಘದ ರಾಜ್ಯ ಮಟ್ಟದ ನಿರ್ದೇಶಕರಾಗಿ ಆಯ್ಕೆಯಾದ ಗಿರಿಜಾಪತಿ ಸ್ವಾಮಿ ಅವರನ್ನು ಇಲ್ಲಿನ ತುಂಗಭದ್ರಾ ರೈತ ಸಂಘದ ಕಚೇರಿಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ನೆರೆಯ ಆಂಧ್ರದ ಹಿರೇಹಾಳನ ಹಿರಿಯ ಶಿಕ್ಷಕರನ್ನು ಅನೇಕ ಗಣ್ಯರು ಸನ್ಮಾನಿಸಿದರು. ಸಿದ್ದಯ್ಯ ಸ್ವಾಮಿ, ಶರಣಯ್ಯ ಸ್ವಾಮಿ, ಹೊನ್ನನಗೌಡ, ದರೂರು ಶಾಂತನಗೌಡ, ಗಂಗಾವತಿ ವೀರೇಶ್, ಜಾಲಿಹಾಳ ಶ್ರೀಧರ್‌ಗೌಡ, ಬಸವರಾಜ ಸ್ವಾಮಿ, ಶಾನವಾಸ್ ಪುರ ರಾಜಶೇಖರ ಗೌಡ, ಸೋಮಸಮುದ್ರ ಲಿಂಗಾರೆಡ್ಡಿ, ಶಿವಶಂಕರಗೌಡ ಸೇರಿದಂತೆ ಇತರರಿದ್ದರು.

ಹಿಂದೂ ಧರ್ಮ ಉಳಿವಿಗೆ ಶಂಕರರ ಕೊಡುಗೆ ಅಪಾರ

ಯಾದಗಿರಿ: ಭರತ ಭೂಮಿಗೆ ಜಗದ್ಗುರು ಆದಿ ಶಂಕರಾಚಾರ್ಯರ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಹೇಳಿದರು.

ಜಿಲ್ಲಾಡಳಿತ, ಜಿಪಂ, ನಗರಸಭೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಜಿಲ್ಲಾ ಕಸಾಪ ಭವನದ ಸಭಾಂಗಣದಲ್ಲಿ ಆಯೋಜಿಸಿದ್ದ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಹಿಂದೂ ಧರ್ಮ ಉಳಿವಿಗೆ ಶಂಕರರ ಕೊಡುಗೆ ಅಪಾರ ಎಂದರು. ಧಾರ್ಮಿಕ, ಸಾಂಸ್ಕೃತಿಕ ಮತ್ತು ತಾತ್ವಿಕ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿರುವ ಅವರ ಜೀವನಾದರ್ಶನಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಂಡು ನಡೆದಲ್ಲಿ ನೆಮ್ಮದಿ ಬದುಕು ಕಾಣಬಹುದು ಎಂದರು. ವಿಶೇಷ ಉಪನ್ಯಾಸ ನೀಡಿದ ವಿಜಯಲಕ್ಷ್ಮೀ ಅರಿಕೇರಾ ಅವರು, ಅನೇಕ ಗ್ರಂಥ, ಸ್ತೋತ್ರಗಳು, ಸೌಂದರ್ಯಲಹರಿ, ಶಿವಾನಂದ ಲಹರಿ, ಲಲಿತಾ ಸಹಸ್ರನಾಮ ಹೀಗೆ ಅನೇಕ ಸ್ತೋತ್ರಗಳನ್ನು ರಚಿಸುವ ಮೂಲಕ ದೇಶದ ಜ್ಞಾನ ಭಂಡಾರಕ್ಕೆ ಅಪಾರ ಕೊಡುಗೆ ನೀಡಿದ್ದಾರೆಂದು ವಿವರಿಸಿದರು. ಶಂಕರ ತತ್ವ ಅಭಿಯ ತಾನದ ಜಿಲ್ಲಾಧ್ಯಕ್ಷ ಗೋರಕನಾಥ ಜೋಷಿ ಮಾತನಾಡಿದರು.

ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ್ ,ಸಹಾಯಕ ಆಯುಕ್ತ ಶ್ರೀಧರ ಗೋಟುರ, ಉತ್ತರಾದೇವಿ ಮಠಪತಿ ವೇದಿಕೆಯಲ್ಲಿದ್ದರು. ರವಿ ಕುಲಕರ್ಣಿ ಸ್ವಾಗತಿಸಿದರು. ಡಾ.ಗುರುಪ್ರಸಾದ ವೈದ್ಯ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಯಾದಗಿರಿ: ಜಿಲ್ಲಾಡಳಿತ, ಜಿಪಂ, ನಗರಸಭೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಜಿಲ್ಲಾ ಕಸಾಪ ಭವನದ ಸಭಾಂಗಣದಲ್ಲಿ ಆಯೋಜಿಸಿದ್ದ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮಕ್ಕೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಚಾಲನೆ ನೀಡಿದರು.

ಪೂರ್ವಭಾವಿ ಸಭೆಯಲ್ಲಿ ಎಸಿ ರಾಜೇಶ್ ಎಚ್.ಡಿ ಹೇಳಿಕೆ

ಜಯಂತಿ ಅರ್ಥಪೂರ್ಣವಾಗಿ ಆಚರಿಸೋಣ

ಬಳ್ಳಾರಿ: ಜಿಲ್ಲಾ ಕೇಂದ್ರದಲ್ಲಿ ಬರುವ ಮೇ.1 ರಂದು ಭಗವಾನ್ ಬುದ್ಧ ಜಯಂತಿ ಹಾಗೂ ಮೇ. 10 ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಹೇಳಿದರು.

ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯ ಕ್ಸ್ವಾನ್ ವಿಡೀಯೋ ಸಭಾಂಗಣದಲ್ಲಿ ವಿವಿಧ ಮಹನೀಯರ ಜಯಂತಿ ಆಚರಣೆ ಕುರಿತು ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಮಹನೀಯರ ಜಯಂತಿ ಕಾರ್ಯಕ್ರಮ ಶಿಷ್ಟಾಚಾರದನ್ವಯ ಆಚರಿಸಬೇಕಾಗಿದ್ದು, ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ಮೇ.1ರಂದು ಭಗವಾನ್ ಬುದ್ಧ ಜಯಂತಿ ನಿಮಿತ್ತ ಅಂದು ಸಂಜೆ 5ಕ್ಕೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗುವುದು. ಮೆರವಣಿಗೆಯು ಗಡಿಗಿ ಚೆನ್ನಪ್ಪ ವೃತ್ತದಮೂಲಕಸಂಗಂವೃತ್ತದಮಾರ್ಗವಾಗಿಸಾಂಸ್ಕೃತಿಕ ಹೊಂಗಿರಣ ಸಭಾಂಗಣದವರೆಗೆ ನಡೆಯಲಿದೆ. ಬಳಿಕ 6ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಈ ಬಾರಿ ಮೇ.1 ರಂದು ಅಂತಾರಾಷ್ಟ್ರೀಯ ಕಾರ್ಮಿಕ ದಿನವೂ ಆಗಿರುವುದರಿಂದ, ರಜೆ ಇರಲಿದೆ. ಈ ಹಿನ್ನೆಲೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಅದೇ ರೀತಿ ಮೇ. 10 ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವನ್ನು ನಗರದ ಬಸವ ಭವನದಲ್ಲಿ ಅಚ್ಚುಕಟ್ಟಾಗಿ ಆಯೋಜಿಸಲು ನಿರ್ಧರಿಸಲಾಗಿದ್ದು, ಅಂದು ಸಂಜೆ 5ಕ್ಕೆ ನಗರದ ಕನಕ ದುರ್ಗಮ್ಮ ದೇವಸ್ಥಾನದ ಆವರಣದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗುವುದು. ಬಳಿಕ ಸಂಜೆ 6.30ಕ್ಕೆ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದರು.



> **ಬ್ಯಾನರ್ ಅಳವಡಿಕೆ ಕುರಿತಂತೆ ಮಹಾನಗರ ಪಾಲಿಕೆ ವತಿಯಿಂದ ಕಡ್ಡಾಯ ಅನುಮತಿ ಪಡೆಯಬೇಕು. ಮಹನೀಯರ ಶಾಂತಿ ತತ್ವಗಳ ಕುರಿತು ನುರಿತರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗುವುದು. ಶಿಷ್ಟಾಚಾರದನ್ವಯ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು.**
> ■ **ರಾಜೇಶ್ ಹೆಚ್.ಡಿ, ಸಹಾಯಕ ಆಯುಕ್ತ**

ಜಯಂತಿ ಮೆರವಣಿಗೆಗಳಲ್ಲಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳನ್ನು ನಿಯೋಜಿಸಲಾಗುವುದು. ಮೆರವಣಿಗೆಯ ಹಾದಿಯಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು. ವೇದಿಕೆ ಕಾರ್ಯಕ್ರಮದಲ್ಲಿ ಸ್ವಚ್ಛತೆ ಸೇರಿದಂತೆ ಹಲವು ಕಾರ್ಯಗಳನ್ನು ನಿರ್ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಬ್ಯಾನರ್ ಅಳವಡಿಕೆ ಕುರಿತಂತೆ ಮಹಾನಗರ ಪಾಲಿಕೆ ವತಿಯಿಂದ ಕಡ್ಡಾಯ ಅನುಮತಿ ಪಡೆಯಬೇಕು. ಮಹನೀಯರ ಶಾಂತಿ ತತ್ವಗಳ ಕುರಿತು ನುರಿತರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗುವುದು. ಶಿಷ್ಟಾಚಾರದನ್ವಯ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು ಎಂದರು.

ಬುದ್ಧ ಜಯಂತಿ ಸರ್ಕಾರಿ ವಸತಿ ಶಾಲಾ-ಕಾಲೇಜುಗಳಲ್ಲಿ ಧ್ಯಾನಶಿಬಿರಆಯೋಜಿಸಬೇಕು ಎಂದು ಮುಖಂಡರೊಬ್ಬರು ಸಭೆಯಲ್ಲಿ ಪ್ರಸ್ತಾಪಿಸಿದರು. ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜನೆ ಕುರಿತಂತೆ ತಮ್ಮ ಸಲಹೆ-ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆ, ತೋಟಗಾರಿಕೆ, ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಡೆಂಘ್ಯೂ ಹರಡದಂತೆ ಕಟ್ಟೆಚ್ಚರ

ಬಳ್ಳಾರಿ: ಜಿಲ್ಲೆಯಲ್ಲಿ ಡೆಂಗ್ಯೂ ಜ್ವರ ಹರಡುವುದನ್ನು ತಡೆಗಟ್ಟಲು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಆರೋಗ್ಯ ಇಲಾಖೆ ಮುಂದಾಗಿದ್ದು, ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ಜಿಲ್ಲಾಧಿಕಾರಿಗಳ ಸೂಚನೆಯ ಮೇರೆಗೆ ಮನೆ-ಮನೆ ಭೇಟಿ, ಲಾರ್ವಾ ಸಮೀಕ್ಷೆ ಮತ್ತು ಸೊಳ್ಳೆ ನಿಯಂತ್ರಣ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ ತಿಳಿಸಿದ್ದಾರೆ.

ಡೆಂಗ್ಯೂ ಎಂಬುದು ಈಡಿಸ್ ಈಜಿಪ್ಟಿ ಎಂಬ ಹೆಣ್ಣು ಸೊಳ್ಳೆಯ ಕಡಿತದಿಂದ ಹರಡುವ ವೈರಲ್ ಸೋಂಕು. ಸೊಳ್ಳೆ ಕಚ್ಚಿದ 4 ರಿಂದ 10 ದಿನಗಳಲ್ಲಿ ಹಠಾತ್ ತೀವ್ರ ಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಸ್ನಾಯು, ಮೂಳೆ, ಕೀಲುಗಳಲ್ಲಿ ವಿಪರೀತ ನೋವು, ವಾಕರಿಕೆ, ವಾಂತಿ ಮತ್ತು ಚರ್ಮದ ಮೇಲೆ ಕೆಂಪು ದದ್ದು ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ತೀವ್ರ ಹೊಟ್ಟೆ ನೋವು, ಮೂಗಿನಿಂದ ರಕ್ತಸ್ರಾವ ಹಾಗೂ ಪ್ಲೇಟ್‌ಲೆಟ್ ಸಂಖ್ಯೆಯಲ್ಲಿ ಹಠಾತ್ ಇಳಿಕೆಯಾದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು ಎಂದರು.

ಆಶಾ ಕಾರ್ಯಕರ್ತೆಯರು ತಿಂಗಳಿಗೆ ಎರಡು ಬಾರಿ ಪ್ರತಿಯೊಂದು ಮನೆಗೆ ಭೇಟಿ ನೀಡಿ, ಸಂಗ್ರಹಿಸಿಟ್ಟ ನೀರಿನ ಪರಿಕರಗಳಲ್ಲಿ ಲಾರ್ವಾ (ಸೊಳ್ಳೆ ಮೊಟ್ಟೆ) ಇದೆಯೇ ಎಂದು ಪರೀಕ್ಷಿಸಲಾಗುತ್ತಿದೆ.

ವಿಶೇಷ ಲಾರ್ವಾ ಸಮೀಕ್ಷೆ: ಬಳ್ಳಾರಿ ನಗರ, ಸಿರುಗುಪ್ಪ ಮತ್ತು ಸಂಡೂರು ನಗರ ಪ್ರದೇಶಗಳಲ್ಲಿ ಪ್ರತಿ ಶುಕ್ರವಾರ ಮತ್ತು ಶನಿವಾರ ವಿಶೇಷ ಸಮೀಕ್ಷೆ ನಡೆಸಿ ಲಾರ್ವಾ ತಾಣಗಳನ್ನು ನಿರ್ಮೂಲನೆ ಮಾಡಲಾಗುತ್ತಿದೆ. ಜಿಲ್ಲೆಯ 70 ಪ್ರದೇಶಗಳಿಂದ ಸೊಳ್ಳೆ ಸಂಗ್ರಹಿಸಿ ಬೆಂಗಳೂರಿನ ಎನ್‌ಐವಿ ಸಂಸ್ಥೆಗೆ ಪರೀಕ್ಷೆಗೆ ಕಳುಹಿಸಲಾಗಿತ್ತು. ಇದರಲ್ಲಿ 7 ಪ್ರದೇಶಗಳಲ್ಲಿ ಡೆಂಗ್ಯೂ ವೈರಾಣು ಪತ್ತೆಯಾಗಿದ್ದು, ಅಂತಹ ಕಡೆಗಳಲ್ಲಿ ಸಮರೋಪಾದಿಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗಿದೆ. ಯಾವುದೇ ಆತಂಕ ಪಡುವ ಅಗತ್ಯವಿಲ್ಲ, ಮುಂಜಾಗ್ರತಾ ಕ್ರಮ ಅತ್ಯಗತ್ಯ. ಸೊಳ್ಳೆಗಳ ನಿಯಂತ್ರಣಕ್ಕಾಗಿ ಬಿಟಿಐ ಮತ್ತು ಥೆಮಿಫಾಸ್ ದ್ರಾವಣಗಳನ್ನು ಸಿಂಪಡಿಸಲಾಗುತ್ತಿದೆ. ತುರ್ತು ಪರಿಸ್ಥಿತಿ ಇರುವ ಕಡೆಗಳಲ್ಲಿ ಒಳಾಂಗಣ ಧೂಮೀಕರಣ ಮಾಡಲಾಗುತ್ತಿದೆ.

ಸಾರ್ವಜನಿಕರು ಯಾವುದೇ ಜ್ವರ ಬಂದರೂ ನಿರ್ಲಕ್ಷಿಸದೇ, ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಬೇಕು. ಚಿಕಿತ್ಸೆಗಾಗಿ ವೈದ್ಯರ ಸಲಹೆಯಂತೆ ಪ್ಯಾರಸಿಟಮಾಲ್ ಮಾತ್ರ ಬಳಸಬೇಕು, ಸ್ವಯಂ ಚಿಕಿತ್ಸೆ ಅಪಾಯಕಾರಿ ಎಂದು ಎಂದು ತಿಳಿಸಿದ್ದಾರೆ.



4 ಮನೆಗಳ್ಳತನ ಪ್ರಕರಣಗಳ ಆರೋಪಿ ಪತ್ತೆ

ವಿಜಯನಗರ: ವಿವಿಧ ಠಾಣಾಯಲ್ಲಿ ದಾಖಲಾಗಿದ್ದ 4 ಮನೆಗಳ್ಳತನ ಪ್ರಕರಣ ಭೇದಿಸಿರುವ ಜಿಲ್ಲೆ ಪೊಲೀಸರು, ಆರೋಪಿಯಿಂದ ಲಕ್ಷಾಂತರ ಮೌಲ್ಯದ ಚಿನ್ನಾಭರಣ, ನಗದು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಎಸ್. ತಿಳಿಸಿದರು.

ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಲಿಯಾಸ್ ಎಂಬ ಆರೋಪಿಯ ಬಂಧನದಿಂದ ಹರಪನಹಳ್ಳಿ ಠಾಣಾ ವ್ಯಾಪ್ತಿಯ 2ಮನೆಗಳ್ಳತನ, ನೀಲಗುಂದ ಠಾಣೆ ಹಾಗೂ ಚಿಟಗೇರಿ ಠಾಣೆಯಲ್ಲಿ ದಾಖಲಾಗಿದ್ದ ತಲಾ ಒಂದು ಮನೆಗಳ್ಳತನ ಪ್ರಕರಣಗಳು ಬಯಲಾಗಿವೆ. ನಾಲ್ಕು ಮನೆಗಳಲ್ಲಿ ಕಳುವಾಗಿದ್ದ ಒಟ್ಟು 3,14,900 ರೂ. ಬೆಲೆ ಬಾಳುವ ಬಂಗಾರದ ಆಭರಣಗಳು, ಬೆಳ್ಳಿ ಸಾಮಾನುಗಳು, 1,10,000 ರೂ ನಗದು ಹಣ ಹಾಗೂ ಕಳ್ಳತನಕ್ಕೆ ಬಳಸಿದ 1 ಲಕ್ಷ ರೂ. ಬೆಲೆಯ ಬೈಕ್ ವಶ ಪಡಿಸಿಕೊಳ್ಳಲಾಗಿದೆ.

ಆರೋಪಿಗಳ ಪತ್ತೆಗೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ, ಹರಪನಹಳ್ಳಿ ಡಿಎಸ್‌ಪಿ ಸಂತೋಷ್ ಚೌವ್ಹಾಣ್ ಮಾರ್ಗದರ್ಶನದಲ್ಲಿ ಹರಪನಹಳ್ಳಿ ಸಿಪಿಐ ಮಹಾಂತೇಶ ಸಜ್ಜನ್, ನೇತೃತ್ವದಲ್ಲಿ ಪಿಎಸ್‌ಐ ಶಂಭುಲಿಂಗ ಹಿರೇಮಠ ಹಾಗೂ ಸಿಬ್ಬಂದಿಯಾದ ಆನಂದ ಕೆ.ಎಂ., ನಾಗರಾಜ ಯು., ಗುರುರಾಜ.ಕೆ, ವಸಂತಕುಮಾರ, ಎಚ್.ಎಂ.ಸಿದ್ದಿ ಮುಬಾರಕ್, ವೀರಯ್ಯ ಎ.ಎಂ., ಎನ್.ಮಾಬು ಸಾಹೇಬ್, ಬಿ.ಗುರುಪ್ರಸಾದ್, ಚಾಲಕರಾದ ಇಮಾಮ್ ಸಾಹೇಬ್, ನಾಗರಾಜ.ಎಲ್, ಜಿಲ್ಲಾ ಪೊಲೀಸ್ ಕಚೇರಿ ಸಿಡಿಆರ್ ವಿಭಾಗದ ಕುಮಾರನಾಯ್ಕ ಒಳಗೊಂಡ ತಂಡ ಆರೋಪಿ ಬಂಧಿಸಿದೆ ಎಂದು ಪ್ರಶಂಸಿದರು.

ಠಾಣಾ ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ತಂತಿ ಕಳವು ಪ್ರಕರಣವನ್ನೂ ಪೊಲೀಸರು ಬಯಲು ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ 6 ಜನ ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ 4,50 ಲಕ್ಷರೂ. ಹಣ ಮತ್ತು 25 ಕೆ.ಜಿ. ವಿದ್ಯುತ್ ತಂತಿ ಮತ್ತು ಸಾಗಣಿಕೆಗೆ ಉಪಯೋಗಿಸಿದ ವಾಹನ ವಶಕ್ಕೆ ಪಡೆಯಲಾಗಿದೆ. ಹೊಳಗುಂದಿ ಗ್ರಾಮದಲ್ಲಿ ಹೊಳಗುಂದಿ ಮೋರಗೇರಿ ರಸ್ತೆಯಲ್ಲಿ ರಸ್ತೆಯ ಪಕ್ಕದ ಹೊಲಗಳಲ್ಲಿನ ವಿದ್ಯುತ್ ಕಂಬಗಳಲ್ಲಿ, ಹಂಪಸಾಗರ ರಸ್ತೆಯಲ್ಲಿ ಬರುವ ಕ್ರಷರ್ ಬಳಿ ರಸ್ತೆಯ ಪಕ್ಕದಲ್ಲಿನ ವಿದ್ಯುತ್ ಕಂಬಗಳಲ್ಲಿ, ಕೊಯಿಲಾರಗಟ್ಟಿಯಿಂದ ಸೋವೇನಹಳ್ಳಿದ ಕಡೆ ಹೋಗುವಾಗ ಬರುವ ಕರೆಯ ಬಳಿ ಕಂಬಗಳಲ್ಲಿ ಮತ್ತು ಕಾಗನೂರು ಗ್ರಾಮದಿಂದ ಹೊನ್ನನಾಯಕನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿನ ವಿದ್ಯುತ್ ಕಂಬಗಳಲ್ಲಿ ಅಳವಡಿಸಿದ್ದ 11 ಕೆವಿ ಅಲುಮಿನಿಯಮ್ ತಂತಿಯನ್ನು ಕಳುವು ಮಾಡಲಾಗಿತ್ತು ಎಂದು ಎಸ್ಪಿ ಜಾಹ್ನವಿ ಮಾಹಿತಿ ನೀಡಿದರು.



ಮಹಿಳೆಯರ ಸ್ಥಾನಮಾನ ಕಾಂಗ್ರೆಸ್ ಸಹಿಸೋಲ್ಲ: ಮೀನಳ್ಳಿ ತಾಯಣ್ಣ

ಬಳ್ಳಾರಿ: ಕೇಂದ್ರ ಸರ್ಕಾರ ಮಂಡಿಸಿದ ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದ ಕ್ರಮ ಖಂಡಿಸಿ ಜೆಡಿಎಸ್ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜೆಡಿಎಸ್ ಜಿಲ್ಲಾ ಕಚೇರಿಯಿಂದ ರಾಯಲ್ ವೃತ್ತದವರೆಗೆ ಜೆಡಿಎಸ್ ಜಿಲ್ಲಾ ಮಹಿಳಾ ಘಟಕದ ಕಾರ್ಯಕರ್ತರು, ವಿವಿಧ ಮುಖಂಡರು, ಕಾರ್ಯಕರ್ತರು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಪುಷ್ಪ, ಜಮೀಲಾ ಶಬಾನ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಮಾತನಾಡಿ, ಕೇಂದ್ರ ಸರ್ಕಾರ ಮಹಿಳೆಯರಿಗೆ ಶೇ.33ರಷ್ಟು ರಾಜಕೀಯ ಮೀಸಲಾತಿ ನೀಡುವ ಮಸೂದೆಗೆ ಕಾಂಗ್ರೆಸ್ ವಿರೋಧವ್ಯಕ್ತಪಡಿಸಿದ್ದು, ಮಹಿಳೆಯರ ಅಭಿವೃದ್ಧಿಗೆ, ಅವರಿಗೆ ಸ್ಥಾನ ಮಾನ ಕಾಂಗ್ರೆಸ್ ಸಹಿಸೋಲ್ಲ ಎನ್ನುವುದು ಸಾಬೀತುಪಡಿಸಿದೆ ಎಂದರು.

ಮಹುಲಂಘಟಕದ ಜಿಲ್ಲಾಧ್ಯಕ್ಷೆ ಜೆ.ಪುಷ್ಪ ಮಾತನಾಡಿ, ಮಹಿಳೆಯರಿಗೆ ರಾಜಕೀಯವಾಗಿ ಸಮಾನ ಅವಕಾಶ ಕಲ್ಪಿಸಿರುವುದು ಪ್ರಜಾಪ್ರಭುತ್ವದ ಮೂಲ ತತ್ವ. ಕಾಂಗ್ರೆಸ್ ಇದಕ್ಕೆ ವಿರೋಧ ವ್ಯಕ್ತಪಡಿಸುವುದು ಮಹಿಳೆಯರ ಆಶಯ ಕಸಿದುಕೊಂಡಿದೆ. ಇದು ಖಂಡನೀಯ ಎಂದರು.



ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ಸಂದರ್ಭದಲ್ಲಿ, ರಾಜಕೀಯದಲ್ಲೂ ಅವರಿಗೆ ಸಮಾನ ಅವಕಾಶ ನೀಡಬೇಕು. ಜೆಡಿಎಸ್ ಪಕ್ಷ ಸದಾ ಮಹಿಳೆಯರ ಸಬಲೀಕರಣಕ್ಕೆ ಬದ್ಧವಾಗಿದೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಅವಧಿಯಲ್ಲಿಯೇ ಮಹಿಳಾ ಮೀಸಲಾತಿಗೆ ಆದ್ಯತೆ ನೀಡಲಾಗಿತ್ತು ಎಂದರು.

ಈ ವೇಳೆ ವಿಜಯ, ರೆಹಮತ್, ರಾಜೇಶ್ವರಿ ,ಮಮತಾ, ಶಿವಗಂಗಾ, ಶಿರೀಷಾ ಸೇರಿದಂತೆ ನಗರ ಘಟಕದ ಅಧ್ಯಕ್ಷ ಹೊನ್ನೂರು ಸ್ವಾಮಿ (ವಂಡ್ರಿ), ಕಂಪ್ಲಿ ಅಧ್ಯಕ್ಷ ಮೇಘರಾಜ, ಶಿವು ನಾರಾಯಣ, ವಸಂತ್ ಕುಮಾರ್, ಮುತ್ತು, ಜಾವೀದ್, ಹೊನ್ನೂರು ಅಲಿ, ಪದಾಧಿಕಾರಿಗಳು, ಸ್ಥಳೀಯ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಸಂಭ್ರಮದಿಂದ ನಡೆದ ದೇವರುಗಳ ಮೆರವಣಿಗೆ

ಕುರುಗೋಡು: ಹಾಲುಮತ ತಮ್ಮ ಇತಿಹಾಸ ಪೂರ್ವ ನೆಲೆಯ ಚರಿತ್ರೆ ಬಗ್ಗೆ ಅಭಿವ್ಯಕ್ತ ಕುಟುಂಬಗಳು ಒಂದೇ ಕಡೆ ಹಬ್ಬವಾಗಿ ಆಚರಣೆ ಬಗ್ಗೆ ಶ್ಲಾಘನೀಯ ಎಂದು ಗ್ರಾಮದ ಹಂಪಿ ಸಾವಿರ ಮಠದ ವಾಮದೇವಾ ಮಹಾಂತ ಶಿವಾಚಾರ್ಯರು ಶ್ರೀಗಳು ಹೇಳಿದರು.

ಸಮೀಪದ ಎಮ್ಮಿಗನೂರು ಗ್ರಾಮದಲ್ಲಿ ಶ್ರೀಮಸಿಗೇರೇಶ್ವರ ಸ್ವಾಮಿ 2ನೇ ವಾರ್ಷಿಕೋತ್ಸವ ಪಟ್ಟದ ದೇವರಗಳ ಉದ್ದಾಲ ಗೋತ್ರದವರಿಂದ ಕಳೆದ ಎರಡು ದಿನಗಳಿಂದ ವಿವಿಧ ಧಾರ್ಮಿಕ ಸಡಗರ ಸಂಭ್ರಮದಿಂದ ಜರುಗಿದ ಕಾರ್ಯಕ್ರಮದ ಲಿಂಗಸ್ಥಾಪನೆ ಮಾಡಿ ಮಾತನಾಡಿದರು.

ಈ ವೇಳೆ ಕಮ್ಮಲ್ ಪಾಡ್ ಅಸುಬಂಡೆಯ್ಯ, ಸೋಮಲಾಪುರ ವದ್ದಟೇಶ್ವರ ಸ್ವಾಮಿ, ಎಮ್ಮಿಗನೂರು ರಾಮಸ್ವಾಮಿ ದೇವರು, ಕುರುಗೋಡು ದೊಡ್ಡ ಹಾಗೂ ಸಣ್ಣ ಕಲ್ಲುಗುಡೆಪ್ಪ ಸ್ವಾಮಿಗಳ ಭಂಡರಾ, ಹೂ ಅಲಂಕಾರ, ಹರಕೆ ಹೊತ್ತು ಗ್ರಾಮದ ಬೀರಲಿಂಗೇಶ್ವರ ಹಾಗೂ ನಿಟ್ರವಟ್ಟಿ ಬಸಪ್ಪತಾತ ಆವರಣದಿಂದ ಗ್ರಾಮದ ಪ್ರಮುಖ ಭೀದಿಯಲ್ಲಿ ಮಹಿಳೆಯರಿಂದ ಕಳಸ, ಡೊಳ್ಳು, ಮೇಳ ವಾದ್ಯಳೊಂದಿಗೆ ಮೆರವಣಿಗೆ ನೋಡುಗರ ಗಮನ ಸೆಳೆಯಿತು.



ಈ ಧಾರ್ಮಿಕ ಕಾರ್ಯಕ್ರಮ ನೇತೃತ್ವವನ್ನು ಉದ್ದಾಲ ಗೋತ್ರದವರು ವಹಿಸಿದರು. ವಿವಿಧ ಬೆಡಗು ಹಾಲು ಸಮುದಾಯದ ಮುಖಂಡರು, ಗ್ರಾಮದ ಹಿರಿಯ ಮುಖಂಡರು ಭಾಗವಹಿಸಿದ್ದರು.

ಬಿಸಿಲ ಧಗೆ: ಬಡವರ ಪ್ರಿಡ್ಜ್‌ಗೆ ಭಾರೀ ಡಿಮ್ಯಾಂಡ್

▸ **ಅಂಗಡಿ ಗಾದಿಲಿಂಗ**

ಸಿರುಗುಪ್ಪ: ಆಧುನಿಕತೆ ಭರಾಟೆಯಲ್ಲಿ ಹಿಂದಿನ ಕಾಲದ ಅನೇಕ ವಸ್ತುಗಳು ಮೂಲೆ ಗುಂಪಾಗುತ್ತಿರುವ ಇಂದಿನ ದಿನಗಳಲ್ಲಿ ಮಣ್ಣಿನ ಮಡಿಕೆ ರೂಪ ಬದಲಾಯಿಸಿಕೊಂಡು ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಬೇಡಿಕೆಯಲ್ಲಿದೆ.

ಪಟ್ಟಣದ ತಾಲೂಕು ಕ್ರೀಡಾಂಗಣದ ಹತ್ತಿರ, ಆಭಯಾಂಜನೇಯ ದೇವಸ್ಥಾನದ ಪಕ್ಕದ ಉಪನೋಂದಣೀಧಿಕಾರಿ ಕಛೇರಿ ಮುಂಭಾಗದಲ್ಲಿ ಮಡಿಕೆಗಳ ಮಾರಾಟ ಜೋರಾಗಿದೆ. ಸಂಡೂರು ನಿವಾಸಿ ಕುಂಬಾರ ರುದ್ರಸ್ವಾಮಿ ಸಿರುಗುಪ್ಪ, ರಾಯಚೂರು, ಮಾನ್ವಿ, ಸಿಂಧನೂರು, ಕಂಪ್ಲಿ ತಾಲೂಕಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೂಡ್ಲಿಗಿಯ ಇಮಾದಪುರ ಮತ್ತು ಚೌಡಾಪುರದಿಂದ ಮಡಿಕೆ ಖರೀದಿಸಿ ಮಾರಾಟ ಮಾಡುತ್ತಿದ್ದಾರೆ.

ಪ್ರಸಕ್ತ ವರ್ಷ ತಾಲೂಕಿನಲ್ಲಿ ಇನ್ನೂ ಮಳೆಯಾಗದೆ. ಬಿಸಿಲಿನ ಪ್ರತಾಪ ಹೆಚ್ಚುತ್ತಿದ್ದು, ಬಹುತೇಕರು ಬಡವರ ಪ್ರಿಡ್ಜ್ ಎಂಬ ಹೆಗ್ಗಳಿಕೆಗೆ ಪಾತ್ರವಾದ ಮಣ್ಣಿನ ಮಡಿಕೆಗೆ ಜನ ಮೊರೆ ಹೋಗುತ್ತಿದ್ದು, ಬೀದಿ ಬದಿಗಳಲ್ಲಿ ಯಥೇಚ್ಛವಾಗಿ ಮಾರಾಟವಾಗುತ್ತಿದೆ.

ಮಡಿಕೆಗಳು ಇತ್ತೀಚೆಗೆ ಬೇಡಿಕೆ ಕಳೆದುಕೊಂಡರು ಬೇಸಿಗೆಯಲ್ಲಿ ಮಾತ್ರ ಮಾರುಕಟ್ಟೆಯಲ್ಲಿ ಅಸ್ತಿತ್ವ ಉಳಿಸಿಕೊಂಡಿವೆ. ಆದರೂ ಮಡಿಕೆ ತಯಾರಿಸುವವರಬದುಕುಮಾತ್ರಹಸನಾಗಲಿಲ್ಲಎಂಬಕೊರಗುವಿದೆ. ಧಗೆ ಹೆಚ್ಚಾಗುತ್ತಿದ್ದು, ಇದೀಗ ಮಡಿಕೆ ಸಹಕಾರಿಯಾಗಿದೆ. ವಿದ್ಯುತ್ ಚಿಂತೆಯಿಲ್ಲ, ಆರೋಗ್ಯದ ಸಮಸ್ಯೆಯಿಲ್ಲ, ಆರೋಗ್ಯ ತಜ್ಞರು ಮಡಿಕೆ ನೀರನ್ನು ಬೆಂಬಲಿಸುತ್ತಾರೆ. ಮಡಿಕೆ ಹೆಚ್ಚು ಬಳಸುತ್ತಿರುವುದರಿಂದ ಕಂಬಾರ ವೃತ್ತಿಗೆ ಮರು ಜೀವ ಬಂದಾಂತಾಗಿದೆ.



> **ಒಂದು ಮಣ್ಣಿನ ಮಡಿಕೆಗೆ ರೂ.200ರಿಂದ 350 ರೂ.ದರ ನಿಗದಿಪಡಿಸಲಾಗಿದೆ. ಸಿರುಗುಪ್ಪದಲ್ಲಿ ಮಡಿಕೆಗೆ ತುಂಬಾ ಬೇಡಿಕೆ. ಇದರಿಂದ ಹೆಚ್ಚಿನ ಲಾಭವಿಲ್ಲದಿದ್ದರೂ ವ್ಯಾಪಾರ ಕೈಬಿಡದೇ ಕುಲ ಕಸುಬನ್ನು ಮುಂದುವರೆಸುತ್ತೇವೆ. ಈ ವರ್ಷ ಜೀವನ ನಡೆಸುವಷ್ಟು ಲಾಭವಾಗಿದೆ. ಸದ್ಯ ಮಾರುಕಟ್ಟೆಯಲ್ಲಿ ಮಡಿಕೆಗೆ ಬೇಡಿಕೆ ಕಂಡಿರುವುದು ಸಂತಸ ತಂದಿದೆ.**
> ■ **ಕುಂಬಾರ ರುದ್ರಸ್ವಾಮಿ, ಮಡಿಕೆ ಮಾರಾಟಗಾರರು ಸಂಡೂರು**

ಗ್ರಾಮೀಣ ಭಾಗದ ಬಹುತೇಕ ಮನೆಗಳಲ್ಲಿ ಪ್ರಿಡ್ಜ್ ಬಳಕೆ ಸಾಮಾನ್ಯ. ಈ ಹೆಚ್ಚಾದ ಬಿಸಿಲಿಗೆ ಹೊಸ ತಲೆಮಾರಿನವರು ಸಹ ಮಡಿಕೆ ಬಳಕೆಗೆ ಮುಂದಾಗಿದ್ದಾರೆ ಎಂದು ಸಿರುಗುಪ್ಪ ನಿವಾಸಿ ಕಲ್ಕಣೆ ವಿನಯ್ ಹೇಳಿದರು.

ಶಂಕರರ ಜಯಂತಿ ದಾರ್ಶನಿಕರ ದಿನ: ಅಂಬಿಕಾ

ಹೂವಿನಹಡಗಲಿ: ಶಂಕರಾಚಾರ್ಯರು ಅಧ್ಯಾತ್ಮ ಲೋಕದ ದಿಗಂತದಲ್ಲಿ ಉದಯಿಸಿದ ಮಹಾನ್ ಸೂರ್ಯನಿದ್ದಂತೆ. ಅವರ ಪ್ರಭಾವ ಅಪಾರವಾಗಿದ್ದು, ಜಗತ್ತಿನ ತತ್ವಶಾಸ್ತ್ರ ಹಾಗೂ ದಾರ್ಶನಿಕತೆಗೆ ಶಂಕರರು ಒಂದು ಅದ್ಭುತ ತಿರುವು ನೀಡಿದ್ದಾರೆ ಎಂದು ದೈವ ಭಕ್ತೆ ಅಂಬಿಕಾ ಹೇಳಿದರು.

ಪಟ್ಟಣದ ಮೂರುದೇವರ ದೇವಸ್ಥಾನದಲ್ಲಿ ಶಂಕರಾಚಾರ್ಯರ ಜಯಂತಿ ಆಚರಣೆಯಲ್ಲಿ ಮಾತನಾಡಿದರು.

ಕಾಶಿ ವಿಶ್ವೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ ಮತ್ತು ರುದ್ರಾಭಿಷೇಕ ಪೂಜೆ ನೆರವೇರಿಸಲಾಯಿತು. ಮಹಿಳೆಯರಿಂದ ವಿಶೇಷವಾಗಿ ಕುಂಕುಮ ಅರ್ಚನೆ ಮತ್ತು ಭಜನೆ ಕಾರ್ಯಕ್ರಮ ಜರುಗಿತು.

ಶಂಕರರ ಜನ್ಮದಿನವು ಕೇವಲ ಜಯಂತಿಯಲ್ಲ, ಅದು ದಾರ್ಶನಿಕರ ದಿನ. ನಮ್ಮೆಲ್ಲರ ಮೂಲ ಗುರುಗಳಾದ ಶಂಕರಾಚಾರ್ಯರ ಪರಂಪರೆ ಇಂದಿಗೂ ಅವಿರತವಾಗಿ ಸಾಗುತ್ತಿರುವುದು ನಮ್ಮ ಸೌಭಾಗ್ಯ. ಇಂದು ಪ್ರಪಂಚವು ಯುದ್ಧದ ಕಾರ್ಮೋಡಗಳ ನಡುವೆ ಸಿಲುಕಿ ದಿಕ್ಕುತಪ್ಪಿ ಸಾಗುತ್ತಿದೆ. ಆದರೆ ಇಂತಹ ಆತಂಕದ ನಡುವೆ ನಮ್ಮ ದೇಶದಲ್ಲಿ ಶಾಂತಿಯುತ ವಾತಾವರಣವಿದೆ ಎಂದರೆ ಅದಕ್ಕೆ ಈ ಪುಣ್ಯಭೂಮಿಯ ದಾರ್ಶನಿಕ ಚಿಂತನೆಗಳೇ ಕಾರಣ. ಶಂಕರರ ವೈಚಾರಿಕತೆ ಇನ್ನಷ್ಟು ಬೆಳೆಯುವ ಮೂಲಕ ಜಗತ್ತಿಗೆ ಬೆಳಕಾಗಬೇಕು ಎಂದರು.

ಈ ವೇಳೆ ವಿಪ್ರ ಸಮಾಜದ ಹಿರಿಯರು, ಮಹಿಳೆಯರು ಮತ್ತು ಯುವಕರಿದ್ದರು.



ಮೀಸಲಾತಿ ಮಹಿಳೆಯರ ಶಕ್ತಿ: ಮಂಜುನಾಥ

ಹಗರಿಬೊಮ್ಮನಹಳ್ಳಿ: ನೂರು ಜನ ಶಾಲಾ ಶಿಕ್ಷಕರಿಗಿಂತ ತಾಯಿ ಮೇಲು ಎಂಬುದು ನಾರೀಶಕ್ತಿ ಮಹತ್ವ ಮಹಿಳೆಯರ ಮಹತ್ವ ಸಾರಿ ಹೇಳುತ್ತಿವೆ. ಇದಕ್ಕೆ ಅನುಗುಣವಾಗಿಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮೂಲಕ ಮಾತೆಯರನ್ನು ಗೌರವಿಸುವ ಕೆಲಸ ಮಾಡಬೇಕು. ಹಗರಿಬೊಮ್ಮನಹಳ್ಳಿ ಬಿಜೆಪಿ ನಗರ ಘಟಕ ಅಧ್ಯಕ್ಷ ಮಂಜುನಾಥ ಹಿರೇಮಠ ಹೇಳಿದರು.



ಮಹಿಳೆಯರು ರಾಜಕೀಯವಾಗಿ ಸಾಮಾಜಿಕವಾಗಿ ಔದ್ಯೋಗಿಕವಾಗಿ ಮುನ್ನಡೆಯಬೇಕು. ಭವ್ಯ ಭಾರತದ ಕನಸಿನ ಅಭಿವೃದ್ಧಿ ಚಿಂತನೆಯ ದೊಡ್ಡ ದೊಡ್ಡ ಲೋಕಸಭಾ ಕ್ಷೇತ್ರದಲ್ಲಿ ಹಾಗೂ ವಿಧಾನ ಸಭಾ ಕ್ಷೇತ್ರಗಳಲ್ಲಿ ಒಬ್ಬವ್ಯಕ್ತಿಯಿಂದ ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿ ಅಸಾಧ್ಯ ಉದ್ದೇಶದಿಂದ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮಹಿಳೆಯರಿಗೆ 33% ರಷ್ಟು ಮಹಿಳಾ ಮೀಸಲಾತಿ ನೀಡುವ ಬಗ್ಗೆ ಬಹಳ ಆಸಕ್ತಿ ಹೊಂದಿದ್ದರು.

ಮಹಿಳಯರಿಗೆ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮುಖ್ಯತೆ ನೀಡಬೇಕು, ಹೆಣ್ಣುಮಕ್ಕಳು ಎಲ್ಲಾ ಕ್ಷೇತ್ರದಲ್ಲಿ ಬೆಳೆಯಬೇಕು. ಕ್ಷೇತ್ರ ಪುನರ್ ವಿಂಗಡಣೆಯಿಂದ ದೇಶದ ಪ್ರಗತಿ ಪ್ರಾಮಾಣಿಕವಾಗಿ ಹಾಗೂ ಸರ್ವಾಂಗೀಣ ಅಭಿವೃದ್ಧಿ ಸಹಕಾರಿ ಆಗುತಿತ್ತು. ಕ್ಷೇತ್ರಗಳು ಹೆಚ್ಚಾದಂತೆ ಸಂಸದರು ಶಾಸಕರು ಹೆಚ್ಚಾಗುತ್ತಿದ್ದರೂ ಆಡಳಿತ ನೆಡೆಸಲು ಕ್ಷೇತ್ರ ಪುನರ'ವಿಂಗಡಣೆಯಿಂದ ಕರ್ನಾಟಕದ ಲೋಕಸಭಾ ಸೀಟುಗಳು 28 ರಿಂದ 42ಕ್ಕೆ ಏರಿಕೆಯಾಗುತಿದ್ದವು.

> **ಅಖಂಡ ಭಾರತದ ಅಭಿವೃದ್ಧಿಯ ಚಿಂತನೆ ನಮ್ಮಲ್ಲಿ ಇರಬೇಕೆ ಹೊರತು ಉತ್ತರ,ದಕ್ಷಿಣ, ಎಂಬ ಸಂಕುಚಿತ ಮನೋಭಾವ ನಮ್ಮ ರಾಜಕೀಯ ನಾಯಕರಲ್ಲಿ ಇರಬಾರದು,ಕೇವಲ ವಿರೋಧಿಸುವುದೇ ಕಾಯಕವಾಗಬಾರದು.**
> ■ **ಮಂಜುನಾಥ ಹಿರೇಮಠ, ಬಿಜೆಪಿ ನಗರ ಘಟಕ ಅಧ್ಯಕ್ಷ**

ಕರ್ನಾಟಕದ ಪ್ರಾತಿನಿಧ್ಯದ ಪಾಲು 5.15% ಯಥಾವತ್ತು ಇರುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ, ದೇಶಗಳಲ್ಲಿ ವಿರೋಧ ಪಕ್ಷಗಳು ಪ್ರಬುದ್ದವಾಗಿರಬೇಕು, ಆದರೆ ಅಭಿವೃದ್ಧಿಗೆ ಮಾರಕವಾಗಿ ಇರಬಾರದು,ದೇಶದ ಅಭಿವೃದ್ಧಿ ವಿಷಯದಲ್ಲಿಯಾವುದೇಪಕ್ಷಗಳುವಿರೋಧಿಸಬಾರದು ಅದು ಬಿಟ್ಟು ಕೇವಲ ರಾಜಕೀಯ ಕಾರಣಕ್ಕಾಗಿ ವಿರೋದಿಸಿದ್ದು ಸಮಂಜಸವಲ್ಲ ಎಂದರು.